Rodent control—Birds of prey such as hawks, eagles, and owls are among the most important enemies of rodents such as field mice, rats and hares. These vermin do enormous damage to crops and other agricultural produce, besides being carriers of human diseases.

Weed Control—Birds like quails eat the seeds of weeds and help the farmers reduce their spread.

Scavenging—Birds like vultures, hawks, eagles and crows are excellent scavengers and feed upon dead animals, rubbish, refuse and decaying organic matter. So they are of great sanitary value.

Cross Pollination—A large number of diverse families and species of birds, especially sunbirds, are responsible for cross fertilisation of flowers, many of them possessing special adaptations and mechanisms of tongue and bill for the purpose of extracting honey from the base of flower tubes. During feeding they pick up and carry pollen away to other flowers on their beaks, heads and backs. The attractive nectar-filled flowers of many plants are thus chiefly pollinated by many species of birds.

Seed dispersal—Birds also play a predominant role in the dissemination of seed and distribution of plant life. For example, bulbuls, barbets and hornbills are largely responsible for the dissemination of seeds of the sandalwood tree in South India.

Food for man— It is interesting to note that all the domesticated fowls in the world have had their origin from Red Junglefowl *(Gallus gallus),* a resident species of N and E India. Poultry and broilers provide large amounts of food for man; they also create considerable employment opportunities.

Fertilisers—The droppings of fish-eating seabirds or *guano* is an excellent natural fertiliser, helping farmers and agriculturists. And in their billions other birds also fertilize the soil in the forests by their droppings.

Food for Other Forms of Life: Birds themselves are food for other forms of life from predatory birds and animals to ants and other insects.

Habitation for Parasites: Birds harbour a variety of parasites for which they are hosts.

Nature's Living Treasures: Above all these benefits that accrue to us, birds are well known for providing us pleasure by the beauty of their forms and colouration, their flight and the sweetness of their song. Thus they definitely adorn nature.

It is amazing that with just a few drops of flower nectar and fistful of forest fruits, birds and such other small lifeforms have developed magnanimous, immense and diverse forests that cover almost two thirds of the landmass of our Earth!

BIRDWATCHING

Observation of beautiful birds and their activities, trying to understand them and documenting these observations, constitute birdwatching. As the most highly visible group of wild animals around us, birds provide excellent opportunities to study aspects of behaviour and evolution difficult to see in the mammals or reptiles. A few common birds can be observed and enjoyed, even studied sitting at home, through windows and doors, or from one's garden. The habit of more serious birdwatching certainly takes one outdoors in pursuit of birds into various landscapes: paddyfields, ponds and lakes, pools, streams and rivers, scrub land, grasslands and orchards of fruits and flowers or right into forests. Trees in blossom or loaded with ripe fruit, for instance, attract a multitude of birds of many species and offer excellent opportunities for birdwatching. Trees of Silk Cotton, Coral or Flame of the Forest in bloom also provide most charming and enjoyable views of birds.

Besides these 'normal' opportunities, there come special seasonal and other opportunities also. Not uncommonly, one may encounter what is known as a *mixed hunting party* in an area, when a band of birds of many species suddenly appear from nowhere, bustling with activities on the ground, among the bushes, on the trees and in the canopy of trees. This appears as a regular daily round, where all the varied membership gets their share of the bounty. The first showers of rain bring out winged termites from under ground as they set out to form new colonies. This rich reward of nutritious protein attracts a variety of birds that cannot avoid such irresistible temptation! Besides providing ample opportunities of viewing numerous phenomena in beautiful nature, birdwatching provides excellent physical exercise and helps to improve health.

The common birds around home can be recognised without any difficulty. At first, a birdwatcher must sharpen his senses of perception of sight and hearing while observing birds. One must develop a method by which to spot and observe birds effectively and to note down their movement with the naked eye. One must also make the effort to remember what one has seen and heard. By sharpening these faculties and by carefully observing birds and their behaviour, one can become a good birdwatcher. Remember that, in general, the deep forest is actually a disappointing place for birdwatchers. Also remember, if you know what to expect in a given area or season, it would be easier to look for, follow, observe and identify birds.

Equipment needed for Birdwatching

It is a good idea always to carry a pocket notebook and a pencil or ballpoint pen to record observations briefly. It is also helpful to make some homework before proceeding for birdwatching. It is always better to know in advance any particular or specific information available about the birds one expects to see in the proposed place of visit. It helps to form the habit of recording the following detail in the notebook in order: date, place, particulars of the region, time and weather; whether the sky was cloudy, or the sun was shining, whether the humidity was high, and so on.

Most of us consider Dr. Salim Ali's *The Book of Indian Birds* published by BNHS as the Indian Birdwatcher's bible and an invaluable asset for the beginners of birdwatching. Many other books are available that give detailed synopsis of birds found in a particular geographical region. Carrying such a fieldguide helps one identify the individual species of birds one sees and learn other details.

BINOCULARS

A pair of binoculars is an invaluable accessory of a birdwatcher. It will increase the pleasure of birdwatching many fold, and enable one to observe in far greater detail the features of birds clearly and with greater certainty.

Binoculars essentially consist of two sets of identical lenses (see picture). The ones in front, called the *objectives*, collect light. The set of lenses at the other end, called *eyepieces*, help to magnify the image. The light from the objectives passes through a set of two prisms on each side that helps to bend the light in the right orientation and without loss. This process is called *total internal reflection*. A common *focusing knob* above and in the centre enables the eyepieces to focus properly. One can also bend at the hinges and approximate the eyepieces to suit the distance between the observer's eyes. (See the illustration on the inside cover)

Binoculars of various sizes and powers are available in the market. Usually, a good set of binoculars is assigned a specification, for instance, 8 X 30, 6°. Here, the number 30 suggests the diametre of the objective in millimetres; 8X is the magnifying power of the eyepieces; and 6° is the angle of the field of vision. One of the eyepieces, either right or left, can be rotated individually to help one correct any disparity between the eyes of the birdwatcher. Here are a few useful hints regarding choosing and buying a pair of binoculars:

1. Do not buy any 'cheap' pair (for less than Rs.1000/-)
2. Buy a lightweight pair.
3. Binoculars with larger objectives, more than 40 mm, may scare birds.
4. Practice using the binoculars. When you put the instrument to your eyes, you should be able to see the image that you *intend* to see. If you wear spectacles, remove them while using binoculars.
5. Practice relaxing your eyes so as to see 'infinity' while adjusting the binoculars. This will not strain your eyes.
6. As far as possible, do *not* share your binoculars with other birdwatchers. The formula is: Each one carries one.

During bird censuses or counts, birdwatchers also carry field glasses or telescopes. This makes it easier to count the different species of birds seen at a water point, for instance.

Both still and video bird photography provide pictorial evidence of bird features, habits, natural surroundings, nesting habits and sexual behaviour. With the latest advent in digital photography, bird photography

not only offers a wide-open window for research but also provides an opportunity for probing and obtaining answers to scores of questions that hitherto remained mysteries. It should be remembered that the primary rule of bird photography is to cause least disturbance to the bird, its nestlings, its habitat and breeding success and desist from any act that may jeopardise the activity of the bird. Much practice and patience are, however, necessary to make one a bird photographer. It is also an expensive hobby.

Dos and Don'ts for a Birdwatcher

* Wear dull coloured clothes; they blend with the surroundings. Bright, gaudy clothing should not be worn.

* It is desirable to observe birds in a group of not more than 2 to 3 birdwatchers.

* Walk slowly and as quietly as possible. Avoid running, making unnecessary noise, talking loudly. Learn to spot from the corners of your eyes any small movements in bushes and foliage.

* Learn to observe bird activities from a distance. Do not go closer to birds than strictly necessary. Birds can readily recognise strangers and fly off or hide in foliage or stop singing or calling.

* If you accidentally happen to see a bird's nest, eggs or young, do not touch or disturb them in any way. Certain birds like the Crow often keep watch on the movements of intruders, including birdwatchers, and thereafter eat or otherwise destroy the eggs or chicks.

* Whether you are just birdwatching or interested in bird photography or voice recording or any other special interest, it is the bird's safety that has to be your foremost concern.

* And, of course, if you carry any plastic containers or bags, do remember to bring them back dispose of them safely.

Although birds are on the move all day long, are busiest in the early morning and to some extent in late afternoon and evening when they return to their roosts. Therefore early morning and evening are the right time for successful birdwatching. Most birdsong is also heard during the early morning hours.

The different parts of a bird's body are depicted in the illustration on the inside front cover. Study them so as to improve observation and determination of specific bird features.

When a new or an unknown bird is sighted, it is rather difficult to measure its size accurately (from the beak to the tip of the tail). In such circumstances, it helps to compare the estimated size with that of the more familiar birds known to virtually everyone. It is customary to use the following comparisons or references: Sparrow 15 cms, Bulbul 20 cms, Myna 25 cms, Pigeon 45 cms, Crow 60 cms, Duck 65 cms, Village Hen 75 cms, and Vulture 90 cms. If the bird that you have seen is slightly larger than a Crow, then refer to it as *Crow* + and if it is slightly smaller than a Sparrow, refer to it as *Sparrow* –.

The colours of a bird's body are another important distinguishing feature. Birds with a single body colour like the crow are rare. Generally different parts of the body exhibit different colouration. For example, even though the *body* of the coucal is black like a crow's, its wings are a dull reddish brown or 'rust'. Some birds show seasonal changes in body colouration. Note down for future reference or further study the different colourations of different parts of bird you happen to see with specific seasonal and other relevant information.

In observing and attempting to identify birds, we must note the size, shape and colour of the beak, legs, eyes and tail. Try to observe any special feature pertaining to that particular bird. For example it may be having a prominent eyebrow like that of White-browed Bulbul or bright coloured back like a Shama or vent as in the case of Indian Pitta. Also note if the bird is having any peculiar habit like constantly wagging its tail like that of Wagtails or cocking its tail with every movement as in Magpie Robin.

By and large birds make two types of sound: Call and Song. A *Call* is a short, sharp note made to attract, alert or warn mates or companions to convey information about food, danger or distress. A *Song* is made of cheerful, longer, usually more musical notes uttered from a perch or on the wing. Try to memorise the typical calls of different bird species. For example, the *kutroo... kutroo...* call of a barbet; the rich, whistling and musical *sho.bee.gee...* of an Iora. If possible, the call or voice should be written down in words that represent to you their exact sound. If you hear the same call again, you can then identify the bird even without visual confirmation.

Some birds like Racket-tailed Drongo, chloropsis and shrikes are very good mimic of other birds and confuse the birdwatcher. This fact should warn all watchers of the risk in casual identification. Visual confirmation always helps. Like we have different dialects in the same language in different places of the same state, some bird species also have different local dialects. In several bird species, there are recognizable differences between calls and songs that can be understood with the aid of informative fieldguides.

Birds have preferred habitat. Most of the birds reside in the same habitat throughout their lifecycles. Such birds are called Resident **(R)** birds. Many birds move between two places not far away from each other, between two seasons preferring one place for food and the other place for nesting. These are Locally Migrating **(LM)** birds. A few of them have *distinct* habitats at far away places. These are the Migratory **(M)** birds. A few species also have two groups of which one stays at one habitat and the other migrates between two places **(RM)**. Only by watching birds in a given habitat for many years can you conclude the migratory status of a bird.

It is also important to record the behaviour of birds. What was the bird doing at time of your observation? Whether it was singing, feeding, catching insects in the air, courting its partner, hunting, feeding the young**...**? Such specific detail must be recorded in the notebook.

Every species, in fact, has a distinct manner of flying that is different from that of other species. So if you make a habit of noticing different kinds of flight, you will soon be able to recognize many a species by its flight alone.

It is often difficult to identify every species that is seen on a field trip because the observation may be too brief or too distant or made in bad light. Birds in the forest are particularly difficult to spot when they are concealed in the canopy. They are best seen in clearings or flying from tree to tree or at the edge of the forest, or in places where there is plenty of food available, say insect activity or trees full of flowers and fruits.

Find out the most productive places for birding in your neighbourhood: gardens, sunny glades, and fruiting trees, trees in bloom, streams, rivers, ponds and marshes. Soon you will acquire knowledge of the habitat and of voices and fleeting sights of birds that will enable you to locate and identify them with relative ease and in turn make it easier for you to discover more species.

Field trips may be of two types: Visiting the *same* place frequently and repeatedly for the whole year; this could help you construct a valuable record of what happens over time; In addition, those of us who have opportunities and leisure to visit a large number of places may be better equipped to throw light on matters such as the habitat preference of species and changing distribution patterns.

Notes help one to refer back at home to observations in greater specificity than unrecorded memory. They also help one remember details better and to sharpen one's observation. Even experts fail to identify every species immediately only from field-observation. One can usefully compile systematically and faithfully maintained field notes, eventually sharing them with other birdwatchers either personally or through Newsletters, journals, or Internet discussion groups. Such sharing enriches one's own birdwatching and may even help others who are making more serious study or working for some cause such as saving a species.

BIRD MIGRATION

One of the most spectacular events concerned with bird life is the seasonal migration of many species, or their periodic to and fro movement between their summer and winter homes. Two kinds of destination may be seen in migration: breeding and nesting places and feeding and resting (wintering) places.

The annual and seasonal to and fro flight of certain birds between two locations to locate and exploit better environment is called migration. Migration is also seen in many other animals, fish and butterflies. But bird migration carries a special meaning with respect to the changing habitats and conditions.

The distance that birds traverse when they migrate may vary between a few kilometres and thousands of kilometres. For example, whereas some birds migrate from the Gangetic plains to the Himalayan foothills, others migrate all the way from beyond the Himalayas to southern India. The bird that migrates the longest distance is the Arctic Tern. Starting from the arctic region, it crosses the globe and reaches the South Pole, exploiting summers in both places and covering a total of about 35,000 kilometres.

Scientists have made many discoveries about why, where and how birds migrate. But many questions still remain unanswered. Three factors are important in bird migration: 1. If they do not migrate, birds would have to withstand extreme and inhospitable climatic conditions such as snow, ice and cold during winter in the Polar regions; 2. If they do not migrate, birds would have to face radically shortened daylight and feeding hours; 3. If they do not migrate, birds would have to face deadly acute shortage of food. Birds overcome all this difficulties by migrating seasonally to more favourable destinations.

Although most migration from north to south and vice versa, some migrations occur in the east-west direction as well. It is not well understood why some birds migrate between two places where the climate and food conditions are actually reasonably similar. In our region, bee-eaters and orioles are examples of such puzzling migration.

To meet the challenges of long migration, birds accumulate an extra amount of fat in their bodies and practise flying in groups. Many birds migrate singly. While smaller birds tend to fly at a steady speed of 30 kmph, larger birds sometimes fly at speeds of 80 kmph. Generally they fly for about 8 hours a day. Some birds have to face many additional challenges such as long distance flights across oceans where they have to fly non-stop for up to 35-38 hours. Unfavourable weather conditions and encounters with predators may also beset them. Clearly, migration is difficult, challenging and dangerous.

Birds that migrate during daytime follow the angle of the sun and large landmarks on earth. Those that migrate during night-time seem to depend on stars and constellations.

We may need to note three things that seem to set off the urge for migration: 1. stimulus to start, 2. stimulus regarding the route and destination, 3. stimulus to return home.

Hormonal changes occur in the breeding female birds, which are by themselves, a stimulus to start the migration. How do birds know the route? It is seen that male birds reach their destination first, and the females follow. It is surprising that during return migrations, it is the young birds that reach first, followed by males and females. Birds that fly at a height of 600-1200 metres cannot obviously depend on smaller landmarks below. So we may conclude that it is genetic instinct that has come to them from past

generations that makes migration possible. In addition, many believe that birds also migrate on the basis of the earth's magnetic field.

All the same, it is mysterious and amazing to observe birds travelling thousands of kilometres, year after year, taking the same route and reaching exactly the same destination. Not only do they seem to remember the same landmarks such as a tree, but many birds also use the same nest year after year!

Of the total 2060 or so species and subspecies of Indian birds, some 340 species migrate. The migrating birds belong to locations in northern Asia and Europe. They breed in these places during local summers, i.e., between March and June, and migrate during local winters, i.e., between August and October.

How to identify a migratory bird and its migratory route? Birdwatchers and enthusiasts help ornithologists in this endeavour. Birders net a large number of migrating birds. Each bird is fitted with an aluminium or plastic ring consisting of details regarding its name, number and the address to notify location, if found. This is called as *ringing* or *banding*. Other than ringing, many other scientific methods are also used: 1. Radio telemetry, in which small radio transmitters are placed on the body of the migrating bird and their presence is tracked by radio receivers. This method, used with animals and larger birds, is not useful for study of birds beyond a few thousand kilometres. 2. Use of satellites, in which a migrating bird is fitted with a gadget that is linked to a satellite for tracking. This method is widely used. 3. Use of Radar in place of radio waves.

The programme of ringing or banding that Dr. Salim Ali pioneered has been successful and, continued year after year, it has accumulated a large quantum of information regarding bird migration. The failure of a migrating bird to arrive at its destination in time, or the arrival of an unexpected bird, is an indication of aberration. Natural disaster, human intervention in the form of poisoning and killing, or lack of food on the migratory route or destruction of habitat may account for non-arrival or unexpected presence.

Any of these calamities at home or *en route* or at the destination, may have a direct effect on the migrating birds, which in turn can affect the other animals and even human beings. Thus bird migration is a thrilling and interesting subject, as well as an indicator of the health of our environment.

WHY WATCH BIRDS?

The danger today is that this world of endlessly varied beauty of birds, which has taken so long to evolve, is being strangled and annihilated by our expanding, if dangerously insecure, civilization. Our most immediate practical concern must be to stop this from happening. We cannot, however, save what we do not appreciate.

Birds are invaluable indicators of the status of a habitat. Habitat loss by population explosion, industrialisation, urbanisation, and agricultural activities, aggravated by overuse of fertilisers and pesticides, grazing of livestock and poaching have been major threats to avifauna in the country. Recent advances in tele-communications and media hype have flooded the already air and sound polluted atmosphere with all varieties of radio-magnetic rays which may have a deleterious effect on smaller lifeforms. Though some birds have greater tolerance to disturbances and imbalances in the environment and can adapt themselves to varied habitat, not all species can cope well with such changes. Such *keystone* or *indicator species* are of great importance with respect to conservation.

Alteration of habitat leads to increasing loss of biodiversity. Among the apparent and sensitive components of any ecosystem, bird species are sensitive enough to indicate the state of the environment. (Frogs are another extremely sensitive indicator species.) Study and thorough knowledge of changes occurring in bird communities over a period of time in a given area give us a fair understanding of and insight to the problem. Birds like the Malabar Trogon, the Nilgiri Laughing-Thrush, the Great Black Woodpecker, and the Malabar Whistling-Thrush, are habitat specific and can be considered as *keystone* species for the Kodagu district. The other flagship species are Great Pied Hornbill, Nilgiri Wood Pigeon, Wynaad and Grey-breasted Laughing Thrushes, Blue-winged Parakeet, Grey-headed Bulbul, White-bellied Treepie, the Nilgiri and White-bellied Blue Flycatchers, Black Eagle and Ceylon Frogmouth.

It is estimated that habitat loss has had measurably adverse effect on over 51% of world's bird species. Therefore, there is a need of greater awareness, immediate improvement in management, sustainable utilisation and conservation of natural resources. So it is heartening to note that more and more people, particularly younger generation, are taking keen interest in birdwatching. Watching and sustained bird studies will definitely help not

only in improving our understanding of nature's bounty but also in helping us monitor the status and problems related to different biological components in the ecosystem.

The last century has witnessed the greatest progress in bird study, mainly in the fields of behaviour, ecology, evolution and migration. Today scientists use advanced equipment to assist their research. Migrant birds are followed by radar, tracked with tiny radio-transmitters and observed in planetariums with different patterns of stars to test how birds navigate.

Many kinds of bird behaviour are yet to be documented. The bulk of the work remains to be done regarding absolutely reliable observation of a *living* bird species—their behaviour, lifecycle, influence on Nature and adaptation to given habitat. All these can not only help us understand birds better, but they may also help us appreciate birds' role in Nature and the mutual links between all living beings.

Of course there are more personal and more immediate motivations for watching birds too. For instance, in watching birds, one can forget stressful circumstances, experience greater involvement with one's world, awakening of interest in specifically rewarding use of the senses, resurgence of talents lying hidden (such as the talent to make pictures). One might say, without exaggeration, that aesthetic and 'spiritual' gains from birdwatching are in themselves sufficient reward for any observer. Birds relate intimately to all other phenomena in the environment—so watching birds one cannot but also watch other parts and faces of nature. And, unlike many other creatures, birds are larger, far less likely to cause hurt, and numerous enough to bestow even a casual visit to window or balcony with the bonus of an exciting meeting.

The district of Kodagu is among the most progressive regions of India—socially, culturally, economically and in the field of education. I am optimistic that this maiden effort will inspire and educate the younger generation in the district to understand, appreciate and preserve our natural biological reserves, and also help to create a society that is sensitive to the environment it exists in. I hope to get wide encouragement and support from citizens of all walks of life in the region.

Dr. S V Narasimhan
Virajpet 571 218

ಪ್ರಸ್ತಾವನೆ

ಕೊಡಗು: ನೆಲೆ ಮತ್ತು ಜೀವವೈವಿಧ್ಯತೆ

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ।
ಎಲ್ಲಿ ಮೋಹನ ಗಿರಿಯ ಬೆಡಗಿನ ರೂಪಿನಿಂದಲಿ ನಿಂದಳೋ॥
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ।
ಎಲ್ಲಿ ನೆಲವನು ತಣಿಸಿ, ಜನಮನ ಹೊಲದ ಕಳೆ ಕಳೆ ಕಳೆವಳೋ॥

ಎಂಬ ಕವಿವಾಣಿಯಂತೆ, ಪ್ರಕೃತಿಮಾತೆ ತನ್ನ ಇಚ್ಛೆಯ ತಾಣವನ್ನಾಗಿ ಆರಿಸಿಕೊಂಡ ಪ್ರದೇಶವೇ ಕೊಡಗು. ಕರ್ನಾಟಕದ ಇಪ್ಪತ್ತೇಳು ಜಿಲ್ಲೆಗಳಲ್ಲಿ, ಬರೀ ೪,೧೦೦ ಚದರ ಕಿ.ಮೀ. ವಿಸ್ತೀರ್ಣವುಳ್ಳ ಜಿಲ್ಲೆಯಾದ ಕೊಡಗಿನಲ್ಲಿ ಮೂರು ತಾಲ್ಲೂಕುಗಳು: ಉತ್ತರದಲ್ಲಿ, ಮಡಿಕೇರಿ ಹಾಗೂ ಸೋಮವಾರಪೇಟೆ; ದಕ್ಷಿಣದಲ್ಲಿ ವಿರಾಜಪೇಟೆ. ಜಿಲ್ಲೆಯ ಬಹುಭಾಗ, ಪ್ರಪಂಚದಲ್ಲಿಯೇ ಜೀವವೈವಿಧ್ಯತೆಗೆ ಹೆಸರಾದ ಪಶ್ಚಿಮಘಟ್ಟಗಳಿಂದಾವೃತವಾಗಿದೆ.

ಕಾವೇರಿಮಾತೆಯ ಜನ್ಮಸ್ಥಳ ತಲಕಾವೇರಿ. ಕಾವೇರಿಯ ಉಪನದಿಗಳಾದ ಲಕ್ಷ್ಮಣತೀರ್ಥ, ಬರಪೊಳೆ ಮತ್ತು ಹಾರಂಗಿ ಅಲ್ಲದೆ ಹೇಮಾವತಿ ಮತ್ತು ಅಸಂಖ್ಯಾತ ಝರಿ-ತೊರೆಗಳು ಪಶ್ಚಿಮಘಟ್ಟಗಳ ಕಣಿವೆಗಳಲ್ಲಿ ಹರಿದು ಕೊಡಗಿನ ನೆಲವನ್ನು ಪಾವನಗೊಳಿಸುತ್ತವೆ. ಈ ಗಿರಿಶಿಖರಗಳ ಮಧ್ಯೆಯಿರುವ ಕಮರಿ-ಕಣಿವೆಗಳೆಷ್ಟೋ!

ಬಹುಭಾಗ ನೀರೆಲ್ಲ ಹರಿದುಹೋಗುವುದರಿಂದ, ಕೊಡಗಿನಲ್ಲಿ ದೊಡ್ಡ ಜಲಾಶಯಗಳಿಲ್ಲ; ಸಣ್ಣ ಕೆರೆಗಳನ್ನು ಮಾತ್ರ ಕಾಣಬಹುದು. ನದಿ, ಕಾಲುವೆ, ಕೆರೆಗಳ ತೀರದಲ್ಲಿ ಜೌಗುಪ್ರದೇಶಗಳಿವೆ. ಇಲ್ಲಿ ಸೊಂಪಾಗಿ ಬೆಳೆದ ಹುಲ್ಲು, ಜೊಂಡು ಮತ್ತು ಬಿದಿರು ಕಾಡುಗಳನ್ನು ಕಾಣುತ್ತೇವೆ. ಬೆಟ್ಟಗಳ ಬುಡದಲ್ಲಿರುವ ಸಮತಟ್ಟು ಪ್ರದೇಶಗಳಲ್ಲಿ ರೈತರು ಭತ್ತ ಬೆಳೆಯುತ್ತಾರೆ. ವರ್ಷದಲ್ಲಿ ಮಳೆಗಾಲದ ಒಂದೇ ಬೆಳೆ ಬೆಳೆಯುವುದರಿಂದ, ನಾಡಿನ ಎಲ್ಲ ಹಬ್ಬ-ಹರಿದಿನಗಳೂ ಪ್ರಕೃತಿಯ ವಾರ್ಷಿಕ ಚಕ್ರವನ್ನವಲಂಬಿಸಿ, ಭತ್ತದ ಬೆಳೆಯೊಂದಿಗೆ ಹೆಣೆದುಕೊಂಡಿವೆ. ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ವಿಫುಲವಾಗಿ ಕಾಫ಼ಿ, ಮೆಣಸು ಮತ್ತು ಏಲಕ್ಕಿ ತೋಟಗಳನ್ನು ಕಾಣಬಹುದು. ಈ ಎಸ್ಟೇಟುಗಳಲ್ಲಿರುವ ನೆರಳು ಮರಗಳೇ ಅಸಂಖ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

ಕಣ್ಣಿಗೆ ಹಬ್ಬವನ್ನುಂಟುಮಾಡುವ ಪಶ್ಚಿಮಘಟ್ಟಗಳ ಸಾಲು, ಕಾಫ಼ಿ-ಏಲಕ್ಕಿ ಎಸ್ಟೇಟುಗಳು, ದಿಗಂತದವರೆಗೂ ಪಸರಿಸಿರುವ ಭತ್ತದ ಗದ್ದೆಗಳು, ಕೊಡಗಿನ ನೆಲದ ಫಲವತ್ತತೆಗೆ ಸಾಕ್ಷಿ. ಇಲ್ಲಿ ನಾಲ್ಕು ರೀತಿಯ ಕಾಡುಗಳನ್ನು ಕಾಣಬಹುದು: ಕೊಡಗಿನ ಪಶ್ಚಿಮದಲ್ಲಿ, ಸೂರ್ಯರಶ್ಮಿಯೂ ನೆಲಕ್ಕೆ ತಾಗದಂತೆ ಎತ್ತರವಾಗಿ, ಒತ್ತಾಗಿ ಬೆಳೆದ ಅರೆ-ನಿತ್ಯ ಮತ್ತು ನಿತ್ಯಹರಿದ್ವರ್ಣ ಕಾಡುಗಳು ಕಣ್ಣಿಗೆ ತಂಪನ್ನೆರೆಯುತ್ತವೆ. ಉತ್ತರ, ಮಧ್ಯ ಹಾಗೂ ದಕ್ಷಿಣ ಕೊಡಗಿನಲ್ಲಿ ಒಣ ಮತ್ತು ಶೀತ ಉದುರೆಲೆ ಕಾಡುಗಳಿವೆ. ಈ ಕಾಡುಗಳಲ್ಲಿ ಬೀಟೆ, ನಂದಿ, ಸಂಪಿಗೆ, ಹಲಸು, ಹೆಬ್ಬಲಸು, ಮತ್ತಿ, ಮಾವು, ಧೂಪ, ದೇವದಾರು, ಗೋಳಿ, ಹೊನ್ನೆ, ಕರ್ಪಚೆಕ್ಕೆ, ಹಿಪ್ಪೆ, ಅಶೋಕ, ಬಿಳಿನಂದಿ, ಗೇರು, ಆಲ-ಅತ್ತಿ ಮುಂತಾದ ಮರಗಳೂ, ನೆಟ್ಟುಬೆಳೆಸಿದ ತೇಗದ ಕಾಡುಗಳೂ ಇವೆ. ಅಲ್ಲದೆ ಶೀತಗಾಡುಗಳಲ್ಲಿ ನಾನಾಬಗೆಯ ಬೆತ್ತಗಳು, ವಿವಿಧ ಜಾತಿಯ ಜರಿಗಿಡಗಳು, ಅಸಂಖ್ಯ ಬಳ್ಳಿ, ಬಿದಿರುಗಳು, ಪಾಚಿ ಮತ್ತು ಆರ್ಕಿಡ್‌ಗಳೂ ಬೆಳೆಯುತ್ತವೆ.

ಪಶ್ಚಿಮ ಘಟ್ಟಗಳ ಕಣಿವೆ ಪ್ರದೇಶಗಳಲ್ಲಿ ಶೋಲಾ ಹಸಿರುಗಾಡುಗಳಿದ್ದರೆ, ಇಳಿಜಾರು ಪ್ರದೇಶಗಳಲ್ಲಿರುವ ಒತ್ತಾದ, ವಿಶಾಲವಾದ ಹುಲ್ಲುಕಾಡುಗಳು ವಿಶೇಷ ಸ್ಥಾನವನ್ನೇ ಪಡೆದಿವೆ. ಇವು ಸ್ಪಂಜಿನಂತೆ ಮಳೆನೀರನ್ನು ಹೀರಿಕೊಂಡು, ನೆಲದಲ್ಲಿ ಇಂಗಲು ಸಹಾಯ ಮಾಡುವುದಲ್ಲದೆ, ಭೂ ಸವಕಳಿ ತಡೆಗಟ್ಟುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.

ಜಿಲ್ಲೆಯ ಪೂರ್ವದಲ್ಲಿ ಪ್ರಸ್ಥಭೂಮಿಯನ್ನು ಕಾಣಬಹುದು. ಇಲ್ಲಿ ಸೀಗೆ, ಲಾಂಟಾನ, ಇನ್ನಿತರ ಮುಳ್ಳು ಪೊದೆಗಳ ಕುರುಚಲು ಕಾಡು ಹಾಗೂ ವಿರಳ ಕಾಡುಗಳಿವೆ. ವಿಶಾಲವಾದ ಬಯಲು ಪ್ರದೇಶಗಳಲ್ಲಿರುವ ಹಳ್ಳಿಗಳಲ್ಲಿ ರೈತಾಪಿ ಜನರ ಹೊಲ-ತೋಪುಗಳಿವೆ. ಕೊಡಗಿನ ವಿವಿಧ ನೆಲೆ-ಆವಾಸಗಳ ಸವಿವರವುಳ್ಳ ಭೂಪಟಕ್ಕೆ ರಕ್ಷಾಪುಟದ ಒಳಬದಿಯಲ್ಲಿರುವ ಚಿತ್ರ ನೋಡಿ.

ಸಂರಕ್ಷಿತ ಪ್ರದೇಶಗಳು:

ಕೊಡಗಿನ ಪ್ರಕೃತಿ ಸೌಂದರ್ಯದ ಖನಿಯನ್ನು ಉಳಿಸಿ, ಬೆಳೆಸಲು ಹಲವೆಡೆ ಘೋಷಿತ ರಕ್ಷಿತಾರಣ್ಯಗಳಿವೆ. ಉತ್ತರದಲ್ಲಿ ತಲಕಾವೇರಿ, ಪುಷ್ಪಗಿರಿ ಮತ್ತು ಬ್ರಹ್ಮಗಿರಿ ರಕ್ಷಿತಾರಣ್ಯಗಳು ಹಾಗೂ ದಕ್ಷಿಣದಲ್ಲಿ ನಾಗರಹೊಳೆ (ರಾಜೀವ್ ಗಾಂಧಿ) ರಾಷ್ಟ್ರೀಯ ಉದ್ಯಾನವನ ಇವುಗಳಲ್ಲಿ ಪ್ರಮುಖವಾದುವು. ಈ ಅರಣ್ಯಗಳು ಲಕ್ಷೋಪಲಕ್ಷ ಜೀವಿಗಳಿಗೆ ಆಶ್ರಯ ತಾಣವಾಗಿರುವುದಲ್ಲದೆ, ಜೀವವೈವಿಧ್ಯತೆಯ ಆಗರಗಳಾಗಿವೆ. ಸಸ್ಯಾಹಾರಿ ಪ್ರಾಣಿಗಳ ವರ್ಗಕ್ಕೆ ಸೇರಿದ ಆನೆ, ಕಾಡೆಮ್ಮೆ, ಹುಲ್ಲೆ, ಹುಲ್ಲೆಯ ಜಾತಿಗೆ ಸೇರಿದ ನಾಲ್ಕು ಕೊಂಬಿನ ಕೊಂಡುಕುರಿ ಮತ್ತು ಕಾಡುಹಂದಿಗಳಲ್ಲದೆ, ಜಿಂಕೆಯ ಜಾತಿಗೆ ಸೇರಿದ ಕಡವೆ, ಸಾರಂಗ, ಕಾಡುಕುರಿ, ಹಾಗೂ ಬೆಕ್ಕಿನ ಗಾತ್ರದ ಕೂರಹಂದಿ ಇವೆಲ್ಲ ಸೇರಿವೆ.

ಮಾಂಸಾಹಾರಿಗಳ ಗುಂಪಿನಲ್ಲಿ ಮಾರ್ಜಾಲಗಳಾದ ಹುಲಿ, ಚಿರತೆ, ಕಾಡುಬೆಕ್ಕು, ಹುಲಿಬೆಕ್ಕು, ಅಲ್ಲದೆ ರಚ್ಚೆಕ್ಕು, ಮುಂಗುಸಿ ಮತ್ತು ಅಪರೂಪದ ಮರನಾಯಿಗಳು; ಬೇಟೆಗಾರ ಪ್ರಾಣಿಗಳಾದ ಕತ್ತೆಕಿರುಬ, ತೋಳ, ಕೆನ್ನಾಯಿ, ನೀರ್ನಾಯಿ, ಅಲ್ಲದೆ ಮುಳ್ಳುಹಂದಿ, ಕೀಟಭಕ್ಷಕ ಚಿಪ್ಪುಹಂದಿ ಮತ್ತು ಕರಡಿಗಳಿವೆ.

ಇನ್ನು ವಾನರರ ವರ್ಗದಲ್ಲಿ ಕ್ಶೋತಿ, ಮುಚ್ಚ, ನೀಲಗಿರಿ ಮುಚ್ಚ, ಮುಸುವ, ಕಾಡುಪಾಪ ಮತ್ತು ಅಪರೂಪದ ಸಿಂಗಲೀಕ ಸೇರಿವೆ. ಈ ಪ್ರಾಣಿಗಳಲ್ಲದೆ, ಮೊಲ, ಹಾರುವ ಅಳಿಲು, ಕೆಂಚಳಿಲು, ಮುಂತಾದ ವಿಶಿಷ್ಟ ಪ್ರಾಣಿಗಳೂ ಈ ಕಾಡುಗಳಲ್ಲಿವೆ.

ಉರಗಸಂಕುಲಕ್ಕೆ ಸೇರಿದ ಹಲವಾರು ವಿಷ-ವಿಷರಹಿತ ಹಾವುಗಳು, ಮೊಸಳೆ, ಉಡಗಳೂ ಇಲ್ಲಿವೆ. ಹಂದಿಮೀನು (ಮಹಶೀರ್), ಕಾರ್ಪ್, ಮ್ಯೂರೆಲ್ ಮುಂತಾದ ಮೀನುಗಳು ಮತ್ತು ಹುಲ್ಲುಕಪ್ಪೆ, ಗೂಳಿಕಪ್ಪೆ ಮುಂತಾದ ಕಪ್ಪೆಯ ವಿವಿಧ ಪ್ರಭೇದಗಳಿವೆ. ಮೆದುಚಿಪ್ಪಿನ ಆಮೆ, ಕರಿ ಆಮೆ, ಟ್ರಾವಂಕೂರ್ ಆಮೆ, ಬೆಳುವಾಮೆ, ಬೆತ್ತದಾಮೆ ಮುಂತಾದ ಕೂರ್ಮವರ್ಗದ ಪ್ರಾಣಿಗಳಿವೆ. ಇನ್ನು ಕೀಟ ವಿಜ್ಞಾನಿಗಳಿಗೆ-ಪಕ್ಷಿತಜ್ಞರಿಗೆ ಹಾಗೂ ಪಕ್ಷಿವೀಕ್ಷಕರಿಗೆ ಚಿಟ್ಟೆ-ಪತಂಗ-ಹಕ್ಕಿಗಳಿಂದ ತುಂಬಿ ತುಳುಕುತ್ತಿರುವ ಈ ಕಾಡುಗಳು ಸ್ವರ್ಗಸಮಾನವಾಗಿವೆ.

ಇಂದು ವಿಜ್ಞಾನದ ಹೊಸ ಆವಿಷ್ಕಾರವಾದ ಡಿ.ಎನ್.ಎ. ಬೆರಳಚ್ಚು ತೆಗೆಯುವ ವಿಧಾನದಿಂದ ಸಕಲ ಸಸ್ಯ-ಪ್ರಾಣಿಗಳ ಪ್ರಭೇದಗಳನ್ನು ಕರಾರುವಾಕ್ಕಾಗಿ ಗುರುತುಹಿಡಿಯಲು ಸಾಧ್ಯವಾಗಿದೆ. ಅಲ್ಲದೆ ಈ ಕ್ರಮ ಪಶ್ಚಿಮಘಟ್ಟಗಳ ಜೀವಿವೈವಿಧ್ಯತೆಯ ಹೊಸ ಭಂಡಾರವನ್ನೇ ತೆರೆದಿದೆ.

ದೇವರಕಾಡು: ಸಂರಕ್ಷಣೆಯ ಸಂಪ್ರದಾಯ

ಸಸ್ಯಸಂಕುಲಗಳನ್ನು, ಪ್ರಾಣಿಪಕ್ಷಿಗಳನ್ನು ದೇವರ ಹೆಸರಿನಲ್ಲಿ ಪೂಜಿಸಿ, ರಕ್ಷಿಸುವ ಸಂಪ್ರದಾಯಗಳು ಪ್ರಪಂಚದ ನಾನಾ ಭಾಗಗಳಲ್ಲಿ ಆಚರಣೆಯಲ್ಲಿವೆ. ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕದ ಕೊಡಗಿನಲ್ಲಿ ***ದೇವಕಾಡ್*** ಅಥವಾ **ದೇವರಕಾಡು**ಗಳೆಂದು ಕರೆಯಲ್ಪಡುವ ಪವಿತ್ರವನಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಪ್ರತಿ ಹಳ್ಳಿಯಲ್ಲಿ ಒಂದಕ್ಕಿಂತ ಹೆಚ್ಚು ದೇವರಕಾಡುಗಳನ್ನು ನಾವು ಕಾಣಬಹುದು. ಸಣ್ಣಸಣ್ಣ ಕಾಡುಗಳನ್ನು ಪೂಜಾಸ್ಥಾನಗಳಾಗಿ ಪರಿವರ್ತಿಸಿ, ಅವುಗಳನ್ನು ರಕ್ಷಿಸುವ ಕಾರ್ಯ ಒಂದು ವಿಶೇಷ ಪದ್ಧತಿಯಾಗಿ ಇಲ್ಲಿಯ ಜನರಲ್ಲಿ ಬೆಳೆದುಬಂದಿದೆ. ಸುಮಾರು ೧,೨೧೪ ಇಂತಹ ದೇವರಕಾಡುಗಳು ೩,೬೫೦ ಚದರ ಕಿ.ಮೀ. ವಿಸ್ತೀರ್ಣದಲ್ಲಿದೆ! ಇತ್ತೀಚೆಗೆ ಅರಣ್ಯ ಇಲಾಖೆ, ಸರ್ಕಾರೇತರ ಸ್ವಯಂಸೇವಾಸಂಸ್ಥೆಗಳು ಹಾಗೂ ಹಲವಾರು ಸಂಶೋಧನಾ ಕೇಂದ್ರಗಳು ದೇವರಕಾಡು ಸಂರಕ್ಷಣೆಗಾಗಿ ಸ್ಥಳೀಯ ಸಮುದಾಯದೊಂದಿಗೆ ಕೈಜೋಡಿಸಿದ್ದಾರೆ. ಇವು ವನ್ಯಜೀವಿಗಳಿಗೆ ಸುರಕ್ಷಿತ ಸ್ಥಾನಗಳಲ್ಲದೆ, ಸಂಶೋಧನೆಗಳಿಗೂ ಉತ್ತಮ ತಾಣಗಳಾಗಿವೆ. ಈ ದೇವರಕಾಡುಗಳ ಬಗ್ಗೆ ಜನರಲ್ಲಿ ಇತ್ತೀಚೆಗೆ ಇನ್ನೂ ಹೆಚ್ಚಿನ ಕಳಕಳಿ, ಉತ್ಸಾಹ ಕಂಡುಬರುತ್ತಿರುವುದು ಮತ್ತೊಂದು ಉತ್ತಮ ಬೆಳವಣಿಗೆ. ಯಾವುದೇ ಶುಭ್ರವಾದ ಮುಂಜಾನೆ ನೀವು ಒಂದು ದೇವರಕಾಡಿನಲ್ಲಿ ಪಕ್ಷಿವೀಕ್ಷಣೆ ಮಾಡಿದಲ್ಲಿ ನೀವು ಅಲ್ಲಿ ಏನಿಲ್ಲವೆಂದರೂ ೩೦-೪೦ ಪ್ರಭೇದದ ಹಕ್ಕಿಗಳನ್ನು ಕಾಣಬಹುದು!

ಹೀಗೆ, ವಿಸ್ತಾರವಾದ ಕಾಫಿ. ಏಲಕ್ಕಿ ಎಸ್ಟೇಟುಗಳು, ಅವುಗಳಲ್ಲಿರುವ ಅಸಂಖ್ಯಾತ ನೆರಳು ಮರಗಳು, ಮನೆಗಳ ಸುತ್ತಮುತ್ತ ಅಂಗಳದಲ್ಲಿ ವಿಶೇಷವಾಗಿ ಬೆಳೆಸಿರುವ ಹಣ್ಣು ಹಾಗೂ ಹೂದೋಟಗಳು, ಇವೆಲ್ಲ ಕೊಡಗನ್ನು ಸಮೃದ್ಧಿಗೊಳಿಸಿವೆ. ಹೀಗೆ ಕೊಡಗಿನಲ್ಲಿರುವ, ಬೇರೆಲ್ಲಿಯೂ ಕಾಣದ, ವೈವಿಧ್ಯಮಯ ಆವಾಸಸ್ಥಾನಗಳು ಇಲ್ಲಿಯ ಸಮೃದ್ಧ ಜೀವವೈವಿಧ್ಯತೆಗೆ ಕಾರಣವಾಗಿ ಒಟ್ಟಿನಲ್ಲಿ **ಪ್ರಕೃತಿಮಾತೆಯ ಹೆಮ್ಮೆಯ ತಾಣ**ವನ್ನಾಗಿಸಿವೆ.

ಪುಸ್ತಕದ ಬಗ್ಗೆ ಎರಡು ಮಾತು:

ಹಕ್ಕಿಗಳು ಸ್ವಾತಂತ್ರ್ಯ, ಶಾಂತಿ ಮತ್ತು ಸೌಂದರ್ಯದ ಪ್ರತಿನಿಧಿಗಳು. ಅವು, ಅಪರಿಮಿತ ನೈಸರ್ಗಿಕ ವೈಭವವುಳ್ಳ ಕೊಡಗಿನ ಸೊಬಗನ್ನು ಇಮ್ಮಡಿಗೊಳಿಸಿವೆ. ಕೊಡಗಿನಲ್ಲಿ ಕಂಡುಬರುವ ಪಕ್ಷಿವೈವಿಧ್ಯತೆ ಅಪೂರ್ವ. ಕೊಡಗಿನ ಅರಣ್ಯ ಪ್ರದೇಶಗಳಲ್ಲಿ, ಎಸ್ಟೇಟುಗಳಲ್ಲಿ, ಹಣ್ಣು-ಹೂದೋಟಗಳ ನಡುವೆ ಸುತ್ತಾಡುತ್ತಾ, ಪ್ರಕೃತಿಯ ಮಡಿಲಲ್ಲಿ ಚಿಲಿಪಿಲಿಗುಟ್ಟುತ್ತಾ ಹಾರಾಡುವ ಹಕ್ಕಿಗಳನ್ನು ನೋಡುವುದು, ಮನಸ್ಸಿಗೆ ಅನಿರ್ವಚನೀಯ ಆನಂದವನ್ನು ನೀಡುತ್ತದೆ!

ನೂರಾರು ವರ್ಷಗಳ ಹಿಂದಿನ ಇತಿಹಾಸದಲ್ಲೂ, ಬ್ರಿಟಿಷ್ ಆಡಳಿತದ ಸಮಯದಲ್ಲೂ ಕೊಡಗಿಗೆ ಒಂದು ಪ್ರತ್ಯೇಕ ಹಾಗೂ ವಿಶಿಷ್ಟ ಸ್ಥಾನವಿತ್ತು. ಇಂದಿಗೂ ಪಶ್ಚಿಮಘಟ್ಟಗಳ ಸಾಲಿನಲ್ಲಿ ಬರುವ ಇತರ ಜಿಲ್ಲೆಗಳನ್ನು ಗಮನಿಸಿದಲ್ಲಿ ಕೊಡಗು ಈ ವಿಶೇಷತೆಯನ್ನು ಉಳಿಸಿಕೊಂಡು ಬಂದಿದೆ. ಇಲ್ಲಿಯ ಜನಜೀವನ, ಭಾಷೆ, ವೇಷ-ಭೂಷಣ, ಸಾಂಸ್ಕೃತಿಕ ಪರಂಪರೆ, ಎಲ್ಲವೂ ವಿಭಿನ್ನ ಹಾಗೂ ವಿಶಿಷ್ಟ. ಅಲ್ಲದೆ ಇಲ್ಲಿರುವ ವೈವಿಧ್ಯಮಯ ಪ್ರಾಕೃತಿಕ ಆವಾಸಗಳು ಇಲ್ಲಿಯ ಸಮೃದ್ಧ ಜೀವವೈವಿಧ್ಯತೆಗೆ ಕಾರಣ. ಒಂದು ದೇಶದ ಅತಿ ಪುಟ್ಟ ಭೂವಿಸ್ತೀರ್ಣದಲ್ಲಿ ಆ ದೇಶದ ಶೇಕಡ ೨೫ಕ್ಕೂ ಹೆಚ್ಚು ಪ್ರಭೇದದ ಹಕ್ಕಿಗಳು ಮನೆಮಾಡಿವೆ ಎಂದರೆ ಈ ನಾಡಿನ ಉತ್ಕೃಷ್ಟತೆಯನ್ನು ನಾವು ಮನಗಾಣಬಹುದು. ಆದರೆ ಇಲ್ಲಿರುವ ಅತ್ಯಪೂರ್ವ ಪಕ್ಷಿಸಂಕುಲದ ಬಗ್ಗೆ ಸಮಗ್ರ ಮಾಹಿತಿಯುಳ್ಳ ಗ್ರಂಥ ಇಲ್ಲಿಯವರೆಗೆ ಲಭ್ಯವಿರಲಿಲ್ಲ ಮತ್ತು ಈ ಕೊರತೆ ಎದ್ದುಕಾಣುತ್ತಿತ್ತು.

ಆದ್ದರಿಂದ ಭಾರತದೇಶದಲ್ಲಿಯೇ ಅತಿ ವಿಶಿಷ್ಟವಾದ ಕೊಡಗಿನ ಖಗರತ್ನಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದೇ ಈ ಪುಸ್ತಕದ ಉದ್ದೇಶ. ಪಕ್ಷಿಗಳ ಮಾಹಿತಿಗಳುಳ್ಳ, ಕ್ಷೇತ್ರ-ಮಾರ್ಗದರ್ಶಕದಂತೆ ಇರುವ, ಇತರ ಪುಸ್ತಕಗಳ ಧಾಟಿಯಲ್ಲಿಯೇ ಈ ಹೊತ್ತಗೆಯೂ ರೂಪುಗೊಂಡಿದೆ. ಕೊಡಗಿನ ಒಟ್ಟು ೩೧೦ ಪಕ್ಷಿಪ್ರಭೇದಗಳ ಚಿತ್ರಗಳು ಮತ್ತು ಮಾಹಿತಿಗಳನ್ನು, ಜೊತೆಜೊತೆಯಲ್ಲಿ ಒತ್ತಟ್ಟಿಗೆ ಕಾಣಬಹುದು. ಇದು ಆಯಾ ಕುಟುಂಬದ ಹಕ್ಕಿಗಳನ್ನು ಹೋಲಿಸಿ ನೋಡಲು ಮತ್ತು ಹೆಚ್ಚು ಶ್ರಮವಿಲ್ಲದೆ ಓದಲು ಅನುಕೂಲವಾಗುವುದು. ಪ್ರತಿಯೊಂದು ಹಕ್ಕಿಯ ಆಕಾರ, ರೂಪುರೇಷೆ, ಆವಾಸಸ್ಥಾನ, ನಡವಳಿಕೆ, ಆಹಾರ, ಗೂಡಿನ ರಚನೆ, ಮೊಟ್ಟೆಗಳ ವಿವರಗಳನ್ನು ಇಂಗ್ಲಿಷಿನಲ್ಲಿ ಬರೆಯಲಾಗಿದೆ. ಇಂಗ್ಲಿಷ್ ಮತ್ತು ಕನ್ನಡ ಈ ಎರಡೂ ಭಾಷೆಗಳಲ್ಲಿ ಪಠ್ಯವಿದ್ದರೂ, ಅದು ಒಂದರ ಮತ್ತೊಂದು ಭಾಷಾಂತರವಲ್ಲ. ಸ್ವಾರಸ್ಯಕರ, ಮುಖ್ಯ ಹಾಗೂ ವಿಶಿಷ್ಟ ವಿಚಾರಗಳು ಕನ್ನಡದಲ್ಲಿ ಕಾಣಬಹುದು. ಹಕ್ಕಿಗಳ ಕೊಡವ ಹೆಸರು ಇದ್ದಲ್ಲಿ ಅವುಗಳನ್ನು ಆವರಣದಲ್ಲಿ ನೀಡಲಾಗಿದೆ. ನಿರ್ದಿಷ್ಟವಾಗಿ ಹೇಳದಿದ್ದಲ್ಲಿ, ಚಿತ್ರವು ಗಂಡುಹಕ್ಕಿಯದ್ದೆಂದೇ ತಿಳಿಯತಕ್ಕದ್ದು.

ಕೊಡಗಿನಲ್ಲಿ ವಾಸವಿರುವ ಸಕಲ ಪಕ್ಷಿಗಳ ಬಗ್ಗೆ ಸಪ್ರಮಾಣವಾದ, ವಿಶ್ವಾಸಾರ್ಹವಾದ ಮಾಹಿತಿಯನ್ನೂ ಒಂದೇ ಹೊತ್ತಗೆಯಲ್ಲಿ ಕ್ರೋಢೀಕರಣಗೊಳಿಸಲು ಪ್ರಯತ್ನಿಸಲಾಗಿದೆ. ಆದ್ದರಿಂದ ಪಕ್ಷಿಗಳ ಬಗ್ಗೆ ಕುತೂಹಲ, ಅಭಿರುಚಿ, ಕಳಕಳಿಯಿರುವ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ, ಈ ಪುಸ್ತಕ ಉಪಯುಕ್ತವಾಗುವುದರಲ್ಲಿ ಸಂಶಯವಿಲ್ಲ.

ಎಷ್ಟೋ ಅಂತರರಾಷ್ಟ್ರೀಯ ನಿಯಮಗಳು, ನಿಬಂಧನೆಗಳು, ಕಟ್ಟುಪಾಡುಗಳಿದ್ದರೂ, ಮಾನವನ ದುರಾಸೆ, ಸ್ವಾರ್ಥ, ಕ್ರೌರ್ಯದ ಮುಂದೆ ಈ ಸಂಪತ್ತನ್ನು ಉಳಿಸಿಕೊಳ್ಳುವ ಎಲ್ಲ ಪ್ರಯತ್ನಗಳೂ ನಿಷ್ಫಲವಾಗಿವೆ.

ನಮ್ಮ ದೇಶವು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಸಂಸ್ಕೃತಿಯುಳ್ಳದ್ದಾಗಿದೆ. ಪಕ್ಷಿಗಳ ಬಗ್ಗೆ ಆಸಕ್ತಿಯಿರುವ ಸುಮಾರು ಹದಿನಾರು ಸಾವಿರಕ್ಕೂ ಹೆಚ್ಚು ಪಕ್ಷಿವೀಕ್ಷಕರು ಭಾರತದಲ್ಲಿದ್ದಾರೆ. ಪ್ರಪಂಚದಾದ್ಯಂತ ಪಕ್ಷಿಸಂಕುಲ ನಾಶವಾಗುತ್ತಿರುವ ಬಗ್ಗೆ ಆತಂಕಕಾರಿ ಪರಿಸ್ಥಿತಿ ಉಂಟಾಗಿರುವ ಹಿನ್ನೆಲೆಯಲ್ಲಿ, ಹಲವಾರು ಸಂಘ-ಸಂಸ್ಥೆಗಳು ಈ ಬಗ್ಗೆ ವಿದ್ಯಾರ್ಥಿಗಳಲ್ಲಿ, ಜನಸಾಮಾನ್ಯರಲ್ಲಿ, ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಇದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಪಕ್ಷಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದರ ಮೂಲಕ, ಅಳಿವಿನ ಅಂಚಿಗೆ ತಲುಪಿರುವ ಪಕ್ಷಿಪ್ರಭೇದಗಳ ವಿವರಗಳನ್ನು ಪಡೆಯಲು ನೆರವಾಗುತ್ತದೆ. ಯಾವ ಪ್ರಭೇದದ ಪಕ್ಷಿಯ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕೆಂಬುದನ್ನು ತೀರ್ಮಾನಿಸಲು ಈ ಮಾಹಿತಿಗಳು ಸಹಾಯಕವಾಗುತ್ತವೆ.

ಪಕ್ಷಿಗಳು

ಹಕ್ಕಿಗಳಿಲ್ಲದ ಪ್ರಕೃತಿಯನ್ನು ಊಹಿಸಲೂ ಅಸಾಧ್ಯ. ಪಕ್ಷಿಗಳು ಮಾನವನ ವಿಕಾಸ ಮತ್ತು ಜೀವನದುದ್ದಕ್ಕೂ ಕಲೆ, ಶಿಲ್ಪ, ಸಾಹಿತ್ಯ ಮತ್ತು ಸಂಸ್ಕೃತಿ – ಹೀಗೆ ಎಲ್ಲಾ ಸ್ತರಗಳಲ್ಲೂ ಸ್ಫೂರ್ತಿ ನೀಡಿವೆ. ವೇದ-ಉಪನಿಷತ್ತುಗಳಲ್ಲಿ ಪಕ್ಷಿಗಳು ಪ್ರಕೃತಿಯ ಅದ್ಭುತ ಸೃಷ್ಟಿಯೆಂಬ ವರ್ಣನೆಯಿದೆ. ವಾಲ್ಮೀಕಿ ರಾಮಾಯಣದ ಪ್ರಾರಂಭವೇ ಕ್ರೌಂಚ ಪಕ್ಷಿಯ ಮರಣದಿಂದ. ಮುಂದೆ ಸೀತಾಪಹರಣದ ಸಮಯದಲ್ಲಿ ಜಟಾಯು ಮತ್ತು ಸಂಪಾತಿಗಳ ವೃತ್ತಾಂತವನ್ನು ಕಾಣುತ್ತೇವೆ. ಶಿಬಿ ಮಹಾರಾಜನ ಕಥೆಯಲ್ಲಿ ಬರುವ ಕಪೋತ, ಗಿಡುಗಗಳ ವೃತ್ತಾಂತ, ನಳನ ಕಥೆಯಲ್ಲಿ ಸಂದೇಶವಾಹಕದ ದ್ಯೋತಕವಾಗಿ ಬರುವ ಹಂಸದ ವಿಚಾರ ತಿಳಿದದ್ದೇ. ಚಾತಕ ಪಕ್ಷಿ ತಲೆಯೆತ್ತಿ ಬೀಳುತ್ತಿರುವ ಮಳೆ ನೀರನ್ನು ಮಾತ್ರ ಕುಡಿಯುತ್ತದೆ ಎಂಬ ಪ್ರತೀತಿಯೂ ಇದೆ. ಅಷ್ಟೇಕೆ, ಶ್ರೀವಿಷ್ಣು ಗರುಡವಾಹನ; ಸುಬ್ರಹ್ಮಣ್ಯನ ವಾಹನ ನವಿಲು, ಶನಿದೇವನ ವಾಹನ ಕಾಗೆ; ಅಲ್ಲದೆ ಸರಸ್ವತಿ, ಕಾಮಾಕ್ಷಿಯರೊಂದಿಗೆ ಹಂಸ ಮತ್ತು ಗಿಳಿಗಳು ಬೆಸೆದುಕೊಂಡಿವೆ. ವಿಷ್ಣುಶರ್ಮನ ಪಂಚತಂತ್ರದಲ್ಲಿ

ಬರುವ ಹಕ್ಕಿಗಳು ಒಂದೇ ಎರಡೇ? ಹೀಗೆ ಹಕ್ಕಿಗಳು ನಮ್ಮ ದೇಶದ ಪುರಾಣ ಕಥೆಗಳಲ್ಲೂ, ನೀತಿಕಥೆಗಳಲ್ಲೂ ಹಾಸುಹೊಕ್ಕಾಗಿವೆ. ಶಿಲ್ಪಕಲೆಯಲ್ಲಿಯೂ ನವಿಲು, ಗಿಳಿ, ಗರುಡ, ಹಂಸ ಮುಂತಾದ ಅನೇಕ ಹಕ್ಕಿಗಳನ್ನು ದೇಶದೆಲ್ಲೆಡೆ ಕಾಣಬಹುದು. ಚರಿತ್ರೆಯ ಪುಟಗಳಲ್ಲೂ ಅನೇಕ ರಾಜಮಹಾರಾಜರ ಹಕ್ಕಿ ಒಡನಾಟವನ್ನು ಓದುತ್ತೇವೆ. ಸಾಹಿತಿಗಳಿಗಂತೂ ಅವರವರ ಭೌಗೋಳಿಕ ಹಿನ್ನೆಲೆಗನುಗುಣವಾಗಿ ಹಕ್ಕಿಗಳ ಬಣ್ಣ, ರೂಪ ಮತ್ತು ಕಂಠ ಇವೆಲ್ಲವೂ ಅತ್ಯಾಕರ್ಷಕ ಹಾಗೂ ಸ್ಫೂರ್ತಿದಾಯಕ. ಕನ್ನಡದ ಆದಿಕವಿ ಪಂಪ ಬನವಾಸಿಯ ವರ್ಣನೆ ಮಾಡುವಾಗ *ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್* ಎಂದು ಬಣ್ಣಿಸಿದರೆ, ಮಾಸ್ತಿ ವೆಂಕಟೇಶ ಅಯ್ಯಂಗಾರರು ಯಾವ ಹಕ್ಕಿಯಾದರೇನು ಕಾಗೆಯಾಗಿಯಾದರೂ ಕನ್ನಡನಾಡಿನಲ್ಲೇ ಹುಟ್ಟಬೇಕು ಎನ್ನುತ್ತಾರೆ!

ಒಂದೇ ಮಾತಿನಲ್ಲಿ ಬಣ್ಣಿಸಬೇಕೆಂದರೆ, ಹಕ್ಕಿಗಳು ***ಗರಿಗಳಿರುವ ಎರಡು ಕಾಲುಗಳ ಮೇಲೆ ನಡೆಯುವ*** ಪ್ರಾಣಿಗಳು. ಲೋಕದ ಇನ್ನಾವುದೇ ಜೀವಿಗೂ ಗರಿಗಳಿಲ್ಲ. ಗರಿಗಳು ನಮ್ಮ ಕೂದಲಿನಂತೆ ಕಂಡರೂ ಕೂದಲಿನ ರಚನೆಯೇ ಬೇರೆ, ಗರಿಗಳ ರಚನೆಯೇ ಬೇರೆ. ಗರಿಗಳಿರುವುದು ಹಕ್ಕಿಗಳಿಗೆ ಮಾತ್ರವಾದರೆ, ಕೂದಲು ಸಸ್ತನಿಗಳಿಗೆ ಮಾತ್ರ ಇರುತ್ತದೆ. ಹಕ್ಕಿಗಳಿಗೆ ಗರಿಗಳು ಬಂದದ್ದೆಲ್ಲಿಂದ?

ವಿಜ್ಞಾನಿಗಳು *ಜುರಾಸಿಕ್* ಯುಗದಲ್ಲಿ ಅಂದರೆ, ೧೬.೫ ಕೋಟಿ ವರ್ಷಗಳ ಹಿಂದೆ, ಸರೀಸೃಪಗಳಿಂದ ಹಕ್ಕಿಗಳ ಉಗಮವಾಯಿತೆಂದು ಹೇಳುತ್ತಾರೆ. ನೆಲದ ಮೇಲೆ ತೆವಳುವ ಹಾವೆಲ್ಲಿ, ಸ್ವಚ್ಛಂದವಾಗಿ ಹಾರುವ ಹಕ್ಕಿಯೆಲ್ಲಿ– ಎಲ್ಲಿಂದೆಲ್ಲಿಯ ಸಂಬಂಧ, ಎಂದು ನಿಮಗನ್ನಿಸಬಹುದು.

ಸರೀಸೃಪಗಳಾಗಲೀ, ಹಕ್ಕಿಗಳಾಗಲೀ, ಮೊಟ್ಟೆಯಿಂದ ಮರಿಮಾಡುವ ಪ್ರಾಣಿಗಳು. ಇನ್ನೂ ಸೂಕ್ಷ್ಮವಾಗಿ ಗಮನಿಸಿ: ಕೋಳಿ, ನವಿಲು ಮುಂತಾದ ಹಕ್ಕಿಗಳ ಕಾಲುಗಳಲ್ಲಿ ಹುರುಪೆಗಳಿರುವುದನ್ನು ನೀವು ಕಂಡಿರಬಹುದು. ಅದೇ ಗಿಡುಗ, ಗೂಬೆ ಮುಂತಾದ ಹಕ್ಕಿಗಳಲ್ಲಿ ಈ ಕಾಲುಗಳು ಗರಿಗಳಿಂದ ಮುಚ್ಚಿರುತ್ತವೆ. ಅಂದರೆ, ಹುರುಪೆಯಂತಹ ಚರ್ಮದಿಂದ ಗರಿಗಳು ರೂಪಾಂತರಗೊಂಡು ವಿಕಾಸ ಹೊಂದಿವೆಯೆಂದಾಯಿತು. ಇದೇ ರೀತಿಯ ಹುರುಪೆಗಳನ್ನು ನಾವು ಹಾವು, ಮೊಸಳೆ ಮುಂತಾದ ಸರೀಸೃಪಗಳಲ್ಲಿ ಕಾಣುತ್ತೇವೆ. ಅಲ್ಲದೆ ಹಾವುಗಳು ವರ್ಷಕ್ಕೊಂದಾವೃತ್ತಿ ಪೊರೆ ಕಳಚುವಂತೆ, ಪಕ್ಷಿಗಳೂ ಹಳೆ ಗರಿಗಳನ್ನು ತೊರೆದು ಹೊಸ ಗರಿಗಳನ್ನು ಹೊಂದುತ್ತವೆ.

ಅತೀ ಪುರಾತನ ಪಳೆಯುಳಿಕೆ, *ಆರ್ಕಿಯೋಪ್ಟೆರಿಕ್ಸ್ ಲಿಥೋಗ್ರಾಫಿಕಾ* ಎಂಬ ಪ್ರಭೇದದ ಹಕ್ಕಿ ಸರೀಸೃಪಗಳಿಗೂ, ಇಂದಿನ ಹಕ್ಕಿಗಳಿಗೂ ವಿಕಾಸದ ಕೊಂಡಿಯೆನಿಸಿಕೊಂಡಿದೆ. ಭೂಮಿಯ ಮೇಲೆ ವಾಸವಾಗಿರುವ ಸುಮಾರು ಎಂಟು ಸಾವಿರದ ಆರುನೂರಕ್ಕೂ ಹೆಚ್ಚು ಪ್ರಭೇದದ ಹಕ್ಕಿಗಳಲ್ಲಿ, ಎರಡು ಸಾವಿರದ ಅರವತ್ತಕ್ಕೂ ಹೆಚ್ಚು ಪ್ರಭೇದ–ಒಳಪ್ರಭೇದದ ಹಕ್ಕಿಗಳು ನಮ್ಮ ದೇಶದಲ್ಲಿವೆ. ಜಗತ್ತಿನಲ್ಲಿ ಇನ್ನೆಲ್ಲಿಯೂ ಕಂಡುಬಾರದ ಇಂತಹ ಪಕ್ಷಿವೈವಿಧ್ಯತೆಗೆ, ನಮ್ಮ ದೇಶದಲ್ಲಿರುವ ವಿವಿಧ ಭೂ ಆವಾಸಗಳೇ ಕಾರಣ ಎಂದು ಬೇರೆ ಹೇಳಬೇಕಿಲ್ಲ.

ದೇಹದ ರಚನೆ: ಪಕ್ಷಿಗಳು ಬಿಸಿರಕ್ತದ ಪ್ರಾಣಿಗಳು. ದೇಹದ ಶಾಖವನ್ನು ಒಂದೇ ಪ್ರಮಾಣದಲ್ಲಿರಿಸಲು ಹೆಚ್ಚು ಶ್ರಮಪಡಬೇಕು. ಗರಿಗಳು ದೇಹದ ಶಾಖವನ್ನು ನಷ್ಟವಾಗದಂತೆ ಉಳಿಸುತ್ತವೆ.

ದೇಹಕ್ಕೆ ಅಗತ್ಯ ಆಮ್ಲಜನಕವನ್ನು ಪೂರೈಸಲು ಉಸಿರಾಟದ ವೇಗವೂ ಹೆಚ್ಚು. ಹಕ್ಕಿಗಳ ಶ್ವಾಸಕೋಶದ ವ್ಯವಸ್ಥೆಯೇ ವಿಶಿಷ್ಟ. ಶ್ವಾಸಕೋಶದಲ್ಲಿರುವಂತೆಯೇ ಗಾಳಿಯ ಚೀಲಗಳು ದೇಹದ ಎಲ್ಲ ಅಂಗಾಂಗಗಳ ನಡುವೆಯೂ ಆವರಿಸಿವೆ. ಹಾರಲು ಗಟ್ಟಿಮುಟ್ಟಾದ ಮೂಳೆ ಬೇಕು, ಆದರೆ ಭಾರವಿರಬಾರದಲ್ಲ?

ಆದ್ದರಿಂದ ಅವುಗಳ ಮೂಳೆಗಳೆಲ್ಲ ಟೊಳ್ಳಾದ ನಾಳಿಗಳು. ಅವುಗಳೊಳಗೂ ಗಾಳಿಯ ಚೀಲಗಳು! ಹೀಗಾಗಿ ದೇಹದಲ್ಲೆಲ್ಲಾ ಗಾಳಿಯ ಸಂಚಾರವಾಗಿ ಸಾಕಷ್ಟು ಆಮ್ಲಜನಕವನ್ನು ಪೂರೈಸುತ್ತವೆ.

ಪಕ್ಷಿಗಳಿಗೆ ಎಲ್ಲಕ್ಕಿಂತ ಮಿಗಿಲಾದ ಅಂಗ ಅವುಗಳ ರೆಕ್ಕೆ. ಮುಂಗಾಲುಗಳು ವಿಕಾಸಹೊಂದಿ, ಗರಿಗಳಿಂದಾವೃತವಾದ ಹಗುರ, ಜಲಾಭೇದ್ಯ ರೆಕ್ಕೆಗಳು, ಲೀಲಾಜಾಲವಾಗಿ, ಎಲ್ಲೂ ತಾಗದಂತೆ ಹಾರಲು–ಇಳಿಯಲು ತಯಾರಾದ, ಪ್ರಕೃತಿಯ ಅತಿಶಯ ಕೌಶಲ್ಯದ ಕಲಾಕೃತಿಗಳು. ಈ ಗರಿಗಳ ಬಣ್ಣ ಅವುಗಳಲ್ಲಿರುವ *ಮೆಲಾನಿನ್, ಕೆರೋಟಿನಾಯ್ಡ್* ಮತ್ತು *ಪಾರ್ಫಿರಿನ್ಸ್* ವರ್ಣದ್ರವ್ಯಗಳ ವಿವಿಧ ಛಾಯೆಗಳಿಂದ ಉಂಟಾಗಿರುತ್ತವೆ. ಹಕ್ಕಿಗಳ ಬಣ್ಣಗಳು ಪರಿಸರದಲ್ಲಿ ತಮ್ಮ ಇರವನ್ನು ಮರೆಮಾಚಲು ಮತ್ತು ಸಂತಾನಋತುವಿನಲ್ಲಿ ಪರಸ್ಪರ ಆಕರ್ಷಿಸಲು ಸಹಾಯಕ. ರೆಕ್ಕೆಗಳನ್ನು ಬಳಸಿ ಸ್ವಚ್ಛಂದವಾಗಿ ಹಾರಾಡಲು ಸಾಮರ್ಥ್ಯ ಪಡೆದಿರುವಂತೆಯೇ, ಎತ್ತರದಲ್ಲಿ ಹಾರಾಡುವ ಗಿಡುಗ, ಹದ್ದುಗಳು ಬಿಸಿಗಾಳಿಯ ಮೇಲೊತ್ತಡದ ಉಪಯೋಗವನ್ನು ಪಡೆದು ಒಂದಿಷ್ಟೂ ರೆಕ್ಕೆ ಬಡಿಯದೆ ಶಕ್ತಿಯನ್ನು ಉಳಿಸುತ್ತವೆ.

ಹಕ್ಕಿಗಳ ದೃಷ್ಟಿ ಬಹುಸೂಕ್ಷ್ಮ. ನಮಗಿಂತ ಇಪ್ಪತ್ತು ಪಟ್ಟು ಹೆಚ್ಚು ಸ್ಫುಟವಾಗಿ ನೋಡಲು ಅವಕ್ಕೆ ಸಾಧ್ಯ. ಅಲ್ಲದೆ ಬಣ್ಣಗಳನ್ನೂ ಗುರುತಿಸಬಲ್ಲವು. ಸಂಯುಕ್ತ ಅಕ್ಷಿಗಳಿರುವ ಕೀಟಗಳಿಗೆ ಈ ಶಕ್ತಿಯಿಲ್ಲ. ಗೂಬೆ, ಮರಕುಟ್ಟಿಗ ಮುಂತಾದ ಹಕ್ಕಿಗಳು ಮೂರು ಆಯಾಮಗಳಲ್ಲಿಯೂ ನೋಡಬಲ್ಲವು. ನಿಶಾಚರ ಹಕ್ಕಿಗಳಿಗೆ ರಾತ್ರಿ ಹೊತ್ತೂ ಕೂಡ ದೃಷ್ಟಿ ಸೂಕ್ಷ್ಮವಾಗಿರುತ್ತದೆ. ದೂರದ ದೃಶ್ಯದಿಂದ ಥಕ್ಕನೆ ಹತ್ತಿರದ ದೃಶ್ಯವನ್ನು ನೋಡಲು ನಮಗೆ ಸ್ವಲ್ಪ ಸಮಯ ಹಿಡಿಯುತ್ತದೆ. ಆದರೆ, ಹಕ್ಕಿಗಳಿಗೆ ಇದು ಒಂದೇ ಕ್ಷಣದ ಕೆಲಸ.

ಇನ್ನು ಶಬ್ದಗ್ರಹಣ ಶಕ್ತಿ ಹಕ್ಕಿಗಳಿಗೆ ಬಹು ತೀವ್ರವಾಗಿದೆ. ಅದರಲ್ಲೂ ರಾತ್ರಿ ವೇಳೆ ಬೇಟೆಯಾಡುವ ಹಕ್ಕಿಗಳಿಗೆ ಇದು ಅವಶ್ಯ. ಕತ್ತಲಲ್ಲಿ ಗುಹೆಗಳಲ್ಲಿ ಹಾರಾಡುವ ಕವಲುತೋಕೆ ಹಕ್ಕಿಗಳಿಗೆ ಪ್ರತಿಧ್ವನಿತ ತರಂಗಗಳಿಂದ ನೆಲೆ ಗೊತ್ತುಮಾಡುವ ಶಕ್ತಿಯಿದೆ. ಇತರ ಪಕ್ಷಿಗಳ ಸ್ವರವನ್ನು ಕೇಳಿ ಅನುಕರಿಸುವ ಕಲೆಯನ್ನು ಎಲೆಹಕ್ಕಿ, ಭೀಮರಾಜ, ಶಾಮ, ಕಳಿಂಗಗಳಲ್ಲಿ ಕಾಣಬಹುದು. ಬೆಟ್ಟದ ಮೈನಾ, ಮನುಷ್ಯನ ಸ್ವರವನ್ನೂ ಅನುಕರಿಸಬಲ್ಲವು. ಹಕ್ಕಿಗಳು ಆಗಂತುಕರ ಧ್ವನಿಯನ್ನು ಬಹು ಎಚ್ಚರಿಕೆಯಿಂದ ಕೇಳಿ, ಬೇಗ ಗುರುತು ಹಿಡಿಯುತ್ತವೆ.

ಹಕ್ಕಿಗಳಿಗೆ ರುಚಿಯನ್ನು ಗ್ರಹಿಸುವ ಶಕ್ತಿ ಬಹಳ ಕಡಿಮೆಯಾದರೆ, ಘ್ರಾಣಶಕ್ತಿ ಅಥವಾ ವಾಸನೆಯನ್ನು ಗ್ರಹಿಸುವ ಶಕ್ತಿ ಇಲ್ಲವೇ ಇಲ್ಲ ಎನ್ನಬಹುದು. ಮೂಲತಃ ಹಕ್ಕಿಗಳಿಗೆ ತರ್ಕಬದ್ಧವಾಗಿ ಆಲೋಚಿಸುವ ಶಕ್ತಿಯೇನೂ ಇಲ್ಲ. ಯಾವುದನ್ನು ನಾವು ಅವುಗಳ ಬುದ್ಧಿವಂತಿಕೆಯ ನಡವಳಿಕೆಗಳು ಎಂದು ಭಾವಿಸುತ್ತೇವೋ, ಅವು ಹೆಚ್ಚಾಗಿ ಪಕ್ಷಿಗಳ ಹುಟ್ಟರಿವಿನ ಸಹಜ ಪ್ರಕೃತಿಯಾಗಿರುತ್ತವೆ.

ವಿವಿಧ ಅಂಗಗಳ ವಿಕಾಸ: ಹಕ್ಕಿಗಳ ಮುಂಗಾಲುಗಳು ರೆಕ್ಕೆಗಳಾಗಿ ಮಾರ್ಪಾಟಾಗಿರುವುದರಿಂದ, ಕೈಗಳ ಕೆಲಸವನ್ನು ಕಾಲು ಮತ್ತು ಬಾಯಿ ಮಾಡಬೇಕಾಗಿದೆ. ಇತರ ಪ್ರಾಣಿಗಳಿಗಿರುವಂತೆ ಪಕ್ಷಿಗಳಿಗೆ ಹಲ್ಲುಗಳಿಲ್ಲ. ಮೇಲ್ದವಡೆ–ಕೆಳದವಡೆ ಸೇರಿ ಕೊಕ್ಕಾಗಿದೆ. ಈ ಕೊಕ್ಕು ಬೇಟೆಯನ್ನು ಹಿಡಿಯಲು ಅಥವಾ ಆಹಾರವನ್ನು ಸೇವಿಸಲು ಮತ್ತು ಆತ್ಮರಕ್ಷಣೆಗಾಗಿ ಬಳಸಲ್ಪಡುತ್ತವೆ. ಉದಾಹರಣೆಗೆ, ಹಲವಾರು ಜಾತಿಯ ಹಕ್ಕಿಗಳಿಗೆ ಕೀಟ, ಹುಳಗಳನ್ನು ತಿನ್ನುವ ಸ್ವಭಾವ. ಆದರೆ ಅವುಗಳನ್ನು ಹಿಡಿಯುವ ವಿಧಾನ ಬೇರೆ ಬೇರೆ. ನೊಣಹಿಡುಕ, ಜೇನುಮಗರೆಗಳು ಹಾರುತ್ತಿರುವ ಕೀಟಗಳನ್ನು ಅಟ್ಟಿಸಿಕೊಂಡು ಹೋಗಿ ಹಿಡಿದರೆ, ಮೈನಾ, ಚಂದ್ರಮುಕುಟಗಳು ನೆಲದ ಮೇಲಿಂದ ಹೆಕ್ಕಿ ತಿನ್ನುತ್ತವೆ ಹಾಗೂ ಮರಕುಟ್ಟಿಗಗಳು ಮರದ ತೊಗಟೆಯನ್ನು ಕುಕ್ಕಿ ಅದರೊಳಗಿಂದ ಕೀಟಗಳನ್ನು ಆರಿಸಿಕೊಳ್ಳುತ್ತವೆ. ಈ ಕಾರ್ಯಕ್ಕಾಗಿ, ಹಕ್ಕಿಗಳ ಕೊಕ್ಕುಗಳು ವಿವಿಧ ರೀತಿಯಲ್ಲಿ ಮಾರ್ಪಾಡಾಗಿವೆ. ಮಾಂಸವನ್ನು ಕಿತ್ತು, ಹರಿದು ತಿನ್ನಲು ಯೋಗ್ಯವಾದ ಚೂಪಾದ, ಹರಿತವಾದ, ಬಲಿಷ್ಠವಾದ, ಕೊಕ್ಕೆಯಂತೆ

ಬಾಗಿರುವ ಗಿಡುಗ-ಹದ್ದು ಮುಂತಾದ ಹಿಂಸ್ರಪಕ್ಷಿಗಳ ಕೊಕ್ಕು; ಮರವನ್ನು ಕೊರೆಯಲು ಗಟ್ಟಿಮುಟ್ಟಾದ ಮರಕುಟ್ಟಿಗದ ಕೊಕ್ಕು; ಹೂಗಳ ಮಕರಂದವನ್ನು ಹೀರಲು ಉದ್ದವಾದ, ಕೆಳಕ್ಕೆ ಬಾಗಿರುವ ಸೂರಕ್ಕಿಗಳ ಕೊಕ್ಕು; ಕಾಳು-ಬೀಜಗಳನ್ನು ಒಡೆದು ತಿನ್ನಲು ರಾಟವಾಳ, ಗುಬ್ಬಚ್ಚಿಗಳ ಚೂಪಾದ, ಚಿಕ್ಕ ಕೊಕ್ಕು; ಅಗಲವಾಗಿ 'ಆ' ಎಂದು ಬಾಯ್ತೆರೆದು ಹಾರುತ್ತಿದ್ದರೆ, ಕೀಟಗಳು ತನ್ನಂತಾನೇ ಬಾಯೊಳಗೆ ಬೀಳುವ ಬಾನಾಡಿಯ ಕೊಕ್ಕು; ನೀರಿನಿಂದ ಬಸಿದು ತೆಗೆಯಲು ಜಾಲರಿಯಂತಹ ಚಮಚದ ಕೊಕ್ಕು, ಬಾತುಕೋಳಿಗಳ ಕೊಕ್ಕು; ಇನ್ನು ಎಲ್ಲಾ ರೀತಿಯ ಆಹಾರ ಬಯಸುವ ಕಾಗೆಯ ಬಹೂಪಯೋಗಿ ಕೊಕ್ಕು; ಇವೆಲ್ಲ ಉದಾಹರಣೆಗಳು.

ಹಾಗೆಯೇ ಕಾಲುಗಳು ಕೂಡ ಹಕ್ಕಿಗಳ ಓಡಾಟ, ಬೇಟೆ, ಮುಂತಾದ ಕೆಲಸಗಳಿಗೆ ತಕ್ಕಂತೆ ಮಾರ್ಪಾಡಾಗಿವೆ. ಜೌಗು ಪ್ರದೇಶಗಳಲ್ಲಿ ಆಹಾರ ಹುಡುಕುವ ಕೊಕ್ಕರೆ, ಬಕ ಮುಂತಾದ ಹಕ್ಕಿಗಳಿಗೆ ಹೂತು ಹೋಗದಂತೆ ಬಲಿಷ್ಠವಾದ ಕಾಲುಗಳು ಮತ್ತು ತೆಳುವಾದ, ಉದ್ದವಾದ, ಪಾದಗಳು; ನೀರಿನಲ್ಲಿ ಈಜಲು ಜಾಲಪಾದವಿರುವ ಹೆಜ್ಜಾರ್ಲೆ, ಬಾತುಗಳ ಕಾಲು; ಜಲಸಸ್ಯಗಳ ಮೇಲೆ ಅನಾಯಾಸವಾಗಿ ನಡೆದಾಡಲು ನೀಳ ಬೆರಳಿನ ದೇವನಕ್ಕಿಯ ಕಾಲು; ಬೇಟೆಯನ್ನು ಹಿಡಿಯಲು, ಮಾಂಸವನ್ನು ಬಗೆಯಲು ಚೂಪಾದ, ಹರಿತವಾದ ಉಗುರುಗಳಿರುವ ಹದ್ದು-ಗಿಡುಗಗಳ ಬಲಿಷ್ಠ ಕಾಲು; ನೆಲವನ್ನು ಕೆದಕಲು ತಕ್ಕ ಗೌಜುಗ, ಕೋಳಿಯ ಕಾಲು; ಓಡಲು ಗಟ್ಟಿಮುಟ್ಟಾದ ಪಾದವುಳ್ಳ ನೀಳಗಾಲು ಹಕ್ಕಿಯ ಕಾಲು; ಹತ್ತಲು-ಇಳಿಯಲು ತಕ್ಕುದಾದ ಮರಕುಟ್ಟಿಗ, ಗಿಳಿಯ ಕಾಲು; ಸಿಂಪಿಗ, ಗುಬ್ಬಚ್ಚಿ ಉಲಿಯಕ್ಕಿ ಮುಂತಾದ ಹಕ್ಕಿಗಳು ರೆಂಬೆಯ ಮೇಲೆ ಕುಳಿತುಕೊಳ್ಳಲು ತಕ್ಕುದಾದ ಸಣಕಲು ಕಾಲು ಮತ್ತು ಬೆರಳುಗಳು; ಇವೆಲ್ಲ ಉದಾಹರಣೆಗಳು.

ನೋಡಲು ಎಷ್ಟೋ ಜಾತಿಯ ಹಕ್ಕಿಗಳ ಗಂಡು-ಹೆಣ್ಣುಗಳು ವಿಭಿನ್ನವಾಗಿರುತ್ತವೆ. ಧ್ವನಿಯಲ್ಲಿ ಕೂಡ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಗಂಡು ಹಕ್ಕಿ ಆಕರ್ಷಕವಾಗಿರುತ್ತದೆ. ಸಂತಾನಋತುವಿನಲ್ಲಿ ಹೆಣ್ಣುಹಕ್ಕಿಯನ್ನು ಆಕರ್ಷಿಸಲು ಗಂಡುಹಕ್ಕಿಯು ಮಾಡುವ ನರ್ತನ, ಹಾಡುವಿಕೆ ಮತ್ತು ಇತರ ಅಂಗಚೇಷ್ಟೆಗಳನ್ನು ಕಾಣುತ್ತೇವೆ. ಒಂದು ಹಕ್ಕಿಗೆ ಒಂದಕ್ಕಿಂತ ಹೆಚ್ಚು ಸಂಗಾತಿಗಳು ಸಾಮಾನ್ಯ. ಕೆಲವು ಪ್ರಭೇದಗಳಲ್ಲಿ ಆಜನ್ಮ ಜೋಡಿಗಳನ್ನೂ ಕಾಣಬಹುದು.

ಸಂತಾನೋತ್ಪತ್ತಿ: ಗೂಡುಕಟ್ಟುವ ಕ್ರಿಯೆಯಲ್ಲಾಗಲಿ, ಮೊಟ್ಟೆಗಳಿಗೆ ಕಾವುಕೊಟ್ಟು, ಮರಿಗಳಿಗೆ ಗುಟುಕು ನೀಡಿ ಬೆಳೆಸುವ ಕಾರ್ಯದಲ್ಲಿಯೇ ಆಗಲಿ ಸಾಮಾನ್ಯವಾಗಿ ಎರಡೂ ಹಕ್ಕಿಗಳು ಕೆಲಸವನ್ನು ಹಂಚಿಕೊಳ್ಳುವುದನ್ನು ಕಾಣುತ್ತೇವೆ. ಅಪವಾದಗಳು ಇಲ್ಲದಿಲ್ಲ.

ಹಕ್ಕಿಗಳು ಗೂಡುಕಟ್ಟುವುದು ವಾಸಮಾಡಲಿಕ್ಕಲ್ಲ – ಅದು, ಮೊಟ್ಟೆಯಿಟ್ಟು, ಮರಿಮಾಡಿ, ಬೆಳೆಸುವ ಸಲುವಾಗಿ ಮಾತ್ರ. ಹಕ್ಕಿಗಳು ಗೂಡುಕಟ್ಟುವ ವಾಸ್ತುಶಿಲ್ಪ ಒಂದು ಅದ್ಭುತವಾದ, ವಿಶಿಷ್ಟವಾದ, ಹುಟ್ಟರಿವಿನಿಂದ ಬಂದ ಸಹಜ ಪ್ರವೃತ್ತಿ. ಗುಬ್ಬಚ್ಚಿ, ಗಿಳಿ, ಮೈನಾಗಳು ಮರ, ಕಟ್ಟಡ, ಅಥವಾ ಇತರ ಹಕ್ಕಿಗಳು ಮಾಡಿದ ರಂಧ್ರಗಳಲ್ಲಿ ಗೂಡು ಕಟ್ಟಿದರೆ, ನೀಳಗಾಲು, ಟಿಟ್ಟಿಭಗಳು ಯಾವುದೇ ಗೂಡು ಕಟ್ಟದೆ, ಮೊಟ್ಟೆಗಳನ್ನು ನೇರವಾಗಿ ನೆಲದ ಮೇಲೇ ಇಟ್ಟು ಕಾಪಾಡುತ್ತವೆ. ಬರೇ ಕಸ, ಒಣ ಕಡ್ಡಿ-ರೆಂಬೆಗಳಿಂದ ತಯಾರಿಸಿದ ಅಟ್ಟಣಿಗೆ ಗೂಡುಗಳಿಂದ ಹಿಡಿದು, ತಟ್ಟೆ-ಕಪ್‌ನಂತೆ ಒಣ ಹುಲ್ಲು, ಎಲೆ, ಹತ್ತಿಗಳಿಂದ ತಯಾರಾದ ಮೆದುವಾದ ಗೂಡುಗಳವರೆಗೆ; ಮರ-ಬದುಗಳನ್ನು ಕೊರೆದು ಸುರಂಗದಂತೆ ಮಾಡಿದ ಗೂಡುಗಳಿಂದ ಹಿಡಿದು, ನಾರು-ಬೇರು, ಮೃದುವಾದ ಹತ್ತಿಯಿಂದ ನಾಜೂಕಾಗಿ ನೇಯ್ದ ಗೂಡುಗಳವರೆಗೆ, ಸಾಮಾನ್ಯವಾಗಿ ಎಲ್ಲ ಹಕ್ಕಿಗಳು ತಮ್ಮ ಗೂಡನ್ನು ತಾವೇ ಕಟ್ಟಿಕೊಳ್ಳುತ್ತವೆ. ಬಾನಾಡಿಗಳು ಮಣ್ಣು, ಎಲೆಗಳನ್ನು ಎಂಜಲಿನೊಂದಿಗೆ ಅರೆದು ಮೆತ್ತಿದರೆ, ಮಂಗಟ್ಟೆಹಕ್ಕಿಗಳು ಹೆಣ್ಣುಹಕ್ಕಿಯನ್ನು ಪೊಟರೆಯೊಳಗೆ ಕುಳ್ಳಿರಿಸಿ, ಬರೇ ಕೊಕ್ಕು ಹೊರಗೆ ಕಾಣುವಂತೆ ಮಣ್ಣಿನಿಂದ ಮುಚ್ಚಿಬಿಡುತ್ತದೆ. ಇನ್ನು ಸಿಂಪಿಗ ಎರಡು ಎಲೆಗಳನ್ನು ಜೋಡಿಸಿ ಹೊಲೆದು ಗೂಡುಕಟ್ಟಿದರೆ, ನಾರು, ಹುಲ್ಲು-ಹತ್ತಿಯಿಂದ ರಚಿತವಾದ ಗೀಜಗನ ಗೂಡು ಪ್ರಸಿದ್ಧವಾಗಿದೆ. ಹಲವಾರು ಹಕ್ಕಿಗಳು ಒಟ್ಟಿಗೆ, ಸಮೂಹವಾಗಿ ಕಾಲೊನಿಯನ್ನು ಕಟ್ಟಿಕೊಳ್ಳುವುದೂ ಉಂಟು.

ಸಾಮಾನ್ಯವಾಗಿ ಹೆಣ್ಣುಹಕ್ಕಿ ಗೂಡು ಕಟ್ಟುವ ಕಾರ್ಯ ಮಾಡಿದರೆ, ಗಂಡುಹಕ್ಕಿ ಅಗತ್ಯ ಸಾಮಗ್ರಿಗಳನ್ನು ತಂದು ಪೂರೈಸುವ ಕೆಲಸ ವಹಿಸಿಕೊಳ್ಳುತ್ತದೆ. ಇವೆಲ್ಲಕ್ಕಿಂತ ವಿಚಿತ್ರವೆಂದರೆ, ಕೋಗಿಲೆಯ ಕುಟುಂಬಕ್ಕೆ ಸೇರಿದ ಹಕ್ಕಿಗಳು, ಗೂಡುಕಟ್ಟಿ, ಮೊಟ್ಟೆಯಿಟ್ಟು, ಕಾವುಕೊಟ್ಟು, ಗುಟುಕುನೀಡಿ, ಮರಿಗಳನ್ನು ಸಾಕಿ ಸಲಹುವ ಯಾವುದೇ ಗೋಜಿಗೆ ಹೋಗದೆ, ಉಪಾಯದಿಂದ ಹರಟೆಮಲ್ಲಗಳ ಗೂಡಿನಲ್ಲಿ ತಮ್ಮ ಮೊಟ್ಟೆಗಳನ್ನಿಟ್ಟು ನಿಶ್ಚಿಂತೆಯಿಂದ ಇದ್ದುಬಿಡುತ್ತವೆ!

ಇಷ್ಟೆಲ್ಲ ಪಾಡುಪಟ್ಟು, ಗೂಡು ಕಟ್ಟಿ ಮರಿಗಳನ್ನು ಬೆಳೆಸುವ ಕಾರ್ಯ ಹಕ್ಕಿಗಳ ವಾರ್ಷಿಕ ಜೀವನಚಕ್ರದಲ್ಲಿ ಅತಿ ಮುಖ್ಯವಾದ ಭಾಗ. ಮೊಟ್ಟೆಯಿಟ್ಟು, ಕಾವುಕೊಟ್ಟು, ಮರಿಗಳಿಗೆ ಗುಟುಕು ನೀಡಿ ಬೆಳೆಸುವುದು ಸಾಮಾನ್ಯ ಕೆಲಸವೇನಲ್ಲ. ಇಷ್ಟಾದರೂ ಕ್ರೂರ ಪಕ್ಷಿ-ಪ್ರಾಣಿಗಳ ಹಸಿದ ಬಾಯಿಂದ, ನೈಸರ್ಗಿಕ ಪ್ರಕೋಪಗಳಿಂದ ಬದುಕಿ ಉಳಿಯುವ ಮರಿಗಳ ಸಂಖ್ಯೆ ಬಹಳ ಕಡಿಮೆ.

ಒಂದು ಗೂಡಿಗೆ ಎರಡರಿಂದ ಎಂಟು ಮೊಟ್ಟೆಗಳು ಸಾಮಾನ್ಯ. ಮರಿಹಕ್ಕಿಗಳಿಗೆ ಸಾಧಾರಣವಾಗಿ ಮೈಮೇಲೆ ರೆಕ್ಕೆಗಳು ಬೆಳೆದಿರುವುದಿಲ್ಲ, ಕಣ್ಣುಗಳು ಕಾಣಿಸುವುದಿಲ್ಲ- ಬಹಳ ನಾಜೂಕು ಮತ್ತು ಅಸಹಾಯಕ ಜೀವಿಗಳು. ಹೆತ್ತವರ ರಕ್ಷಣೆ-ಪೋಷಣೆ, ಬಹು ಅಗತ್ಯ. ಇವು ಪ್ರತಿದಿನ ತಮ್ಮ ದೇಹದ ಭಾರಕ್ಕಿಂತ ಹೆಚ್ಚು ಆಹಾರವನ್ನು ತಿಂದು ಬೆಳೆಯುತ್ತವೆ. ಎರಡು-ಮೂರು ವಾರಗಳಲ್ಲಿ ನಡೆಯಲು, ಕುಪ್ಪಳಿಸಲು, ಹಾರಲು, ಆಹಾರವನ್ನು ತಾವೆ ಸಂಪಾದಿಸಲು ಕಲಿಯುತ್ತವೆ.

ಪಕ್ಷಿಗಳಿಂದ ನಮಗಾಗುವ ಪ್ರಯೋಜನಗಳೇನು?

ಉತ್ತರದಲ್ಲಿ ಹಿಮಾಲಯ, ಪಶ್ಚಿಮದಲ್ಲಿ ಥಾರ್ ಮರುಭೂಮಿ, ಪೂರ್ವದಲ್ಲಿ ಸುಂದರಬನ, ದಕ್ಷಿಣದಲ್ಲಿ ನಿತ್ಯಹರಿದ್ವರ್ಣ ಕಾಡುಗಳು, ಸುಂದರ ಗಂಗಾನದಿಯ ಬಯಲು, ಇವುಗಳಿಂದೊಡಗೂಡಿದ ಭಾರತ ದೇಶ, ಪ್ರಪಂಚದ ಕಾಲುಭಾಗಕ್ಕಿಂತಲೂ ಹೆಚ್ಚು ಪ್ರಭೇದದ ಪಕ್ಷಿಗಳಿಗೆ ಆಶ್ರಯತಾಣವಾಗಿದೆ. ನಮ್ಮ ದೇಶದಲ್ಲಿ ಒಟ್ಟು ಸುಮಾರು ೨,೦೬೦ಕ್ಕೂ ಹೆಚ್ಚು ಬಗೆಯ ಪಕ್ಷಿಗಳಿವೆ. ಈ ಹಕ್ಕಿಗಳ ಜೀವನಚಕ್ರಗಳು ಪರಿಸರದ ಎಲ್ಲ ಗಿಡಮರಬಳ್ಳಿಗಳ ಜೀವನಚಕ್ರದೊಂದಿಗೆ ಬೆಸೆದುಕೊಂಡು ಪ್ರಕೃತಿಯ ಸಮತೋಲನವನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ.

ಎಲ್ಲಿ ಪಕ್ಷಿಗಳು ಸಂತೋಷದಿಂದ, ಸ್ವಚ್ಛಂದವಾಗಿ ಹಾಡಿಕೊಂಡು, ಹಾರಾಡಿಕೊಂಡಿರುತ್ತವೆಯೋ ಅದು ಆರೋಗ್ಯಕರ-ಪರಿಸರ ಮತ್ತು ಪರಿಸರ-ಸಮತೋಲನದ ಸಾಕ್ಷಿ. ಪರಿಸರದಲ್ಲಿ ಉಂಟಾಗುವ ಏರುಪೇರುಗಳು ಹಕ್ಕಿಗಳ ಜೀವನದ ಮೇಲೆ ನೇರ ಪರಿಣಾಮವನ್ನು ಬೀರುತ್ತವೆ. ಈ ದುಷ್ಪರಿಣಾಮಗಳು ಮುಂದೆ ಮನುಷ್ಯನ ಮೇಲೂ ಕಂಡುಬರುವುದು ನಿಸ್ಸಂಶಯ. ಉದಾಹರಣೆಗೆ, ಇತ್ತೀಚೆಗೆ ಅತಿಯಾಗಿ ಬಳಸುತ್ತಿರುವ ರಸಗೊಬ್ಬರಗಳು, ಕೀಟನಾಶಕ ಹಾಗೂ ಕ್ರಿಮಿನಾಶಕಗಳು ನಮ್ಮ ಆಹಾರ ಪದಾರ್ಥಗಳನ್ನು ವಿಷಪೂರಿತಗೊಳಿಸುತ್ತಿವೆ. ನಾವು ತಿಂದು ಬಿಸಾಡುವ ಆಹಾರ ಪದಾರ್ಥಗಳನ್ನೇ ತಿಂದು ಜೀವಿಸುವ ಕಾಗೆ, ಗುಬ್ಬಚ್ಚಿ ಮುಂತಾದ ಪಕ್ಷಿಗಳ ಸಂಖ್ಯೆ ಇಂದು ಇಳಿಮುಖವಾಗುತ್ತಿರುವುದನ್ನು ನೀವು ಗಮನಿಸಿರಬಹುದು. ಇದು ಮನುಷ್ಯನಿಗೆ ಹಕ್ಕಿಗಳು ನೀಡುತ್ತಿರುವ ಎಚ್ಚರಿಕೆಯ ಗಂಟೆ ಎಂದು ನಾವೆಲ್ಲ ತಿಳಿಯಬೇಕು.

ಹಕ್ಕಿಗಳಿಂದ ನಮಗೆ ಅನೇಕ ಪ್ರಯೋಜನಗಳುಂಟು:

* ಭೂಮಿಗೆ ಪಕ್ಷಿಗಳಿಗಿಂತ ಮುಂಚೆ, ಅಂದರೆ ೨೫ ಕೋಟಿ ವರ್ಷಗಳ ಹಿಂದೆಯೇ, ವಿಕಾಸ ಹೊಂದಿ ಉದಿಸಿದ ಕೀಟವರ್ಗ ಸಂಖ್ಯಾಬಾಹುಳ್ಯದಲ್ಲೂ, ಒಟ್ಟು ಮೊತ್ತದಲ್ಲೂ ಬೇರೆಲ್ಲ ಸಸ್ಯ-ಪ್ರಾಣಿ ಬಾಹುಳ್ಯವನ್ನು ಮೀರುತ್ತವೆ.

ಒಂದು ವರ್ಷದ ಅವಧಿಯಲ್ಲಿಯೇ ತಮ್ಮ ಸಂತತಿಯನ್ನು ಹದಿಮೂರು ತಲೆಮಾರಿನಷ್ಟು ಬೆಳೆಸುವ ಕೀಟಗಳಿವೆ. ಕೀಟಗಳು ಎಲ್ಲ ಜೀವಿಗಳಿಗೂ ಒಂದಲ್ಲ ಒಂದು ರೀತಿ ಆಹಾರವಸ್ತುವಾಗಿವೆ. ಈ ಮೂಲಕ ಅವುಗಳ ಸಂಖ್ಯೆ ನಿಯಂತ್ರಣದಲ್ಲಿದ್ದು ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ. ಹಕ್ಕಿಗಳು ತಮ್ಮ ಜೀವನದಲ್ಲಿ ಒಂದಲ್ಲ ಒಂದು ಹಂತದಲ್ಲಿ ಕೀಟಭಕ್ಷಕಗಳಾಗಿ ಅವುಗಳನ್ನು ಸಮರ್ಥವಾಗಿ ಹತೋಟಿಯಲ್ಲಿಡುತ್ತವೆ. ಪೂರ್ಣ ಸಸ್ಯಾಹಾರೀ ಹಕ್ಕಿಗಳೂ ಕೀಟಗಳನ್ನು ಹಿಡಿದು ತಮ್ಮ ಮರಿಗಳಿಗೆ ಉಣಿಸುವುದನ್ನು ಕಾಣಬಹುದು. ಅಲ್ಲದೆ, ನಿರಂತರವಾಗಿ ಹಾರಾಟದಲ್ಲಿರುವ ಹಕ್ಕಿಗಳಿಗೆ ಹೆಚ್ಚು ಶಕ್ತಿ ವ್ಯಯವಾಗುವುದರಿಂದ ಅದನ್ನು ಪುನಃ ಅರ್ಜಿಸಲು ಕೀಟಭಕ್ಷಣೆ ಉತ್ತಮ ಮಾರ್ಗವಾಗಿ ಪರಿಣಮಿಸಿದೆ. ಒಂದು ಸಂಜೆಯಲ್ಲಿ ಬಾನಾಡಿ ಹಕ್ಕಿಯು ಸುಮಾರು ೧೫೦೦ ಕೀಟಗಳನ್ನು ತನ್ನ ತೆರೆದ ಬಾಯಿಯಿಂದ ಹಿಡಿದು ನುಂಗಿಬಿಡುತ್ತದೆ! ಹೊಲ-ಗದ್ದೆಗಳಲ್ಲಿ ನಷ್ಟವನ್ನುಂಟುಮಾಡುವ ಕ್ರಿಮಿ-ಕೀಟಗಳನ್ನು, ನೊಣಹಿಡುಕ, ಬೇಲಿಚಟಕ, ಕಾಜಾಣ, ಕಳಿಂಗ ಮುಂತಾದ ಹಕ್ಕಿಗಳು ತಿಂದು ಹತೋಟಿಯಲ್ಲಿಡುತ್ತವೆ. ಮರದ ಕಾಂಡ ಕೊರೆಯುವ ಕೀಟ, ಗೆದ್ದಲು ಮುಂತಾದ ಹುಳಗಳನ್ನು, ಅವುಗಳ ಮೊಟ್ಟೆ, ಮರಿಹುಳಗಳನ್ನೂ ತಿಂದು ಮರಕುಟ್ಟಿಗ ತಿಂದು ವೃಕ್ಷದ ಆರೋಗ್ಯವನ್ನು ರಕ್ಷಿಸಿದರೆ, ಕಾಡುಕೋಳಿ ಮರದ ಬೇರನ್ನು ನಾಶಮಾಡುವ ಕೀಟಗಳನ್ನು ತಿನ್ನುತ್ತದೆ. ಆದ್ದರಿಂದ ಕೀಟನಿಯಂತ್ರಣ, ಹಕ್ಕಿಗಳ ಅತಿಮುಖ್ಯ ಕಾರ್ಯವೆಂದು ಹೇಳಬಹುದು.

* ಗುಡುಗಾಡು ಹಕ್ಕಿಗಳು ಹೊಲ-ಗದ್ದೆಗಳಲ್ಲಿ ಬೆಳೆಯುವ ಕಳೆ ಬೀಜಗಳನ್ನು ತಿಂದು ರೈತನಿಗೆ ಕಳೆಗಳನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತವೆ.

* ಸಸ್ಯಗಳ ಸಂತಾನೋತ್ಪತ್ತಿಯಲ್ಲಿ ಪರಾಗಸ್ಪರ್ಶ ಅತಿ ಮಹತ್ತರವಾದ ಘಟ್ಟ. ಇದಕ್ಕೆ ಪೂರಕವಾಗಿ ಮರ-ಗಿಡಗಳು ಬಣ್ಣಬಣ್ಣದ ಹೂತಳೆದು, ಪರಿಮಳ ಮತ್ತು ಮಕರಂದವನ್ನು ಸೂಸಿ, ಹಕ್ಕಿಗಳನ್ನು ಆಕರ್ಷಿಸುತ್ತವೆ. ಗಾಳಿ, ಕೀಟಗಳು, ಸ್ತನಿಗಳು ಇನ್ನಿತರ ಜೀವಿಗಳು ಪರಾಗಸ್ಪರ್ಶಕ್ರಿಯೆಯಲ್ಲಿ ಭಾಗವಹಿಸಿದರೂ ಹಕ್ಕಿಗಳ ಪಾತ್ರ ಮಹತ್ತರವಾದದ್ದು. ಹಕ್ಕಿಗಳ ಕೊಕ್ಕಿನ ಮೇಲಿರುವ ಕುಂಚದಂತಹ ಗರಿಗಳ ಮೇಲೆ ಪರಾಗಗಳು ಅಂಟಿಕೊಳ್ಳುತ್ತವೆ. ಸೂರಕ್ಕಿ, ಬಾಳೆಗುಬ್ಬಿ ಮುಂತಾದ ಹಕ್ಕಿಗಳ ಬಾಗಿದ ಕೊಕ್ಕು ಮತ್ತು ಕೊಳವೆಯಂತಹ ನಾಲಿಗೆ ಈ ಕಾರ್ಯಕ್ಕೆ ತಕ್ಕ ಹಾಗೆ ಮಾರ್ಪಾಡಾಗಿವೆ. ಅಲ್ಲದೆ, ಮೈನಾಹಕ್ಕಿ, ಎಲೆಹಕ್ಕಿ, ಗಿಣಿ ಮುಂತಾದ ಅನೇಕ ಪ್ರಭೇದದ ಪಕ್ಷಿಗಳು ಹೂವುಗಳ ಮಕರಂದ ಕುಡಿಯುವ ನೆಪದಲ್ಲಿ ಅಸಂಖ್ಯ ಪರಾಗಗಳನ್ನು ಇತರ ಹೂವುಗಳಿಗೆ ಹರಡುವುದರ ಮೂಲಕ ಪರಾಗಸ್ಪರ್ಶದಲ್ಲಿ ಭಾಗವಹಿಸಿ, ಸಸ್ಯ ಸಂಪತ್ತು ಹೆಚ್ಚುವುದಕ್ಕೆ ಕಾರಣವಾಗುತ್ತವೆ.

* ಸ್ವಭಾವತಃ ಚಲನಾಶಕ್ತಿಯಿಲ್ಲದ ಮರ-ಗಿಡ ಸಸ್ಯಗಳು ತಮ್ಮ ಸಂತಾನೋತ್ಪತ್ತಿಗಾಗಿ ಅವಶ್ಯವಿರುವ ಬೀಜಪ್ರಸರಣ ಕಾರ್ಯಕ್ಕಾಗಿ ಇತರ ಜೀವಿಗಳನ್ನೇ ಅವಲಂಬಿಸುವುದು ಅನಿವಾರ್ಯವಾಗಿದೆ. ಇದಕ್ಕಾಗಿ ವಿವಿಧ ಬಣ್ಣಗಳಿಂದ ಕೂಡಿದ, ರುಚಿಕರವಾದ, ಸುಗಂಧಯುಕ್ತ ಮತ್ತು ಇವೆಲ್ಲಕಿಂತ ಮಿಗಿಲಾಗಿ ಎಲ್ಲ ಪೌಷ್ಟಿಕ ಅಂಶಗಳಿಂದಲೂ ಕೂಡಿದ ಸುಮಧುರ ಹಣ್ಣುಗಳ ಮೂಲಕ ಆಕರ್ಷಿಸುತ್ತವೆ. ಈ ಕಾರ್ಯದಲ್ಲಿ ಕೂಡ ಉಳಿದ ಜೀವಿಗಳಿಗಿಂತ ಹಕ್ಕಿಗಳ ಪಾತ್ರ ಗಮನೀಯ. ತಿಂದ ಹಣ್ಣಿನ ಬೀಜವನ್ನು ದೂರದೂರದೆಡೆಗಲ್ಲಿ ಉಗಿಯುವುದು ಒಂದು ರೀತಿಯಾದರೆ, ತಿಂದ ಹಣ್ಣಿನ ಬೀಜ ಹಕ್ಕಿಯ ಉದರ ಸೇರಿ, ಹಿಕ್ಕೆಯ ಮೂಲಕವೂ ಹರಡಬಲ್ಲದು. ಮತ್ತೊಂದು ಅಂಶವೆಂದರೆ, ಕೆಲವು ಬೀಜಗಳಿಗೆ ಕಠಿಣವಾದ ಹೊರಕವಚವಿದ್ದು ಇವು ಪಕ್ಷಿಗಳ ಜಠರದಲ್ಲಿ ಪಚನವಾಗಿ ಕರಗುವುದರಿಂದ ಭೂಮಿಯ ಮೇಲೆ ಮೊಳಕೆಯೊಡೆಯಲು ಸಾಧ್ಯವಾಗುತ್ತದೆ. ಹೀಗೆ ಬೀಜ ಪ್ರಸರಣಕ್ರಿಯೆಯಲ್ಲಿ ಅನೇಕ ಪಕ್ಷಿಗಳು ಪಾಲ್ಗೊಂಡು ತಿಂದ ಹಣ್ಣಿನ ಬೀಜಗಳನ್ನು ದೂರದೂರದ ಸ್ಥಳಗಳಲ್ಲಿ ಉಗಿದು ಅಥವಾ ಹಿಕ್ಕೆಗಳ ಮೂಲಕ ಹಾಕಿ ಹೊಸ ಮರಗಿಡಗಳ ಹುಟ್ಟಿಗೆ, ಕಾಡು-ವನಗಳ ಬೆಳವಣಿಗೆಗೆ ಕಾರಣವಾಗುತ್ತವೆ.

* ನಮ್ಮ ದೇಶದ ಆಹಾರ ಧಾನ್ಯಗಳ ಉತ್ಪತ್ತಿಯಲ್ಲಿ ಶೇಕಡ ಹತ್ತು-ಹದಿನೈದರಷ್ಟು ಪಾಲು ದಂಶಕಗಳ ಕುಟುಂಬಕ್ಕೆ ಸೇರಿದ ಇಲಿ-ಹೆಗ್ಗಣಗಳ ಪಾಲಾಗುತ್ತಿದೆ ಎಂಬುದು ತಜ್ಞರ ಅಂದಾಜು. ಸುಗ್ಗಿಯ ಸಮಯದಲ್ಲಿ ಈ

ಪ್ರಾಣಿಗಳ ಸಂತಾನೋತ್ಪತ್ತಿಯೂ ಅಷ್ಟೇ ವೇಗ. ಅಲ್ಲದೆ ಇವುಗಳಿಂದ ರೋಗ-ರುಜಿನಗಳೂ ಹರಡುತ್ತವೆ. ಇಂತಹ ವಿನಾಶಕಾರಿ ಜಂತುಗಳನ್ನು ತಿಂದು ಅವುಗಳ ಸಂಖ್ಯೆಯನ್ನು ಹತೋಟಿಯಲ್ಲಿಡುವ ಕೆಲಸ ಸಾಮಾನ್ಯವೇನಲ್ಲ. ದಂಶಕಗಳಲ್ಲದೆ ಮೊಲ ಮುಂತಾದ ಪ್ರಾಣಿಗಳನ್ನು ಹದ್ದು, ಗೂಬೆ ಇನ್ನಿತರ ಬೇಟೆಪಕ್ಷಿಗಳು ತಿಂದು ನಿಯಂತ್ರಣದಲ್ಲಿಡುತ್ತವೆ. ಒಂದು ಗೂಬೆ ಒಂದೇ ರಾತ್ರಿಯಲ್ಲಿ ನಾಲ್ಕರಿಂದ ಎಂಟು ಇಲಿಗಳನ್ನು ಕೊಂದು ತಿನ್ನುತ್ತದೆ!

* ಕಾಡಿನಲ್ಲಿ ಪ್ರಾಣಿ-ಪಕ್ಷಿಗಳು ಸಾಯುವುದೇ ಇಲ್ಲವೆ? ಸತ್ತರೆ, ಅವುಗಳ ಕೊಳೆತ ವಾಸನೆ ಎಲ್ಲಿಯೂ ಕಾಣಿಸುವುದಿಲ್ಲವಲ್ಲ? -ಇದು ಸಾಮಾನ್ಯವಾಗಿ ಎಲ್ಲರೂ ಕೇಳುವ ಪ್ರಶ್ನೆ. ನಿಜ, ಕಾಡಿನಲ್ಲಿ ಯಾರೂ ಮೂಗು ಮುಚ್ಚಿಕೊಂಡು ಸುತ್ತುವ ಪ್ರಮೇಯವೇ ಇಲ್ಲ; ಅಲ್ಲೇನಿದ್ದರೂ ಹೂ-ಹಣ್ಣುಗಳ ಪರಿಮಳಯುಕ್ತ ಪರಿಸರ! ಸತ್ತು ಕೊಳೆಯುವ ಪ್ರಾಣಿಗಳನ್ನು ರಣಹದ್ದು, ಗಿಡುಗ, ಕಾಗೆಗಳು ಆಗಿಂದಾಗ್ಯೆ ತಿಂದು ಕಾಡಿನ ವಾತಾವರಣವನ್ನು ನಿರ್ಮಲವಾಗಿಡುವುವು. ಅಲ್ಲದೆ, ಊರ ಹೊರಗಿನ ಕಸದ ತೊಟ್ಟಿಗಳನ್ನು ಸ್ವಚ್ಛವಾಗಿರಿಸಲೂ ಈ ಹಕ್ಕಿಗಳು ಸಹಾಯ ಮಾಡುತ್ತವೆ. ಹೀಗೆ ಸಾಂಕ್ರಾಮಿಕ ರೋಗಗಳು ಹರಡುವುದನ್ನು ಈ ಹಕ್ಕಿಗಳು ಸಮರ್ಥವಾಗಿ ತಡೆಗಟ್ಟುತ್ತವೆ.

* ಸಮುದ್ರ ತೀರದಲ್ಲಿ ಅಗಾಧ ಪ್ರಮಾಣದಲ್ಲಿ ಸಂಗ್ರಹವಾಗುವ ಮೀನು ಹಿಡಿಯುವ ಹಕ್ಕಿಗಳ ಹಿಕ್ಕೆ, ಸಾರಯುಕ್ತ ನೈಸರ್ಗಿಕ ರಸಗೊಬ್ಬರ ಕೂಡ. ಅರಣ್ಯದಲ್ಲಿ ಕೂಡ ಅಸಂಖ್ಯ ಹಕ್ಕಿಗಳ ಹಿಕ್ಕೆ ನೆಲದ ಸಾರವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ.

* ಮಾಂಸ-ಮೊಟ್ಟೆಗಾಗಿ, ಬಾತುಕೋಳಿ, ಕೋಳಿ ಇತ್ಯಾದಿ ಪಕ್ಷಿಗಳ ಸಾಕಣೆ, ಅನೇಕ ಜನಗಳಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ಇಂದು ಪ್ರಪಂಚದಾದ್ಯಂತ ಬೆಳೆಸುತ್ತಿರುವ ಸಾಕು ಕೋಳಿಗಳಿಗೆಲ್ಲ ಭಾರತದ ಉತ್ತರ ಮತ್ತು ಪೂರ್ವಭಾಗದ ಒತ್ತಾದ ಕಾಡುಗಳಲ್ಲಿ ವಾಸವಾಗಿರುವ ಕೆಂಪು ಕಾಡುಕೋಳಿಯ ಸಂತತಿಯೇ ಮೂಲ ಎಂದರೆ ನಿಮಗೆ ಆಶ್ಚರ್ಯವಾಗಬಹುದು!

* ಅರಣ್ಯದಲ್ಲಿ ಹಲವು ಪ್ರಾಣಿಗಳು ಹಕ್ಕಿಗಳನ್ನು ತಮ್ಮ ಆಹಾರವನ್ನಾಗಿಸಿಕೊಂಡು ಬೆಳೆಯುತ್ತವೆ. ಅಲ್ಲದೆ ಸತ್ತ ಹಕ್ಕಿಗಳೂ ಇತರ ನಿಕೃಷ್ಟ ಜೀವಿಗಳಿಗೆ ಆಹಾರವಾಗುತ್ತವೆ.

* ಇವೆಲ್ಲಕ್ಕೂ ಮಿಗಿಲಾಗಿ, ಪಕ್ಷಿಗಳ ಮಧುರಧ್ವನಿ, ಚಿತ್ತಾಕರ್ಷಕ ಬಣ್ಣಗಳು ಪ್ರಕೃತಿಯ ಸೊಬಗಿಗೆ ಕಿರೀಟಪ್ರಾಯವಾಗಿದೆ.

ಅಂಗೈ ಅಗಲದ ಕಾಡು ಬೆಳೆಸಲು ನಾವು ಹಾಕುವ ಯೋಜನೆಗಳೇನು? ಖರ್ಚೇನು? ಶ್ರಮವೇನು? ಆದರೆ ಪ್ರಪಂಚದ ಮೂರನೇ ಎರಡು ಭೂಭಾಗದಷ್ಟು ವಿಶಾಲವಾದ, ಸಮೃದ್ಧವಾದ, ವೈವಿಧ್ಯಮಯ ಕಾಡನ್ನು ಬೆಳೆಸಲು ಹಕ್ಕಿಗಳು ಮತ್ತು ಅವುಗಳಂತಹ ಇತರ ಸಣ್ಣಸಣ್ಣ ಜೀವಿಗಳೇ ಕಾರಣ ಎಂಬುದನ್ನು ನಾವು ಅರಿಯಬೇಕು. ಇವೆಲ್ಲವೂ, ಪಕ್ಷಿಗಳು ಪ್ರತಿದಿನ ನಾಲ್ಕಾರು ಹನಿ ಮಕರಂದ ಕುಡಿದು, ಹತ್ತಾರು ಕಾಡು ಹಣ್ಣುಗಳನ್ನು ತಿಂದು ಆ ಮೂಲಕ ಬೆಳೆಸಿದ ಅತ್ಯಪೂರ್ವ ಸಸ್ಯಸಂಪತ್ತು!

ಹೀಗೆ ಹಲವು ಜಾತಿಗಳ ಹಕ್ಕಿಗಳ ಜೀವನಶೈಲಿಯನ್ನು ನಾವು ಗಮನಿಸಿದಾಗ ಅವುಗಳಿಂದ ಕಲಿಯಬೇಕಾದುದು ಬಹಳಷ್ಟಿದೆಯೆಂದು ನಮಗೆ ಅರಿವಾಗುತ್ತದೆ. ಎಚ್ಚರಿಕೆಯಿಂದ ನಿರ್ವಹಿಸಿದ ದೀರ್ಘಾವಧಿಯ ಪಕ್ಷಿವೀಕ್ಷಣೆ ಮತ್ತು ಅದರ ಅಧ್ಯಯನ ಯಾವತ್ತೂ ಆಹ್ಲಾದಕರ, ಆನಂದದಾಯಕ. ಹಾಗಾಗಿ, ಪಕ್ಷಿವೀಕ್ಷಣೆ ಎಂಬುದು ಒಂದು ಉತ್ತಮ ಹವ್ಯಾಸವಾಗಿದೆ.

ಪಕ್ಷಿವೀಕ್ಷಣೆ

ಆಕಾಶವನ್ನೇ ತಮ್ಮ ಸಾಮ್ರಾಜ್ಯನ್ನಾಗಿಸಿಕೊಂಡಿರುವ ಪಕ್ಷಿಗಳು, ಜೀವವಿಕಾಸದಲ್ಲಿ ಕೋಟ್ಯಾಂತರ ವರ್ಷಗಳ ಹಿಂದೆಯೇ ಬಹು ದೊಡ್ಡ ಸಾಧನೆ ಮಾಡಿವೆ ಎಂದರೂ ತಪ್ಪಿಲ್ಲ. ಜ್ಞಾನಾರ್ಜನೆಯಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಇಂದಿನ ವಿದ್ಯಾರ್ಥಿಗಳಿಗೆ ಬಹು ಮುಖ್ಯ. ಅದರಲ್ಲೂ ಪ್ರಕೃತಿಯಲ್ಲಿ ಕಂಡುಬರುವ ವಿಸ್ಮಯಕರ ಹಾಗೂ ಮನೋಲ್ಲಾಸಕರ ಸಂಗತಿಗಳನ್ನು ಸ್ವತಃ ತಾವೇ ನಡೆದು, ನೋಡಿ, ಕೇಳಿ, ಓದಿ ತಿಳಿದುಕೊಳ್ಳಬಯಸುವ ವಿದ್ಯಾರ್ಥಿಗಳಿಗೆ ಇದು ಬಹು ಮಹತ್ತ್ವವುಳ್ಳ ವಿಚಾರವಾಗಿದೆ. ಪರಿಸರ ರಕ್ಷಣೆಯ ಬಗ್ಗೆ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಲು ಇವು ಬಹಳ ಸಹಕಾರಿಯಾಗಿವೆ. ಪಕ್ಷಿವೀಕ್ಷಣೆ ಸುಲಭವೂ, ರೋಮಾಂಚನಕಾರಿಯೂ ಆದ ಹವ್ಯಾಸವಾಗಿದೆ.

ಪಕ್ಷಿಗಳು ಪ್ರಕೃತಿಯ ಒಂದು ಅವಿಭಾಜ್ಯ ಅಂಗ. ಅವು ನಮ್ಮ ಸುತ್ತಮುತ್ತಲ ಹೊಲ-ಗದ್ದೆಗಳಲ್ಲಿ, ಮನೆಗಳಲ್ಲಿ, ಕೆರೆಗಳಲ್ಲಿ, ನದಿ-ನಾಲೆಗಳ ಸುತ್ತಮುತ್ತಲಿನ ಜಾಗಗಳಲ್ಲಿ ಕಾಣಸಿಗುತ್ತವೆ. ಅಂದರೆ ಪಕ್ಷಿಗಳ ಜೀವನಚಕ್ರಗಳು ಹೆಚ್ಚಾಗಿ ಮನುಷ್ಯನ ದೈನಂದಿನ ಜೀವನ, ಆಹಾರ ಪದ್ಧತಿ ಮತ್ತು ಋತುಮಾನದ ಬದಲಾವಣೆಗಳೊಂದಿಗೆ ಹಾಸುಹೊಕ್ಕಾಗಿವೆ. ಆದ್ದರಿಂದ ಪಕ್ಷಿವೀಕ್ಷಣೆಯನ್ನು ಎಲ್ಲಿ ಬೇಕಾದರೂ ಸುಲಭವಾಗಿ ಮಾಡಬಹುದು. ಹೆಚ್ಚಿನ ಬಗೆಯ ಹಕ್ಕಿಗಳು ನಮ್ಮ ಊರಿನ ಸುತ್ತಮುತ್ತಲ ಪ್ರದೇಶಗಳಲ್ಲಿಯೇ ಇರುವುದರಿಂದ ಅವುಗಳನ್ನು ನಾವು ನಮ್ಮ ಮನೆಯ ಕಿಟಕಿ-ಬಾಗಿಲಿನ ಮೂಲಕವೇ ನೋಡಬಹುದಾದರೂ, ಹಲವು ಬಾರಿ ಪಕ್ಷಿವೀಕ್ಷಣೆ ನಮ್ಮನ್ನು ಮನೆಯಿಂದ ಹೊರಗೆ ಬರುವಂತೆ ಮಾಡುತ್ತದೆ. ಅದರಲ್ಲಿಯೂ ಎಸ್ಟೇಟುಗಳಲ್ಲಿ, ಅರಣ್ಯಗಳಲ್ಲಿ ಮರಗಳು ಹೂವು-ಹಣ್ಣುಗಳನ್ನು ತಳೆದು, ಸಾವಿರಾರು ಹಕ್ಕಿಗಳನ್ನು ಆಕರ್ಷಿಸುವ ಸನ್ನಿವೇಶಗಳು ಪಕ್ಷಿವೀಕ್ಷಕರಿಗೆ ರಸದೌತಣವನ್ನು ನೀಡುತ್ತವೆ. ದಟ್ಟವಾದ ಅರಣ್ಯ ಪ್ರದೇಶ ಪಕ್ಷಿವೀಕ್ಷಣೆಗೆ ನಿರಾಶಾದಾಯಕ ಜಾಗ; ಎಷ್ಟು ಸುತ್ತಿದರೂ ಒಂದೂ ಹಕ್ಕಿ ಕಾಣಸಿಗದಿರಬಹುದು. ಯಾವುದೋ ಒಂದು ತಿರುವಿನಲ್ಲಿ, ಕಾಡು ವಿರಳವಾದಾಗ, ಇದ್ದಕ್ಕಿದ್ದಂತೆ ಎಲ್ಲಿಂದಲೋ ಹಲವಾರು ಜಾತಿಯ ಹಕ್ಕಿಗಳು ಒಮ್ಮೆಲೇ ದೊಡ್ಡ ಅಲೆಯಂತೆ ಧಾಳಿಯಿಡುತ್ತವೆ. ಕೀಟ, ಮಕರಂದ, ಹಣ್ಣು ಮುಂತಾದ ಆಹಾರವನ್ನರಸಿ ಬರುವ ಈ *ಮಿಶ್ರಪಕ್ಷಿಬೇಟೆಯನ್ನು* ನಿಯತವಾಗಿ ಪ್ರತಿದಿನ ಕಾಣಬಹುದು.

ಪಕ್ಷಿವೀಕ್ಷಣೆ ಮಾಡುವುದು ಹೇಗೆ?

ಪಕ್ಷಿಗಳು ನಮ್ಮ ಸುತ್ತಮುತ್ತಲ ಎಲ್ಲಾ ಪರಿಸರದಲ್ಲೂ ವಾಸಿಸುವುದರಿಂದ ಅವುಗಳನ್ನು ಗಮನಿಸುವುದು ಬಹಳ ಸುಲಭ. ಪ್ರಾರಂಭದಲ್ಲಿ ಬರಿಗಣ್ಣಿನಿಂದಲೇ ಹಕ್ಕಿಗಳನ್ನು ಗುರುತಿಸಿ ಅವುಗಳ ಚಲನವಲನಗಳನ್ನು ಗಮನವಿಟ್ಟು ನೋಡುವ ಅಭ್ಯಾಸ ಮಾಡಿಕೊಳ್ಳಬೇಕು. ಇದರೊಂದಿಗೆ, ಅವುಗಳ ಧ್ವನಿಯನ್ನು ಕೇಳಿ ನೆನೆಪಿನಲ್ಲಿಟ್ಟುಕೊಳ್ಳುವುದು ಅವಶ್ಯ. ನಾವು ಭೇಟಿ ನೀಡುವ ಸ್ಥಳದಲ್ಲಿ ಯಾವ ಯಾವ ಪ್ರಭೇದದ ಪಕ್ಷಿಗಳನ್ನು ನಿರೀಕ್ಷಿಸಬಹುದು ಎಂಬ ಅರಿವು ನಮಗೆ ಮೊದಲೇ ಇದ್ದಲ್ಲಿ, ಅವುಗಳನ್ನು ಗುರುತು ಹಿಡಿಯುವುದು ಸಲೀಸಾಗುತ್ತದೆ.

ಪಕ್ಷಿವೀಕ್ಷಣೆ ಮಾಡುವಾಗ ನಾವು ಗಮನದಲ್ಲಿರಿಸಬೇಕಾದ ಸಂಗತಿಗಳು:

* ತಿಳಿಬಣ್ಣದ ಬಟ್ಟೆಗಳನ್ನೇ ಧರಿಸಬೇಕು. ಕಣ್ಣಿಗೆ ರಾಚುವಂತಹ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳಬಾರದು.
* ೨-೩ ಜನರಿರುವ ಸಣ್ಣ ಗುಂಪು ಪಕ್ಷಿವೀಕ್ಷಣೆಗೆ ಸೂಕ್ತ.

* ಪಕ್ಷಿಗಳನ್ನು ವೀಕ್ಷಿಸುವಾಗ ಆದಷ್ಟೂ ನಿಶ್ಶಬ್ದವಾಗಿರಬೇಕು. ಓಡಾಡುವಾಗ ಚರಪರ ಶಬ್ದ ಮಾಡಬಾರದು. ಹಕ್ಕಿಗಳು ಆಗಂತುಕರನ್ನು ಬಹು ಬೇಗ ಪತ್ತೆ ಮಾಡುತ್ತವೆ!
* ಮುಂಜಾನೆ ಹಕ್ಕಿಗಳು ತಮ್ಮ ನೆಲೆಯಿಂದ ಹೊರಬರುವ, ಹಾಗೂ ಸಂಜೆ ಪುನಃ ಹಿಂದಿರುಗುವ ಸಮಯ, ಪಕ್ಷಿವೀಕ್ಷಣೆಗೆ ಸೂಕ್ತ.
* ಪಕ್ಷಿಗಳ ಚಟುವಟಿಕೆಗಳಿಗೆ ಭಂಗಬಾರದಂತೆ, ದೂರದಿಂದಲೇ ಅವುಗಳನ್ನು ಗಮನಿಸಬೇಕು. ಪೊದೆ-ಎಲೆ, ಗಿಡಗಂಟಿಗಳೊಳಗಿನ ಸಣ್ಣ ಅಲುಗಾಟಗಳನ್ನು ನಾವು ನೇರವಾಗಿ ನೋಡುವುದಕ್ಕಿಂತ, ಕಣ್ಣಂಚಿನಿಂದಲೇ ಅರಿಯುವ ಅಭ್ಯಾಸ ಮಾಡಿಕೊಳ್ಳಬೇಕು.
* ಹಕ್ಕಿಗಳ ಗೂಡು ಕಂಡಲ್ಲಿ, ಪಕ್ಷಿಗಳಿಗೆ ಮತ್ತು ಮೊಟ್ಟೆ ಹಾಗೂ ಮರಿಗಳಿಗೆ ತೊಂದರೆಯಾಗದಂತೆ ಬಹಳ ಎಚ್ಚರವಹಿಸಬೇಕು. ನಿಮ್ಮನ್ನು ಹಿಂಬಾಲಿಸುತ್ತಿರುವ ಕಾಗೆಗಳು ಇಂತಹ ಗೂಡುಗಳನ್ನು ಗುರುತಿಟ್ಟುಕೊಂಡು ನಂತರ ನಾಶ ಮಾಡುತ್ತವೆ.
* ನಿಮ್ಮದು ಬರೇ ಪಕ್ಷಿವೀಕ್ಷಣೆಯಾಗಿರಲಿ, ಅಥವಾ ಹಕ್ಕಿಗಳ ಛಾಯಾಗ್ರಹಣ, ಧ್ವನಿಗ್ರಹಣ, ವೈಜ್ಞಾನಿಕ ಅನ್ವೇಷಣೆ, ಅಥವಾ ಇನ್ನಾವುದೇ ನಿರ್ದಿಷ್ಟ ವಿಷಯವಿರಲಿ, ಹಕ್ಕಿಗಳ ಹಿತವನ್ನು ಕಾಯುವುದೇ ನಿಮ್ಮ ಲಕ್ಷ್ಯವಾಗಿರಬೇಕು.
* ಪ್ಲಾಸ್ಟಿಕ್ ಚೀಲಗಳನ್ನು ಕೊಂಡೊಯ್ದ ಪಕ್ಷದಲ್ಲಿ ಅವನ್ನು ಕಂಡಲ್ಲಿ ಬಿಸಾಡದೆ, ವಾಪಾಸ್ ಹಿಂತರಲು ಮರೆಯಬೇಡಿ.

ಪಕ್ಷಿವೀಕ್ಷಣೆಗೆ ಬೇಕಾಗುವ ಸಾಮಗ್ರಿಗಳು:

ಪಕ್ಷಿವೀಕ್ಷಣೆಯ ಅವಧಿಯಲ್ಲಿ ನಾವು ನೋಡುವ ಎಲ್ಲಾ ಹಕ್ಕಿಗಳನ್ನು ಮತ್ತು ವಿಚಾರಗಳನ್ನು ವಿವರವಾಗಿ ನೆನಪಿಡಲು ಅಸಾಧ್ಯ. ಆದ್ದರಿಂದ ನಾವು ನೋಡುವ ಸಂಗತಿಗಳನ್ನು ಆಗಿಂದಾಗಲೇ ಗುರುತಿಸಿಕೊಳ್ಳಲು ಒಂದು **ಕಿರು ಪುಸ್ತಕ** ಹಾಗು **ಚಿಕ್ಕ ಪೆನ್ಸಿಲ್** ಅಥವಾ **ಪೆನ್ನು** ಯಾವಾಗಲೂ ಕಿಸೆಯಲ್ಲಿಟ್ಟುಕೊಂಡಿರಬೇಕು. ಹೀಗೆ ಮಾಡುವುದರಿಂದ ಮುಂದೆ ಈ ಮಾಹಿತಿಗಳು ಪುನಃ ಆ ಹಕ್ಕಿಗಳನ್ನು ಗುರುತಿಸುವಲ್ಲಿ ಸಹಾಯ ಮಾಡುತ್ತವೆ.

ಪಕ್ಷಿವೀಕ್ಷಣೆಯಲ್ಲಿ ಅತ್ಯಂತ ಉಪಯೋಗವಾಗುವ ಮತ್ತೊಂದು ಸಾಮಗ್ರಿ, **ಬೈನಾಕ್ಯುಲರ್** ಅಥವಾ ದುರ್ಬೀನು. (ರಕ್ಷಾಪುಟದ ಒಳಬದಿಯಲ್ಲಿರುವ ಚಿತ್ರ ನೋಡಿ). ಇದರಿಂದ ಪಕ್ಷಿಗಳನ್ನು ಕರಾರುವಾಕ್ಕಾಗಿ ಗುರುತುಹಿಡಿಯಲು ಹಾಗೂ ಅದರ ದೇಹದ ವಿವರಗಳನ್ನು ಸ್ಪಷ್ಟವಾಗಿ ತಿಳಿಯಲು ಅನುಕೂಲವಾಗುತ್ತದೆ. ಹೆಗಲಿಗೆ ಭಾರವಲ್ಲದ, ಹಗುರವಾದ ದುರ್ಬೀನನ್ನು ಆಯ್ದುಕೊಳ್ಳಿ. ಒಬ್ಬೊಬ್ಬರಿಗೆ ಒಂದೊಂದು ಬೈನಾಕ್ಯುಲರ್ ಬೇಕೇ ಬೇಕು. ಇವೆರಡು ಸಾಮಗ್ರಿಗಳಲ್ಲದೆ, ಪಕ್ಷಿವೀಕ್ಷಣೆಗೆ ಹೋಗುವಾಗ ಹಕ್ಕಿಗಳ ಬಗ್ಗೆ ವಿವರಣೆ ಹಾಗೂ ಮಾಹಿತಿಗಳುಳ್ಳ **ಕೈಪಿಡಿ**ಯನ್ನು ಕೊಂಡೊಯ್ಯಲು ಮರೆಯಬಾರದು.

ಪಕ್ಷಿಗಳ ವರ್ಣನೆಯನ್ನು ದಾಖಲಿಸಬೇಕಾದ ಕ್ರಮ:

ದಿನಚರಿಯನ್ನು ಪ್ರಾರಂಭಿಸುವ ಮುನ್ನ ಈ ಮುಂದಿನ ಸಂಗತಿಗಳನ್ನು ನಿಮ್ಮ ಕಿರು ಪುಸ್ತಕದಲ್ಲಿ ದಾಖಲಿಸಿ. ದಿನಾಂಕ, ಪಕ್ಷಿವೀಕ್ಷಣೆಯನ್ನು ಮಾಡುತ್ತಿರುವ ಊರು ಅಥವಾ ಜಾಗದ ಹೆಸರು, ಸಮಯ, ಋತು: ಚಳಿಗಾಲವೇ? ಬೇಸಿಗೆಯೋ? ಮಳೆಗಾಲವೇ? ವಿವಿಧ ಋತುಗಳಲ್ಲಿ ಕೆಲವು ಜಾಗಗಳಿಗೆ ಪಕ್ಷಿಗಳು ಸಂತಾನಾಭಿವೃದ್ಧಿಗೆ ಮತ್ತು ಆಹಾರಾನ್ವೇಷಣೆಯಲ್ಲಿ ವಲಸೆ ಬರುತ್ತವೆ ಎಂಬುದನ್ನು ನೆನಪಿಡಿ. ಈ ವಿವರಗಳನ್ನು ಕೈಪಿಡಿಗಳಲ್ಲಿ ಓದಿ ತಿಳಿಯಿರಿ.

ಇವಿಷ್ಟಾದ ನಂತರ, ನೀವು ಗುರುತಿಸಿದ ಪ್ರತಿಯೊಂದು ಪಕ್ಷಿಯ ವಿವರಗಳನ್ನು ಈ ಕೆಳಕಂಡ ರೀತಿಯಲ್ಲಿ ಬರೆಯಿರಿ. ಹಕ್ಕಿಯ ದೇಹದ ವಿವಿಧ ಭಾಗಗಳನ್ನು ಚಿತ್ರ ನೋಡಿ ಮನದಟ್ಟು ಮಾಡಿಕೊಳ್ಳಿ. (ರಕ್ಷಾಪುಟದ ಒಳಬದಿಯಲ್ಲಿರುವ ಚಿತ್ರ ನೋಡಿ)

ಗಾತ್ರ: ಒಂದು ಪಕ್ಷಿಯ ಕೊಕ್ಕಿನಿಂದ ಅದರ ಬಾಲದ ತುದಿಯವರೆಗಿನ ಉದ್ದ, ಆ ಪಕ್ಷಿಯ ಗಾತ್ರವನ್ನು ಸೂಚಿಸುತ್ತದೆ, ಆದರೆ, ಪಕ್ಷಿಯನ್ನು ವೀಕ್ಷಿಸುವಾಗ ಈ ಉದ್ದವನ್ನು ನಾವು ನಿಖರವಾಗಿ ಅಳೆಯಲು ಸಾಧ್ಯವಿಲ್ಲ. ಆದ್ದರಿಂದ ಕೆಲವು ಸಾಮಾನ್ಯ ಹಕ್ಕಿಗಳನ್ನು ಹೋಲಿಕೆಗೆ ಮಾಪನವಾಗಿ ಇಟ್ಟುಕೊಂಡಿದ್ದೇವೆ: ಗುಬ್ಬಚ್ಚಿ – ೧೫; ಬುಲ್‌ಬುಲ್ – ೨೦; ಮೈನಾ – ೨೫; ಕಾಗೆ – ೪೫; ಗಿಡುಗ – ೬೦; ಬಾತು – ೬೫; ಕೋಳಿ – ೭೫; ರಣಹದ್ದು – ೯೦ ಸೆಂಟಿಮೀಟರುಗಳು. ನೀವು ಕಂಡ ಒಂದು ಪಕ್ಷಿಯು ಮೈನಾಗಿಂತ ಸ್ವಲ್ಪ ದೊಡ್ಡದಾಗಿದ್ದರೆ, ಅದನ್ನು ಮೈನಾ+ ಎಂದೂ, ಕೋಳಿಗಿಂತ ಚಿಕ್ಕದಾಗಿದ್ದರೆ, *ಕೋಳಿ–* ಎಂದೂ ಗುರುತಿಸಬಹುದು.

ಅದಾದ ಮೇಲೆ, ***ಪ್ರಮುಖ ವೈಶಿಷ್ಟ್ಯಗಳು*** ಅಂದರೆ ಆ ಹಕ್ಕಿಯಲ್ಲಿ ನಿಮ್ಮ ಗಮನವನ್ನು ಸೆಳೆದ ವಿಶೇಷ ಲಕ್ಷಣಗಳನ್ನು ಗುರುತು ಮಾಡಿ. ಉದಾ: ಬಣ್ಣ–ಬಣ್ಣದ ಬಾಲ, ಉದ್ದವಾದ ಕಾಲು, ಪುಕ್ಕವಿಲ್ಲದ ಕತ್ತು, ಬಾಗಿರುವ ಕೊಕ್ಕು ಇತ್ಯಾದಿ. ಅಥವಾ ಆ ಹಕ್ಕಿಯ ನಡವಳಿಕೆಯಲ್ಲಿ ನಿಮ್ಮ ಗಮನ ಸೆಳೆದ ವಿಶಿಷ್ಟ ಗುಣಗಳು, ಉದಾ: ಕ್ಷಣ–ಕ್ಷಣಕ್ಕೂ ಬಾಲವನ್ನು ಮೀಟುವ ಮಡಿವಾಳ, ರೆಕ್ಕೆಯನ್ನು ಹರಡಿ ಒಣಗಿಸಿಕೊಳ್ಳುತ್ತಿರುವ ನೀರುಕಾಗೆ ಇತ್ಯಾದಿ.

ಬಣ್ಣ: ಪಕ್ಷಿಗಳಲ್ಲಿ ಯಾವುದಾದರೂ ಒಂದು ಬಣ್ಣ ಎದ್ದು ಕಾಣುತ್ತದೆ. ಆ ಬಣ್ಣ ನೀವು ನೋಡಿದ ಪಕ್ಷಿಯ ಮೈಯಲ್ಲಿ ಎಲ್ಲೆಲ್ಲಿ ಕಂಡುಬರುತ್ತದೆ ಎಂದು ಬರೆಯಿರಿ. ಉದಾ: ಕೆಂಬೂತದ ಮೈ ಕೂಡ ಕಾಗೆಯಂತೆ ಕಪ್ಪು, ಆದರೆ ಅದರ ರೆಕ್ಕೆ ಉಜ್ವಲ ಕೆಂಗಂದು ಬಣ್ಣದ್ದು. ಅಲ್ಲದೆ, ಋತುಮಾನಗಳಿಗೆ ಅನುಗುಣವಾಗಿ ಕೆಲವು ಪಕ್ಷಿಗಳ ಬಣ್ಣ ಬದಲಾಗುತ್ತವೆ.

ಧ್ವನಿ: ಪಕ್ಷಿಗಳ ಧ್ವನಿಗಳಲ್ಲಿ ಎರಡು ವಿಧ: ಅವುಗಳ ಕರೆ ಒಂದು ಬಗೆಯಾದರೆ, ಹಾಡು ಮತ್ತೊಂದು ಬಗೆ. ಈ ಧ್ವನಿಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ. ಇನ್ನೊಮ್ಮೆ ಅದೇ ಧ್ವನಿಯನ್ನು ಕೇಳಿದಾಗ, ಪಕ್ಷಿಯನ್ನು ನೋಡದೆಯೇ ಗುರುತಿಸಬಹುದು. ಹಕ್ಕಿಗಳು ಹಾಡುವ ಧ್ವನಿಯನ್ನು ಕೇಳಿ ಅವುಗಳ ಸ್ವರಗಳನ್ನು ಬರೆಯುವುದು ಆಗದ ಕೆಲಸ. ಆದರೂ ಆ ಧ್ವನಿಗೆ ಅತಿ ಹತ್ತಿರವಾದ ಸ್ವರಗಳನ್ನು ಶಬ್ದಗಳಲ್ಲಿ ಬರೆಯಲು ಪ್ರಯತ್ನಿಸಬಹುದು. ಉದಾ: ಕೋಗಿಲೆಯ *ಕುಹೂ ..ಕುಹೂ...,* ಕುಟ್ರುಹಕ್ಕಿಯ *ಕುಟ್ರೂ... ಕುಟ್ರೂ...,* ಇತ್ಯಾದಿ. ಅಲ್ಲದೆ ಕಳಿಂಗ, ಕಾಜಾಣ ಹಕ್ಕಿಗಳು ಇತರ ಪಕ್ಷಿಗಳ ಧ್ವನಿಯನ್ನು ಅಣಕವಾಡಬಲ್ಲವು. ನೀವು ನಿರೀಕ್ಷಿಸಿರದ ಯಾವುದೋ ಹಕ್ಕಿಯ ಸ್ವರವನ್ನು ಕೇಳಿ ನೀವು ಗೊಂದಲಗೊಳ್ಳುವ ಸಂದರ್ಭವೂ ಉಂಟು! ವಿವಿಧ ಪ್ರಾಂತ್ಯಗಳಲ್ಲಿ ನಾವು ಕನ್ನಡವನ್ನೇ ವಿವಿಧ ಆಡುಭಾಷೆಗಳಲ್ಲಿ ಮಾತನಾಡುವಂತೆ, ಒಂದೇ ಪ್ರಭೇದದ ಹಕ್ಕಿಗೂ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಆಡುಭಾಷೆಯಿದೆ ಎಂಬುದನ್ನು ನೆನಪಿಡಿ.

ಗಂಡು ಅಥವಾ ಹೆಣ್ಣು: ಅನೇಕ ಗಂಡು ಮತ್ತು ಹೆಣ್ಣು ಹಕ್ಕಿಗಳ ಆಕಾರ, ಬಣ್ಣ ಮುಂತಾದುವುಗಳಲ್ಲಿ ವ್ಯತ್ಯಾಸವಿರುತ್ತದೆ. ಉದಾಹರಣೆಗೆ, ಗುಬ್ಬಚ್ಚಿ, ಗಿಳಿ. ಇವುಗಳ ವಿವರಗಳನ್ನು ಕೈಪಿಡಿಗಳಲ್ಲಿ ಆಗಾಗ ಓದಿ ತಿಳಿಯಿರಿ.

ಪಕ್ಷಿಯ ನಡವಳಿಕೆ : ನೀವು ಆ ಪಕ್ಷಿಯನ್ನು ನೋಡಿದಾಗ ಆದು ಏನುಮಾಡುತ್ತಿತ್ತು? ಮರ/ಗಿಡದ ಮೇಲೆ ಕುಳಿತು ಹೊಂಚುಹಾಕುತ್ತಿತ್ತೇ? ಹಾಡುತ್ತಿತ್ತೇ? ಆಕಾಶದಲ್ಲಿ ಕೀಟಗಳನ್ನು ಹಿಡಿಯುತ್ತಿತ್ತೇ? ಸಂಗಾತಿಯೊಡನೆ ವ್ಯವಹರಿಸುತ್ತಿತ್ತೇ? ಅಥವಾ ಮರಿಗಳಿಗೆ ಗುಟುಕು ನೀಡುತ್ತಿತ್ತೇ? ಹಕ್ಕಿಗಳು ಹಾರುವಾಗ, ರೆಕ್ಕೆ ಬಡಿಯುವ, ತೇಲುವ, ಹೊರಳುವ ಶೈಲಿ ಒಂದೊಂದು ಹಕ್ಕಿಗೂ ವಿಭಿನ್ನ. ಈ ಹಾರುವ ರೀತಿಯಿಂದಲೇ ಅವುಗಳನ್ನು ಗುರುತು ಹಿಡಿಯಬಹುದು.

ಎಲ್ಲಿ ನೋಡಿದಿರಿ? ನೀರಿನಲ್ಲಿ, ಮರದ ಮೇಲೆ, ನೆಲದ ಮೇಲೆ, ಗಾಳಿಯಲ್ಲಿ ... ಇತ್ಯಾದಿ ವಿವರಗಳನ್ನು ಗುರುತಿಸಿಕೊಳ್ಳಿ.

ಗೂಡುಗಳ ರಚನೆ ಹಾಗೂ ವಿವರ : ಉದಾಹರಣೆಗೆ, ಗೀಜಗನ ಗೂಡನ್ನು ನೀವೆಲ್ಲ ಕಂಡೇ ಇದ್ದೀರ. ಸಿಂಪಿಗ, ಎರಡು ಎಲೆಗಳನ್ನು ಹೊಲೆದು ಗೂಡು ಮಾಡುತ್ತದೆ, ಮರಕುಟ್ಟಿಗ ಮರದಮೇಲೆ ಪೊಟರೆಗಳೊಳಗೆ ಗೂಡುಕಟ್ಟಿದರೆ, ಹದ್ದಿನಂತಹ ಹಕ್ಕಿಗಳು ಮರದ ಕೊಂಬೆಯ ಕವಲುಗಳ ನಡುವೆ ಅಟ್ಟಣಿಗೆ ಗೂಡುಕಟ್ಟುತ್ತವೆ. ಪ್ರತಿಯೊಂದು ಪಕ್ಷಿಯೂ ತನ್ನದೇ ಆದ ವಿಶಿಷ್ಟವಾದ ರೀತಿಯಲ್ಲಿ ಗೂಡುಕಟ್ಟಬಲ್ಲದು.

ಮೊಟ್ಟೆ ಮತ್ತು ಮರಿಗಳ ಬಣ್ಣ ಹಾಗೂ ಆಕಾರ : ಹಲವು ಬಾರಿ ಮರಿಗಳು ತಮ್ಮ ತಂದೆ–ತಾಯಿಯನ್ನು ಬಣ್ಣದಲ್ಲಿಯೇ ಆಗಲಿ, ಆಕಾರದಲ್ಲಿಯೇ ಆಗಲಿ ಹೋಲುವುದೇ ಇಲ್ಲ. ಕೈಪಿಡಿಗಳನ್ನು ನೋಡಿ ಇದನ್ನು ಗುರುತಿಸಿ.

ಈ ಮೇಲಿನ ವಿವರಗಳನ್ನಲ್ಲದೇ ಒಂದು ಹಕ್ಕಿಯ ಕೊಕ್ಕು, ಕಣ್ಣು, ಗರಿಗಳ ರಚನೆ, ಬಾಲದ ಆಕಾರ ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ, ವಿವರಗಳನ್ನು ಬರೆಯಿರಿ. ಸಾಧ್ಯವಾದರೆ, ಆ ಪಕ್ಷಿಯ ಚಿತ್ರವನ್ನೂ ಬರೆಯಿರಿ. ಹಕ್ಕಿಗಳು ಬಲು ನಾಜೂಕು; ಅದರಲ್ಲೂ ಮರಿಗಳು ಅತ್ಯಂತ ನಾಜೂಕು. ಆದ್ದರಿಂದ ಅವುಗಳನ್ನು ಮುಟ್ಟಬಾರದು, ಹೆದರಿಸಲೂಬಾರದು. ಸಣ್ಣ ಹಕ್ಕಿಗಳು ಅತಿ ದುರ್ಬಲ ಮತ್ತು ಅವುಗಳ ಎದೆಯ ಮೇಲೆ ಸ್ವಲ್ಪ ಒತ್ತಡ ಬಿದ್ದರೂ ಸತ್ತೇ ಹೋಗುವ ಪ್ರಮೇಯವಿದೆ. ಗಾಯಗೊಂಡ ಹಕ್ಕಿಗಳ ಶುಶ್ರೂಷೆಗೆ ಅಥವಾ ಇನ್ನಾವುದೇ ಕಾರಣಕ್ಕಾಗಿ ಅವುಗಳನ್ನು ಹಿಡಿಯುವುದು ಅನಿವಾರ್ಯವಾದಲ್ಲಿ ಬಹು ಎಚ್ಚರದಿಂದ ತೋರುಬೆರಳು ಮತ್ತು ಮಧ್ಯದ ಬೆರಳುಗಳ ನಡುವೆ ಹಕ್ಕಿಯ ಕತ್ತು ಬರುವಂತೆ, ಅಂಗೈಯಲ್ಲಿ ಅವುಗಳ ರೆಕ್ಕೆ ಮುದುಡದ ಹಾಗೆ ಹಗುರವಾಗಿ ಎತ್ತಿ ಹಿಡಿದು ಪರೀಕ್ಷಿಸಬೇಕು. ಅವು ಬೆನ್ನಿನ ಮೇಲೆ ಮಲಗಿರುವವರೆಗೂ ತಟಸ್ಥವಾಗಿರುತ್ತವೆ. ಪುನಃ ಅವುಗಳನ್ನು ಹಾರಿಸಲು ಹಿಡಿತವನ್ನು ಹಿಂದಿರುಗಿಸಿ ನಂತರ ಬಿಡಬೇಕು.

ಪ್ರಾರಂಭದಲ್ಲಿ ಪುಸ್ತಗಳ ನೆರವಿನಿಂದ ಸಾಮಾನ್ಯವಾಗಿ ಸುತ್ತಮುತ್ತ ಕಾಣುವ ಪಕ್ಷಿಗಳನ್ನು ಗುರುತಿಸಬೇಕು. ಹಕ್ಕಿಗಳು ಎಲೆಗಳ ನಡುವೆ ಅವಿತಿರುವಾಗ, ಕುಳಿತಲ್ಲಿ ಕೂರದೆ ಹಾರುತ್ತಿರುವಾಗ, ಸೂರ್ಯನ ಪ್ರಭೆಗೆ, ಅಥವಾ ನೆರಳಿನಲ್ಲಿ, ಅವುಗಳನ್ನು ಸುಲಭವಾಗಿ, ಸ್ಪಷ್ಟವಾಗಿ ಗುರುತಿಸಲು ಕಷ್ಟಸಾಧ್ಯ. ಇಂತಹ ಸಂದರ್ಭಗಳಲ್ಲಿ ಅವುಗಳ ಬಣ್ಣ ಮಾತ್ರದಿಂದಲ್ಲದೆ, ಕೊಕ್ಕು, ಜುಟ್ಟು, ಕಾಲುಗಳು, ಬಾಲ ಮುಂತಾದ ಚಹರೆ ಮತ್ತು ಅವುಗಳ ಚಲನವಲನ, ಹಾರಾಟದ ವೈಖರಿ, ಅಲ್ಲದೆ ಅವುಗಳ ಕೂಗು ಮತ್ತು ಇಂಚರದಿಂದ ಆ ಹಕ್ಕಿಯನ್ನು ಕಂಡುಹಿಡಿಯಬಹುದು.

ವಿವಿಧ ಪ್ರದೇಶದಲ್ಲಿ ವಾಸಿಸುವ ಹಕ್ಕಿಗಳ ಜೀವನ ಚರಿತ್ರೆಯನ್ನು ತಿಳಿದು, ಅವು ಇತರ ಜೀವಿಗಳೊಡನೆ ಹೊಂದಿರುವ ನಿಕಟ ಸಂಬಂಧವನ್ನು ಅರಿಯುವುದು ಪಕ್ಷಿವೀಕ್ಷಣೆಯ ಒಂದು ಉದ್ದೇಶ. ಈ ಕಾರ್ಯಕ್ಕೆ ಹೆಚ್ಚಿನ ತಾಳ್ಮೆ ಮತ್ತು ಸಾಧನೆ ಅಗತ್ಯ. ಪಕ್ಷಿವೀಕ್ಷಣೆಯನ್ನು ನೀವು ಎರಡು ರೀತಿ ಮಾಡಬಹುದು: ೧. ಒಂದು ನಿರ್ದಿಷ್ಟ ಸ್ಥಳಕ್ಕೆ ವರ್ಷಪೂರ್ತಿ ಭೇಟಿ ನೀಡಿ, ಪಕ್ಷಿಗಳ ಚಲನವಲನ, ನಡವಳಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು. ೨. ದೇಶದ ವಿವಿಧೆಡೆ ಸುತ್ತಾಡಲು ಅವಕಾಶ, ಆಸಕ್ತಿ ಮತ್ತು ಸಮಯವಿರುವವರು ಬೇರೆ ಬೇರೆ ಆವಾಸಗಳಲ್ಲಿರುವ ವಿವಿಧ ಪ್ರಭೇದದ ಹಕ್ಕಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು. ಇವೆಲ್ಲವೂ ಮುಂದೆ ನಿಮ್ಮ ಪರಿಶೀಲನೆಗೆ ಸಹಾಯವಾಗುವುದು. ವಿವಿಧ ಸ್ಥಳಗಳಲ್ಲಿ, ವಿವಿಧ ಋತುಗಳಲ್ಲಿ ಹಕ್ಕಿಗಳ ಜಾತಿ ಮತ್ತು ಸಂಖ್ಯೆ ಬದಲಾಗುತ್ತದೆ. ಪ್ರತಿಯೊಂದು ಹಕ್ಕಿಯಲ್ಲೂ ಒಂದು ನಿರ್ದಿಷ್ಟ ಜೀವನ ಚಕ್ರವನ್ನು ನಾವು ಕಾಣುತ್ತೇವೆ. ಈ ಚಕ್ರದಲ್ಲಿ ಏನಾದರೂ ಬದಲಾವಣೆಯಾದಲ್ಲಿ – ಅದು ಎಷ್ಟೇ ಚಿಕ್ಕದಾದರೂ – ಅದಕ್ಕೊಂದು ಕಾರಣವಿರುತ್ತದೆ ಎಂಬುದನ್ನು ಮನಗಾಣಬೇಕು.

ನೀವು ಶ್ರದ್ಧೆಯಿಂದ, ಲಕ್ಷ್ಯವಿಟ್ಟು ಗಮನಿಸಿದ ವಿಷಯಗಳನ್ನು ಕ್ಲಿಪ್ತವಾಗಿ, ಪ್ರಾಮಾಣಿಕವಾಗಿ ಬರೆದಿಟ್ಟುಕೊಂಡಲ್ಲಿ, ಮುಂದೆ ಅದು ಪಕ್ಷಿಗಳ ನಡವಳಿಕೆ, ಆವಾಸ, ಸಂಖ್ಯೆ ಮುಂತಾದುವುಗಳ ಬಗ್ಗೆ ವಿಶ್ವಾಸಾರ್ಹವಾದ ದಾಖಲೆ ಅಥವಾ ಮಾಹಿತಿಯಾಗುತ್ತದೆ. ನಿಮ್ಮ ಈ ಸಮೀಕ್ಷೆಗಳನ್ನು ಇತರ ಪಕ್ಷಿವೀಕ್ಷಕರೊಂದಿಗೆ, ಪಕ್ಷಿತಜ್ಞರೊಂದಿಗೆ ಪತ್ರಮುಖೇನ, ವಿವಿಧ ನಿಯತಕಾಲಿಕಗಳ ಮೂಲಕ ಅಥವಾ ಅಂತರ್ಜಾಲದ ಮೂಲಕ ಪರಸ್ಪರ ವಿಚಾರ ವಿನಿಮಯ ಮಾಡಬಹುದು.

ಇದೇ ರೀತಿ, ಈ ಹಿಂದಿನ ಪಕ್ಷಿವೀಕ್ಷಕರೂ, ಪಕ್ಷಿತಜ್ಞರೂ ಕೊಡಿಟ್ಟ ಮಾಹಿತಿಯ ಆಧಾರದಿಂದಲೇ ಇಂದು ಪಕ್ಷಿಲೋಕದ ಅದ್ಭುತಗಳ ಪರಿಚಯ ನಮಗಾಗಿರುವುದು! ನೀವು ಕಂಡ ಹೊಸ ವಿಚಾರವು ಪಕ್ಷಿತಜ್ಞರಿಗೆ ಬಹುಮುಖ್ಯ ವೈಜ್ಞಾನಿಕ ಸಂಶೋಧನಾ ವಿಷಯವಾಗಬಲ್ಲದು.

ಹೀಗೆ ಪಕ್ಷಿವೀಕ್ಷಣೆ ಎಂಬ ಹವ್ಯಾಸ, ಮನಸ್ಸಿಗೆ ಆಹ್ಲಾದಕರವೂ, ದೇಹಕ್ಕೆ ವ್ಯಾಯಾಮವೂ, ಸಮಾಜಕ್ಕೆ ಉಪಯುಕ್ತವೂ ಆಗಿರುವುದಲ್ಲದೆ, ಅನೇಕ ವೈಜ್ಞಾನಿಕ ಸಂಶೋಧನೆಗಳಿಗೂ ಅಡಿಪಾಯವಾಗುತ್ತವೆ. ಆದ್ದರಿಂದಲೇ, ಇದನ್ನು ಒಂದು **ಪರಿಪೂರ್ಣ ಹವ್ಯಾಸ** ಎಂದು ಕರೆಯಬಹುದು.

ಪಕ್ಷಿಗಳ ವಲಸೆ

ಹಕ್ಕಿಗಳ ವಲಸೆ, ಪಕ್ಷಿಶಾಸ್ತ್ರಗಳಲ್ಲೆಲ್ಲಾ ಅತಿ ರೋಮಾಂಚನಕಾರಿಯಾದ ವಿಷಯ. ಅವುಗಳ ಹಾರಾಟದ ದೂರ, ಕರಾರುವಾಕ್ಕಾದ ಹಾಗೂ ಶಿಸ್ತಾದ ಓಡಾಟ, ಇವು ವರ್ಷದ ಋತುಗಳನ್ನೂ ಮೀರಿಸುತ್ತವೆ. ಮನುಷ್ಯನ ಕುತೂಹಲವನ್ನು ಯುಗಯುಗಗಳಿಂದಲೂ ಪಕ್ಷಿಗಳ ವಲಸೆ ಹೆಚ್ಚಿಸುತ್ತಲೇ ಇದೆ. ರೆಡ್ ಇಂಡಿಯನ್ನರು ಅವರ ತಿಂಗಳುಗಳನ್ನು ಹಕ್ಕಿಗಳ ಆಗಮನದಿಂದಲೇ ಹೆಸರಿಸುತ್ತಿದ್ದರಂತೆ.

ವೈಜ್ಞಾನಿಕ ಬೆಳವಣಿಗೆಯೊಂದಿಗೆ, ಹಕ್ಕಿಗಳ ವಲಸೆಯ ಬಗ್ಗೆ ಎಷ್ಟೋ ವಿಚಾರಗಳು ಇಂದು ನಮಗೆ ತಿಳಿದಿವೆಯಾದರೂ ಇನ್ನೆಷ್ಟೋ ವಿಚಾರಗಳು ಇನ್ನೂ ನಿಗೂಢವಾಗಿವೆ. ಸಾಮಾನ್ಯವಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಬಾಲಾಡಿ, ಸುವರ್ಣ, ಕೊಕ್ಕರೆ ಮುಂತಾದ ಹಕ್ಕಿಗಳು ಇದ್ದಕ್ಕಿದ್ದಂತೆ ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಾಣಿಸಿಕೊಳ್ಳುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ಕೆಲವೇ ದಶಕಗಳ ಹಿಂದೆ, ಬಾಲಾಡಿ, ಕೋಗಿಲೆ ಮುಂತಾದ ಹಕ್ಕಿಗಳು ಎಲ್ಲೋ ಹಿಮಗಳ ಮಧ್ಯೆ ಉಳಿದ ಪ್ರಾಣಿಗಳಂತೆ ನಿಶ್ಶೇಷವಾಗಿರುತ್ತವೆಂದು ಜನ ನಂಬಿದ್ದರು.

ವಲಸೆಯೆಂದರೆ, ಉತ್ತಮ ಪರಿಸರವನ್ನು ಹೊಂದಲು, ಒಂದೆಡೆಯಿಂದ ಮತ್ತೊಂದೆಡೆಗೆ, ಮತ್ತೆ ಅಲ್ಲಿಗೇ ಹಿಂದಿರುಗುವಂತೆ, ಪಕ್ಷಿಗಳು ನಡೆಸುವ ನಿಯತಕಾಲಿಕ ಓಡಾಟ. ಗಡಿಯಾರದ ಲೋಲಕದಂತೆ ವರ್ಷ ವರ್ಷ ನಡೆಯುವ ಈ ಸಂಚಾರ, ಪ್ರಪಂಚದ ಎಷ್ಟೋ ಸಸ್ತನಿಗಳಲ್ಲಿ ಹಾಗು ಜಲಚರಗಳಲ್ಲಿಯೂ ಇದೆ. ಆದರೂ ಪಕ್ಷಿಗಳ ಬಿಸಿರಕ್ತದ ಒಡಲು, ಗರಿಗಳಿಂದಾವೃತವಾದ ದೇಹ ಮತ್ತು ಹಾರಾಟದ ಶಕ್ತಿ ಇವುಗಳಿಂದಾಗಿ ಪಕ್ಷಿಗಳಲ್ಲಿ ವಲಸೆ ಹೋಗುವ ಸ್ವಭಾವ ಗರಿಷ್ಟ ಪ್ರಮಾಣದಲ್ಲಿ ಎದ್ದುಕಾಣುತ್ತದೆ. ಹಕ್ಕಿಗಳಿಗೆ, ಸ್ವಾಭಾವಿಕವಾಗಿಯೇ ನೈಸರ್ಗಿಕ ಕಷ್ಟಾವಸ್ಥೆಗಳನ್ನು ತಡೆದುಕೊಳ್ಳುವ ಶಕ್ತಿಯಿದೆ. ಆದರೂ, ಅತಿ ಶೀತ ಪ್ರದೇಶಗಳಲ್ಲಿ ವರ್ಷದ ಹಲವು ತಿಂಗಳು ಹಿಮಪಾತವಾಗುವುದರಿಂದ ಆಹಾರದ ಕೊರತೆ ಉದ್ಭವಿಸುತ್ತದೆ. ಹೀಗಾಗಿ ಆಹಾರದ ಅನ್ವೇಷಣೆಯಲ್ಲಿ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ.

ವರ್ಷದ ಒಂದೇ ಸಮಯದಲ್ಲಿ, ಭೂಮಿಯ ಎರಡು ಪ್ರದೇಶಗಳಲ್ಲಿ ಋತುಗಳಿಗನುಸಾರವಾಗಿ ಒಂದು ಕಡೆ ವಿಷಮ ಪರಿಸ್ಥಿತಿಯೂ ಮತ್ತೊಂದೆಡೆ ಅನುಕೂಲಕರವಾದ ಪರಿಸ್ಥಿತಿಯೂ ಇರುವುದರಿಂದ ಈ ಗುಣಗಳನ್ನು ಪಕ್ಷಿಗಳು ತಮ್ಮ ಬದುಕಿಗೆ ಸಮರ್ಥವಾಗಿ ಬಳಸಿಕೊಳ್ಳುತ್ತವೆ.

ಒಂದು ಹಕ್ಕಿಯ ವಲಸೆಯಲ್ಲಿ ಎರಡು ನಿರ್ದಿಷ್ಟ ಗಮ್ಯಸ್ಥಾನಗಳಿವೆ. ಒಂದು, ಪಕ್ಷಿಗಳು ಗೂಡುಕಟ್ಟಿ ಮರಿಮಾಡುವ ತಾಣ. ಇದನ್ನು ಹಕ್ಕಿಗಳ ಮನೆಯೆನ್ನಬಹುದು. ಎರಡು, ಆಹಾರವನ್ನು ಸಂಗ್ರಹಿಸುವ ಮತ್ತು ವಿಶ್ರಾಂತಿ ಪಡೆಯುವ ತಾಣ.

ಪಕ್ಷಿಗಳು ವಲಸೆ ಹೋಗುವ ದೂರ ಹಲವು ಹತ್ತು ಕಿ.ಮೀಗಳಿಂದ ಸಾವಿರಾರು ಕಿ.ಮೀ.ವರೆಗೂ ಇರುತ್ತದೆ. ಉದಾಹರಣೆಗೆ, ಭಾರತದ ಗಂಗಾಬಯಲಿನಲ್ಲಿ ವಾಸಿಸುವ ಕೆಲವು ಹಕ್ಕಿಗಳು ಹಿಮಾಲಯದ ತಪ್ಪಲಿಗೆ ವಲಸೆ ಹೋದರೆ, ಮತ್ತೆ ಕೆಲವು ಹಕ್ಕಿಗಳು ಸಾವಿರಾರು ಕಿ.ಮೀ ದಾಟಿ ಭಾರತಕ್ಕೆ ಬರುತ್ತವೆ. ಪ್ರಪಂಚದಲ್ಲಿಯೇ ಅತಿ ದೂರ ವಲಸೆ ಪ್ರಯಾಣ ಮಾಡುವ ಹಕ್ಕಿ *ಆರ್ಕ್ಟಿಕ್ ಟರ್ನ್*. ಇದು ಉತ್ತರ ಧ್ರುವ ಪ್ರದೇಶದಿಂದ ವಲಸೆ ಹೊರಟು ಭೂಗೋಳವನ್ನೇ ಸವೆಸಿ, ದಕ್ಷಿಣ ಧ್ರುವ ಪ್ರದೇಶವನ್ನು ಬೇಸಿಗೆಯಲ್ಲಿ ತಲುಪುತ್ತದೆ. ನಂತರ, ಪುನಃ ಉತ್ತರ ಧ್ರುವಕ್ಕೆ ವಾಪಸಾಗುತ್ತದೆ. ವರ್ಷಂಪ್ರತಿ ಈ ಹಕ್ಕಿಗಳು ವಲಸೆ ಹೋಗುವ ಒಟ್ಟು ದೂರ ೩೫,೦೦೦ ಕಿ.ಮೀಗಳು!

ಪಕ್ಷಿಗಳ ವಲಸೆ ಸಾಧಾರಣವಾಗಿ ಉತ್ತರದಿಂದ ದಕ್ಷಿಣಕ್ಕೆ ಇರುವುದಾದರೂ, ಪೂರ್ವ–ಪಶ್ಚಿಮ ದಿಕ್ಕಿನಲ್ಲಿ ಕೂಡಾ ಕೆಲವು ಹಕ್ಕಿಗಳು ವಲಸೆ ಹೋಗುತ್ತವೆ. ಪೂರ್ವದಿಂದ ಪಶ್ಚಿಮಕ್ಕೆ ವಲಸೆ ಹೋಗುವ ಹಕ್ಕಿಗಳಲ್ಲಿ ಒಂದು ಸೋಜಿಗದ ಸಂಗತಿಯನ್ನು ಕಾಣಬಹುದು. ಇಲ್ಲಿ ಕೆಲವು ಪಕ್ಷಿಗಳು ತಾವಿರುವ ತಾಣದಿಂದ ಅದೇ ರೀತಿ ಹವಾಮಾನವಿರುವ ಇನ್ನೊಂದು ಪ್ರದೇಶಕ್ಕೆ ಅಥವಾ ಕೆಲವೇ ಕಿ.ಮೀ ದೂರವಿರುವ ಪ್ರದೇಶಕ್ಕೆ ವಲಸೆ ಹೋಗುತ್ತವೆ. ಹೀಗೆ ಸ್ಥಳೀಯ ವಲಸೆ ಕ್ರಮಗಳು ಹೇಗೆ ಉಪಯುಕ್ತ ಅಥವಾ ಅವುಗಳ ಜೀವನಕ್ಕೆ ಹೇಗೆ ಮುಖ್ಯ ಎಂಬುದನ್ನು ಅರಿಯಲು ಇನ್ನೂ ಸಾಧ್ಯವಾಗಿಲ್ಲ. ಉದಾಹರಣೆಗೆ, ಸುವರ್ಣಪಕ್ಷಿ ಮತ್ತು ನೊಣಹಿಡುಕಗಳು ಮಳೆಗಾಲದಲ್ಲಿ ಪಶ್ಚಿಮ ಭಾರತದ ಪಟ್ಟಣಗಳನ್ನು ತ್ಯಜಿಸಿ ಮಧ್ಯ ಭಾರತದ ಒಳನಾಡು ಮತ್ತು ದಕ್ಷಿಣ ಪ್ರಸ್ಥಭೂಮಿಯೆಡೆಗೆ ಹೋಗಿ, ಸೆಪ್ಟೆಂಬರ್ ತಿಂಗಳಲ್ಲೇ ಹಿಂದಿರುಗುತ್ತವೆ.

ಹಕ್ಕಿಗಳು ವಲಸೆ ಹೋಗುವುದು ಏಕೆ ಮತ್ತು ಹೇಗೆ ಎಂಬ ವಿಚಾರದಲ್ಲಿ ಅನೇಕ ವೈಜ್ಞಾನಿಕ ಸಿದ್ಧಾಂತಗಳು ಇದ್ದರೂ ಯಾವೊಂದು ಸಿದ್ಧಾಂತವೂ ಸಮರ್ಪಕವಾಗಿ ಉತ್ತರಿಸಲು ಸಾಧ್ಯವಾಗಿಲ್ಲ. ಹಕ್ಕಿಗಳ ವಲಸೆಯ ಬಗ್ಗೆ ಹೇಳುವಾಗ ನಾವು ಕೆಲವೊಂದು ವಾಸ್ತವಾಂಶಗಳನ್ನು ಮನಗಾಣಬಹುದು. ೧. ಧ್ರುವ ಪ್ರದೇಶಗಳಲ್ಲಿ ಹಕ್ಕಿಗಳು ಚಳಿ ಮತ್ತು ಹಿಮಗಾಳಿಯನ್ನು ತಪ್ಪಿಸಿಕೊಳ್ಳಬೇಕಾಗುವುದು. ೨. ಕೆಲವು ತಿಂಗಳ ಕಾಲ ಇಂತಹ ಪ್ರದೇಶಗಳಲ್ಲಿ ಹಗಲು ಕಡಿಮೆಯಿರುವುದರಿಂದ ಆಹಾರ ಹುಡುಕಲು ಕಷ್ಟವಾಗುವುದು. ೩. ಹೆಪ್ಪುಗಟ್ಟಿದ ವಾತಾವರಣದಲ್ಲಿ ಆಹಾರದ ಕೊರತೆಯೂ ಕಂಡುಬರುವುದು. ಈ ಕುಂದುಕೊರತೆಗಳನ್ನೆಲ್ಲಾ ಅವು ಮತ್ತೊಂದು ಗಮ್ಯಸ್ಥಾನದಲ್ಲಿ ನೀಗಿಕೊಳ್ಳಬಲ್ಲವು.

ದೂರ ಪ್ರಯಾಣ ಆರಂಭಿಸುವುದಕ್ಕೆ ಮುಂಚೆ, ವಲಸೆಹೋಗುವ ಪಕ್ಷಿಗಳು ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತವೆ. ಪ್ರಯಾಣದ ಸಮಯದಲ್ಲಿ ಪೋಷಕವಾಗುವಂತೆ, ಹೆಚ್ಚು ಹೆಚ್ಚು ತಿಂದು ಒಂದು ಪದರು ಅಧಿಕ ಕೊಬ್ಬನ್ನು ದೇಹದಲ್ಲಿ ಶೇಖರಿಸಿಕೊಳ್ಳುತ್ತವೆ; ವೃತ್ತಾಕಾರವಾಗಿ ಅಥವಾ ಗುಂಪಾಗಿ ಹಾರುವುದನ್ನು ಅಭ್ಯಾಸ ಮಾಡಿಕೊಳ್ಳುತ್ತವೆ. ವಲಸೆಯಲ್ಲಿ ಹೆಚ್ಚಿನ ಹಕ್ಕಿಗಳು ದೊಡ್ಡ ಇಲ್ಲವೆ ಸಣ್ಣ ಗುಂಪಾಗಿ ಹಾರಿದರೆ, ಕೆಲವು ಪ್ರಭೇದದ ಹಕ್ಕಿಗಳು ಒಂಟಿಯಾಗಿಯೇ ಹಾರುತ್ತವೆ. ಸಣ್ಣ ಪಕ್ಷಿಗಳು ಗಂಟೆಗೆ ಸುಮಾರು ಮೂವತ್ತು ಕಿ.ಮೀ ಹಾರಿದರೆ, ದೊಡ್ಡ ಹಕ್ಕಿಗಳು ಎಂಭತ್ತು ಕಿ.ಮೀ ವೇಗದಲ್ಲಿ ಹಾರಬಲ್ಲವು. ಸಾಮಾನ್ಯವಾಗಿ ಎಲ್ಲಾ ಪಕ್ಷಿಗಳು ದಿನಕ್ಕೆ ಎಂಟು ತಾಸು ಪ್ರಯಾಣ ಮಾಡಬಲ್ಲವು.

ಸಮುದ್ರವನ್ನು ದಾಟಬೇಕಾದಲ್ಲಿ ಬಹುದೂರ ಸಾಗಬೇಕಾದ್ದು ಅನಿವಾರ್ಯವಾದಾಗ ಕೆಲವು ಹಕ್ಕಿಗಳು ಅವಿಶ್ರಾಂತವಾಗಿ ೩೫ರಿಂದ ೩೮ ಗಂಟೆ ಹಾರುವ ಸಂದರ್ಭವೂ ಇದೆ. ಅಲ್ಲದೆ, ಹಕ್ಕಿಗಳು ಅಲ್ಲಲ್ಲಿ ತಂಗುವ ಸ್ಥಳಗಳಲ್ಲಿ ಪ್ರತಿಕೂಲ ವಾತಾವರಣಕ್ಕೂ, ರಭಸದ ಗಾಳಿಗೂ ಸಿಲುಕಿ ಸಾವು-ನೋವುಗಳು ಅಧಿಕವಾಗುವ ಸಂಭವವೂ ಇದೆ. ಹೀಗಾಗಿ, ವಲಸೆ ಪ್ರಯಾಣ ಬಹಳ ಕಷ್ಟದಾಯಕವೂ, ಶ್ರಮಭರಿತವೂ ಅಲ್ಲದೆ ಅನೇಕ ವೇಳೆ ಅಪಾಯಕಾರಿಯೂ ಹೌದು.

ಹಗಲು ಹೊತ್ತು ವಲಸೆ ಹಾರುವ ಹಕ್ಕಿಗಳಿಗೆ ಸೂರ್ಯನೇ ದಿಕ್ಸೂಚಿಯಾಗಿರುತ್ತಾನೆ. ಆಕಾಶದಲ್ಲಿ ಸೂರ್ಯನಿರುವ ಕೋನವನ್ನನುಸರಿಸಿ ವಲಸೆ ಪಕ್ಷಿಗಳು ತಮ್ಮ ಪ್ರಯಾಣವನ್ನು ಮುಂದುವರಿಸುತ್ತವೆ. ಮಂಜು-ಮೋಡ ಮುಸುಕಿದ ವಾತಾವರಣದಲ್ಲಿ ಅವು ದಾರಿತಪ್ಪುತ್ತವೆಂದು ತಿಳಿದಿದೆ. ಆದರೆ ಒಂದು ಸಾರಿ ಸೂರ್ಯನು ಮೋಡಗಳಿಂದ ಹೊರಬಂದರೆ, ಅವು ತಮ್ಮ ದಿಕ್ಕನ್ನು ಸರಿಪಡಿಸಿಕೊಳ್ಳುತ್ತವೆ.

ರಾತ್ರಿವೇಳೆಯ ಪ್ರಯಾಣ ಹೆಚ್ಚು ಸುರಕ್ಷಿತ. ಈ ವೇಳೆಯಲ್ಲಿ ಇತರ ಪ್ರಾಣಿಗಳಿಂದ ಜೀವಕ್ಕೆ ತೊಂದರೆಯಿಲ್ಲದಿರುವುದೇ ಇದಕ್ಕೆ ಕಾರಣ. ರಾತ್ರಿವೇಳೆ ನಕ್ಷತ್ರಗಳು ಹಾಗೂ ನಕ್ಷತ್ರಪುಂಜಗಳೇ ಈ ಹಕ್ಕಿಗಳಿಗೆ ಮಾರ್ಗದರ್ಶಿ.

ವಲಸೆ ಪ್ರಕ್ರಿಯೆಯಲ್ಲಿ ಒಟ್ಟು ಮೂರು ವಿಚಾರಗಳನ್ನು ನಾವು ಗಮನಿಸಬಹುದು: ೧. ವಲಸೆ ಹೋಗಲು ಅಧಿಸೂಚನೆ ೨. ಗಮ್ಯಸ್ಥಾನದ ದಾರಿಸೂಚಿ ೩. ಮತ್ತೆ ಹೊರಟ ಸ್ಥಳಕ್ಕೆ ವಾಪಸಾಗಲು ಅಧಿಸೂಚನೆ.

ವಲಸೆ ಹೋಗುವ ಸಮಯ ಬಂದಾಗ ಹಕ್ಕಿಗೆ ಮತ್ತೊಂದು ಪ್ರದೇಶಕ್ಕೆ ಹೋಗಲು ಹೇಗೆ ತಿಳಿಯುತ್ತದೆ? ಇದು ಬಹಳ ಕ್ಲಿಷ್ಟವಾದ ಪ್ರಶ್ನೆ. ವಿಜ್ಞಾನಿಗಳು ಎಷ್ಟೋ ರೀತಿ ಉತ್ತರಿಸಲು ಪ್ರಯತ್ನಿಸಿದರೂ ಒಂದು ಒಮ್ಮತಕ್ಕೆ ಬಂದಿಲ್ಲ. ಧ್ರುವಪ್ರದೇಶಗಳಲ್ಲಿ, ಆ ಕಾಲಕ್ಕೆ ಪ್ರತಿದಿನ ಬೇಗನೆ ಕತ್ತಲು ಕವಿಯುವುದರಿಂದ, ಹಗಲು ಸಣ್ಣದಾಗುತ್ತ ಹೋಗುವುದು. ಅದೇ ವೇಳೆಗೆ ಹೆಣ್ಣು ಹಕ್ಕಿಯು ಗರ್ಭ ಧರಿಸಲು ತಯಾರಾಗುವುದು ಮತ್ತೊಂದು ಕಾರಣ. ಏಕೆಂದರೆ ಗರ್ಭ ಧರಿಸದ ಹಕ್ಕಿಯಲ್ಲಿ ವಲಸೆ ಹೋಗುವ ಪ್ರವೃತ್ತಿ ಇಲ್ಲದಿರುವುದು ಮೇಲಿನ ಕಾರಣಕ್ಕೆ ಸಮರ್ಥನೆ ನೀಡುತ್ತದೆ.

ಇನ್ನು ಆ ಹಕ್ಕಿಗಳಿಗೆ ಗಮ್ಯಸ್ಥಾನ ಹಾಗೂ ಅಲ್ಲಿಗೆ ತಲುಪುವ ದಾರಿ ತಿಳಿಯುವುದಾದರೂ ಹೇಗೆ? ಇದು ಮತ್ತೊಂದು ಕಠಿಣ ಪ್ರಶ್ನೆ. ವಸಂತಋತುವಿನಲ್ಲಿ ಮೊದಲು ಬಂದು ತಲುಪುವುದು ಗಂಡು ಹಕ್ಕಿಗಳು. ನಂತರ ಹೆಣ್ಣುಹಕ್ಕಿಗಳೂ, ಕೊನೆಯಲ್ಲಿ ಮರಿಹಕ್ಕಿಗಳೂ ಬರುತ್ತವೆ. ಚಳಿಗಾಲದಲ್ಲಿ ಹಕ್ಕಿಗಳು ಹಿಂದಿರುಗುವಾಗ ಈ ಕ್ರಮ ವಿರುದ್ಧವಾಗುವುದನ್ನು ನಾವು ಕಾಣುತ್ತೇವೆ. ಅಂದರೆ, ಹಿಂದಿರುಗುವಾಗ ಉಳಿದ ಹಕ್ಕಿಗಳಿಗೆ ಮಾರ್ಗದರ್ಶಕರಾಗಿ ಮರಿಹಕ್ಕಿಗಳು ಹೋದರೆ, ಕೊನೆಯಲ್ಲಿ ಗಂಡುಹಕ್ಕಿಗಳು ತಲುಪುತ್ತವೆ! ಆಶ್ಚರ್ಯಕರ ವಿಚಾರವೆಂದರೆ, ಹಿಂದಿರುಗುವಾಗ ಮರಿಹಕ್ಕಿಗಳು, ಅಂದರೆ, ಇದೇ ಮೊದಲ ಬಾರಿಗೆ ವಲಸೆ ಹಾರುತ್ತಿರುವ ಮರಿಹಕ್ಕಿಗಳಿಗೆ ತಮ್ಮ ಪೋಷಕರು ಮೊದಲು ಹೊರಟ ಸ್ಥಳವನ್ನೇ ನೇರವಾಗಿ ತಲುಪಲು ಹೇಗೆ ಸಾಧ್ಯ? ಅಲ್ಲದೆ, ೬೦೦ರಿಂದ ೧,೨೦೦ ಮೀಟರ್ ಎತ್ತರದಲ್ಲಿ ಹಾರುತ್ತಿರುವಾಗ ಭೂಮಿಯ ಮೇಲಿನ ಸಣ್ಣ-ಪುಟ್ಟ ಹೆಗ್ಗುರುತುಗಳು ಈ ಹಕ್ಕಿಗಳಿಗೆ ಸಹಾಯಕಾರಿಯಾಗುವ ಸಂಭವವೇ ಇಲ್ಲವೆನ್ನಬಹುದು. ಈ ವಿಸ್ಮಯಕರ ಕಾರ್ಯಕ್ಕೆ ಕಾರಣ ಸಾವಿರಾರು ವರ್ಷಗಳಿಂದ ಅನುವಂಶೀಯವಾಗಿ ಈ ಹಕ್ಕಿಗಳಲ್ಲಿ ಬಂದಂತಹ ಹುಟ್ಟರಿವು ಎಂಬುದು ನಿಸ್ಸಂಶಯ. ಇದಕ್ಕೆ ಪೂರಕವಾಗಿ ಹಕ್ಕಿಗಳ ಮೆದುಳಿನಲ್ಲಿರುವ ಅಯಸ್ಕಾಂತೀಯ ಶಕ್ತಿಯೂ ದಿಕ್ಸೂಚಿಯಂತೆ ಕೆಲಸ ನಿರ್ವಹಿಸುತ್ತದೆ. ಹುಟ್ಟಿನಿಂದಲೇ ಬರುವ ಇಂತಹ ಸಹಜ ಪ್ರವೃತ್ತಿಯನ್ನು ಹಕ್ಕಿಗಳು ಗೂಡುಕಟ್ಟುವ ವಿಚಾರದಲ್ಲಿಯೂ ನಾವು ಕಾಣಬಹುದು. ಗೀಜಗ, ಸಿಂಪಿಗ ಮುಂತಾದ ಪಕ್ಷಿಗಳು ಯಾವುದೇ ಸಹಾಯ, ಹಿಂದಿನ ಅನುಭವ ಅಥವಾ ತರಬೇತಿಯಿಲ್ಲದೆಯೇ ಅಚ್ಚುಕಟ್ಟಾಗಿ ಅವುಗಳ ಗೂಡನ್ನು ಕಟ್ಟಬಲ್ಲವು.

ತಮ್ಮ ಮೂಲಸ್ಥಾನಕ್ಕೆ ಹಿಂದಿರುಗುವ ವಿಚಾರದಲ್ಲಿಯೂ ಹಕ್ಕಿಗಳು ಅಷ್ಟೇ ನಿಖರವಾಗಿ ನಿರ್ದಿಷ್ಟ ದಿಕ್ಕಿನಲ್ಲಿ ಪ್ರಯಾಣ ಮಾಡುತ್ತವೆ. ಸರಿಸುಮಾರು ಪ್ರತಿಬಾರಿಯೂ ಅದೇ ಸ್ಥಳವನ್ನು ಮಾತ್ರವಲ್ಲದೆ ಅದೇ ಮರದ ಮೇಲೆ ಕಳೆದ ವರ್ಷದ ಗೂಡನ್ನೇ ಆಶ್ರಯಿಸುವುದು ಮತ್ತೊಂದು ಸೋಜಿಗದ ಸಂಗತಿ. ತಮ್ಮ ಹಳೆಯ ಜಾಗವನ್ನು ಈ ಹಕ್ಕಿಗಳು ನೆನಪಿನಲ್ಲಿಟ್ಟುಕೊಳ್ಳಬಲ್ಲವೆಂಬುದು ಇದರಿಂದ ಸಾಬೀತಾಗುವುದು.

ಪ್ರತಿವರ್ಷ ತಪ್ಪದೆ ಅದೇ ದಿನ, ಅದೇ ಸ್ಥಳಕ್ಕೆ, ಕರಾರುವಾಕ್ಕಾಗಿ ಒಂದು ಹಕ್ಕಿ ನಿರ್ದಿಷ್ಟ ದಾರಿಯನ್ನನುಸರಿಸಿ, ಸಾವಿರಾರು ಕಿ.ಮೀಗಳ ಪ್ರಯಾಣವನ್ನು ಮಾಡಿ ತಲುಪುತ್ತದೆ ಎನ್ನುವುದು ಯಾರಿಗೂ ಆಶ್ಚರ್ಯವನ್ನುಂಟುಮಾಡದಿರದು. ಉದಾಹರಣೆಗೆ, ಚಳಿಗಾಲದಲ್ಲಿ, ಕೇರಳದಲ್ಲಿ ಉಂಗುರ ಹಾಕಿದ ಒಂದು ಹಳದಿ ಬಾಲಾಡಿ, ಮುಂದಿನ ವಸಂತದಲ್ಲಿ ಕಾಬುಲ್ ಮತ್ತು ಅಫ್ಘಾನಿಸ್ತಾನದಲ್ಲಿ ಕಾಣಸಿಕ್ಕಿದೆ. ಹಿಮಾಲಯದ ಯಾವುದೋ ಭಾಗದಲ್ಲಿ ಮರಿಮಾಡುವ ಬೂದುಬಾಲಾಡಿ, ಸುಮಾರು ೨,೦೦೦ ಕಿಮೀ ದೂರ ಹಾರಿ ಪ್ರತಿವರ್ಷ ಸೆಪ್ಟೆಂಬರ್ ೬ನೇ ತಾರೀಕು ನಮ್ಮ ಮನೆಯ ತೋಟಕ್ಕೆ ಬರುವುದನ್ನು ನಾನು ಕಳೆದ ಹನ್ನೊಂದು ವರ್ಷಗಳಿಂದ ನೋಡುತ್ತಿದ್ದೇನೆ.

ಭಾರತದಲ್ಲಿ ಅತಿ ಹೆಚ್ಚು ವಲಸೆ ಹಕ್ಕಿಗಳ ಬಗ್ಗೆ ಸಂಶೋಧನೆ ನಡೆಸಲ್ಪಡುವ ಸ್ಥಳ, ರಾಜಾಸ್ತಾನದ ಭರತ್‌ಪುರ. ಇಲ್ಲಿ ಪ್ರತಿವರ್ಷ ಆಗಸ್ಟ್‌ನಲ್ಲಿ ಸೈಬೀರಿಯನ್ ಕೊಕ್ಕರೆಗಳ ಆಗಮನದೊಂದಿಗೆ, ಚಳಿಗಾಲದ ಹಕ್ಕಿವಲಸೆ ಪ್ರಾರಂಭವಾಗುತ್ತದೆ. ಪ್ರಪಂಚದಾದ್ಯಂತ ವಿಜ್ಞಾನಿಗಳು ಈ ಅದ್ಭುತ ದೃಶ್ಯವನ್ನು ನೋಡಲು ಹಲವು ವಾರಗಳ ಮುಂಚಿತವಾಗಿ ಬಿಡಾರ ಹೂಡುತ್ತಾರೆ. ಸೈಬೀರಿಯನ್ ಕೊಕ್ಕರೆಗಳು ೪,೬೦೦ ಕಿ.ಮೀ. ದೂರದ ಸೈಬೀರಿಯದಿಂದ ಹಾರಿ ಇಲ್ಲಿಗೆ ವಲಸೆ ಬರುತ್ತವೆ. ಬಹಳ ಅಪರೂಪದ ಈ ಹಕ್ಕಿಗಳ ಸಂಖ್ಯೆ ಇಂದು ಕೇವಲ ೨೦೦ ಎಂದು ಅಂದಾಜು ಮಾಡಲಾಗಿದೆ. ಹತ್ತು ವರ್ಷಗಳ ಹಿಂದೆ ಭರತ್‌ಪುರಕ್ಕೆ ಒಂದೇ ಒಂದು ಸೈಬೀರಿಯನ್ ಕೊಕ್ಕರೆಯೂ ಬರಲಿಲ್ಲ. ಇದು ವಿಜ್ಞಾನಿಗಳಿಗೆ ಬಹು ದಿಗಿಲು ಹುಟ್ಟಿಸಿತ್ತು. ಭರತ್‌ಪುರಕ್ಕೆ ಆಗಮಿಸುವ ವಲಸೆ ಹಕ್ಕಿಗಳ ವಾಪಸಾತಿ ಮಾರ್ಚ್ ತಿಂಗಳಿನಿಂದ ಶುರುವಾಗುತ್ತದೆ.

ಭಾರತದ ಒಟ್ಟು ೨,೦೬೦ ಪ್ರಭೇದ ಮತ್ತು ಒಳಪ್ರಭೇದದ ಪಕ್ಷಿಗಳಲ್ಲಿ ಸುಮಾರು ೩೪೪ ಪ್ರಭೇದದ ಹಕ್ಕಿಗಳು ವಲಸೆ ಹೋಗುತ್ತವೆ. ಈ ಹಕ್ಕಿಗಳು ಹೆಚ್ಚಾಗಿ ಉತ್ತರ ಯುರೋಪ್ ಮತ್ತು ಏಷ್ಯಾ ಖಂಡಗಳಿಗೆ ಸೇರಿದುವಾಗಿವೆ. ಬೇಸಿಗೆಯ ಕಾಲದಲ್ಲಿ, ಅಂದರೆ, ಮೇ ತಿಂಗಳಿನಿಂದ ಜುಲೈವರೆಗೆ, ಈ ಪಕ್ಷಿಗಳು ಹಿಮಾಲಯದಿಂದ ಉತ್ತರಕ್ಕಿರುವ ಪರ್ವತ ಪ್ರದೇಶಗಳಲ್ಲಿ ಗೂಡುಕಟ್ಟಿ ಮರಿಮಾಡುತ್ತವೆ. ಆ ಪ್ರದೇಶಗಳಲ್ಲಿ ಚಳಿಗಾಲ ಶುರುವಾದೊಡನೆ (ಜುಲೈ-ಆಗಸ್ಟ್ ತಿಂಗಳಲ್ಲಿ) ಇವು ದಕ್ಷಿಣದೆಡೆಗೆ, ಅಂದರೆ ಪಶ್ಚಿಮ ಆಫ್ರಿಕದಿಂದ ಪೂರ್ವ ಏಷ್ಯಾ, ಭಾರತ ಮತ್ತು ಆಸ್ಟ್ರೇಲಿಯ-ನ್ಯೂಜಿಲ್ಯಾಂಡ್ ಕಡೆಗೆ ವಲಸೆ ಬರುತ್ತವೆ.

ವಲಸೆ ಬರುವ ಹಕ್ಕಿಗಳನ್ನು ಮತ್ತು ಅವು ಹಿಡಿಯುವ ದಾರಿಯನ್ನು ಕಂಡುಹಿಡಿಯುವುದು ಹೇಗೆ? ಇದಕ್ಕಾಗಿ ವಿಜ್ಞಾನಿಗಳು ಹಾಗೂ ಹವ್ಯಾಸಿ ಪಕ್ಷಿವೀಕ್ಷಕರ ತಂಡವೇ ಭಾಗವಹಿಸುತ್ತದೆ. ಅನೇಕ ಹಕ್ಕಿಗಳನ್ನು ಬಲೆಬೀಸಿ ಹಿಡಿದು, ಅವುಗಳ ಕಾಲಿಗೆ ಅಲ್ಯುಮಿನಿಯಂ ಅಥವಾ ಪ್ಲಾಸ್ಟಿಕ್ಕಿನ ಪಟ್ಟಿಯನ್ನು ಸುತ್ತಿ ಕಟ್ಟುತ್ತಾರೆ. ಇವುಗಳನ್ನು *ರಿಂಗಿಂಗ್* ಅಥವಾ *ಬ್ಯಾಂಡಿಂಗ್* ಎನ್ನುತ್ತೇವೆ. ಈ ಪಟ್ಟಿಯಲ್ಲಿ ಹಕ್ಕಿಯ ಸಂಖ್ಯೆ, ವಿವರಗಳನ್ನು ತಿಳಿಸಬೇಕಾದ ವಿಳಾಸ, ಮುಂತಾದುವುಗಳನ್ನು ದಾಖಲು ಮಾಡಲಾಗಿರುತ್ತದೆ.

ಮುಂದೆ ಈ ಹಕ್ಕಿಗಳು ಯಾರಿಗಾದರೂ ದೊರಕಿದಲ್ಲಿ, ಇಲ್ಲವೆ ಕಂಡಲ್ಲಿ, ಗುರುತು ಮಾಡಲಾದ ವಿಳಾಸಕ್ಕೆ ಸಂಪರ್ಕಿಸಿ ವಿವರ ತಿಳಿಸುತ್ತಾರೆ. ಇದಲ್ಲದೆ, ವಲಸೆಹಕ್ಕಿಗಳ ಬಗ್ಗೆ ತಿಳಿಯಲು, ಇತ್ತೀಚಿನ ದಿನಗಲ್ಲಿ ಹೊಸ ಹೊಸ ವೈಜ್ಞಾನಿಕ ಸಾಧನಗಳನ್ನು ಉಪಯೋಗಿಸಲಾಗುತ್ತದೆ.

೧. ***ರೇಡಿಯೋ ಟೆಲಿಮೆಟ್ರಿ:*** ಇದರಲ್ಲಿ ಒಂದು ಅತಿ ಚಿಕ್ಕ, ಅಷ್ಟೇ ಪ್ರಬಲ ರೇಡಿಯೋ ಟ್ರಾನ್ಸ್ಮಿಟರ್‌ನ್ನು ಹಕ್ಕಿಯ ದೇಹದ ಒಂದು ಭಾಗದಲ್ಲಿ ಭದ್ರವಾಗಿ ಲಗತ್ತಿಸಿ ಹಕ್ಕಿಯು ಹಾರಿದಂತೆಲ್ಲ ಅದರ ಇರವನ್ನು ರೇಡಿಯೋ ತರಂಗಗಳ ಮೂಲಕ ಗುರುತಿಸಲಾಗುತ್ತದೆ. ದೊಡ್ಡ ಹಕ್ಕಿಗಳು ಮತ್ತು ಕಾಡು ಪ್ರಾಣಿಗಳಲ್ಲಿ ಇದನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಆದರೆ, ಸಾವಿರಾರು ಕಿ.ಮೀ ದೂರಗಳಿಗೆ ಈ ವಿಧಾನವನ್ನು ಉಪಯೋಗಿಸಲಾಗುವುದಿಲ್ಲ.

೨. ***ಉಪಗ್ರಹ ಬಳಕೆ:*** ಇದರಲ್ಲಿ ಒಂದು ಬಗೆಯ, ಉಪಗ್ರಹದೊಂದಿಗೆ ಸಂಪರ್ಕವಿರುವ ಟ್ರಾನ್ಸಿಸ್ಟರ್‌ನ್ನು ಹಕ್ಕಿಯಲ್ಲಿ ಅಳವಡಿಸಿ ಆ ಮೂಲಕ ಹಕ್ಕಿಯು ಹಾರುವ ದಾರಿಯನ್ನು ಗುರುತುಮಾಡಿಕೊಳ್ಳಲಾಗುವುದು. ಸೈಬೀರಿಯನ್ ಕೊಕ್ಕರೆಗಳಲ್ಲಿ ಈ ವಿಧಾನವನ್ನು ಉಪಯೋಗಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ವಿಧಾನವನ್ನು ಹೆಚ್ಚಾಗಿ ಬಳಸಲಾಗುತ್ತಿದೆ.

೩. ***ರಡಾರ್‌ಗಳ ಬಳಕೆ:*** ಇಲ್ಲಿಯೂ ರೇಡಿಯೋ ತರಂಗಗಳ ಬದಲಿಗೆ ರಡಾರ್‌ಗಳನ್ನು ಬಳಸಿ ಹಕ್ಕಿಗಳ ಇರವನ್ನು, ಅವು ವಲಸೆ ಹೋಗುವ ದಾರಿಯನ್ನು ಪತ್ತೆಹಚ್ಚಿ, ಗುರುತಿಸಲಾಗುತ್ತದೆ.

೧೯೫೯ರಿಂದ ನಮ್ಮ ದೇಶದ ಬಾಂಬೇ ನ್ಯಾಚುರಲ್ ಹಿಸ್ಟರಿ ಸೊಸೈಟಿಯವರು ಪರಿಣಾಮಕಾರಿಯಾಗಿ ವಲಸೆ ಪಕ್ಷಿಗಳಿಗೆ ಉಂಗುರ ತೊಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಹೆಸರಾಂತ ಪಕ್ಷಿವಿಜ್ಞಾನಿ ಡಾ. ಸಲೀಂ ಆಲಿಯವರ ನೇತೃತ್ವದಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮ ಇಂದು ಯಶಸ್ವಿಯಾಗಿ ಮುಂದುವರೆದಿದೆ. ಈ ಪರಿಶ್ರಮದಿಂದ ಇಂದು ವಲಸೆ ಪಕ್ಷಿಗಳ ಬಗ್ಗೆ ವಿಜ್ಞಾನಿಗಳಿಗೆ ಬಹಳಷ್ಟು ಮಾಹಿತಿ ದೊರಕಿದೆ.

ಪ್ರತಿವರ್ಷ ವಲಸೆ ಹೋಗುವ ಚಲನವಲನವನ್ನು ದಾಖಲಿಸುವ ಕಾರ್ಯದಲ್ಲಿ ಕೆಲವು ಮುಖ್ಯ ಅಂಶಗಳನ್ನು ಗಮನದಲ್ಲಿರಿಸಬೇಕು. ವಾಡಿಕೆಯಂತೆ, ವಲಸೆ ಬರುವ ಹಕ್ಕಿ ಬಾರದಿದ್ದಲ್ಲಿ ಅಥವಾ ಹೊಸ ಹಕ್ಕಿಯೊಂದು ನಮ್ಮ ಸುತ್ತ–ಮುತ್ತ ಕಾಣಿಸಿಕೊಂಡಾಗ ಈ ಗೈರುಹಾಜರಿಗಾಗಲೀ, ಆಗಮನಕ್ಕಾಗಲೀ, ಹಲವಾರು ಕಾರಣಗಳಿರಬಹುದು. ದಾರಿಯಲ್ಲಿ ಆಹಾರದ ಕೊರತೆಯುಂಟಾಗಿ, ಹಕ್ಕಿಯು ಬೇರೆ ಮಾರ್ಗವನ್ನು ಹಿಡಿದಿರಬಹುದು ಅಥವಾ ವಿಷಪೂರಿತ ಆಹಾರ ಸೇವಿಸಿ ಹಕ್ಕಿಗಳು ಮರಣ ಹೊಂದಿರುವ ಸಾಧ್ಯತೆಯೂ ಇದೆ; ಇಲ್ಲವೇ ಆ ಹಕ್ಕಿಗಳ ಬೇಟೆಯಾಗಿರಬಹುದು. ಇದಲ್ಲದೆ, ದಾರಿಯಲ್ಲಿ ಯಾವುದೇ ನೈಸರ್ಗಿಕ ಪ್ರಕೋಪಗಳಿಗೆ ಬಲಿಯಾಗಿರುವ ಸಾಧ್ಯತೆಗಳನ್ನೂ ಉಪೇಕ್ಷಿಸುವಂತಿಲ್ಲ. ಮತ್ತಾವುದೋ ಸ್ಥಳದಲ್ಲಿ ವಿಕೋಪವುಂಟಾಗಿ ಬೇರೆಡೆ ಹೋಗಬೇಕಾಗಿದ್ದ ಇತರ ಹಕ್ಕಿಗಳು ದಾರಿ ಬದಲಿಸಿ ಇತ್ತ ಹಾರಿ ಬಂದಿರಲೂಬಹುದು.

ವಲಸೆ ಹೋಗುವ ಹಕ್ಕಿಗಳ ಮನೆ ಮತ್ತು ಗಮ್ಯಸ್ಥಾನಗಳಲ್ಲಿ ಅಥವಾ ಇವು ವಲಸೆ ಹೋಗುವ ದಾರಿಯಲ್ಲಿ ಯಾವುದೇ ಗುರುತರವಾದ ಪ್ರಾಕೃತಿಕ ಬದಲಾವಣೆಗಳಾದರೂ ಅವು ಈ ಪಕ್ಷಿಗಳ ಮೇಲೆ ಪರಿಣಾಮವನ್ನು ಬೀರುತ್ತವೆ. ಈ ಪರಿಣಾಮ ಮುಂದೆ ಇತರ ಜೀವಿಗಳ ಮೇಲೂ, ಕೊನೆಯಲ್ಲಿ ಮನುಷ್ಯನ ಮೇಲೂ ಪ್ರಭಾವ ಬೀರಬಹುದು. ಪಕ್ಷಿಗಳ ಒಡನಾಟ, ನಮ್ಮ ಜೀವನದಲ್ಲಿ ಅನಿವಾರ್ಯ ಹಾಗೂ ಅವಶ್ಯಕ. ಹೀಗೆ ಹಕ್ಕಿಗಳ ವಲಸೆಯೆಂಬುದು ಬರೀ ರೋಮಾಂಚಕಾರಿ ವಿಷಯವಷ್ಟೇ ಅಲ್ಲದೆ, ಪರಿಸರ ವಿಜ್ಞಾನಿಗಳಿಗೂ ಬಹು ಉಪಯುಕ್ತವಾಗಿದೆ.

ಪಕ್ಷಿವೀಕ್ಷಣೆ ಏಕೆ?

ಪಕ್ಷಿಗಳು ಒಂದು ಭೂ ಆವಾಸದ ವಸ್ತುಸ್ಥಿತಿಯ ಕನ್ನಡಿಯಿದ್ದಂತೆ. ಮಾನವನ ಸ್ವಾರ್ಥ, ದುರಾಸೆ, ಕ್ರೂರತೆಯಿಂದಾಗಿ ಇಂದು ಎಷ್ಟೋ ಜೀವಿಗಳು ಕಣ್ಮರೆಯಾಗಿವೆ. ಜನಸಂಖ್ಯಾ ಸ್ಫೋಟ, ನಗರೀಕರಣ, ಔದ್ಯೋಗೀಕರಣ, ಆಧುನಿಕ ಬೇಸಾಯದಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆ, ರಾಸುಗಳ ಮೇವಿಗೆ ಕಾಡುಗಳ ಬಳಕೆ, ಪ್ರಾಣಿಹತ್ಯೆ ಮುಂತಾದ ದುಷ್ಪರಿಣಾಮಗಳಿಂದ ಇಂದು ಎಷ್ಟೋ ಪಕ್ಷಿಸಂಕುಲಗಳು ವಿನಾಶದ ಹಾದಿ ಹಿಡಿದಿವೆ. ದಿನೇ ದಿನೇ ಅತಿ ವೇಗವಾಗಿ ಹೆಚ್ಚುತ್ತಿರುವ ದೂರಸಂಪರ್ಕ ಮತ್ತು ವಿವಿಧ ಟೆಲಿ-ಮಾಧ್ಯಮ ಸಂಪರ್ಕ ಸಾಧನಗಳು ತಮ್ಮ ವಿದ್ಯುದಯಸ್ಕಾಂತ ಕಿರಣಗಳಿಂದ ಈಗಾಗಲೇ ವಾಯು-ಶಬ್ದ ಮಾಲಿನ್ಯದಿಂದ ತುಂಬಿ ಹೋಗಿರುವ ವಾತಾವರಣವನ್ನು ಆವರಿಸುತ್ತಿವೆ. ಈ ಸಂಕೀರ್ಣ ಪರಿಸ್ಥಿತಿಯು ಜೀವಿಗಳ ಮೇಲೆ ಎಂತಹ ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ಇನ್ನೂ ಹೆಚ್ಚಿನ ವೈಜ್ಞಾನಿಕ ಸಂಶೋಧನೆ ನಡೆಯಬೇಕಾಗಿದೆ.

ವೇಗವಾಗಿ ನಡೆಯುತ್ತಿರುವ ಈ ಬದಲಾವಣೆಗಳನ್ನು ಸೈರಿಸಿಕೊಂಡು ಬಾಳುವ ಶಕ್ತಿ ಕೆಲವು ಹಕ್ಕಿಗಳಿಗಿದ್ದರೂ, ಅನೇಕ ಪಕ್ಷಿಗಳಿಗೆ ಇದು ದುಸ್ಸಾಹಸವಾಗಿ ತೋರುತ್ತದೆ. ಪರಿಸರದಲ್ಲಿ ಕನಿಷ್ಟ ಬದಲಾವಣೆಗಳಾದರೂ ಇಂತಹ ಹಕ್ಕಿಗಳ ಸಂಖ್ಯೆ ಮತ್ತು ನಡವಳಿಕೆಯಲ್ಲಿ ಗಣನೀಯ ವ್ಯತ್ಯಾಸಗಳಾಗಿ ಬಿಡುತ್ತವೆ. ಆರೋಗ್ಯಕರ ನೈಸರ್ಗಿಕ ವಾತಾವರಣದ ಸೂಚಕಗಳಾಗಿರುವ ಈ ಹಕ್ಕಿಗಳು ಪರಿಸರ ಸಂರಕ್ಷಣೆಯ ಕೀಲಿಕೈಗಳು.

ಭೂ ಆವಾಸಗಳಲ್ಲಿ ಯಾವುದೇ ಬದಲಾವಣೆಯಾದರೂ, ಅದು ಜೀವವೈವಿಧ್ಯತೆಯ ಮೇಲೆ ನೇರ ಪರಿಣಾಮ ಬೀರುವುದು ಕಂಡುಬರುತ್ತದೆ. ಹಕ್ಕಿಗಳು ಪರಿಸರ ವೈಪರೀತ್ಯಗಳಿಗೆ ಬಹು ಸೂಕ್ಷ್ಮವಾಗಿ ಸ್ಪಂದಿಸುತ್ತವೆ. ಇಂತಹ ವಾತಾವರಣದಲ್ಲಿ ವಾಸಿಸುವ ಪಕ್ಷಿಗಳ ಸಂಖ್ಯೆ ಮತ್ತು ನಡವಳಿಕೆಯ ಏರುಪೇರುಗಳ ಅಧ್ಯಯನ ಹಾಗೂ ಅರಿವು ಆ ಪರಿಸರದಲ್ಲಿ ಉಂಟಾಗಿರುವ ದುಷ್ಪರಿಣಾಮಗಳ ಆಳವನ್ನು ತೋರಿಸುತ್ತದೆ. ಪರಿಸರದ ಆರೋಗ್ಯ-ಅನಾರೋಗ್ಯಗಳಿಗೆ ಪಕ್ಷಿಗಳು ಅದ್ಭುತವಾದ ದಿಕ್ಸೂಚಿಗಳೆಂದು ವಿಜ್ಞಾನಿಗಳು ಪರಿಗಣಿಸಿದ್ದಾರೆ. ಕೊಡಗಿನಲ್ಲಿ ಇಂತಹ *ಕೀಲಿಕೈ ಪಕ್ಷಿ*ಗಳು ಬಹಳಷ್ಟು ಇವೆ. ಅವು ಯಾವುವೆಂದರೆ, ಕಾಕರಣೆ ಹಕ್ಕಿ, ಹೆಮ್ಮರಕುಟ್ಟಿಗ, ಸರಳು ಸಿಳ್ಳಾರ, ಹಾಸಮುಂಗಟ್ಟೆ, ನೀಲಗಿರಿ ಪಾರಿವಾಳ, ನೀಲಿಗಿಳಿ, ಬೂದುತಲೆ ಪಿಕಳಾರ, ಬಿಳಿಹೊಟ್ಟೆಯ ಮಟಪಕ್ಷಿ, ನೀಲಗಿರಿ ಮತ್ತು ಬಿಳಿಹೊಟ್ಟೆಯ ನೊಣಹಿಡುಕಗಳು, ಕರಿಗಿಡುಗ, ಕಪ್ಪೆಬಾಯಿ, ಹಾಗೂ ವೈನಾಡ್, ನೀಲಗಿರಿ ಮತ್ತು ಬೂದು-ಎದೆಯ ನಗೆಮಲ್ಲಗಳು.

ಪ್ರಾಕೃತಿಕ ಸಂಪತ್ತನ್ನು ಉಳಿಸಬೇಕು, ಪರಿಸರವನ್ನು ರಕ್ಷಿಸಬೇಕು ಮುಂತಾದ ಕೂಗು ಈಗ ಎಲ್ಲೆಡೆ ಕೇಳಿಬರುತ್ತಿದೆ. ಈ ದಿಶೆಯಲ್ಲಿ ಸರಕಾರ ಮತ್ತು ಅನೇಕ ಸಂಘ-ಸಂಸ್ಥೆಗಳು ಹಲವು ಹತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಅದರಲ್ಲೂ ಯುವಕ-ಯುವತಿಯರು ಹೆಚ್ಚಿನ ಕಳಕಳಿ ತೋರುತ್ತಿರುವುದು ಬಹಳ ಸಮಾಧಾನದ ವಿಷಯ. ಪಕ್ಷಿವೀಕ್ಷಣೆ ಮತ್ತು ಅವುಗಳ ಆವಾಸಗಳ ಅಧ್ಯಯನವೂ ಪ್ರಕೃತಿಯನ್ನು ವಿಸ್ತಾರವಾಗಿ-ಆಳವಾಗಿ ಅರಿಯಲು ಮಾತ್ರವಲ್ಲದೆ, ಆರೋಗ್ಯಪೂರ್ಣ ಪರಿಸರದ ಕಲ್ಪನೆ ಮತ್ತು ಜೀವವೈವಿಧ್ಯತೆಯ ವಿವಿಧ ಕೊಂಡಿಗಳ ತಿಳಿವಳಿಕೆ ಹೆಚ್ಚುವಲ್ಲಿಯೂ ಸಹಾಯ ಮಾಡುವುದು.

ಕೊಡಗು ಸಾಮಾಜಿಕ, ಸಾಂಸ್ಕೃತಿಕ, ವಾಣಿಜ್ಯ, ವಿದ್ಯೆ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಮುಂದುವರಿದ ಜಿಲ್ಲೆಯಾಗಿದೆ. ಕೊಡಗಿನ ಪಕ್ಷಿಸಂಕುಲದ ಬಗ್ಗೆ ಬರೆದಿರುವ ನನ್ನ ಚೊಚ್ಚಲ ಹೊತ್ತಗೆಯನ್ನು ಎಲ್ಲರೂ ತೆರೆದ ಹೃದಯದಿಂದ ಸ್ವೀಕರಿಸಿ, ಇದರ ಪ್ರಯೋಜನವನ್ನು ಪಡೆದು, ಪಕ್ಷಿವೀಕ್ಷಣೆ, ತನ್ಮೂಲಕ ಪರಿಸರ ಸಂರಕ್ಷಣೆಯ ದಿಕ್ಕಿನಲ್ಲಿ ಆಲೋಚಿಸುವರೆಂದು ನಂಬಿದ್ದೇನೆ. ಈ ಪುಸ್ತಕ ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು, ಯುವಜನಾಂಗವನ್ನು ಪಕ್ಷಿವೀಕ್ಷಣೆಯೆಂಬ ಹವ್ಯಾಸದಲ್ಲಿ ತೊಡಗುವಂತೆ ಪ್ರೇರೇಪಿಸಿ, ಪ್ರೋತ್ಸಾಹಿಸಿ, ಅವರು ಪ್ರಕೃತಿ ರಕ್ಷಕರೆಂಬ ಹೆಗ್ಗಳಿಕೆಗೆ ಪಾತ್ರರಾಗಲೆಂದು ಹಾರೈಸುತ್ತೇನೆ.

ಡಾ। ಎಸ್. ವಿ. ನರಸಿಂಹನ್

ವೀರಾಜಪೇಟೆ ೫೨೧ ೨೧೮

Birds of Kodagu
ಕೊಡಗಿನ ಹಕ್ಕಿಗಳು

Grebes *(Podicipedidae)*

ಗುಳುಮುಳುಕಗಳು *(ಗುಂಡ್‌ಮುಳ್‌ಕ)*

These are entirely aquatic birds with soft rudimentary tail with a round-sterned appearance; small wings; sharply pointed, compressed bill; slim neck; legs placed far back, adapted for swimming and diving; tarsi scutellated in front, laterally compressed; front toes with broad lateral vane-like lobes; hind toe small, raised; vertically lobed nails, broad and flattened; plumage dense and silky; loath to fly; rise with effort, but once airborne, can fly strongly, long distances; have the curious habit of swallowing their own feathers, to aid in digestion. Sexes similar and seasonally dimorphic. Nest consists of a mass of waterweeds with central depression or floating mound of grass and rubbish, loosely anchored to reeds. Both sexes incubate. Downy young, boldly striped black and white.

ಕಂಡೂ ಕಾಣದಂತಿರುವ ಪುಟ್ಟ ಬಾಲ, ಮೃದುವಾದ ಪುಕ್ಕಗಳಿರುವ ಚಿಕ್ಕ ನೀರುಹಕ್ಕಿಗಳು. ಚಟ್ಟೆಯಾದ ಚೂಪು ಕೊಕ್ಕು; ಸಣ್ಣ ಚೂಪಾದ ರೆಕ್ಕೆ ಮತ್ತು ಕತ್ತು; ಕಾಲುಗಳು ಬಹಳ ಹಿಂದಿದ್ದು, ಈಜಲು, ಮುಳುಗಲು ಸಹಕಾರಿ. ಜೀರ್ಣಶಕ್ತಿಯನ್ನು ಹೆಚ್ಚಿಸಲು ತನ್ನ ಗರಿಗಳನ್ನು ತಾನೇ ತಿನ್ನುವ ಹವ್ಯಾಸ; ನೀರಿನಿಂದ ಏಳಲು ಕಷ್ಟವೆನಿಸಿದರೂ, ಒಂದು ಸಾರಿ ನೀರಿನಿಂದೆದ್ದರೆ ವೇಗವಾಗಿ, ಬಹುದೂರ ಹಾರುವ ಶಕ್ತಿ. ನೀರಿನಲ್ಲಿರುವ ಹುಳ-ಹುಪ್ಪಟೆ, ಗೊದಮೊಟ್ಟೆ, ಕಪ್ಪೆ, ಇವೇ ಆಹಾರ. ನೀರ ಮೇಲೆ ತೇಲುವ ಅಥವಾ ಅಕ್ಕಪಕ್ಕದ ಜೊಂಡುಹುಲ್ಲಿಗೆ ಅಂಟಿಸಿದ ಹುಲ್ಲು-ಕಸ-ಕಡ್ಡಿಗಳ ಗೂಡು.

1. Little Grebe *(Tachybaptus ruficollis)* Dabchick R Pigeon +/- Smallest Indian waterbird, squat and tailless with short pointed bill. Breeding adults, dark brown above; white underparts; white in flight feathers; chestnut sides of head, neck and throat; dark chin, crown and hindneck. Non-breeding adults have white chin, brown crown, hindneck; rufous front. Singly or small scattered group, diving and swimming beneath surface of water in rain-filled ponds and jheels; swim buoyantly, vanishes under water at trivial intrusion. **Voice**: distinct, highly shrill, trilling notes; occasional tinny *whit..whit*. **Food**: aquatic insects, larvae, frogs, tadpoles, crustaceans procured mostly by diving. **Nesting**: April-October. **Eggs**: 3-5, white.

ಗುಳುಮುಳುಕ *(ಗುಂಡ್‌ಮುಳ್‌ಕ)* 23 ಸೆಂಮೀ. ಭಾರತದ ಅತಿಚಿಕ್ಕ ನೀರುಹಕ್ಕಿ. ಋತುಮಾನದೊಂದಿಗೆ ರೆಕ್ಕೆಯ ಬಣ್ಣವೂ ಬದಲು. ಸಂತಾನಋತುವಿನಲ್ಲಿ, ತಲೆಯ ಹಿಂಭಾಗ, ಗಂಟಲು, ಕಪ್ಪು; ಗಾಢ ಚಾಕೊಲೇಟ್ ಬಣ್ಣದ ಎದೆಪಕ್ಕಗಳು; ಕೆಳಹೊಟ್ಟೆ ಬಿಳಿ; ಬೆನ್ನು ಗಾಢಗಂದು; ರೆಕ್ಕೆಯಲ್ಲಿ ಹಾರುವಾಗ ಬಿಳಿ; ಬಾಲವೇ ಇಲ್ಲವೇನೋ ಎಂಬಂತೆ ಕಾಣುವ ಪೃಷ್ಠ. ಸಂಶಯ ಬಂದಾಗ ತಟ್ಟನೆ ನೀರಿನಲ್ಲಿ ಮುಳುಗಿ ಮಾಯವಾಗಿ, ಒಂದಷ್ಟು ದೂರದಲ್ಲಿ ತಲೆಯೆತ್ತುತ್ತದೆ! ತೀಕ್ಷ್ಣ ಸ್ವರದ ಅದಿರು ದನಿ. ನೀರಿನಲ್ಲಿ ಮುಳುಗಿ ಹಿಡಿದ ಪುಟ್ಟ ಜಲಚರಗಳೇ ಆಹಾರ.

Cormorants and Shags *(Phalacrocoracidae)*

ನೀರುಕಾಗೆಗಳು *(ನೀರ್‌ಕಾಕೆ)*

They are large, black, gregarious, fish eating, and colonial nesting divers. Their bill is laterally compressed, long, slender and pointed, with a hooked tip; rather scaly feathers with metallic sheen on upperparts; neck and body long, spindle shaped; tail wedge-shaped, long and stiff; legs short and set far back; feet large and webbed; claws curved; plumage lacks oil glands, so becomes soaked in water, needing frequent drying out; drenched birds rise off water with some difficulty, but flight is strong, direct and sustained with powerful wingbeats and neck stretched out, flocks often flying in V formation or diagonal lines. Sexes alike. Feed primarily on fish caught by diving. Sometimes a flock of Cormorants form a team and drive the fish into a shallow corner and then seize and devour them. Nest consists of stick platform, lined with waterweeds in trees, rarely on rocks, in mixed colonies near the water. Both sexes share domestic duties; young nidicolous, naked at hatching and ugly.

ಗುಂಪಾಗಿ ವಾಸಿಸುವ, ದೊಡ್ಡ ಕಪ್ಪು ನೀರುಹಕ್ಕಿಗಳು. ಮತ್ಸ್ಯಪ್ರಿಯರು. ಉದ್ದವಾದ, ಚೂಪಾದ ಕೊಕ್ಕೆಕೊಕ್ಕು; ನೀಳವಾದ ಕತ್ತು, ದೇಹ; ಉದ್ದಾನಾದ ಬೆಣೆಯಂತಿರುವ ಬಾಲ; ಜಾಲಪಾದವಿರುವ ಕಾಲುಗಳು. ಕತ್ತನ್ನು ನೀಡಿಕೊಂಡು ಶಕ್ತಿಶಾಲಿ ಹಾರಾಟ. ಉತ್ತಮ ಈಜುಗಾರ ಕೂಡ. ಆದರೆ, ರೆಕ್ಕೆಯ ಬುಡಗಳಲ್ಲಿ ತೈಲಗ್ರಂಥಿಗಳಿಲ್ಲವಾದ್ದರಿಂದ, ನೀರಿನಿಂದ ಹೊರಗೆದ್ದರೆ, ಮೈಯೆಲ್ಲ ಒದ್ದೆಯಾಗಿ ಭಾರವಾಗುತ್ತದೆ. ಹಾಗಾಗಿ, ಆಗಾಗ ಈ ಹಕ್ಕಿಗಳು ಬಂಡೆಯ ಮೇಲೋ, ಮರದ ಮೇಲೋ ಕುಳಿತು ರೆಕ್ಕೆಯನ್ನಗಲಿಸಿ ಒಣಗಿಸಿಕೊಳ್ಳುವುದನ್ನು ಕಾಣಬಹುದು. ಸಾಮುದಾಯಿಕವಾಗಿ ಇತರ ನೀರುಹಕ್ಕಿಗಳೊಂದಿಗೆ, ಮರದ ಮೇಲೆ, ಬಂಡೆಗಳ ಮೇಲೆ ಒಣಕಡ್ಡಿ–ಜೊಂಡಿನಿಂದ ಕಟ್ಟಿದ ಅಟ್ಟಣಿಗೆ ಗೂಡುಗಳು.

2. Great Cormorant *(Phalacrocorax carbo)* Large Cormorant R Duck+ Plumage colouration varies with the age of bird. Breeding adult is rather drab and toneless black with metallic blue-green sheen; white cheek and throat; bright yellow gular pouch; large white thigh patches; silky white plumes on head and neck. Non-breeding adult lacks white thigh patches and a less bright gular patch. Young ones are dull brown above, white below. **Voice**: rare deep guttural calls, otherwise silent. **Nesting**: November-February. **Eggs**: 4-5, pale, chalky bluish green.

ದೊಡ್ಡ ನೀರುಕಾಗೆ *(ಬಲ್ಯ ನೀರ್‌ಕಾಕೆ)* 80 ಸೆಂಮೀ. ವಯಸ್ಸಾದ ಹಾಗೆ ದೇಹದ ಬಣ್ಣವೂ ಬದಲು. ಸಂತಾನಋತುವಿನಲ್ಲಿ, ಮೈಬಣ್ಣ, ಕಪ್ಪನೆಯ ಹೊಳೆಯುವ ನೀಲಿ–ಹಸಿರು; ಬಿಳಿ ಕೆನ್ನೆ, ಗಂಟಲು, ತೊಡೆ; ಅಚ್ಚ ಹಳದಿ ಗಂಟಲು ಮಚ್ಚೆ. ನೇರವಾದ, ವೇಗದ ಹಾರಾಟ.

3. Little Cormorant *(Phalacrocorax niger)* R Crow+ Commonest cormorant rather shabbily dressed, with shorter, thicker neck and head; no gular patch. Breeding adult has black plumage with bluish green sheen; silky white patch on throat; silvery grey

on upper back and wing coverts, speckled with black; long and stiff tail, acting as a rudder inside water. Non-breeding adult has white chin and upper throat. Habits, voice, nesting and eggs similar to 2.

ಪುಟ್ಟ ನೀರುಕಾಗೆ ***(ಚೆರಿಯ ನೀರ್‌ಕಾಕೆ)*** 51 ಸೆಂಮೀ. ಸಾಮಾನ್ಯವಾಗಿ ಕಾಣುವ ನೀರುಕಾಗೆ. ನೋಡಲು ೨ರಂತೆ ಕೊಳಕು ಕಪ್ಪು ಹಕ್ಕಿ; ತುದಿಯಲ್ಲಿ ಕೊಕ್ಕೆಯಂತಿರುವ ತಿಳಿಬೂದು ಕೊಕ್ಕು; ಉಳಿದವಕ್ಕಿಂತ ಚಿಕ್ಕದಾದ ಕೊಂಕು ಕತ್ತು, ಹಳದಿ ಮಚ್ಚೆಯಿಲ್ಲ; ಆದರೆ ಬಿಳಿ ಗಂಟಲು; ಕಪ್ಪು ಜಾಲಪಾದ. ನೀರಿನಲ್ಲಿ ಈಜಾಡಲು ಹುಟ್ಟುಗೋಲಿನಂತಿರುವ ಪೆಡಸಾದ ಬಾಲ. ಉಳಿದೆಲ್ಲ ೨ರಂತೆ.

4. Indian Shag *(Phalacrocorax fuscicollis)* R Duck+ Intermediate between 2 and 3, often associated with and confused with the cormorants. Breeding adult has iridescent bronze-brown upperparts; white speckles on head, neck and tuft behind eyes; glossy black below. Non-breeding adult lacks glossy plumage, but has white speckled throat and yellow gular patch. Gregarious; basks with open wings and tail. Other habits, nesting and eggs, similar to 2.

ಉದ್ದಕೊಕ್ಕಿನ ನೀರುಕಾಗೆ ***(ಮೀನ್‌ಕಾಕೆ)*** 63 ಸೆಂಮೀ. ೨ ಮತ್ತು ೩ರ ಜೊತೆ–ಜೊತೆಯಲ್ಲಿಯೇ ಇರುವುದರಿಂದ ಗೊತ್ತುಹಿಡಿಯಲು ಕಷ್ಟ. ಆದರೆ ಅವಕ್ಕಿಂತ ತೆಳುವಾದ, ಉದ್ದವಾದ ಕೊಕ್ಕು; ತಲೆ ಮತ್ತು ಕಣ್ಣಿನ ಹಿಂಬದಿಯಲ್ಲಿ ಬಿಳಿ ಮಚ್ಚೆಗಳನ್ನು ಬಿಟ್ಟರೆ, ಬಾಕಿ ದೇಹವೆಲ್ಲ ಹೊಳೆಯುವ ಕಪ್ಪು ಬಣ್ಣ; ಸಂಘಜೀವಿ. ಉಳಿದೆಲ್ಲ ೨ರಂತೆ.

Darters *(Anhingidae)*

ಹಾವಕ್ಕಿಗಳು *(ಪಾಂಬಕ್ಕಿ)*

5. Darter *(Anhinga melanogaster)* Snake Bird R Duck+ An excellent swimmer with a long snake like neck and pointed bill. Adult has a bulky body, black above, streaked and mottled with silver grey on back and wings; velvety brown head and neck; white chin and throat; white stripes along the upper neck; black underparts; strongly graduated, paddle like tail. Young one is brown with brown and silvery streaks on mantle. The whole body is highly specialised for following and capturing fish under water. Usually solitary, found near a waterbody with strongly upright stance owing to legs being far back positioned. Aptly called a 'snakebird', because its head and sinuous neck above the surface of water give the appearance of a snake. The special contrivance in the neck bones enables the bird to shoot out its neck like a powerful spring at the quarry; tosses the fish into air and swallows the catch headfirst; basks on tree trunks and rocks to dry up its wings; when disturbed, it typically 'drops' into water from an overhanging branch, as if shot, and surfaces again at a safer distance. Flight powerful, neck outstretched, with a series of rapid wingbeats followed by a short glide. **Voice:** harsh, rattling and grunting calls at nest, otherwise silent. **Food**: mainly fish speared with bill. **Nesting**: November-February; They are monogamous, their nest similar to

those of cormorants, built in a mixed heronry, near water and a food source. **Eggs**: 3-4, elongated, pale greenish blue.

ಹಾವಕ್ಕಿ *(ಪಾಂಬಕ್ಕಿ)* 90 ಸೆಂಮೀ. ಹಾವಿನಂತಹ ಕತ್ತು, ನೀರೊಳಗೆ ಈಜುವಾಗ, ಆಗಾಗ ತಲೆಯೆತ್ತಿ ಆಚೆ-ಈಚೆ ತಿರುಗಿ ನೋಡುವಾಗ ಹಾವಿನಂತೆ ಕಾಣುವುದು. ಕಪ್ಪುದೇಹದಲ್ಲಿ, ಬೆನ್ನು, ರೆಕ್ಕೆಗಳ ಮೇಲೆ ಹೊಳೆಯುವ ಬೆಳ್ಳಿ ಗೀರುಗಳು. ಅಚ್ಚ ಬಿಳಿಗಲ್ಲ; ಮೊನಚಾದ ಕಠಾರಿ ಕೊಕ್ಕು; ನೀರಿನೊಳಗಿರುವ ಬೇಟೆಯತ್ತ, ಸ್ಪ್ರಿಂಗ್‌ನಂತೆ ಗುರಿಯಿಟ್ಟು ಹೊಡೆಯುವುದರಲ್ಲಿ ಕತ್ತಿನ ಮೂಳೆ-ಸ್ನಾಯುಗಳು ಸಹಕಾರಿ. ರೆಕ್ಕೆಯ ಬುಡದಲ್ಲಿ ತೈಲಗ್ರಂಥಿಗಳಿಲ್ಲವಾದ್ದರಿಂದ, ರೆಕ್ಕೆಗಳನ್ನು ಹರಡಿ ಒಣಗಿಸಿಕೊಳ್ಳಬೇಕು. ಮರದ ಮೇಲೆ ಅಡ್ಡ ಕೊಂಬೆಗಳ ಮೇಲೆ ಬೇಟೆಯನ್ನರಸುತ್ತ ಕುಳಿತಿರುವಾಗ, ಸ್ವಲ್ಪ ಅನುಮಾನವೇರ್ಪಟ್ಟರೂ, ಯಾರೋ ಗುಂಡಿಟ್ಟ ಹಾಗೆ ಧೊಪ್ಪನೆ ನೀರಿನಲ್ಲಿ ಬಿದ್ದು, ಒಂದಷ್ಟು ದೂರ ಹೋಗಿ ತಲೆಯೆತ್ತುತ್ತದೆ. ಕತ್ತು ನೀಡಿಕೊಂಡು ಶಕ್ತಿಯುತ ಹಾರಾಟ. ಭರ್ಜಿಯಂತಹ ಕೊಕ್ಕಿನಿಂದ ಹಿಡಿದ ಮೀನುಗಳೆ ಮುಖ್ಯ ಆಹಾರ. ಒರಟಾಗಿ ರಟರಟಿಸುತ್ತಾ ಗೊಣಗುವುದು ಬಿಟ್ಟರೆ ಉಳಿದ ಸಮಯ ನಿಶ್ಶಬ್ದ. ಇತರ ನೀರುಹಕ್ಕಿಗಳೊಂದಿಗೆ ವಾಸ; ಅವುಗಳಂತೆಯೇ ಗೂಡು.

Herons, Egrets and Bitterns *(Ardeidae)*

ಬಕ, ಬೆಳ್ಳಕ್ಕಿ ಮತ್ತು ಗುಪ್ಪಿಗಳು *(ಪೋಳೆ, ಬೊಪ್ಪೋಳೆ, ಕೊಳ್ಕ)*

These are lanky, short-tailed wading birds that have a long, slender, retractile and flexible neck; long, straight, sharp, pointed and dagger-like bill; long legs; tarsi very long; toes long and slender with a web between middle and outer toes; claw of middle toe pectinate. Plumage soft and loose-textured. Wings long and broad with rounded tips. A curious powder-down patch on either sides of the rump and breast; many species have an ornamental filamentous plume on head, back or chest during breeding season. Sexes alike. Seen grazing in groups near marshes, fresh waterbodies, reed-covered lakes, riversides where there is dense growth and in damp paddyfields. Food consists mainly of fish, amphibians, crustaceans, insects and also small mammals, birds, reptiles. All but Bitterns are colonial breeders usually in mixed heronries. Nest consists of shallow platform of sticks on trees. Both parents share domestic duties. Eggs, 3-8; young nidicolous.

ಗುಂಪಾಗಿ ವಾಸಿಸುವ, ಆಹಾರಕ್ಕೆ ಜಲಚರಗಳನ್ನೇ ನಂಬಿಕೊಂಡಿರುವ ಹಕ್ಕಿಗಳು. ಸಾಮಾನ್ಯವಾಗಿ ಗದ್ದೆ, ಕೆರೆ-ಕಾಲುವೆ, ಜೊಂಡು-ಕೆಸರು ಇರುವೆಡೆಗಳಲ್ಲಿ ಕಾಣಬಹುದು. ಸಪೂರ, ಉದ್ದವಾದ, ಒಳಗೆಳೆದುಕೊಳ್ಳಬಲ್ಲಂತಹ ಕತ್ತು; ಉದ್ದವಾದ, ಖಡ್ಗದಂತೆ ಚೂಪಾದ ಕೊಕ್ಕು; ಉದ್ದನಾದ, ಜಾಲಪಾದವುಳ್ಳ ಕಾಲು. ಸಂತಾನಋತುವಿನಲ್ಲಿ, ತಲೆ ಮತ್ತು ಬೆನ್ನ ಮೇಲೆ ಅಲಂಕಾರಿಕ ಗರಿಗಳು. ನೀರಿರುವೆಡೆ, ಮರದ ಮೇಲೆ, ವಿವಿಧ ಪ್ರಭೇದಗಳು ಒಟ್ಟಿಗೆ ಸೇರಿ, ಕಡ್ಡಿಗಳಿಂದ ತಯಾರಾದ ಅಟ್ಟಣಿಗೆ ಗೂಡುಗಳ ಕಾಲೊನಿ.

6. Indian Pond-Heron *(Ardeola grayii)* Paddybird R Hen Commonest heron. Earthy brown above; grey head, neck, and breast, longitudinally striated brown; dull grey

legs; beak bluish at base, yellowish in middle and black tip; though seem to be camouflaged when settled, the bird is at once visible, no sooner than it springs with a flash of white wings, tail and rump; brown hair-like plumage on back and long white occipital crest during breeding. Singly or loose party at jheels, pond edges and paddyfields. Stands hunched up at the water edge, watching patiently for the prey, often with bait in beak. Flight, with steady wing beats, neck folded back and head drawn in; long legs trailing behind. **Voice:** harsh, croaking *kraw. kraw..* especially when flying; also squeaks and chatter at the nesting colony. **Nesting**: May-September. **Eggs**: 3-5, pale greenish blue.

ಕೊಳದ ಬಕ *(ಪೋಳೆ)* 46 ಸೆಂಮೀ. ಅತಿ ಸಾಮಾನ್ಯವಾದ ಬಕ. ಬೆನ್ನು ಬೂದುಗಂದು, ಕಂದು ಉದ್ದ–ಗೀರುಗಳು; ಕಪ್ಪು ತುದಿಯುಳ್ಳ ಹಳದಿ ಕೊಕ್ಕು; ಬೇಟೆಯರಸುತ್ತಿರುವಾಗ, ಮರೆಮಾಚುವ ಮೈಬಣ್ಣದಿಂದಾಗಿ ಕಾಣುವುದೇ ಇಲ್ಲ; ಆದರೆ, ಹಾರಲು ಮೇಲೆದ್ದೊಡನೆ, ಅಚ್ಚಬಿಳಿ ರೆಕ್ಕೆಗಳು! ಕೊಳ, ಕೆರೆ, ಗದ್ದೆ ಮುಂತಾದ ಪ್ರದೇಶಗಳಲ್ಲಿ ಒಂಟಿಯಾಗಿ, ತದೇಕಚಿತ್ತದಿಂದ ಬೇಟೆಯರಸುವುದನ್ನು ಕಾಣಬಹುದು. ಹಾರುವಾಗ ಕತ್ತನ್ನು ಒಳಗೆಳೆದುಕೊಂಡು, ಕಾಲುಗಳನ್ನು ಹಿಂದಕ್ಕೆ ಚಾಚುತ್ತದೆ.

7. Purple Heron *(Ardea purpurea)* R Hen Similar to 6. Bluish grey above; black crown with long drooping crest; rufous head, neck with black stripe along the length; white chin, throat; deep slaty and chestnut below breast; black on wings and tail. Female has less developed crest and breast plumes. Shy bird, seen singly; crepuscular. Flight, with outstretched neck. **Voice**: harsh, high pitched, long *kaark. kaark,* uttered in flight. **Nesting**: July-September. **Eggs**: 3-5, aquamarine green.

ಕೆನ್ನೀಲಿ ಬಕ *(ನೇರ್ಳೆ ಪೋಳೆ)* 97 ಸೆಂಮೀ. ಬೂದು–ನೀಲಿ ಮೈ; ಹಳದಿ ಕೊಕ್ಕು; ಕಪ್ಪು ನೆತ್ತಿಗೆ ನೀಳ ಜುಟ್ಟು; ಕಂದು ಕತ್ತಿನಲ್ಲಿ ಬಿಳಿ ಗಲ್ಲ, ಎದೆ. ಒಂಟಿಯಾಗಿ ಇತರ ಜಾತಿಯ ನೀರುಹಕ್ಕಿಗಳೊಂದಿಗೆ ಕಾಣಬಹುದು. ಬಹು ಸಂಕೋಚ ಸ್ವಭಾವ. ಹಾರುವಾಗ ಕತ್ತು ನೀಡಿ ಹಾರುವುದು.

8. Little Green Heron *(Butorides striatus)* R Pond Heron+/- Slaty grey above with a glossy green tinge; greenish black forehead, crown and long occipital crest; white chin and throat; glossy green, grey-white in wings. Solitary, shy and sluggish; crepuscular and nocturnal, seen patiently waiting near water. **Voice**: *tewn..tewn* call, otherwise silent. **Nesting**: March-August, nest made of rough stick platform in small tree near water, not in colonies. **Eggs**: 3-5, pale greenish blue.

ಹಸಿರುಗಪ್ಪು ಬಕ *(ಪಚ್ಚೆ ಪೋಳೆ)* 46 ಸೆಂಮೀ. ಗಾಢ ಹಸಿರುಗಪ್ಪು ತಲೆ ಮತ್ತು ಜುಟ್ಟು; ಬಿಳಿ ಗಂಟಲು, ಎದೆ; ಹಸಿರು ಮಿಶ್ರಿತ ಬೂದು ಬೆನ್ನು. ಹೆಚ್ಚಾಗಿ ನೆರಳು–ನೀರಿರುವೆಡೆ ವಾಸ. ಒಂಟಿಯಾಗಿ ಸಂಜೆಯ ನಂತರ ಹೊರಬಂದು ನಿರ್ಜನವಾದ ಜೌಗು ಪ್ರದೇಶಗಳಲ್ಲಿ, ತಾಳ್ಮೆಯಿಂದ ಬೇಟೆಗೆ ಕಾಯುವುದು. *ಟ್ಯೂಂ..ಟ್ಯೂಂ..* ಕೂಗು. ಗೂಡನ್ನು ಕೂಡ ಉಳಿದ ಹಕ್ಕಿಗಳಿಂದ ದೂರವಾಗಿ, ಒಂಟಿಯಾಗಿ ಕಟ್ಟುವುದು.

9. Grey Heron *(Ardea cinerea)* R Vulture+ Ashy grey above; white crown, neck and underparts; black stripe through eyes, continuous back into long black crest; black dotted line down middle of foreneck; bluish black flying feathers; long neck and legs; bill mainly yellow. Solitary, crepuscular, stands hunched up, alert, near water waiting patiently for a frog or fish to come near striking range. Flight steady, typical heron

style. **Voice**: abrupt, harsh and loud *krahnk* uttered in flight. **Nesting**: November-March; nests among mixed heronries, on tall trees. **Eggs**: 3-6, deep aquamarine green.

ಬೂದು ಬಕ *(ಬೂದ್ ಪೋಳೆ)* 97 ಸೆಂಮೀ. ನೋಡಲು ೭ರಂತಿದ್ದರೂ ಗಾತ್ರದಲ್ಲಿ ಅದಕ್ಕಿಂತ ದೊಡ್ಡದು; ಬೂದು ಮೈ, ಕಪ್ಪು ಕಣ್ಣುಪಟ್ಟಿ, ನೆತ್ತಿ ಮತ್ತು ಜುಟ್ಟು; ಕತ್ತಿನ ಮುಂಭಾಗದಲ್ಲಿ ಕಪ್ಪು ಚುಕ್ಕೆಗಳು; ಭರ್ಜಿಯಂತಹ ಬಲಿಷ್ಠ ಹಳದಿ ಕೊಕ್ಕು; ಹಳದಿ ಕಾಲುಗಳು; ಮೊಂಡಾದ ಬೂದು ಬಾಲ. ಪ್ರಜನನ ಕಾಲದಲ್ಲಿ ನೆತ್ತಿಯ ಮೇಲೆ ಎರಡು ನೀಳ ಬಿಳಿ ಗರಿಗಳು ಮೂಡುತ್ತವೆ. ನೀರು-ಜೌಗು ಪ್ರದೇಶಗಳಲ್ಲಿ, ಒಂಟಿಯಾಗಿ ಕಾಣಬಹುದು. ಮುಂಜಾನೆಯ ವೇಳೆ ಬೇಟೆ; ಉಳಿದ ಸಮಯ ಮರದ ಮೇಲೆ ನೆರಳಿನಲ್ಲಿ ವಿಶ್ರಾಂತಿ. ಕತ್ತು ಮಡಿಸಿಕೊಂಡು, ನಿಧಾನವಾಗಿ ರೆಕ್ಕೆ ಬಡಿದುಕೊಂಡು ಹಾರಾಟ; ಹಾರುವಾಗ ಒರಟಾದ *ಕ್ರಾಂಕ್* ಕೂಗು. ಉಳಿದೆಲ್ಲ ೭ರಂತೆ.

10. Black-crowned Night-Heron *(Nycticorax nicticorax)* Night Heron R Hen+ Heavy but small built; black head, long drooping occipital crest and back; white forehead with eye streak; red iris; grey sides of neck, wings, rump and tail; white underparts. Young ones have brown streaks. Secretive, nocturnal, come out after dusk in small parties, feed until dawn. **Voice**: harsh, raucous *quark..* in flight. **Nesting**: December-February. **Eggs**: 4-5, pale aquamarine green.

ಇರುಳು ಬಕ *(ಕರ್ತ ಪೋಳೆ)* 58 ಸೆಂಮೀ. ಬೂದು-ಕಪ್ಪು ಬಣ್ಣದ ಮೈ; ಕಪ್ಪು ನೆತ್ತಿ, ಜುಟ್ಟು; ಬಿಳಿ ಕೆನ್ನೆ, ಹಣೆ, ಗಂಟಲು, ಎದೆ ಮತ್ತು ಕೆಳಮೈ. ಬೂದು ರೆಕ್ಕೆಗಳು ಮತ್ತು ಬಾಲ. ಹಗಲೆಲ್ಲ ಮರ-ಪೊದೆಗಳಲ್ಲಿ ಗಮ್ಮನಿದ್ದು, ಸಂಜೆಯ ನಂತರ ಹಿನ್ನೀರು, ಕೆರೆ-ಕಟ್ಟೆಗಳಲ್ಲಿ ಬೇಟೆ. ಕರ್ಕಶ *ಕ್ವಾರ್ಕ್..* ಕೂಗು.

11. Little Egret *(Egretta garzetta)* R Hen Slender snow-white waterbird with black bill; black legs and yellow feet; nuchal crest of two long plumes and ornamental 'aigrettes' on either sides of back and breast during breeding season. Small flocks near water. Food and habits similar to 6. **Voice**: occasional croaking *kgarrk.* especially when flushed. **Nesting**: May-September; nests among mixed heronries on trees. **Eggs**: 4, pale bluish green.

ಸಣ್ಣ ಬೆಳ್ಳಕ್ಕಿ *(ಚೆರಿಯ ಬೊಪ್ಪೋಳೆ)* 63 ಸೆಂಮೀ. ಸಂತಾನಋತುವಿನಲ್ಲಿ ಬಿಳಿ ನವಿಲಿನಂತೆ ಮನಮೋಹಕ ನರ್ತನ; ಆಗ ಅದರ ತಲೆಯ ಮೇಲೆ ಬೆಳೆಯುವ ಎರಡು ವಿಶೇಷ ಗರಿಗಳನ್ನು ತೊಪ್ಪಿಗೆಯ ಮೇಲೆ ಧರಿಸಿ ಮೆರೆಯುವ ಫ್ಯಾಷನ್ ಈಗಿಲ್ಲವಾದ್ದರಿಂದ, ಈ ಹಕ್ಕಿಗಳ ಸಂತತಿ ಇನ್ನೂ ಉಳಿದಿದೆ. ಅಚ್ಚ ಬಿಳಿ ಹಕ್ಕಿ; ಕಪ್ಪು ಕೊಕ್ಕು ಮತ್ತು ಕಾಲುಗಳು; ಹಳದಿ ಕಾಲ್ಬೆರಳುಗಳು. ನದಿ, ಕೊಳ, ಗದ್ದೆ ಮತ್ತು ಜೌಗು ಪ್ರದೇಶಗಳಲ್ಲಿ ವಾಸ. ಕಪ್ಪೆಯಂತೆ *ಗ್ಗರ್ಕ್.* ಕೂಗು. ಉಳಿದೆಲ್ಲ ೭ರಂತೆ.

12. Median Egret *(Mesophoyx intermedia)* Smaller Egret R Hen+ Thin, snow-white egret, intermediate between 11 and 13; larger head and stockier neck than 13; black bill, legs and feet; filamentous plumes develop both on back and breast. Rest same as 11.

ಮಧ್ಯಮ ಬೆಳ್ಳಕ್ಕಿ *(ಬೊಪ್ಪೋಳೆ)* 80 ಸೆಂಮೀ. ೧೧ ಮತ್ತು ೧೩ರ ನಡುವಿನ ಆಕಾರ. ಅಚ್ಚ ಬಿಳಿ ಬಣ್ಣದ ದೇಹ; ಕಪ್ಪು ಕೊಕ್ಕು, ಕಾಲು ಮತ್ತು ಕಾಲ್ಬೆರಳುಗಳು. ಉಳಿದೆಲ್ಲ ೧೧ರಂತೆ.

13. Large Egret *(Casmerodius albus)* R Vulture- Snow-white marsh bird; yellow or black-yellow beak with pale blue at the base and black legs; during breeding, the beak loses yellow; aigrettes and plumes develop on crest. Solitary, sometimes 3-4, along with other species, waiting silently for prey. Prefers deep waters. Rest similar to 11.

ದೊಡ್ಡ ಬೆಳ್ಳಕ್ಕಿ *(ಬಲ್ಯ ಬೊಪ್ಪೋಳಿ)* 91 ಸೆಂಮೀ. ಅಚ್ಚ ಬಿಳಿ ದೇಹಕ್ಕೆ ಕಪ್ಪು ಕಾಲು; ಕಪ್ಪು–ಹಳದಿ ಕೊಕ್ಕು; ಕಣ್ಣಿನ ಮುಂಭಾಗ ತಿಳಿನೀಲಿ. ನದಿ, ಕೊಳ ಮತ್ತು ಜೌಗು ಪ್ರದೇಶಗಳಲ್ಲಿ ಒಂಟಿಯಾಗಿ ಬೇಟೆಯಾಡುತ್ತಿರುವಾಗ ಉಳಿದೆಲ್ಲ ಬೆಳ್ಳಕ್ಕಿಗಳಿಗಿಂತ ಎತ್ತರದ ನಿಲುವು; ತನ್ನ ಸರಹದ್ದನ್ನು ಕಾಯ್ದುಕೊಳ್ಳಲು ಕೊಕ್ಕೇ ಆಯುಧ. ಉಳಿದದ್ದು ೧೧ರಂತೆ.

14. Cattle Egret *(Bubulcus ibis)* R Hen Snow-white bird same as 11, but with yellow beak; buffy-orange plumes on head, neck and back during breeding. Singly seen on and around cattle, feeding on insects disturbed by the animals and around garbage heaps. Dormitory roosting; look like white blobs on a tree on a moonlit night. **Food**: insects like grasshoppers, cicadas, frogs, lizards, fish etc., and figs. **Voice**: mostly silent with occasional croaking *ruk* during breeding. Rest similar to 11.

ಗೋವಕ್ಕಿ *(ಉಣ್ಣೆ ಪೋಳಿ)* 51 ಸೆಂಮೀ. ಎಲ್ಲವೂ ೧೧ರಂತಿದ್ದರೂ, ಕೊಕ್ಕು ಮಾತ್ರ ಹಳದಿ; ಸಂತಾನ ಋತುವಿನಲ್ಲಿ ತಲೆ, ಕತ್ತು, ಬೆನ್ನು ಹೊಂಬಣ್ಣಕ್ಕೆ ತಿರುಗುತ್ತವೆ. ಮೈದಾನದ ಪ್ರದೇಶ, ಕೃಷಿಭೂಮಿ ಮತ್ತು ನೀರಿನ ಬದಿಗಳಲ್ಲಿ ಮೇಯುತ್ತಿರುವ ಹಸು, ಎಮ್ಮೆಗಳ ಮೈಮೇಲೆ, ಉಳುತ್ತಿರುವ ನೇಗಿಲ ಹಿಂದೆ, ಗೊಬ್ಬರದ ಸುತ್ತ, ಹುಳು–ಹುಪ್ಪಟೆ, ಕೀಟ, ಮಿಡತೆಗಳನ್ನು ಬೇಟೆಯಾಡುತ್ತವೆ. ನೂರಾರು ಹಕ್ಕಿಗಳು ಒಟ್ಟಿಗೆ ಒಂದೇ ಮರದ ಮೇಲೆ ವಿಶ್ರಾಂತಿ ಪಡೆಯುತ್ತವೆ; ತಿಂಗಳ ಬೆಳಕಿನಲ್ಲಿ ಇದು ನಕ್ಷತ್ರ ಸಮೂಹದಂತೆ ಕಾಣುತ್ತದೆ!

15. Black Bittern *(Dupetor flavicollis)* R Pond Heron+ Black crown, nape, upperparts, lower abdomen and wings; buff-white cheek; bright ochre-yellow band on either side of neck; yellow breast and upper abdomen, with dark vertical streaks. Female has a brownish tinge. Solitary, crepuscular and nocturnal, affecting seepage nullahs in jungles; freezes when startled, stands motionless, neck stretched up, bill pointing skyward to resemble dead reeds, while its eyes stare straight ahead toward danger. **Voice**: a booming call during breeding. **Nesting**: June-September; nest also in bamboo clumps. **Eggs**: 4, blue or green with white ring.

ಕರಿ ಗುಪ್ಪಿ *(ಕರ್ತ ಕೊಳ್ಕ)* 58 ಸೆಂಮೀ. ಹಳದಿ ಕೊಕ್ಕು, ಗಂಟಲು, ಕೆನ್ನೆ, ಎದೆ ಬಿಟ್ಟರೆ, ಬಾಕಿ ಮೈ ಅಚ್ಚಗಪ್ಪು; ಕೆಂಗಂದು ಎದೆಯ ಮೇಲೆ ಲಂಬಾಕಾರದ ಕಪ್ಪು ಗೀರುಗಳು. ನಾಚಿಕೆ ಸ್ವಭಾವ; ಸಂಜೆಯ ನಂತರ ಬೇಟೆ. ಗಾಬರಿಯಾದಾಗ, ನೇರವಾಗಿ ಕತ್ತೆತ್ತಿ, ಕೊಕ್ಕನ್ನು ಆಕಾಶದೆಡೆಗೆ ಚಾಚಿ, ಗಪ್ಪನೆ ನಿಂತುಬಿಡುತ್ತದೆ.

16. Chestnut Bittern *(Ixobrychus cinnamomeus)* R Hen- Dark cinnamon-rufous above; chestnut wings; paler underside; white chin, throat, fading into dull chestnut below; dark median stripe down the foreneck. Female, darker than male, with dark brown streaks on the pale rufous underparts. Younger ones have mottled upper body and heavy streaks below. Solitary, secretive, seen around reed marshes, typical 'on guard' attitude, when startled. **Nesting**: July-September. **Eggs**: 4-5, white.

ಕೆಂಗಂದು ಗುಪ್ಪಿ *(ಚೋಮ ಕೊಳ್ಕ)* 38 ಸೆಂಮೀ. ಕಡುಗಂದು ಬಣ್ಣದ ಮೇಲ್ಮೈ; ಬಿಳಿ ಗಲ್ಲ; ಕತ್ತಿನ ಮಧ್ಯೆ ಉದ್ದವಾದ ಕಪ್ಪು ಗೀರು; ಕಂದು ಕೆಳಮೈ. ೧೫ರಂತೆ, ನಾಚಿಕೆ ಮತ್ತು ಗಪ್ಪನೆ ನಿಲ್ಲುವ ಸ್ವಭಾವ. ಒಂಟಿಯಾಗಿ ಬೇಟೆ.

17. Yellow Bittern *(Ixobrychus sinensis)* R Hen- Smallest of herons; yellowish fawn body contrasting with black wings in flight diagnostic; black cap; light yellow on midline from chin to lower abdomen; rufous and chestnut upperparts. Crepuscular, also active during day; 'on guard' when startled. **Nesting**: June-September. **Eggs**: 4-6, pale greenish blue.

ಹಳದಿ ಗುಪ್ಪಿ ***(ಮಂಜ ಕೊಳ್ಕ)*** 38 ಸೆಂಮೀ. ಹಳದಿ ಮಿಶ್ರಿತ ಕಂದು ಮೈ; ಹಾರುವಾಗ ಎದ್ದು ಕಾಣುವ ಕರಿ ರೆಕ್ಕೆಗಳು; ಕಪ್ಪು ನೆತ್ತಿ. ಸ್ವಭಾವ ಮತ್ತು ಉಳಿದೆಲ್ಲ ೧೫ರಂತೆ.

18. Malayan Night-Heron *(Gorsachius melanolophus)* Tiger Bittern R Hen+ Black crown and nuchal crest; dark chestnut back, closely barred with black; white tips on primaries and secondaries; black tail; rufous breast and abdomen; pale white mid-underparts, streaked, blotched and spotted with black. Solitary, seen in heavy rained areas; nocturnal and shy. **Voice**: mostly silent, except hiss and croaks of incubating birds. **Nesting**: May-August; nest in trees overhanging stream. **Eggs**: 3-5, bluish white.

ಹುಲಿ ಬಕ ***(ನರಿ ಕೊಳ್ಕ)*** 51 ಸೆಂಮೀ. ಚಾಕೊಲೇಟ್ ಬಣ್ಣದ ಮೇಲ್ಮೈ ಮೇಲೆ ಕಪ್ಪು ಗೀರುಗಳು; ಕಪ್ಪು ನೆತ್ತಿ, ಜುಟ್ಟು; ತಿಳಿಗಂದು ಕೆಳಮೈ ಮೇಲೆ ಕರಿ ಚುಕ್ಕೆಗಳು; ಬಿಳಿ ಗಲ್ಲ, ಗಂಟಲು; ಕಪ್ಪು ಬಾಲದ ತುದಿ. ಒಂಟಿಯಾಗಿ ಮಳೆ ಕಾಡುಗಳಲ್ಲಿ ವಾಸ. ರಾತ್ರಿ ಬೇಟೆ.

Storks *(Ciconiidae)*

ಕೊಕ್ಕರೆಗಳು *(ಕೊಕ್ಕರೆ)*

Large, long legged, chiefly terrestrial birds that haunt marshy areas. Bill long, massive and ungrooved; wings long, broad and rectangular with 'finger-tips' best seen in flight; tail short; undertail coverts lax and greatly developed. Legs are very long, partly naked; toes of moderate length, all at same level and webbed at the base; blunt claws. Sexes alike. No vocal apparatus, so silent, except grunting and hissing noise and loud castanet-like clattering or snapping of mandible. They fly in wedge or ribbon formation; flight strong with slow and powerful wingbeats, with neck and legs fully outstretched. Feed on amphibians, small rodents, invertebrates and reptiles. Nest consists of a stick platform lined with straw and leaves, in trees or cliffs and old buildings, near water. Domestic duties shared by both sexes; chicks nidicolous, naked at birth; food regurgitated by parent into the nest and guzzled by nestling.

ದೊಡ್ಡ ಗಾತ್ರದ; ಉದ್ದವಾದ ಕೊಕ್ಕು, ಕತ್ತು, ಕಾಲು, ರೆಕ್ಕೆಯುಳ್ಳ; ಜಾಲಪಾದವಿರುವ; ವಾಸಕ್ಕೆ ಮರವನ್ನೂ, ಆಹಾರಕ್ಕೆ ನೀರನ್ನೂ ಆಶ್ರಯಿಸುವ ಹಕ್ಕಿಗಳು. ಧ್ವನಿಪೆಟ್ಟಿಗೆ ಇಲ್ಲವಾದ್ದರಿಂದ, ಕೊಕ್ಕನ್ನು ಉಜ್ಜಿಯೋ, ಬಡಿದೋ ಶಬ್ದವನ್ನು ಮಾಡುತ್ತವೆ. ಪ್ರಬಲವಾದ ಹಾರಾಟ; ಕತ್ತು-ಕಾಲುಗಳನ್ನು ನೀಡಿಕೊಂಡು ಒಂದೇ ಸಾಲಿನಲ್ಲಿ ಅಥವಾ V ವ್ಯೂಹದಲ್ಲಿ ಹಾರುತ್ತವೆ. ಮೀನು, ಕಪ್ಪೆ, ಸಣ್ಣ ಕಶೇರುಕ, ಸರೀಸೃಪ, ಕೀಟಗಳು ಮತ್ತು ಸಸ್ಯಜನ್ಯ ವಸ್ತುಗಳೇ ಇವುಗಳ ಆಹಾರ. ಮರದ ಮೇಲೆ, ಕಡ್ಡಿಗಳಿಂದ ತಯಾರಾದ ಅಟ್ಟಣೆಯ ಗೂಡು. ಹಲವು ಜಾತಿಯ ಕೊಕ್ಕರೆಗಳು ಒಂದೇ ಸ್ಥಳವನ್ನಾಶ್ರಯಿಸಿ, ಸಂಘಜೀವನ ನಡೆಸುತ್ತವೆ. ನಮ್ಮಲ್ಲಿಗೆ ಅಕ್ಕಪಕ್ಕದ ಪ್ರದೇಶಗಳಿಂದ ವಲಸೆ ಬರುವ ಕೊಕ್ಕರೆಗಳೂ ಇವೆ. ಹಕ್ಕಿಗಳು ತಾವು ತಂದ ಆಹಾರವನ್ನು ಜಗಿದು ಗೂಡಿನೊಳಗೆ ಕಕ್ಕುತ್ತವೆ, ಅದನ್ನು ಮರಿಹಕ್ಕಿಗಳು ಗಬಗಬನೆ ನುಂಗುತ್ತವೆ: ಇದು ಗುಟುಕು ನೀಡುವ ಪರಿ!

19. Painted Stork *(Mycteria luecocephala)* R/LM Vulture+/- Large stork with heavy, long, orange-yellow bill, slightly curved at the tip; white plumage; greenish black bars and marks above; black band across the breast; black tail; rich rosy-pink wash on greater wing coverts. Young are pale dirty brown, lack breast band and dark edged neck feathers. Pairs in large congregation at jheels and marshes, seen standing hunched up and inert or sedately moving in quest of fish and frogs; also wades into shallow water with half open bill ploughing through water. **Nesting**: August-December. **Eggs**: 3-5, dull, tarnished white with brown spots and streaks.

ಬಣ್ಣದ ಕೊಕ್ಕರೆ ***(ರಂಗ್ ಕೊಕ್ಕರೆ)*** 93 ಸೆಂಮೀ. ಕಿತ್ತಳೆ-ಹಳದಿ ಕೊಕ್ಕು; ಪುಕ್ಕರಹಿತ ಕೇಸರಿ ತಲೆ; ಬಿಳಿ ಮೈಗೆ ಗಾಢ ಹಸಿರು-ಕಪ್ಪು ಗೀರುಗಳು; ಎದೆಯ ಮೇಲೆ ಅಗಲವಾದ ಕರಿ ಪಟ್ಟೆ; ನೀಳವಾದ ಗುಲಾಬಿ ಬಣ್ಣದ ಕಾಲುಗಳು; ಕಪ್ಪು ಬಾಲ; ರೆಕ್ಕೆಗಳ ಮೇಲೆ ತಿಳಿ ಗುಲಾಬಿ ಬಣ್ಣದ ಹರಿವು. ಗುಂಪಾಗಿ, ಮೈದಾನ ಪ್ರದೇಶಗಳಲ್ಲಿ ಕಾಲುವೆ, ಕೆರೆ-ಕುಂಟೆ ಮತ್ತು ನೀರಿರುವೆಡೆ, ಮರಗಳ ಮೇಲೆ ವಾಸ. ಗಂಭೀರದ ನಡಿಗೆ. ನೀರಿನೊಳಗೆ, ತೀರಗಳಲ್ಲಿ ಮೀನು, ಕಪ್ಪೆ ಮತ್ತು ಇತರ ಜಲಚರಗಳ ಬೇಟೆ.

20. White-necked Stork *(Ciconia episcopus)* R/LM Vulture+ Large black and white stork; glossy black crown, back, breast; huge black wings with purplish green sheen; white neck, lower abdomen and vent; long, black and stout bill, sometimes tinted with crimson; long red legs. Young ones have dark brown in place of black. Usually solitary, silently feeding along with other storks, in marshy places and waterbodies. Habits similar to 19. **Food**: also lizards, crabs, molluscs and insects. **Nesting:** August-December; solitary nest in a large tree near water. **Eggs**: 3-4, white, obtuse oval shaped.

ಬಿಳಿಕತ್ತಿನ ಕೊಕ್ಕರೆ ***(ಕರ್ತ ಕೊಕ್ಕರೆ)*** 106 ಸೆಂಮೀ. ಬಿಳಿ ಮೈಗೆ, ಕಪ್ಪು ಕೊಕ್ಕು, ನೆತ್ತಿ, ಮೇಲ್ಮೈ; ಅಚ್ಚ ಬಿಳಿ ಕತ್ತು; ಕೆಂಪು ಕಾಲುಗಳು. ದೂರದಿಂದ ಕರಿಕೋಟು ಹಾಕಿಕೊಂಡು ನಿಂತ ವ್ಯಕ್ತಿಯಂತೆ! ಆಹಾರ ಪಟ್ಟಿಯಲ್ಲಿ ಏಡಿ, ಮೃದ್ವಂಗಿ, ಕೀಟಗಳು ಸೇರಿವೆ. ಒಂಟಿಯಾಗಿ ನದೀತೀರ, ಕಾಲುವೆ-ಕೆರೆ ಹಾಗೂ ಕೆಸರು, ಜೌಗು ಇರುವೆಡೆ ಬೇಟೆಯರಸುತ್ತ ತಿರುಗಾಡುವುದನ್ನು ಕಾಣಬಹುದು. ಉಳಿದೆಲ್ಲ ೧೯ರಂತೆ. ದೂರದ ಮರದಲ್ಲಿ ಒಂಟಿಗೂಡು.

21. Lesser Adjutant-Stork *(Leptoptilos javanicus)* Lesser Adjutant R Vulture Glossy metallic black upperparts; enormous, wedge-shaped yellow bill; naked head and neck, red during breeding, yellowish brown in non-breeding; white below. Solitarily, seen in well-watered areas. **Food**: fish, frogs, reptiles and invertebrates. **Voice**: some guttural noise. **Nesting**: November-January; nest, a massive platform of sticks in lofty trees. **Eggs**: 3-4, white.

ಸಿಪಾಯಿಕೊಕ್ಕರೆ ***(ರೈಟರ್ ಕೊಕ್ಕರೆ)*** 110-120 ಸೆಂಮೀ. ಹೊಳೆಯುವ ಕಪ್ಪು ಮೇಲ್ಮೈ; ದೊಡ್ಡ ಹಳದಿ ಕೊಕ್ಕು; ಪುಕ್ಕವಿಲ್ಲದ ಕೆಂಪು ತಲೆ, ಕತ್ತು; ಬಿಳಿ ಕೆಳಮೈ. ಒಂಟಿಯಾಗಿ, ನಿಶ್ಯಬ್ದವಾಗಿ, ಇತರ ಜಾತಿಯ ಕೊಕ್ಕರೆಗಳೊಂದಿಗೆ, ಜೌಗು, ಶೀತಪ್ರದೇಶಗಳಲ್ಲಿ ಗತ್ತಿನಿಂದ ಹೆಜ್ಜೆಯಿಡುತ್ತ ಮೀನು, ಕಪ್ಪೆ, ಅಕಶೇರುಕ, ಸರೀಸೃಪಗಳ ಬೇಟೆಯಾಡುವುದನ್ನು ಕಾಣಬಹುದು.

22. Asian Openbill-Stork *(Anastomus oscitans)* Openbill Stork R Vulture- Common and the smallest stork with white plumage; black in the primary feathers and tail;

greyish yellow bill with arching mandibles leaving an open bill, adapted for grasping large fresh water snails; long red legs. Small flocks, along with other heronry around waterbodies; soar high in the sky; typically plunge with swaying and tumbling, but controlled dive. **Nesting**: November-March; colonial breeding. **Eggs**: 2-4, dirty white.

ಬಾಯ್ಕಳಕ ಕೊಕ್ಕರೆ 81 ಸೆಂಮೀ. ಬಹು ಸಾಮಾನ್ಯವಾಗಿ ಕಂಡುಬರುವ ಕೊಕ್ಕರೆ; ಕಪ್ಪು-ಬಿಳಿ ಮೈ; ಕಪ್ಪು ರೆಕ್ಕೆಗಳು; ಬೂದು-ಹಳದಿ ಕೊಕ್ಕಿನ ಮಧ್ಯೆ ಎದ್ದುಕಾಣುವ ಸಂದು; ಇದು ಏಡಿ, ಬಸವನ ಹುಳುಗಳ ಚಿಪ್ಪನ್ನು ಒಡೆಯಲು, ಕೊಕ್ಕನ್ನು ಅಡಕತ್ತರಿಯಂತೆ ಬಳಸಿ ಹಿಡಿಯಲು ಸಹಕಾರಿ; ನೀಳವಾದ ಕೆಂಪು ಕಾಲುಗಳು. ಎತ್ತರದಲ್ಲಿ ಹಾರುತ್ತಿರುವಾಗ, ಬೇಟೆ ಹಿಡಿಯಲು ಮೇಲಿನಿಂದ ಉರುಳಿ-ಹೊರಳಿ ಬೀಳುವ ಚತುರತೆಯನ್ನು ನೋಡಬೇಕು! ಇತರ ಜಾತಿಯ ಕೊಕ್ಕರೆಗಳೊಂದಿಗೆ ವಾಸ.

Ibises and Spoonbills *(Threskiornithidae)*

ಕೆಂಬರಲುಗಳು ಮತ್ತು ಚಮಚದ ಕೊಕ್ಕುಗಳು *(ಬಾಳ್‌ಕೊಕ್ಕ)*

Long and bare legged, gregarious, waterside or marsh birds, associated with other heronry. Bill long, slender, curved downwards in ibises and extremely flattened and spatulate in spoonbill; neck slender, long, outstretched in flight; wings long; tail short; legs and toes long, tibiae partly bare; toes webbed at base. Sexes almost alike. Flight strong with fairly quick and powerful wingbeats, flocks flying in V formation or wary diagonal ribbons. Perch or roost on trees. Food includes tadpoles, frogs, molluscs, insects and vegetable matter. Nest consists of a platform of sticks lined with straw and feathers, on trees, with mixed heronry. All the household duties are shared by both sexes.

ಪುಕ್ಕಗಳಿಲ್ಲದ, ನೀಳ, ಜಾಲಪಾದವಿರುವ ಕಾಲುಗಳು, ಉದ್ದನಾದ ರೆಕ್ಕೆ ಹೊಂದಿದ್ದು, ಉಳಿದ ಜಲಪಕ್ಷಿಗಳೊಂದಿಗೆ ಸಮೂಹ ಜೀವನ ನಡೆಸುವ ನೀರು ಪಕ್ಷಿಗಳು. ಇದರಲ್ಲಿ ಕೆಂಬರಲುಗಳು ಉದ್ದನಾಗಿ, ಕೆಳಕ್ಕೆ ಬಾಗಿದ ಕೊಕ್ಕನ್ನು ಹೊಂದಿದ್ದರೆ, ಸ್ಪೂನ್‌ಬಿಲ್‌ಗಳ ಕೊಕ್ಕು ನೀಳ ಸಟ್ಟುಗದ ರೀತಿ. ನೀಳಕತ್ತನ್ನು ಚಾಚಿಕೊಂಡು ಹಾರಾಟ. ಕಪ್ಪೆ, ಮೀನು, ಏಡಿ, ಮೃದ್ವಂಗಿ, ಕೀಟ, ಸಸ್ಯಜನ್ಯ ವಸ್ತುಗಳು ಇವುಗಳ ಆಹಾರ. ಶಕ್ತಿಯುತ ರೆಕ್ಕೆಬಡಿತಗಳೊಂದಿಗೆ, ಒಂದರ ಹಿಂದೊಂದು ಆಕಾಶದಲ್ಲಿ V ಆಕಾರದಲ್ಲಿ ಸಮರ್ಥ ಹಾರಾಟ. ಮರಗಳ ಮೇಲೆ ಕಡ್ಡಿಗಳಿಂದ ತಯಾರಾದ, ಹುಲ್ಲು-ಗರಿಗಳನ್ನು ಹಾಸಿರುವ ಅಟ್ಟಣೆ ಗೂಡು.

23. Oriental White Ibis *(Threskiornis melanocephalus)* White Ibis R Hen+ Marsh bird with white plumage and naked, black head and neck; long, stout, black, downcurved bill; red patches on underwing and flanks, seen in flight. Breeding adults have extra long plumes over neck and slaty grey on wings. Young ones have feathers on head and neck. Gregarious, along with other heronry; actively seen in water, probing the nutrient rich ooze, with partially opened bill, like a forceps. **Voice**: no true vocal mechanism, so silent, except some grunts uttered during breeding. **Nesting**: July-September. **Eggs**: 2-4, bluish or greenish white, with light yellowish brown spots.

ಬಿಳಿ ಕೆಂಬರಲು *(ಬೊಳ್ತ ಬಾಳ್‌ಕೊಕ್ಕ)* 75 ಸೆಂಮೀ. ಬಿಳಿ ಮೈ; ಅಚ್ಚ ಕಪ್ಪು ನಗ್ನ ತಲೆ, ಕತ್ತು; ಕೆಳಕ್ಕೆ ಬಾಗಿದ ನೀಳ ಕಪ್ಪು ಕೊಕ್ಕು; ಪಕ್ಕೆ ಮತ್ತು ರೆಕ್ಕೆಯಡಿಗಳಲ್ಲಿ ಹಾರುವಾಗ ಕಾಣುವ ರಕ್ತಗೆಂಪು ಬಣ್ಣದ ಮಚ್ಚೆಗಳು; ಕಪ್ಪು ಕಾಲುಗಳು. ಜಲಪ್ರದೇಶ, ಕೆರೆದಂಡೆ, ಕೃಷಿ ಮತ್ತು ಜೌಗುಪ್ರದೇಶಗಳಲ್ಲಿ ವಾಸ. ಇಕ್ಕಳದ ರೀತಿ ಕೊಕ್ಕನ್ನು ನೀರಿನೊಳಗೆ ಆಡಿಸುತ್ತ, ಜಲಚರಗಳನ್ನೂ, ಸಸ್ಯಜನ್ಯಗಳನ್ನೂ ತಿನ್ನುವ ಸ್ವಭಾವ. ನೈಜ ಧ್ವನಿಯಿಲ್ಲವಾದ್ದರಿಂದ ಬರೇ ಗುರುಗುಟ್ಟುವಿಕೆಯ ಶಬ್ದ.

24. Black Ibis *(Pseudibis papillosa)* R Hen+ Shiny black plumage; slender, blackish green, decurved bill; red warts on the naked black head; white shoulder patches; brick-red legs. Solitary or small party, seen along marshy edges, often with other ibises, preferring open countryside; does not always depend on water; roosts in accustomed trees away from water. Flight in V formation with steady wing beats and short glides. **Food:** also grain and small reptiles. **Voice**: loud nasal screams of 2-3 notes, uttered in flight. **Nesting**: November-December; nest built singly, high up in tree, away from water, even using old eagle or vulture nests. **Eggs**: 2-4, bright pale green, sometimes brown spots or streaks.

ಕರಿ ಕೆಂಬರಲು *(ಕರ್ತ ಬಾಳ್‌ಕೊಕ್ಕ)* 68 ಸೆಂಮೀ. ಹೊಳೆಯುವ ಕಪ್ಪು ಮೈ; ಬಾಗಿದ ಹಸಿರುಗಪ್ಪು ಕೊಕ್ಕು; ಗರಿಗಳಿಲ್ಲದ ನಗ್ನ ತಲೆಗೆ ಕೆಂಪು ನೆತ್ತಿ; ಬಿಳಿ ಭುಜ ಪಟ್ಟೆ; ಕೆಂಪು ಕಾಲುಗಳು. ಒಂಟಿಯಾಗಿ, ಇತರ ನೀರು ಪಕ್ಷಿಗಳೊಂದಿಗೆ ಕೊಳಚೆ, ಜೌಗು ಪ್ರದೇಶ, ಗದ್ದೆಯ ಬದಿಗಳಲ್ಲಿ ಬೇಟೆಯಾಡುವುದು. ಗೂಡು ಕೂಡ ಒಂಟಿಯಾಗಿ, ನೀರಿನಿಂದ ಮತ್ತು ಇತರ ಹಕ್ಕಿಗಳಿಂದ ದೂರವಾದ ಮರದಲ್ಲಿ ಕಟ್ಟುವುದು.

25. Glossy Ibis *(Pleads falcinellus)* R Hen Breeding adult has glistening black above, with a shiny copper green tint; chestnut below; feathered head; no white shoulder patch. In non-breeding season, they have brown head and neck with white streaks. Gregarious, feed along water edges near jheels, riverbanks and marshes. Flight with V formation; roost on trees. **Voice**: silent away from breeding colonies; mandible chattering; whining call *graa* in flight. **Nesting:** May-July; mixed colonies. **Eggs**: 2-3, bluish green.

ಮಿಂಚು ಕೆಂಬರಲು *(ಮಿನ್ಸ್ ಬಾಳ್‌ಕೊಕ್ಕ)* 52 ಸೆಂಮೀ. ಕಪ್ಪು ದೇಹಕ್ಕೆ, ಹೊಳೆಯುವ ಕಡುಹಸಿರು ರೆಕ್ಕೆಗಳು; ಕೆಂಗಂದು ಕೆಳಮೈ; ಗರಿಗಳಿಂದಾವೃತವಾದ ಕತ್ತು, ತಲೆ. ಸಮೂಹವಾಗಿ ತಂಗುವುದು, ಗೂಡು ಕಟ್ಟುವುದು, ಬೇಟೆಯಾಡುವ ಸ್ವಭಾವ. ಪ್ರಜನನ ಕಾಲದಲ್ಲಿ ಕರುವಿನಂತೆ ಕೂಗು.

26. Eurasian Spoonbill *(Platalea leucorodia)* Spoonbill RM Duck+/- Snow-white body; large, long, flat, spoon-shaped black bill with yellow tip, adapted for feeding in shallow water; long, black legs; yellow-buff patch on the lower foreneck; yellowish throat patch; long, white pointed plumes on crest during breeding. Highly social and gregarious, feeding during early morning and late evening; bill moved from side to side as it moves forward, sifting the bottom for small aquatic animals. **Voice**: low grunt and clattering of mandibles. **Nesting**: July-November, among mixed heronry, near water. **Eggs**: 4, dull white, spotted and blotched with deep red.

ಚಮಚದ ಕೊಕ್ಕು *(ಚಮಚಕೊಕ್ಕ)* 60 ಸೆಂಮೀ. ಅಚ್ಚ ಬಿಳಿ ಮೈಯಲ್ಲಿ, ಕಿತ್ತಳೆ-ಕಪ್ಪು ಬಣ್ಣದ, ನೀಳವಾದ ಚಪ್ಪಟೆ ಕೊಕ್ಕಿಗೆ ಚಮಚದ ಆಕಾರದ ತುದಿ ಮತ್ತು ಕಪ್ಪು ಕಾಲುಗಳು. ಕತ್ತಿನ ಕೆಳಭಾಗದಲ್ಲಿ ಬೂದು ಹಳದಿ-ಕಿತ್ತಳೆ ಪಟ್ಟಿ; ಕಿತ್ತಳೆ

ಬಣ್ಣದ ಗಂಟಲು ಮಚ್ಚೆ; ಸಂತಾನಋತುವಿನಲ್ಲಿ ನೆತ್ತಿಯ ಮೇಲೆ ಚೂಪಾದ ಬಿಳಿ ಗರಿಗಳು ಮೂಡುತ್ತವೆ. ಚಮಚದ ಕೊಕ್ಕನ್ನು ಅತ್ತಿಂದಿತ್ತ ಆಡಿಸುತ್ತ ನೀರಿನಲ್ಲಿರುವ ಜಲಚರಗಳನ್ನು ಜರಡಿಯಾಡುತ್ತ ಹಿಡಿಯುತ್ತದೆ. ಸಮೂಹ ಜೀವನ.

Geese and Ducks *(Anatidae)*

ಬಾತುಕೋಳಿಗಳು *(ಹೆಬ್ಬಾತ್, ಬಾತ್)*

Medium to large sized, broad-bodied wetland birds; bill broad, flat and rounded at tip with a comb like fringe or lamella for straining food particles from water; wings rather small, narrow and pointed, but powerful adapted for swift and long range flight; tail and legs short; feet webbed. Prefer to fly in a V or wedge formation. Most are migratory; cross over Himalayas at a height of over 9000 metres. Nest on ground or in holes or hollows in tree trunks. Young nidifugous, down covered. Both sexes incubate and lead the young.

ಮೊಂಡಾದ, ಚಪ್ಪಟೆಯಾದ, ಜಾಲರಿಯಂತ ಕೊಕ್ಕುಳ್ಳ, ನೀರಿನಲ್ಲಿ ಗುಂಪಾಗಿ ವಾಸಮಾಡುವ ಹಕ್ಕಿಗಳು. ಈಜಾಡಲು ಜಾಲಪಾದಗಳುಳ್ಳ ಚಿಕ್ಕ ಕಾಲುಗಳು; ಪ್ರಬಲವಾದ ಹಾಗೂ ದೂರದ ಹಾರಾಟಕ್ಕೆ ತಕ್ಕುದಾದ ಸಣ್ಣ, ಸಪೂರ, ಸದೃಢ ಹಾಗೂ ಚೂಪಾದ ರೆಕ್ಕೆಗಳು; ಚಿಕ್ಕ ಬಾಲ. ನೆಲದ ಮೇಲೆ ಅಥವ ಮರದ ಪೊಟರೆಗಳೊಳಗೆ ಗೂಡು. ಹಲವು ಜಾತಿಯವು ವಲಸೆ ಬರುವ ಹಕ್ಕಿಗಳು. ನೀರಿನಲ್ಲಿ ತಾಯಿಯೊಂದಿಗೆ ಮರಿಗಳು ಸಾಲಾಗಿ ಈಜಿಕೊಂಡು ಹೋಗುವುದನ್ನು ನೋಡಲು ಬಲು ಚೆಂದ.

27. Bar-headed Goose *(Anser indicus)* M Duck+ White head with two black stripes on the nape; brown neck with white stripes down the sides; pale grey plumage; black tipped yellow bill; yellow legs; dark wing tips seen in flight. Sexes alike. Flight in V formation, sometimes at very high altitudes. Crepuscular and nocturnal; gregarious; rest during day; often shot by man, owing to its depredation of standing crops. **Food**: tender shoots of paddy and other crops. **Voice**: an unmistakable nasal, musical *aoang...aoang*... Winter visitor to our place, breeding in Ladakh and Tibet; arrival in October, departure by mid-March.

ಪಟ್ಟೆತಲೆ ಹೆಬ್ಬಾತು (ಹೆಬ್ಬಾತ್) 75 ಸೆಂ.ಮೀ. ಪ್ರಪಂಚದ ಅತಿ ಎತ್ತರ ಹಾರಬಲ್ಲ ಪಕ್ಷಿ. ಕಪ್ಪು ತುದಿಯಿರುವ ಹಳದಿ ಕೊಕ್ಕು; ಬೂದು ಮೈ; ಬಿಳಿ ತಲೆ; ಹಳದಿ ಕಾಲುಗಳು; ತಿಳಿಗುಲಾಬಿ ಜಾಲಪಾದಗಳು; ಹಿಂಗತ್ತಿನಲ್ಲಿ ಎರಡು ಕಪ್ಪು ಪಟ್ಟಿಗಳು; ಹಾರುವಾಗ ರೆಕ್ಕೆಯ ತುದಿಗಳಲ್ಲಿ ಕಪ್ಪು ಎದ್ದು ಕಾಣುವುದು; ಕಂದು ಕತ್ತಿನ ಎರಡೂ ಬದಿಗಳಲ್ಲಿ ನೀಳ ಬಿಳಿ ಪಟ್ಟಿ. ಒಟ್ಟಿಗೆ ಎತ್ತರದಲ್ಲಿ ಹಾರುವಾಗ V ಆಕಾರ. ಹೆಚ್ಚಾಗಿ ನಿಶಾಚರ. ಎಳೆಪೈರು, ಕಾಂಡ, ಕಾಳು, ಗೆಡ್ಡೆಗಳು ಆಹಾರ. *ಆನ್ಗ್..ಆನ್ಗ್..* ಕೂಗು. ೧೮,೦೦೦ ಅಡಿ ಎತ್ತರದ ಲಡಾಕ್, ಟಿಬೆಟ್ಟಿನಿಂದ, ಚಳಿಗಾಲದ ವಲಸೆಗಾರ.

28. Spot-billed Duck *(Anas poecilorhyncha)* Spotbill, Grey Duck RM Duck Much prized table bird, one of the most hunted among ducks. Dark brown plumage with pale feather edges; white-streaked head, neck; black cap; dark eye stripe; white and metallic green wing-bars; yellow tipped black bill and male having two orange-red spots at base; bright coral-red legs and feet. Sexes alike. Pairs or small party seen walking on wet cultivation, marshy land or edge of shallow water. **Food**: grains,

seeds, aquatic plants, water insects, worms, water snails; can also cause damage to standing paddy crop. **Voice**: silent, occasional hoarse wheezy note by drake and loud *quack* by duck. **Nesting**: July-September; nest on a pad of grass or weeds among herbage. **Eggs**: 6-12, grey or greenish white.

ವರಟೆ *(ಸರಳೆ)* 61 ಸೆಂಮೀ. ಕಡುಗಂದು ಬಣ್ಣದ ದೇಹಕ್ಕೆ, ಬಿಳಿ ಅಂಚುಳ್ಳ ಗರಿಗಳು; ಕಪ್ಪು ಕೊಕ್ಕಿಗೆ ಹಳದಿ ತುದಿ ಮತ್ತು ಗಂಡುಹಕ್ಕಿಯ ಕೊಕ್ಕಿನ ಬುಡದಲ್ಲಿ ಎರಡು ಕೆಂಪು ಮಚ್ಚೆಗಳು; ಅಚ್ಚಗೆಂಪು ಕಾಲುಗಳು; ಕಡುಗಂದು ಮೋಟುಬಾಲ. ಜೌಗು ಹಾಗೂ ನೀರಿರುವ ಗದ್ದೆಗಳಲ್ಲಿ ಕಾಣಬಹುದು. ತೆನೆಗೂಡಿದ ಭತ್ತಕ್ಕೆ ಹಾನಿಯುಂಟುಮಾಡಲೂಬಹುದು. ಸಸ್ಯಾಹಾರದ ಜೊತೆಗೆ ಮೃದ್ವಂಗಿಗಳು, ಜಲಕೀಟಗಳೂ ಆಹಾರ. ನೇರವಾಗಿ ಮರಿಗಳಿಗೆ ಗುಟುಕು ನೀಡುವುದಿಲ್ಲ, ಬದಲಿಗೆ ಅವುಗಳಿಗೆ ಆಹಾರದತ್ತ ಮಾರ್ಗದರ್ಶನ ನೀಡುತ್ತದೆ. ಮರಿಗಳು ಸಾಲಾಗಿ ಅಮ್ಮನ ಹಿಂದೆ ಹೋಗುವುದನ್ನು ನೋಡಲು ಬಲು ಚಂದ!

29. Lesser Whistling-Duck *(Dendrocygna javanica)* Lesser Whistling Teal, Tree Duck R Duck- Overall brown bird; browner head; greyish-black bill and legs; chestnut upper wing coverts, upper tail coverts; black flight feathers. Young ones are dull coloured. Sexes alike. Small flocks seen on edges of ponds around vegetation. Rest during the day; nocturnal feeder, along marshland, grazing like a goose. A good diver, perching freely on trees. **Food:** also small fish, snails, frogs, tender shoots and grain. **Voice**: shrill, musical, whistle *sweesik*... or *whi. whee*... on the wing. **Nesting**: June-October; nest on a tree hollow, lined with grass; sometimes on ground, among reed. **Eggs**: 7-12, ivory white.

ಸಿಳ್ಳೆಬಾತು *(ನೀರ್ ಬಾತ್)* 42 ಸೆಂಮೀ. ಕಂದು ದೇಹಕ್ಕೆ ಕಡುಗಂದು ತಲೆ, ರೆಕ್ಕೆಗಳು; ಬೂದು ಕೊಕ್ಕು, ಕಾಲುಗಳು; ರೆಕ್ಕೆಗಳಲ್ಲಿ ಕಪ್ಪು; ದುರ್ಬಲ ಹಾರಾಟ; ಹಾರುವಾಗ ರೈಲು ಶಿಳ್ಳೆಯಂತೆ *ಸ್ವೀಸಿಕ್..* ಅಥವಾ *ವ್ಹಿ.ವ್ಹೀ....* ಕೂಗು. ಗುಂಪಾಗಿ ಕೆರೆತೀರಗಳಲ್ಲಿ ರಾತ್ರಿಬೇಟೆ. ಕೀಟ, ಕಾಂಡ, ಜಲಚರಗಳೇ ಆಹಾರ. ಒಳ್ಳೆಯ ಈಜುಗಾರ ಮತ್ತು ಮರವಾಸಿ.

30. Cotton Teal *(Nettapus coromandelianus)* R Partridge Smallest duck in the world. Male, white head, neck; black glossy green crown, back, neck-collar; white below; white wing-bar; goose-like short bill with deep base. Female, dull brown above; dark stripe through eyes; white below, mottled brown. Non-breeding male, like female, but with distinct wing bars. Flocks seen with other ducks around rain ditches, paddyfields, unwary of human habitation. Swift and a good diver. **Voice**: peculiar cackling calls in flight. **Nesting:** July-September; nest, often lined with grass and feathers, in the natural hollow of a tree trunk in or near water. **Eggs**: 6-12, ivory white.

ಬಿಳಿಬಾತು *(ಬೊಳ್ತ ಬಾತ್)* 33 ಸೆಂಮೀ. ಬಿಳಿ ತಲೆ, ಕತ್ತು ಮತ್ತು ಕೆಳಮೈ; ಕಡುಹಸಿರುಗಪ್ಪು ನೆತ್ತಿ, ಕಣ್ಣುಪಟ್ಟಿ ಮತ್ತು ಬೆನ್ನು; ಬಿಳಿ ರೆಕ್ಕೆ ಪಟ್ಟಿ. ಕೆರೆ–ಕಾಲುವೆಗಳ ಬಳಿ ಗುಂಪಾಗಿ, ಇತರ ಜಾತಿಯ ಬಾತುಗಳೊಂದಿಗೆ ವಾಸ. ಚುರುಕು–ವೇಗದ ಹಾರಾಟ. ಹಾರುವಾಗ *ಕ್ಲಕ್.ಕ್ಲಕ್..* ಶಬ್ದ. ನೀರಿನಲ್ಲಿ ನಿಂತ ಅಥವಾ ಹತ್ತಿರದ ಮರದ ಪೊಟರೆಗಳೊಳಗೆ ಗೂಡು.

31. Northern Pintail *(Anas acuta)* Pintail M Duck- Most elegant of all ducks. Male, greyish above; choco-brown head, upper neck; white band on either side of the face, running down into the white neck and underparts; bronze green speculum; pointed tail diagnostic, especially in flight. Female, mottled brown and buff, with a tapering tail that lacks pins. Gregarious, seen in jheels or grassy tank margins. **Voice**: male has a mellow *preep.preep* and female has a descending series *quack*. **Food:** largely

vegetarian, also water insects and molluscs. Has a characteristic hissing swish of wings, as the flock flies over. Most common winter visitor, breeding in Palaearctic region.

ಸೂಜಿಬಾಲದ ಬಾತು ***(ಚೂದ್‌ಬಾಲ್‌ರ ಬಾತ್)*** 56-74 ಸೆಂಮೀ. ಅತಿಸುಂದರ. ಚಾಕೋಲೇಟ್ ಬಣ್ಣದ ತಲೆ, ಕತ್ತು; ಮುಖದ ಎರಡೂ ಬದಿ ಬಿಳಿ ಗೆರೆ; ಬಿಳಿ ಎದೆ, ಕೆಳಮೈ ಮತ್ತು ರೆಕ್ಕೆ ಪಟ್ಟಿ; ಬೂದು ಬೆನ್ನಿನ ಮೇಲೆ ತಿಳಿಗುಲಾಬಿ-ಕಪ್ಪು ಗರಿಗಳು; ಹಾರುವಾಗ ಎದ್ದುಕಾಣುವ ಕಡುಬೂದು ಚೂಪುಬಾಲ. ತಿಳಿಗಂದು ಬಣ್ಣದ ಹೆಣ್ಣಿಗೆ, ಚೂಪಾದ ಬಾಲವಿಲ್ಲ. ನೀರಿರುವೆಡೆ, ಗುಂಪಾಗಿ ವಾಸ. ಒಂದಾಗಿ ಹಾರುವಾಗ, *ಹುಶ್..ಶ್..* ಎಂಬ ಶಬ್ದ. ಉತ್ತರ ಗೋಳಾರ್ಧದಿಂದ ಚಳಿಗಾಲದ ವಲಸೆಗಾರ.

32. Ferruginous Pochard *(Aythya nyroca)* White-eyed Pochard M Duck- Dark rufous plumage; white wing bars and white abdomen, conspicuous in flight from below; white iris, in adult male. Female, dull coloured with brown iris. Flocks, seen on jheels, irrigation tanks; rest during day away from disturbance and feed after dusk. **Voice**: harsh *koor-ker-ker*. Winter visitor, breeding in Kashmir.

ಬಿಳಿಗಣ್ಣಿನ ಬಾತು ***(ಬೊಳ್ತಕಣ್ಣ್‌ರ ಬಾತ್)*** 41 ಸೆಂಮೀ. ಕಂದು ಮೈಬಣ್ಣ; ಹಾರುವಾಗ, ಬಿಳಿ ರೆಕ್ಕೆಯಂಚು ಮತ್ತು ಕೆಳಮೈಯಲ್ಲಿ ಬಿಳಿ ಬಣ್ಣ ಎದ್ದು ಕಾಣುವುದು; ಗಂಡಿಗೆ ಬಿಳಿ ಕಣ್ಣ ಪಾಪೆ. ಸಂಜೆಯ ನಂತರ ನೀರಿನಲ್ಲಿ ಮುಳುಗು ಬೇಟೆ. ಕರ್ಕಶ *ಕೂರ್..ಕ್‌ರ್.ಕ್‌ರ್* ಧ್ವನಿ. ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

Hawks, Eagles, Buzzards, Kites, Harriers and Old World Vultures *(Accipitridae)*

ಗಿಡುಗ, ಗರುಡ, ಹದ್ದು, ರಣಹದ್ದು ಮತ್ತು ಸೆಳೆವಗಳು *(ಕ್‌ರ್‌ಕೊಟ್ಟ, ಪದ್ದ್, ಕ್‌ಡುವ)*

All these birds are included under raptors or diurnal birds of prey that are highly aerial and carnivorous. Short black tipped yellow bill with longer upper mandible which is curved and strongly hooked; base of the bill usually brightly coloured and covered with cere; wings long, round and having figertips best seen in flight; feet strong; tarsi partially or fully feathered; hallux present; claws hooked and powerful to catch and hold prey; large staring eyes that are positioned well forward to give excellent and sharp vision. Masters of the air, they soar effortlessly high in the air without wingbeats, utilising rising thermals. Sexes almost alike, female usually larger; plumage differs between juveniles and adults. Food consists of animal matter, killed or dead carrion. Most species avoid dense forest where hunting is difficult. Breed on trees, nest made of sticks, often lined with leaves, grass etc., Larger species have lesser rate of reproduction. Both sexes share the domestic duties.

ಹಗಲಿನ ಬೇಟೆಗಾರ ಹಕ್ಕಿಗಳು. ಸತ್ತ ಪ್ರಾಣಿಯಾಗಲೀ ಅಥವಾ ತಾನೇ ಕೊಂದದ್ದಾಗಲೀ, ಅದರ ಮಾಂಸವನ್ನು ಹರಿದು ತಿನ್ನಲು ಬಲಿಷ್ಠವಾದ, ತುದಿಯಲ್ಲಿ ಕೊಕ್ಕೆಯಂತೆ ಬಾಗಿರುವ ಕೊಕ್ಕು ಮತ್ತು ಕಾಲ್ಬೆರಳ ಉಗುರುಗಳು; ಎತ್ತರದಲ್ಲಿ ಹಾರಾಡಲು ತಕ್ಕುದಾದ ಪ್ರಬಲ ರೆಕ್ಕೆಗಳು. ತೀಕ್ಷ್ಣ ದೃಷ್ಟಿ; ನೆಲದಿಂದ ಏಳುವ ಬಿಸಿಗಾಳಿಯ ಕೆಳಒತ್ತಡದ ಸಹಾಯದಿಂದ, ಇವು ರೆಕ್ಕೆ ಬಡಿಯದೆ ಆಕಾಶದಲ್ಲಿ ಸಾಕಷ್ಟು ಎತ್ತರದಲ್ಲಿ ಸುತ್ತು ಹೊಡೆಯುವುದನ್ನು ಕಾಣಬಹುದು. ದೇಹದ ಬಣ್ಣ, ವಯಸ್ಸು, ಋತುವನ್ನಾಧರಿಸಿ ವ್ಯತ್ಯಾಸಗೊಳ್ಳುವುದು. ಸಾಧಾರಣವಾಗಿ ಹೆಣ್ಣುಹಕ್ಕಿ ತುಸು ದೊಡ್ಡ ಗಾತ್ರ. ಕೀಟ, ಹಲ್ಲಿ, ಇಲಿ, ಹೆಗ್ಗಣ, ಹಾವು, ಆಹಾರ. ಎತ್ತರದ ಮರಗಳ ಮೇಲೆ, ಕಡ್ಡಿಗಳಿಂದ ತಯಾರಾದ, ಹುಲ್ಲು-ಎಲೆಗಳ ಹಾಸಿಗೆಯ ವಿಸ್ತಾರವಾದ ಅಟ್ಟಣಿಗೆ ಗೂಡು.

33. Black-shouldered Kite *(Elanus caeruleus)* Black-winged Kite R Crow- Pale grey upperparts; white head, neck, underparts; small black stripe across the blood-red eyes; black shoulder patch and wing tips; partly feathered yellow legs; short, square, white tail. Young ones have brown tinged plumage and pale-edged wings. Solitary, crepuscular, but active during day; rests on open perches around scrub and grass country; hovers in sky like a parachute, to scan the ground; drops in height to check the level; scoops on the quarry, taking it away in its claws. **Food**: insects, lizards, rodents, snakes. **Voice**: soft, piping *pii.uu...* **Nesting**: undefined. **Eggs**: 3-4, yellowish white, blotched with red.

ರಾಮದಾಸ ಹದ್ದು ***(ಕರಿ ಕ್‌ರ್‌ಕೊಟ್ಟ)*** 33 ಸೆಂಮೀ. ಬೂದು ಹಕ್ಕಿಗೆ ಬಿಳಿ ಕೆಳಮೈ; ಕಪ್ಪು ಕಣ್ಣುಪಟ್ಟಿ; ಕಪ್ಪಾದ ಅಗಲ ಭುಜಪಟ್ಟಿ ಮತ್ತು ರೆಕ್ಕೆಯ ತುದಿ; ಬಿಳಿ ಮೊಂಡು ಬಾಲ; ಹಳದಿ ಕಾಲುಗಳು. ಸಂಕೋಚ ಸ್ವಭಾವ. ಒಂಟಿಯಾಗಿ, ಕುರುಚಲುಕಾಡು, ಹುಲ್ಲುಗಾವಲು, ಕೃಷಿಭೂಮಿ ಮುಂತಾದೆಡೆ ಮರಗಳ ತುದಿಯಲ್ಲೋ, ಆಕಾಶದಲ್ಲಿ ಪ್ಯಾರಾಚೂಟಿನಂತೆ ನಿಂತಲ್ಲಿಯೇ ತೇಲಾಡುತ್ತಲೋ, ಬೇಟೆ ಹೊಂಚುವುದು. ಅಲ್ಲದೆ ತೆರೆದ ಪ್ರದೇಶಗಳಲ್ಲಿ ಆಹಾರವನರಸುತ್ತಾ ಕೆಳಸ್ತರದಲ್ಲಿ ಹಾರುತ್ತದೆ. ರೆಕ್ಕೆಗಳನ್ನು ಇಳಿಬಿಟ್ಟು ಬಾಲವನ್ನು ನಿಮಿರಿಸಿ ಕೂರುವ ಸ್ವಭಾವ. ತೀಕ್ಷ್ಣ ಚೀರುವಿಕೆ.

34. Pariah Kite *(Milvus migrans govinda)* R Kite A distinct subspecies of Black Kite. Our commonest raptor. Dark brown plumage; yellow legs; forked tail seen in flight, diagnostic. Gregarious, commensal of man, seen around garbage, remarkably adroit on the wings; communal roosting on trees. **Food**: refuse, garbage, earthworm, winged termites, lizards, mice, disabled or young bird, anything dead. **Voice**: high-pitched, far carrying, whinnying *pee..wir..wirr..* **Nesting**: undefined. **Eggs**: 2-4, dirty pink-white with light reddish brown spots.

ಹದ್ದು ***(ಕ್‌ರ್‌ಕೊಟ್ಟ)*** 61 ಸೆಂಮೀ. ಸಾಮಾನ್ಯವಾಗಿ ಕಾಣುವ ಬೇಟೆಹಕ್ಕಿ. ಕಡುಗಂದು ಮೈ, ಹಾರುವಾಗ ಎದ್ದುಕಾಣುವ ಸೀಳಿದ ಬಾಲ. ಮನುಷ್ಯನ ಒಡನಾಡಿ. ಗುಂಪಾಗಿ, ಕುರುಚಲುಕಾಡು, ಊರಿನ ಹೊರಗಿನ ಕಸದ ರಾಶಿಯಲ್ಲಿ ಅಥವಾ ಊರೊಳಗೆ ಕಸಾಯಿಖಾನೆ, ಮೀನು-ಮಾಂಸದ ಮಾರುಕಟ್ಟೆಯಲ್ಲಿ ಆಹಾರವನ್ನು ಹೆಕ್ಕುತ್ತದೆ. *ಪೀ.ವಿರ್..* ಸಿಳ್ಳು. ಸಾಮೂಹಿಕ ಜೀವನ.

35. Brahminy Kite *(Haliaster indus)* R Kite- White head, neck, breast, upper back; rich chestnut on rest of the body and abdomen; dark tipped flight feathers seen in flight; partly feathered yellow legs; rounded tail. Young ones are chocolate brown, like those of Pariah Kite, but without a forked tail. Seen singly, in the neighbourhood of water and paddyfields. **Food**: also fish, frogs, winged termites, small snakes, bats. **Voice**: hoarse, loud, scream like that of Pariah Kite, as if with sore throat. **Nesting**: December-April. **Eggs**: 2, greyish white, with reddish brown speckles.

ಗರುಡ ***(ಗರುಡ)*** 48 ಸೆಂಮೀ. ಅಚ್ಚ ಬಿಳಿ ತಲೆ, ಕತ್ತು ಮತ್ತು ಎದೆ; ಕೆಂಗಂದು ಮೈ; ಹಳದಿ ಕಾಲುಗಳು; ದುಂಡಾದ ಬಾಲದ ತುದಿ. ಒಂಟಿಯಾಗಿ, ಕೃಷಿಭೂಮಿ, ಗದ್ದೆ, ತೋಟ ಮತ್ತು ಜನವಸತಿಯಲ್ಲಿ ನೀರಿರುವೆಡೆಯಲ್ಲಿ ಎತ್ತರದ ಸ್ಥಳದಲ್ಲಿ ಕುಳಿತು ಬೇಟೆ ಹುಡುಕುತ್ತದೆ. ಮೀನು, ಕಪ್ಪೆ, ಏಡಿ, ಹಾವು, ಬಾವಲಿ ಮತ್ತು ಮಳೆಕೀಟಗಳೇ ಆಹಾರ. ಗೊಗ್ಗರು ಗಂಟಲ ಸಿಳ್ಳು.

36. Oriental Honey-Buzzard *(Pernis ptilorhynchus)* Honey Buzzard R Kite+ Distinct slender head and longer neck; plumage colouration variable, mostly dark brown above; short nuchal crest rarely visible; pale brown underbody, cross banded with white; silver grey wings with dark bars below; broad, dark terminal bands in greyish tail; yellow unfeathered tarsus. Solitary or pairs, seen perching or flying in open forest country and estates. **Food**: also larvae and honey from combs. **Voice**: single, high-pitched, long drawn *wee.ee.eu* whistle, uttered even at night. **Nesting**: February-May. **Eggs**: 2, pale cream or buff with reddish brown mottling.

ಜೇನುಗಿಡುಗ ***(ಕರ್ತ ಕ್‌ಡುವ)*** 68 ಸೆಂಮೀ. ತಲೆ ಮತ್ತು ಕತ್ತು ನೀಳ, ಸಪೂರ. ತಿಳಿಗಂದು ಗೀರುಗಳಿರುವ ಬಿಳಿ ಕೆಳಮೈ; ಬೂದುದೇಹ ಮತ್ತು ಕಪ್ಪು ಅಡ್ಡಪಟ್ಟಿಗಳಿರುವ ಬಾಲ; ನಗ್ನ ಹಳದಿ ಕಾಲುಗಳು. ಒಂಟಿಯಾಗಿ, ವಿರಳ ಕಾಡು–ಎಸ್ಟೇಟುಗಳ ಮೇಲೆ ಹಾರಾಡುತ್ತ ಬೇಟೆಯಾಡುತ್ತದೆ. ಉದ್ದನಾದ ವ್ಹೀ...ಯು ಸಿಳ್ಳು.

37. Tawny Eagle *(Aquila rapax)* R Kite+ Plumage varies from phase to phase, from dark brown to dirty buff; usually dark brown with pale barring on short round tail; typical flat eagle's head; powerful, hooked bill; fully feathered yellow-orange legs; wings long, broad, ending in 'splayed fingers' in flight. Solitary or pairs, seen perched or soaring in the human neighbourhood; both a scavenger and a pirate. **Food**: also hares, robbed carcasses and poultry. **Voice**: loud, repeated, high-pitched *kowk* bark. **Nesting**: November-April; nest on the top of a tall tree near human habitation. **Eggs**: 2-3, white, spotted and speckled with reddish brown.

ಕಂದು ಗಿಡುಗ ***(ಕ್‌ಡುವ)*** 63-71 ಸೆಂಮೀ. ಕಂದು ಮೈ ಮತ್ತು ತಲೆ; ಗರಿಗಳಿರುವ ಹಳದಿ–ಕಿತ್ತಳೆ ಕಾಲುಗಳು; ಹಾರುವಾಗ ಬೆರಳಿನಂತೆ ನೀಡಿರುವ ರೆಕ್ಕೆಯ ತುದಿ. ಹಳ್ಳಿಗಳ ಸುತ್ತ, ಆಕಾಶದಲ್ಲಿ, ಒಂಟಿಯಾಗಿ ಸುತ್ತುಹೊಡೆಯುತ್ತ ಹಾರಾಡುವುದನ್ನು ಕಾಣಬಹುದು. ಕೋಳಿಕಳ್ಳ.

38. Black Eagle ·*(Ictinaetus malayensis)* R Kite+ Large blackish eagle, with bright yellow cere and legs; long wings, primaries splayed up in flight; only raptors to have long and straight talon in the hind toe to enable them to carry off nests and pierce the eggs; pale patch underside of wings and white patch under eyes, diagnostic; grey bars on tail. Young ones are brown, stippled pale; barred tail; dark streaks on flanks and belly. Seen in pairs, flying above the forest canopy, in search of bird nests and other prey. **Voice**: shrill cry, during courtship display. **Nesting**: November-March. **Eggs**: 1, pale pink, densely stippled with red.

ಕರಿ ಗಿಡುಗ ***(ಕರ್ತಪದ್ದ್)*** 69-81 ಸೆಂಮೀ. ಕಪ್ಪು ಬಣ್ಣದ ಮೈಗೆ, ಅಚ್ಚ ಹಳದಿ ಕೊಕ್ಕು ಮತ್ತು ಕಾಲು; ಹಾರುವಾಗ ಬೆರಳುಗಳಂತಿರುವ ರೆಕ್ಕೆಯ ತುದಿ; ರೆಕ್ಕೆಯ ಕೆಳಗೆ ಪೇಲವ ಬಿಳಿಪಟ್ಟಿ ಮತ್ತು ಕಣ್ಣಿನ ಕೆಳಗೆ ಬಿಳಿಮಚ್ಚೆ. ಎತ್ತರದಲ್ಲಿ, ಜೋಡಿಯಾಗಿ ಹಾರಾಡುತ್ತಾ, ಇತರ ಹಕ್ಕಿಗಳ ಗೂಡನ್ನು ಬೇಟೆಯಾಡುತ್ತವೆ.

39. Bonelli's Eagle *(Hieraaetus fasciatus)* R Kite+ Slender eagle; dark brown upperparts with heavy black vertical streaks; no crest; white to buff below, vertically streaked black; long tail with broad black sub-terminal band; barred flight feathers; feathered yellow tarsus. Young ones are pale brown; paler head and barred tail without terminal band. Solitary or pairs; powerful, bold hunter of animals larger than its size. **Food**: caught from ambush or pursuit, small mammals, even larger birds like storks, crows, and geese. **Voice**: rarely heard; shrill scream *kie..kie..kikikikik*...or melodious, longer *eeuoo*.. **Nesting**: December-January; nest on trees and cliff ledges. **Eggs**: 2, white and oval.

ಉದ್ದಬಾಲದ ಗಿಡುಗ ***(ನೀಳಬಾಲ್‌ರ ಕ್‌ಡುವ)*** 68-72 ಸೆಂಮೀ. ಸಪೂರ ದೇಹ. ಕಡುಗಂದು ಮೇಲ್ಮೈ ಮೇಲೆ ಕಪ್ಪು ಗೀರುಗಳು; ಮಾಸಲು ಬಿಳಿ ಕೆಳಮೈ ಮೇಲೆ ಕಪ್ಪು ಗೀರುಗಳು; ರೆಕ್ಕೆಗಳಲ್ಲಿ ಮತ್ತು ಬೂದು ಬಾಲದಲ್ಲಿ ಕಪ್ಪು ಪಟ್ಟಿಗಳು; ಗರಿಗಳಿಂದಾವೃತ ಹಳದಿ ಕಾಲುಗಳು. ಒಂಟಿಯಾಗಿ ಹಾರಾಡುತ್ತಾ, ತನಗಿಂತ ದೊಡ್ಡಗಾತ್ರದ ಪ್ರಾಣಿಗಳನ್ನೂ ಬೇಟೆಯಾಡುವುದು. *ಕೀ.ಕೀ.ಕಿಕಿಕಿ..* ತೀಕ್ಷ್ಣ ಕೂಗು.

40. Rufous-bellied Eagle (*Hieraaetus kienerii)* Rufous-bellied Hawk Eagle R Kite+ Glossy black above; distinct short crest; white throat and breast, streaked vertically black; rich rufous-chestnut below, streaked black; lightly barred tail with dark tip. Young ones are brown with white supercilium and lighter underparts. Typical hawk-eagle; prefers dense forest. **Food**: small mammals especially squirrels and large birds. **Voice**: an unpleasant scream, otherwise silent. **Nesting**: December-March; nest on a leafy tree in thick forest. **Eggs**: 1, white with red blotches.

ಕಂದುಹೊಟ್ಟೆಯ ಗಿಡುಗ ***(ಚೋಂದಪೊಟ್ಟೆ ಕ್‌ಡುವ)*** 53-61 ಸೆಂಮೀ. ಹೊಳೆವ ಕಪ್ಪು ಮೇಲ್ಮೈ; ಚಿಕ್ಕ ಜುಟ್ಟು; ಬಿಳಿ ಗಂಟಲು, ಕತ್ತು; ಕಪ್ಪು ಗೀರುಗಳಿರುವ ಬಿಳಿ ಎದೆ ಹಾಗೂ ಕೆಂಗಂದು ಕೆಳಮೈ; ಬಾಲದಲ್ಲಿ ಕಪ್ಪು ಅಡ್ಡಪಟ್ಟಿಗಳು. ದಟ್ಟ ಅರಣ್ಯವಾಸಿ. ಅಳಿಲು, ದೊಡ್ಡಹಕ್ಕಿಗಳು, ಆಹಾರ. ಅಪರೂಪಕ್ಕೆ, ಕೇಳಲು ಹಿತವಿಲ್ಲದ ಕಿರಿಚುವಿಕೆ.

41. Crested Hawk-Eagle *(Spizaetus cirrhatus cirrhatus)* R Kite+ A distinct subspecies of Changeable Hawk-Eagle. Slender forest eagle with brownish grey upperparts; light supercilium; long narrow crest; white throat, breast and upper abdomen, streaked vertically with chocolate to black; light rufous lower abdomen; feathered yellow tarsus; long, lightly barred tail. Solitary in well-wooded country, seen perched on a tall tree, near forest clearing waiting for a suitable prey; pounces on them with terrific charge and carries them away in its claws. **Voice**: shrill, loud *ki.ki.ki.ki.ki.keee*.. **Nesting**: December-April. **Eggs**: 1, greyish white.

ಜುಟ್ಟಿನ ಗಿಡುಗ ***(ಕೊಟ್ಪ್‌ಕ್‌ಡುವ)*** 72 ಸೆಂಮೀ. ಬೂದುಗಂದು ಮೇಲ್ಮೈ; ತಲೆಯ ಮೇಲೆ ಉದ್ದನಾದ ಜುಟ್ಟು; ಬಿಳಿ ಮುಂಭಾಗದಲ್ಲಿ ಕಪ್ಪು ಗೀರುಗಳು; ಪಟ್ಟೆ ಬಾಲ; ತಿಳಿಗಂದು ಗರಿಗಳಿರುವ ಕಾಲು. ಒಂಟಿಯಾಗಿ ಒತ್ತಾದ ಕಾಡುಗಳಲ್ಲಿ ಮರದ ತುದಿಯಲ್ಲಿ ಕುಳಿತು ಹೊಂಚುತ್ತದೆ; ಚಿಕ್ಕ ಪಕ್ಷಿಗಳ ಗೂಡಿನ ಮೇಲೂ ಧಾಳಿಮಾಡುತ್ತವೆ. ಬೇಟೆಯನ್ನು ಕಂಡರೆ, ಅತಿವೇಗದಿಂದ ಧುಮುಕಿ, ಕಾಲುಗಳಲ್ಲಿ ಬಾಚಿಕೊಂಡು ಎಗರುತ್ತದೆ. ಕೀಚಲು ಧ್ವನಿಯ *ಕಿ.ಕಿ.ಕಿ.ಕೀ..* ಕೂಗು.

42. Greater Grey-headed Fish-Eagle *(Ichthyophaga ichthyaetus)* Grey-headed Fishing Eagle R Kite+ Dark greyish brown above; grey head, neck, breast; white belly and vent; short white tail with broad, black terminal band, best seen in flight. Solitary

or pairs, seen near perennial streams, sitting bolt upright on a branch overhanging a stream; captures fish from surface without plunging. **Food**: also fish. **Voice**: weird, resonant metallic scream. **Nesting**: November-March; nest on a huge tree near water. **Eggs**: 2-4, white.

ದೊಡ್ಡ ಬೂದುತಲೆ ಮೀನುಗಿಡುಗ *(ಕಪ್ಪೆಪದ್ದ್)* 74 ಸೆಂಮೀ. ಒಟ್ಟಾರೆ ಕಡುಬೂದು ಬಣ್ಣ; ಕೆಳಹೊಟ್ಟೆ, ಬಾಲ, ಬಿಳಿ; ರೆಕ್ಕೆ ಮತ್ತು ಬಾಲದ ತುದಿ, ಅಚ್ಚಗಪ್ಪು. ನೀರಿನ ಬಳಿ, ದೊಡ್ಡ ಮರದ ಮೇಲೆ ಒಂಟಿಯಾಗಿ ಕುಳಿತು, ಮೀನಿಗೆ ಹೊಂಚುಹಾಕುವುದು. ನೀರಿನಲ್ಲಿ ಮುಳುಗದೆ ಬೇಟೆಯನ್ನು ಹಿಡಿಯುವ ಚಾಕಚಕ್ಯತೆ! ವಿಕಾರವಾದ ಕಂಚಿನ ಕೂಗು. ನೀರಿನ ಬಳಿ ಎತ್ತರವಾದ ಮರದ ಮೇಲೆ ದೊಡ್ಡ ಅಟ್ಟಣಿಗೆ ಗೂಡು.

43. Short-toed Snake-Eagle *(Circaetus gallicus)* Short-toed Eagle R Kite+ Heavy-set eagle with a large owl-like head; greyish brown upperparts, bristly face feathers directed upwards; light brown neck, breast with vertical dark streaks; white underparts, broadly barred with dark brown; unfeathered grey legs; banded, short tail. Solitary, seen around foothills and fields; hovers high in sky to scan the ground and swoops down with tremendous dive for prey. **Food**: snakes, lizards, sickly rodents and birds. **Voice**: loud, musical, plaintive *weeoo.weeoo*.. scream, during courting display. **Nesting**: December-May; nest in a stand-alone tree in scrub jungle. **Eggs**: 1, white, broad-oval.

ಪನ್ನಗಾರಿ 63-68 ಸೆಂಮೀ. ದೊಡ್ಡ ತಲೆ; ಬೂದುಗಂದು ಮೇಲ್ಮೈ; ತಿಳಿಗಂದು ಎದೆಯ ಮೇಲೆ ಕಪ್ಪು ಗೀರುಗಳು ಮತ್ತು ಬಿಳಿ ಹೊಟ್ಟೆಯ ಮೇಲೆ ಅಡ್ಡಡ್ಡವಾದ ಕಂದು ಮಚ್ಚೆಗಳು; ಪಟ್ಟೆಬಾಲ. ಹಾರುವಾಗ ಬಿಳಿ ಕೆಳಮೈ ಮೇಲೆ ಕಪ್ಪು ರೆಕ್ಕೆಯ ಪುಕ್ಕಗಳು ಎದ್ದು ಕಾಣುತ್ತವೆ. ಒಂಟಿಯಾಗಿ, ಬೆಟ್ಟದ ಬುಡದಲ್ಲಿ, ಗದ್ದೆಗಳ ಮೇಲೆ, ಹೊಂಚುಹಾಕುತ್ತಾ, ವಾಯುವೇಗದಲ್ಲಿ ಧುಮುಕಿ ಬೇಟೆಯನ್ನು ಹಿಡಿಯುವುದು. ದೊಡ್ಡ ಸ್ವರದ ಪ್ಯೂವ್.ಪ್ಯೂವ್.. ಕೂಗು.

44. Crested Serpent-Eagle *(Spilornis cheela)* R Kite+ Dark brown above with a prominent pied nuchal crest, visible when erected; pale brown underparts, finely barred and spotted black-white; broad white bar across the black tail and two such bars across the broad, round wings best seen in flight. Young ones have brown-white crest and whiter underparts. Singly or pairs, perched in leafy branch, or flying over forest; dives on prey, raises crest when alarmed. **Voice**: loud, whistling scream *keee.kek.kek.kek.kee*.. **Nesting**: December-March; nest on a tall soaring tree near stream or clearing. **Eggs**: 1, dull white, blotched with reddish brown.

ತುರಾಯಿ ಪನ್ನಗಾರಿ *(ಜೆಡೆಕ್‌ಡುವ)* 74 ಸೆಂಮೀ. ತಲೆಯ ಮೇಲೆ ಕಪ್ಪು–ಬಿಳಿ ಹೆಡೆಯಂತಹ ಜುಟ್ಟು; ಕಂದು ಕೆಳಮೈ ಮೇಲೆ ಸಣ್ಣ ಕಪ್ಪು–ಬಿಳಿ ಚುಕ್ಕೆಗಳು; ಕಪ್ಪು ಮೊಂಡುಬಾಲದಲ್ಲಿ ಹಾಗೂ ರೆಕ್ಕೆಗಳಲ್ಲಿ ಬಿಳಿಪಟ್ಟಿಗಳು. ಕೂರುವಾಗ, ಕುಳಿತಾಕ್ಷಣ ಅಥವಾ ಬೆದರಿದಾಗ ಜುಟ್ಟು ಸೆಟೆದು ನಿಲ್ಲುತ್ತದೆ. ಒಂಟಿಯಾಗಿ ಒತ್ತಾದ ಎಲೆಗಳಿರುವ ಅರಣ್ಯವ್ಯಾಪ್ತಿಯಲ್ಲಿ ಹಾರಾಡುವುದನ್ನು ಕಾಣಬಹುದು. ಬೇಟೆಯನ್ನು ಬೆನ್ನಟ್ಟಿ ಹಿಡಿಯುವುದು. ಗಟ್ಟಿಯಾದ *ಕೀ..ಕೆ.ಕೆ.ಕೆ.ಕೀ..* ಸಿಳ್ಳು.

45. White-eyed Buzzard *(Butastur teesa)* White-eyed Buzzard Eagle R Crow+ Ashy brown above with a white throat; vertical chin stripe; dark cheek stripes; white patch on nape; white eyes; orange-yellow cere; pale buff shoulder patch; brown and white underparts. Solitary, seen in open country, avoiding humid and dense forest; rather dull and sluggish, perched on blunt posts looking out for a meal. **Food**: locusts,

grasshoppers, crickets, mice, lizards and frogs; farmer's friend. **Voice**: musical, plaintive *te..twee..*, especially high up in sky. **Nesting**: February-May; nest in the fork of a dense tree. **Eggs**: 3, greenish white, broad-oval.

ಬಿಳಿಗಣ್ಣಿನ ಗಿಡುಗ ***(ಬೊಳ್ತಕಣ್ಣ್‌ರ ಪದ್ದ್)*** 43 ಸೆಂಮೀ. ಬಿಳಿ ಕಣ್ಣುಂಗುರ ಮತ್ತು ಗಂಟಲು; ಕೆನ್ನೆಯ ಮೇಲೆ ಎರಡು ಮತ್ತು ಗಲ್ಲದ ಮಧ್ಯೆ ಕಪ್ಪು ಗೀರುಗಳು. ಬೂದುಗಂದು ದೇಹ; ಹಾರುವಾಗ ರೆಕ್ಕೆಯಲ್ಲಿ ಕಪ್ಪು-ಬಿಳಿ ಪಟ್ಟಿಗಳು. ಒಣಗಾಡುಗಳಲ್ಲಿ ವಾಸ. ರೈತನ ಮಿತ್ರ. ಎತ್ತರದಲ್ಲಿ ಹಾರುವಾಗ *ಟೀ.ಟ್ವೀ..* ಇಂಪಾದ ಉಲಿತ.

46. Shikra *(Accipiter badius)* R Crow- Squat, somewhat fat grey head; bluish grey above; white below with brown cross-bars; yellow eyes; grey throat stripe; barred tail; feathered yellow legs. Female, browner. Younger ones have broad, brown vertical streaks below. Solitary or pairs, seen in tree groves near villages and cultivation; pounce on an unwary prey; flight swift, typically, with wing flaps followed by short glide; swooping high before alighting on a tree. **Voice**: loud, harsh, challenging *teeu.teeu.teeu..* similar to that of a drongo or shrill *tiwik..* **Nesting**: March-June. **Eggs**: 3-4, bluish white, with grey spots.

ಬಿಜ್ಜು 30-34 ಸೆಂಮೀ. ಗಿಡ್ಡ ಕತ್ತಿನ ಮೇಲೆ ಟೊಣಪನ ತಲೆ; ಬೂದು-ನೀಲಿ ಮೇಲ್ಮೈ; ಬಿಳಿ ಕೆಳಮೈ ಮೇಲೆ ಕಂದು ಗೀರುಗಳು; ಪಟ್ಟಿ ಬಾಲ; ಗರಿಗಳಿರುವ ಹಳದಿ ಕಾಲುಗಳು. ಒಂಟಿಯಾಗಿ, ಕುರುಚಲು ಕಾಡು, ತೋಪುಗಳಲ್ಲಿ, ಹೊಲ-ಗದ್ದೆಗಳ ಬಳಿಯಿರುವ ಮರಗಳ ಎಲೆಮರೆಯಲ್ಲಿ ಕುಳಿತು ಬೇಟೆಯರಸುತ್ತದೆ. ಸಣ್ಣ-ಪುಟ್ಟ ಪಕ್ಷಿ-ಪ್ರಾಣಿಗಳೂ ಇದರ ಆಹಾರದ ಪಟ್ಟಿಯಲ್ಲಿವೆ. ಬೇಟೆಗೆ ಅಪಾಯದ ಅರಿವಾಗುವುದರ ಒಳಗೆ ಹಠಾತ್ತನೆ ಎರಗಿ ಹಿಡಿಯುತ್ತದೆ. ಕೋಳಿಕಳ್ಳ. ಗಟ್ಟಿಯಾದ *ಟೀ.ಯೂ..ಟೀ.ಯೂ..* ಕೂಗು.

47. Crested Goshawk *(Accipiter trivirgatus)* R Crow+ Short winged hawk with dark brown upperparts and greyish black crown, nuchal crest; white throat; black mesial stripe from chin to breast; white below, with barred vertical streaks on breast and brown transverse bars below; white undertail coverts; 4 dark brown bars on tail. Solitary, remaining hidden in foliage near forest clearing, having favourite hunting spots; even sores high over forests; hunts like Shikra, by surprising the prey. **Voice**: shrill yelp and loud scream. **Nesting**: March-May; nest massive platform of sticks lined with leaves in dense trees. **Eggs**: 2-3, bluish white.

ಜುಟ್ಟಿನ ಹದ್ದು ***(ಕೊಟ್ಟ್‌ಪದ್ದ್)*** 40-46 ಸೆಂಮೀ. ಬೂದುಗಪ್ಪು ನೆತ್ತಿ ಮತ್ತು ಜುಟ್ಟು; ಬಿಳಿ ಗಲ್ಲದ ಮಧ್ಯೆ ಉದ್ದವಾದ ಕಪ್ಪು ಗೀರು; ಕಂದು ಮೇಲ್ಮೈ; ಬಿಳಿ ಕೆಳಮೈಗೆ ಕಂದು ಗೀರುಗಳು; ಪಟ್ಟಿಬಾಲ. ಎಲೆಗಳ ನಡುವೆ, ಒಂಟಿಯಾಗಿ ಅಡಗಿ, ಮಿಕಕ್ಕೆ ಅರಿವಿಲ್ಲದಂತೆ, ಅದರ ಮೇಲೆರಗಿ ಹಿಡಿಯುವುದು. ಕೀಚಲುಧ್ವನಿಯ ಕೂಗು.

48. Black Baza *(Aviceda leuphotes)* Black-crested Baza R Pigeon+ Black and white hawk with black head, long crest and neck; white breast; black upperparts with white and chestnut patches on shoulder and flight feathers; pale white underparts and flanks with chestnut bars; black vent and undertail coverts. Seen singly or as small party in forest clearings and shola edges. **Food**: small vertebrates like lizards and frogs perch. **Voice**: mewing squeal *peow..*, especially during breeding season along with aerial gymnastics. **Nesting**: February-July. **Eggs**: 2-3, greyish white.

ಕರಿ ಗೃಧ್ರ 33 ಸೆಂಮೀ. ಕಪ್ಪು ತಲೆ, ಕತ್ತು ಮತ್ತು ಉದ್ದನಾದ ಜುಟ್ಟು; ಕಪ್ಪು ಮೇಲ್ಮೈ ಮೇಲೆ ಬಿಳಿ ಮತ್ತು ಕೆಂಗಂದು ಮಚ್ಚೆಗಳು; ಬಿಳಿ ಎದೆ; ಪೇಲವ ಕೆಳಮೈ ಮೇಲೆ ಕೆಂಗಂದು ಪಟ್ಟಿಗಳು; ಕಪ್ಪು ಕಿಬ್ಬೊಟ್ಟೆ. ಒಂಟಿಯಾಗಿ ಅರಣ್ಯದ ಹೊರವಲಯಗಳಲ್ಲಿ ಕಾಣಬಹುದು. ಪ್ಯೂ.. ಬೆಕ್ಕಿನ ಕೂಗು.

49. **Eurasian Sparrowhawk** *(Accipiter nisus)* Sparrow Hawk R Crow- Similar to Shikra, but has longer legs; rufous cheek patch and no mesial stripe; white supercilium, especially in young; 4-5 black bands on tail. Younger ones are dark brown; white neck; barred underparts. Solitary; hunts like a Shikra. **Food**: almost exclusively birds, also hares. **Voice**: loud, shrill, alarm call *teen..tin..titititi?* **Nesting**: April-June; nest, either self-made or unused nest of a crow. **Eggs**: 4-6, buffy white with dark spots.

ಗುಬ್ಬಿಗಿಡುಗ 31-36 ಸೆಂಮೀ. ನೋಡಲು ಹಾಗೂ ಸ್ವಭಾವಗಳು ಬಿಜ್ಜುವಿನಂತೆ, ಆದರೆ ತಿಳಿಗಂದು ಕೆನ್ನೆ; ಬಿಳಿ ಹುಬ್ಬು; ಗಲ್ಲದ ಮೇಲೆ ಕಪ್ಪು ಗೀರಿಲ್ಲ; ಬಾಲದಲ್ಲಿ ೪-೫ ಪಟ್ಟಿಗಳು; ಉದ್ದ ಕಾಲುಗಳು. *ಟೀನ್.ಟಿನ್.ಟಿಟಿಟಿ?* ಪ್ರಶ್ನಾರ್ಥಕ ಕೂಗು.

50. Besra Sparrowhawk *(Accipiter virgatus)* R House Crow- Adult male, dark slaty grey upperparts; short wings; white chin, throat with distinct black mesial stripe and two faint moustachial stripes; rufous breast and flanks, barred; square grey tail with 3-4 black bands. Female, has rich brown upperparts with slaty black crown and nape. Immatures are rufous brown, with dark brown stripes; white underparts;. Habits similar to hawks. **Food**: also squirrels, mice, bats lizards and insects. **Voice**: *tchew..tchew..* squeals. **Nesting**: March-June. **Eggs**: 3-5, as those of 49.

ಕರಿ ಗುಬ್ಬಿಗಿಡುಗ *(ಪಕ್ಕಿ ಕ್‌ರ್‌ಕೊಟ್ಟ)* 29-34 ಸೆಂಮೀ. ನೋಡಲು ಹಾಗೂ ಸ್ವಭಾವದಲ್ಲಿ ಗುಬ್ಬಿ-ಗಿಡುಗನಂತೆ, ಆದರೆ, ಗಾಢ ಬೂದು-ನೀಲಿ ಮೈ, ಕತ್ತಿನ ಮಧ್ಯೆ ಕಪ್ಪು ಉದ್ದಗೀರು; ಕೆಂಗಂದು ಎದೆ, ಪಕ್ಕೆಗಳಲ್ಲಿ ಬಿಳಿ-ಕೆಂಗಂದು ಗೀರುಗಳು; ೩-೪ ಕರಿಪಟ್ಟಿಯ ಬೂದು ಬಾಲ. ತ್ಚ್ಯೂ..ತ್ಚ್ಯೂ ಕೂಗು. ಉಳಿದೆಲ್ಲ ೪೯ರಂತೆ.

51. Pallid Harrier *(Circus macrourus)* Pale Harrier M Kite- Slender hawk. Male, ashy grey plumage; long narrow pointed wings with black tips, best seen in flight; long white tail with grey cross bars. Female, brown plumage with an owl-like ruff around head. Solitary, seen sailing gracefully above cultivation and grassland; perches on ground; typical mid-air survey on motionless wings, pouncing on prey, wheeling sharply -- almost in reverse gear. **Voice**: Usually silent except high pitched, chattering *kik.kik.kik.* display calls. **Nesting**: winter visitor, nesting in E Europe and C Asia.

ಸೆಳೆವ 46-51 ಸೆಂಮೀ. ಗಂಡುಹಕ್ಕಿಗೆ ತಿಳಿಬೂದು ಮೈ; ಉದ್ದನಾದ, ಚೂಪಾದ ರೆಕ್ಕೆಗಳಿಗೆ ಕಪ್ಪು ತುದಿ; ಬೂದು ಪಟ್ಟಿಗಳಿರುವ ಬಿಳಿ ಬಾಲ. ಹೆಣ್ಣುಹಕ್ಕಿಗೆ ತಿಳಿಗಂದು ದೇಹ. ಕೃಷಿಭೂಮಿ, ಕೆರೆ, ಜೌಗುಪ್ರದೇಶಗಳ ಅಂಚಿನಲ್ಲಿ ಮರದ ಮೇಲೆ ವಾಸ. ಆಕಾಶದಲ್ಲಿ ಅಲುಗಾಡದೇ ನಿಂತು ಬೇಟೆಯರಸುವುದನ್ನು ಮತ್ತು ಧೊಪ್ಪನೆ ಎರಗಿ ಬೇಟೆ ಹಿಡಿದು, ಛಂಗನೆ ಮೇಲೇರುವ ಪರಿ ನೋಡಲು ಚೆಂದ. ಪೂರ್ವ ಯೂರೋಪ್-ಮಧ್ಯ ಏಷ್ಯಾದಿಂದ ಚಳಿಗಾಲದ ವಲಸೆಗಾರ.

52. Western Marsh-Harrier *(Circus aeruginosus)* Marsh Harrier M Kite- Male, dark brown above with dull rufous head, breast; silver-grey wings with black tips; rufous underparts; silver-grey tail. Female and young ones have choco-brown body with buff

head and shoulders. Solitary or pairs, seen sailing low over marshes and paddyfields; also sits on ground. **Voice**: Usually silent except male's shrill, far reaching *kweeoo*. **Food**: also fish, frogs, waterbirds and carrion. Winter visitor, breeding in C Asia.

ಜೌಗು ಸೆಳೆವ 54-59 ಸೆಂಮೀ. ಕಡುಗಂದು ಮೇಲ್ಮೈ; ಬೂದು ರೆಕ್ಕೆಗಳಿಗೆ ಕಪ್ಪು ತುದಿ; ಬೆಳ್ಳಿ ಬಾಲ. ಹೆಣ್ಣುಹಕ್ಕಿಗೆ ಕಡುಗಂದು ಮೈ. ಕಡಿಮೆ ಎತ್ತರದಲ್ಲಿ, ಗದ್ದೆ, ಜೌಗು ಪ್ರದೇಶಗಳಲ್ಲಿ ಹಾರಾಡುವುದನ್ನು ಕಾಣಬಹುದು. ಮಧ್ಯ ಏಷ್ಯಾದಿಂದ ಚಳಿಗಾಲದ ವಲಸೆಗಾರ.

53. Red-headed Vulture *(Sarcogyps calvus)* Black or King Vulture R Vulture Black plumage with a naked red head, neck and legs; white breast, thigh patches; grey and white band along underside of wings, seen in flight. Young ones are dark brown with white abdomen and undertail. Less sociable at carcass, waiting singly, to snatch a morsel. **Food**: chiefly scavenges on dead animals. **Voice**: hoarse croak. **Nesting**: December-April; nest, a massive platform on a tall tree. **Eggs**: 1, white, roundish oval.

ಕೆಂದಲೆ ರಣಹದ್ದು *(ಚೋಂದಮಂಡೆ ಆಡೆಪದ್ದ್)* 84 ಸೆಂಮೀ. ಕಪ್ಪು ದೇಹಕ್ಕೆ, ಪುಕ್ಕಗಳಿಲ್ಲದ ಕೆಂಪು ತಲೆ, ಕುತ್ತಿಗೆ ಮತ್ತು ಕಾಲುಗಳು; ಬಿಳಿ ಗಂಟಲು ಮತ್ತು ತೊಡೆಪಟ್ಟಿ. ಬಯಲುಗಾಡು, ಹೊಲ-ಗದ್ದೆಗಳ ಬಳಿ ಬೇಟೆ. ರಣಹೇಡಿ; ಸತ್ತಪ್ರಾಣಿಗಳನ್ನು ಇತರ ಹದ್ದುಗಳಿಂದ ಸೆಳೆಯಲು, ಒಂಟಿಯಾಗಿ ಹೊಂಚುಹಾಕುವುದು. ಗೊಗ್ಗರು ಗಂಟಲ ಕೂಗು.

54. Indian White-backed Vulture *(Gyps bengalensis)* R Vulture+ Useful scavenger with blackish brown plumage; naked muddy brown, scraggy head and neck with a white buff at the base; distinct white rump; in overhead flight, white underwing coverts contrasting with dark wings and underbody. Young ones are brown and no white on underwings. Most common and gregarious, seen with other scavenging birds at carcass and garbage dumps. Wonderful flier, good glider but needs a runway; typically digs head and neck into shoulders; basks in sun and bathes in shallow water. **Voice**: loud screeches while feeding. **Nesting**: October-March. **Eggs**: 1, white with reddish spots and speckles. Its fast declining population is attributable to the extensive misuse of the medicine Diclofenac in veterinary field.

ಬಿಳಿಬೆನ್ನಿನ ರಣಹದ್ದು *(ಜಡ್ಡ್‌ಪದ್ದ್)* 90 ಸೆಂಮೀ. ಸಾಧಾರಣವಾಗಿ ಎಲ್ಲೆಡೆ ಕಾಣುವ, ಪರಿಸರವನ್ನು ಚೊಕ್ಕಟವಾಗಿಡುವ ರಣಹದ್ದು. ಕರಿಗಂದು ಮೈಬಣ್ಣ; ಮಣ್ಣು ಬಣ್ಣದ, ಗರಿಗಳಿಲ್ಲದ ತಲೆ, ಕತ್ತು; ಕೊರಳಿನ ಬುಡದಲ್ಲಿ ಬಿಳಿ ಮಕ್ಮಲ್ ಕಂಠಾಭರಣ; ಬಿಳಿ ಪೃಷ್ಠ; ಹಾರುವಾಗ ರೆಕ್ಕೆಗಳಲ್ಲಿ ಅಗಲವಾದ ಕಪ್ಪು ಅಂಚು ಮತ್ತು ಬಿಳಿಬೆನ್ನು. ಸತ್ತ ಪ್ರಾಣಿಗಳ, ಕಸಗುಂಡಿಗಳ ಸುತ್ತ ಗುಂಪಾಗಿ, ಅರಚುತ್ತಾ, ಕಿತ್ತಾಡುವುದನ್ನು ಕಾಣಬಹುದು. ಎತ್ತರವಾದ ಮರದ ಮೇಲೆ ಬೃಹತ್ತಾದ ಅಟ್ಟಣಿಗೆ ಗೂಡು.

55. Long-billed Vulture *(Gyps indicus)* Indian Long-billed Vulture R Vulture+ Pale brown plumage with hair-like feathers on naked, greyish head and neck, with a white buff at the base; dull sandy brown underparts; broad, black trailing edge of underwings, best seen in flight. Habits similar to 53. Silent. **Nesting**: November-March; nest in cliffs. **Eggs**: 1, white.

ನೀಳಕೊಕ್ಕಿನ ರಣಹದ್ದು ***(ಅಡೆಪದ್ದ್)*** 92 ಸೆಂಮೀ. ತಿಳಿಗಂದು ಮೈ; ಗರಿಗಳಿಲ್ಲದ ಬೂದು ತಲೆ, ಕತ್ತು; ಕತ್ತಿನ ಬುಡದಲ್ಲಿ ಬಿಳಿ ಕಂಠಾಭರಣ; ಹಾರುವಾಗ ಅಗಲವಾದ ಕಪ್ಪು ರೆಕ್ಕೆಯಂಚುಗಳು. ಉಳಿದದ್ದು ಜಿಖರಂತೆ. ಅತೀಕಡಿಮೆ ಸಮಯದಲ್ಲಿ ಸತ್ತ ಪ್ರಾಣಿಗಳ ಸುತ್ತ ಗುಂಪುಗೂಡಿ, ಮಾಂಸಕ್ಕಾಗಿ ಪರಸ್ಪರ ಎಳೆದಾಡುತ್ತಾ ಸಂಹಾರ ಮಾಡುವುವು!

56. Egyptian Vulture *(Neophron percnopterus)* Scavenger Vulture, Pharaoh's Chicken R Kite+ Beneficial bird, with a repulsive habit of devouring any kind of garbage; white plumage with naked yellow head, bill and legs; thick ruff around neck; wedge shaped tail and black flight feathers, seen in flight. Immature ones are brown, like a kite, but without forked tail. Singly or 2-3, seen around human habitations, on ground, with a high-stepping, waddling gait, picking up offal and wayside animal carcasses; adept at opening even the hard shell of a turtle. **Voice**: Usually silent. **Nesting**: February-April; large, untidy mass of twigs, rubbish and rags on ruined buildings or in the fork of tree. **Eggs**: 2, attractive, colour varying from white to pale red, blotched with brown.

ಬಿಳಿ ರಣಹದ್ದು ***(ಬೊಳ್ತ ಅಡೆಪದ್ದ್)*** 64 ಸೆಂಮೀ. ವಾತಾವರಣವನ್ನು ಶುದ್ಧವಾಗಿಡಲು ಶ್ರಮಿಸುವ ರಣಹದ್ದು. ಬಿಳಿದೇಹಕ್ಕೆ, ಪುಕ್ಕವಿಲ್ಲದ ಹಳದಿ ತಲೆ, ಕತ್ತು, ಕೊಕ್ಕು ಮತ್ತು ಕಾಲು; ಕುತ್ತಿಗೆಯ ಬುಡದಲ್ಲಿ ಬಿಳಿ ಕಂಠಾಭರಣ; ಹಾರುವಾಗ ಬಿಳಿ ಕೆಳಮೈ ಮತ್ತು ರೆಕ್ಕೆಗಳಲ್ಲಿ ಅಗಲವಾದ ಕಪ್ಪು ಅಂಚುಗಳು ಎದ್ದು ಕಾಣುತ್ತವೆ. ಜನವಸತಿ, ಮೈದಾನ ಪ್ರದೇಶಗಳಲ್ಲಿ ಬಂಡೆ, ಎತ್ತರದ ಮರ ಅಥವಾ ಕಟ್ಟಡದ ಮೇಲೆ ಕಾಣಬಹುದು. ಸತ್ತ ಪ್ರಾಣಿಗಳ ಸುತ್ತ, ಹೊಲಸು ಪ್ರದೇಶಗಳಲ್ಲಿ ಓಲಾಡಿಕೊಂಡು ನಡೆ.

Osprey *(Pandionidae)*

ಡೇಗೆಗಳು

57. Osprey *(Pandion haliaetus)* M Kite- Dark brown above with white face, crown, front of neck and underparts; dark streak through eyes extending to the sides of neck; brown and streaked breast band, broader in female; long, relatively narrow, angled black-tipped wings, white and barred below, with dark patch at the angles; comparatively short tail. Solitary, seen mostly around water; flies up and down scanning the water surface with legs dangling, plunges with a splash, carrying the fish in talons, to a favourite perch. **Food**: exclusively fish. **Voice**: series of hoarse, falling, nasal *pyun.pyun.pyun.* screaming whistle. Winter visitor, breeding in Himalayas.

ಡೇಗೆ 56 ಸೆಂಮೀ. ಕಡುಗಂದು ಮೇಲ್ಮೈ, ಹಿಂಗತ್ತು; ಬಿಳಿ ಮುಖ, ನೆತ್ತಿ, ಕತ್ತಿನ ಮುಂಭಾಗ ಮತ್ತು ಕೆಳಮೈ; ಕಪ್ಪು ಕಣ್ಣುಪಟ್ಟಿ; ಹಾರುವಾಗ ಬಿಳಿ ರೆಕ್ಕೆಗಳ ಮಧ್ಯೆ ಕಂದು ಎದೆಪಟ್ಟಿ ಎದ್ದು ಕಾಣುವುದು. ನೀರ ಬಳಿ, ಒಂಟಿಯಾಗಿ ಬೇಟೆಯರಸುತ್ತ, ಕಾಲುಗಳನ್ನು ಇಳಿಬಿಟ್ಟುಕೊಂಡು ಹಾರುತ್ತಾ, ಬೇಟೆ ಕಂಡಾಗ, ಗುರಿಯಿಟ್ಟು ಧೊಪ್ಪನೆ ನೀರಿಗಪ್ಪಳಿಸಿ, ಮಿಕವನ್ನು ಕಾಲುಗಳಲ್ಲಿ ಗಬಚಿಕೊಂಡು ಹಾರುವುದು. *ಪ್ಯೂಂ.ಪ್ಯೂಂ.ಪ್ಯೂಂ..* ಕೂಗು ಸಿಳ್ಳೆ. ಹಿಮಾಲಯದಿಂದ ನಮ್ಮಲ್ಲಿಗೆ ಬರುವ ಚಳಿಗಾಲದ ವಲಸೆಗಾರ.

Falcons *(Falconidae)*

ಚಾಣಗಳು

These are diurnal birds of prey having a slim body and a short bill that is strongly hooked and toothed; wings long and manifestly pointed; legs strong; toes long; claws hooked and powerful; long tail. Considerable variations in plumage colouration is seen in various phases. Sexes alike, female larger. Swift fliers with frequent rapid wingbeats. Kill the prey on the wing. Food consists chiefly of birds, large insects, rodents and small ground animals. Nest consists of rags and twigs in a crevice or on ledge of cliff and occasionally on trees or uninhabited buildings. Both sexes share nesting duties.

ಸಪೂರ ದೇಹದ, ಚೂಪಾದ, ಉದ್ದ ರೆಕ್ಕೆಯ, ಹಗಲು ಹೊತ್ತು ಬೇಟೆಯರಸುವ, ಶುದ್ಧ ಮಾಂಸಾಹಾರಿ ಹಿಂಸ್ರ ಹಕ್ಕಿಗಳು. ಅದಕ್ಕೆ ತಕ್ಕುದಾದ ಶಕ್ತಿಯುತ, ಚೂಪಾದ, ಕೊಕ್ಕೆಯಂತಹ ಸಣ್ಣ ಕೊಕ್ಕು ಹಾಗೂ ಕಾಲುಗುರುಗಳು. ಹೆಣ್ಣು ಗಾತ್ರದಲ್ಲಿ ತುಸು ದೊಡ್ಡದು. ವೇಗವಾಗಿ, ಹಾರುತ್ತಲೇ ಬೇಟೆಯನ್ನು ಹಿಡಿಯುವುದು. ಸಣ್ಣ ಪ್ರಾಣಿ-ಹಕ್ಕಿಗಳು, ಇಲಿ-ಹೆಗ್ಗಣಗಳು, ಕೀಟಗಳೇ ಆಹಾರ. ಕಮರಿಗಳ ಕೊರಕಲುಗಳಲ್ಲಿ ಕಸ-ಕಡ್ಡಿಗಳನ್ನು ತುಂಬಿದ ಗೂಡು.

58. Common Kestrel *(Falco tinnunculus)* Kestrel R Pigeon+/- Slender. Male, brick-red above with black streaked ashy grey crown, neck, nape, cheek-stripe; buffy underbody with brown streaks and spots; rounded, grey tail, white-tipped with a dark subterminal band. Females, rufous above, with head and neck having black crossbars. Solitary, observed around scrub jungles, open country and cultivated fields. It is typically seen hovering in the air, without even flickering of wings, scanning the ground for a crawling prey; pounces silently with great speed. **Voice**: sharp, peircing *ki.ki.ki.* or *tit..wee..* uttered on the wing. **Nesting**: February-April. **Eggs**: 3-6, pale khaki with red specks.

ಚೋರೆ ಚಾಣ 36 ಸೆಂಮೀ. ಕೆಂಪು ಬೆನ್ನಿನಲ್ಲಿ ಕಪ್ಪು ಗೀರುಗಳು; ಬೂದುಬಣ್ಣದ ತಲೆ, ನೆತ್ತಿ, ಕೆನ್ನೆ; ತಿಳಿ ಕೆಳಮೈ ಮೇಲೆ ಕಂದು ಗೀರು-ಮಚ್ಚೆಗಳು; ಬಿಳಿಯಂಚಿನ ಬೂದುಬಾಲದ ತುದಿಯಲ್ಲಿ ಕಪ್ಪು ಪಟ್ಟಿ. ಹೆಣ್ಣಿಗೆ, ಬೂದು ಬಣ್ಣವಿಲ್ಲ. ಒಂಟಿಯಾಗಿ, ಆಕಾಶದಲ್ಲಿ ಒಂದಿಷ್ಟೂ ರೆಕ್ಕೆ ಬಡಿಯದೇ, ನಿಂತಲ್ಲೆ ನಿಂತು ಅಥವಾ ಬಯಲುಗಾಡುಗಳಲ್ಲಿ ಬೇಟೆಯರಸುವುದು. ನಿಶ್ಶಬ್ದವಾಗಿ ಎರಗಿ ಬೇಟೆ ಹಿಡಿಯುವುದು. ಹಾರುವಾಗ *ಟಿ.ಟ್ವೀ..* ಕೂಗು.

59. Oriental Hobby *(Falco severus)* M Pigeon- Small and robust. Slaty grey above; black head and cheeks; chestnut underparts, paler on throat. Solitary or small flocks; crepuscular; seen around dawn and dusk, in the hilly forests; flies erratically, charges after prey with tremendous speed and eats them on the wing. **Voice**: shrill trill, with squealing *ki.ki.ki.* Winter visitor, breeding in lower Himalayas.

ಕಂತಲೆ ಚಾಣ 27-30 ಸೆಂಮೀ. ಬೂದುಗಪ್ಪು ಮೇಲ್ಮೈ; ಗಂಟಲು, ಎದೆ, ಕೆಳಭಾಗವೆಲ್ಲ ಕೆಂಗಂದು. ಮುಂಜಾನೆ-ಮುಸ್ಸಂಜೆಯ ವೇಳೆ, ಸಣ್ಣಗುಂಪಿನಲ್ಲಿ, ಅತ್ತಿಂದಿತ್ತ ವೇಗವಾಗಿ ಹಾರುತ್ತಾ, ಬೇಟೆಯ ಮೇಲೆರಗಿ, ಹಾರಿಕೊಂಡೇ ತಿನ್ನುವ ಸ್ವಭಾವ. ಹಿಮಾಲಯದ ತಪ್ಪಲಿನಿಂದ ಚಳಿಗಾಲದ ವಲಸೆಗಾರ.

60. Shaheen Falcon *(Falco peregrinus peregrinator)* R Kite- A distinct subspecies of Peregrine Falcon. Powerful broad shouldered falcon with pointed wings. Dark greyish black upperparts with black head, nape and cheek patch; white throat and breast; ferruginous underparts with black bars. Seen singly on cliffs and rocky hillsides. Flight swift, with powerful wingbeats and gliding. **Food**: mainly birds like parakeet, pigeon, partridge and duck. **Voice**: loud, ringing scream or scolding *kayak.kayak..* **Nesting**: March-May; nest on a ledge on a cliff face. **Eggs**: 2-3, pale pink with dark red marks.

ಕಂದು ಚಾಣ 42 ಸೆಂ.ಮೀ. ಅಗಲವಾದ ಭುಜ, ಚೂಪಾದ ರೆಕ್ಕೆಗಳುಳ್ಳ ಸಬಲ ಚಾಣ. ಬೂದುಗಪ್ಪು ಮೇಲ್ಮೈ; ಕಪ್ಪು ತಲೆ, ಹಿಂಗತ್ತು ಮತ್ತು ಕೆನ್ನೆ; ಬಿಳಿ ಗಂಟಲು, ಎದೆ; ಕೆಂಗಂದು ಕೆಳಮೈಯಲ್ಲಿ ಕಪ್ಪು ಮಚ್ಚೆಗಳು. ಒಂಟಿಯಾಗಿ ಬೆಟ್ಟದ ಕಮರಿಗಳಲ್ಲಿ ಬೇಟೆಯರಸುವುದು. ಗಿಳಿ, ಪಾರಿವಾಳ, ಬಾತು ಮುಂತಾದ ಹಕ್ಕಿಗಳ ಆಹಾರ. ಗಟ್ಟಿಯಾದ *ಕ್ಯಕ್.ಕ್ಯಕ್.* ಅರಚು ಕೂಗು.

Pheasants, Partridges and Quails *(Phasianidae)*

ಕವುಜುಗ *(ಗೌಜಲಕ್ಕಿ)*, ಬುರ್ಲಿ, ಕೋಳಿ *(ಕೋಳಿ)* ಮತ್ತು ನವಿಲುಗಳು *(ವ್ಯೈಲ್)*

All are ground-dwelling 'game birds' and food resource for man. Terrestrial, even rest on trees. Their bill is thick and short with upper mandible overhanging over the lower; legs stout and unfeathered; covered with one or more pointed spurs; hallus present; claws short, bent and very strong to scratch the ground for food; wings short and rounded; flight swift and strong but not for distances. Wary in nature, so more often heard than seen. Food consists of grains, seeds, termites, beetle larvae, tender shoots, fruits and insects. Eggs laid on ground in grass scrape, sometimes with scanty lining. Usually only the female incubates the young. Young nidifugous and downy.

ಮರಗಳಲ್ಲಿ ವಾಸ ಮಾಡುವ, ದಪ್ಪ ಕೊಕ್ಕಿನ, ಪುಕ್ಕವಿಲ್ಲದ-ಸಧೃಢ ಕಾಲಿನ ಹಕ್ಕಿಗಳು. ಗಟ್ಟಿಮುಟ್ಟಾದ ಕಾಲ್ಬೆರಳುಗಳು; ಕಾಲುಗಳಲ್ಲಿ ಗೊರಸುಗಳು; ಆಹಾರಕ್ಕಾಗಿ ನೆಲವನ್ನು ಕೆದಕಿ, ಕ್ರಿಮಿ-ಕೀಟಗಳನ್ನರಸಲು ಬಲವಾದ, ಚಿಕ್ಕ, ಬಾಗಿದ ಉಗುರುಗಳು; ಸಮರ್ಥವಾಗಿ, ವೇಗವಾಗಿ, ಪಟಪಟನೆ ರೆಕ್ಕೆ ಬಡಿಯುತ್ತ ಹಾರಿದರೂ, ಹೆಚ್ಚುದೂರ ಹಾರಲಾರದ ಚಿಕ್ಕದಾದ, ದುಂಡಾದ ರೆಕ್ಕೆಗಳು. ಗಾಬರಿಯಾದಾಗ ಹಾರುವುದಕ್ಕಿಂತ ಓಡಿಯೇ ಅವಿತುಕೊಳ್ಳುತ್ತವೆ. ಬಹು ನಾಚಿಕೆ ಸ್ವಭಾವ; ಎಚ್ಚರಿಕೆಯಿಂದ ಓಡಾಡುವುದರಿಂದ ಕಣ್ಣಿಗೆ ಕಾಣುವುದಕ್ಕಿಂತ ಅವುಗಳ ಕೂಗು ಕೇಳುವುದೇ ಹೆಚ್ಚು. ಕಾಳು-ಬೀಜಗಳು, ಕ್ರಿಮಿ-ಕೀಟಗಳು, ಎಲೆಚಿಗುರು, ಹಣ್ಣುಗಳು ಆಹಾರ. ಹುಲ್ಲು, ಕಸಕಡ್ಡಿಗಳಿಂದಾವೃತವಾದ ಸ್ಥಳದಲ್ಲಿ ನೆಲದ ಮೇಲೇ ಮೊಟ್ಟೆಯಿಟ್ಟು, ಕಾವು ಕೊಡುವುವು.

61. Grey Francolin *(Francolinus pondicerianus)* Grey Partridge R Small hen Plump, stub tailed gamebird. Grey-brown and rufous above with bars and blotches; bright rufous yellow throat enclosed in a black loop; buffy rufous below with fine black narrow cross bars across the abdomen, flanks; Sexes alike, but cock with a pointed spur in each leg. Pairs seen in dry open grass and thorn scrub jungles and around cultivations, scratching the ground and cattle dung for food; swift runners, escaping danger by trusting their legs rather than wings. Trapping has drastically reduced their number. **Voice**: male has a challenging, distinct, high-pitched three note *kateetar, kateetar, kateetar* or *patee.la, patee.la*; female, *pe.la, pe.la, pe.la*. **Nesting**: round the year, nest consists of grass-lined scrape on ground, in scrub jungles or ploughed fields. **Eggs**: 4-8, cream coloured.

ಬೂದು ಕವುಜುಗ ***(ಗೌಜಲಕ್ಕಿ)*** 33 ಸೆಂಮೀ. ಹೇಂಟೆಕೋಳಿಯಂತೆ, ತಿಳಿ ಬೂದುಗಂದು ಬಣ್ಣದ ಮೈಮೇಲೆ, ಉದ್ದುದ್ದ-ಅಡ್ಡಡ್ಡ ಗೀರುಗಳು; ಕಪ್ಪು ಆವರಣದಲ್ಲಿ, ಅಚ್ಚ ಹಳದಿ-ಕಂದು ಗಂಟಲು; ತಿಳಿಗಂದು ಕೆಳಮೈ ಮೇಲೆ ಕಪ್ಪು ಅಡ್ಡ-ಉದ್ದ ಗೀರುಗಳು; ತುಂಡು ಬಾಲ; ಗಂಡಿಗೆ ಕಾಲಿನಲ್ಲಿ ಒಂದು ಗೊರಸು. ಉದುರೆಲೆಕಾಡು, ಹುಲ್ಲು, ಮುಳ್ಳು, ಪೊದೆ, ಕುರುಚಲು ಕಾಡು ಪ್ರದೇಶಗಳಲ್ಲಿ, ನೆಲವನ್ನು ಕೆರೆದು, ಆಹಾರ ಹುಡುಕುವುದನ್ನು ಕಾಣಬಹುದು. ವೇಗದ ಓಟಗಾರ. ಗಂಡಿನ *ಪ.ಟೀ.ಲಾ..* ಕೂಗು.

62. Red Spurfowl *(Galloperdix spadicea)* R Partridge+ Shy and skulking, these birds are most likely seen in early morning and evening, when they come out of forest to feed. Males have dark brown crown; brick-red naked eye patch; reddish brown plumage and underparts, scalloped with grey-brown; reddish leg with 2-4 sharp spurs. Female, sandy rufous above and barred; 1-2 spurs in each leg. Solitary or in pairs seen around thick scrub and bamboo jungles; poor fliers, but fast runners; roost in trees. **Voice**: loud cackling notes; male peculiar chuckle like a crow and quick repeated *krr-kwek, krr-kwek, krr-kwek..* cackling call. **Nesting**: January-June. **Eggs**: 3-5, buff coloured.

ಕೆಂಪು ಚಿಟ್ಟುಕೋಳಿ ***(ಕೆದಕೋಳಿ)*** 36 ಸೆಂಮೀ. ನಾಚಿಕೆ ಸ್ವಭಾವ. ಗಂಡಿಗೆ ಕೆಂಗಂದು ಮೈಬಣ್ಣ; ಕಡುಗಂದು ನೆತ್ತಿ; ಕೆಂಪು ನಗ್ನ ಕಣ್ಣುಪಟ್ಟಿ ಹಾಗೂ ೨-೪ ಗೊರಸುಗಳಿರುವ ಕೆಂಪು ಕಾಲು. ಹೆಣ್ಣಿಗೆ ತಿಳಿ ಕೆಂಗಂದು ಮೇಲ್ಮೈ ಮೇಲೆ ಅಡ್ಡ ಪಟ್ಟಿಗಳು. ಕುರಚಲು, ಬಿದಿರುಕಾಡುಗಳಲ್ಲಿ ಮುಂಜಾನೆ ಮತ್ತು ಸಂಜೆಯ ವೇಳೆ ಕಾಣಬಹುದು. ಒಂಟಿಜೀವಿ; ವೇಗದ ಓಟಗಾರ; ಮರದಲ್ಲಿ ತಂಗುವುವು. *ಕ್ರ್.ಕ್ವೆಕ್.ಕ್ರ್.ಕ್ವೆಕ್..* ಕೂಗು.

63. Jungle Bush-Quail *(Perdicula asiatica)* R Dove+ Handsome little bird. Male has chestnut face, streaked and mottled with dark buff and brown; superciliary stripe from forehead backwards and down the sides of the neck; bright chestnut throat patch; whitish below with close black barring. Female similar, but with pale pinkish and rufous underparts. Small parties seen in dry scrub jungle, near forest edges and foothills; rest bunched up, and explode with a whir of wings, when trodden on; always walk in a single file. **Voice**: trilling, loud, musical, long drawn *trr..trr...tr....* call especially when flushed. **Nesting**: August-April, nest near a thick cover. **Eggs**: 4-8, pale grey speckled with black.

ಕಾಡು ಬುರ್ಲಿ ***(ಕಾಡ್ ಕ್‌ರ್‌ಕೋಳಿ)*** 17 ಸೆಂಮೀ. ಗಂಡಿಗೆ ಕಂದು ಮೇಲ್ಮೈ; ಕೆಂಗಂದು ಹುಬ್ಬು; ಅಚ್ಚ ಕೆಂಗಂದು ಗಂಟಲು; ಬಿಳಿ ಕೆಳಮೈ ಮೇಲೆ ಒತ್ತಾದ ಕಪ್ಪು ಗೀರುಗಳು. ಸಣ್ಣ ಗುಂಪಾಗಿ, ಕಾಡಂಚಿನಲ್ಲಿ, ಬೆಟ್ಟದ ತಪ್ಪಲಿನಲ್ಲಿ ವಾಸ; ಸರದಿಯ ಸಾಲಿನಲ್ಲಿ ನಡೆ; ತುರ್ತು ಪರಿಸ್ಥಿತಿ ಬಂದಾಗ ಅಥವಾ ಗಾಬರಿಗೊಂಡಾಗ ಪುರ್ರ್.. ಎಂದು ಒಮ್ಮೆಲೇ ಚೆಲ್ಲಾಪಿಲ್ಲಿಯಾಗಿ ಹಾರಿ, ಪುನಃ ಎಲ್ಲಾ ಒಟ್ಟು ಸೇರುತ್ತವೆ. ವ್ಹಿ.ವ್ಹಿ.ವ್ಹಿ.. ಎಂಬ ಮೂರು ಶಿಳ್ಳೆಯ ಸಂಪರ್ಕ ಕೂಗು. ಸಾಲಾಗಿ ಸಂಜೆ ಹಳ್ಳಗಳಲ್ಲಿ ನೀರು ಕುಡಿಯಲು ಹೋಗುತ್ತವೆ.

64. Painted Bush-Quail *(Perdicula erythrorhynca)* R Dove+ Brightly coloured quail with rufous grey upperparts and rufous underparts, streaked, mottled black; red bill and legs; white supercilium, crossing the black crown and nape; white chin in males. Coveys of 6-10. Habits and food similar to 63. **Voice:** pleasant *kirikee, kirikee, kirikee* call repeated by cock during breeding; soft whistles to keep the covey in one group. **Nesting**: yearlong. Eggs similar to 63.

ಬಣ್ಣದ ಬುರ್ಲಿ ***(ರಂಗ್ ಕ್‌ರ್‌ಕೋಳಿ)*** 16 ಸೆಂಮೀ. ೬೩ರಂತೆ, ಆದರೆ, ಕಪ್ಪು ನೆತ್ತಿ, ಕೆನ್ನೆ-ಹಣೆಗೆ ಅಡ್ಡಲಾಗಿ ಬಿಳಿಹುಬ್ಬು; ಬಿಳಿ ಗಲ್ಲ; ಕೆಂಪು ಕೊಕ್ಕು, ಕಾಲು; ಕೆಂಗಂದು ಕೆಳಮೈ ಮೇಲೆ ಒತ್ತಾದ ಕಪ್ಪು ಮಚ್ಚೆಗಳು. ಕುರುಚಲು, ಬಿದಿರುಗಾಡುಗಳಲ್ಲಿ ವಾಸ. *ಕಿರಿಕೀ..ಕಿರಿಕೀ..* ಕೂಗು. ಉಳಿದೆಲ್ಲ ೬೩ರಂತೆ.

65. Grey Junglefowl *(Gallus sonneratii)* R Hen Breeding male has dark grey plumage, with white feather shafts; coral red wattling over crown and chin; blackish neck with white and yellow short streaks and spots; black, sickle shaped, down arching tail. Female smaller, overall brown, streaked above; white chin and throat; white underbody, with bold streaks on breast giving a scaly appearance; wattling on crown and chin small or absent. Singly or small party in forest and scrub jungle; very shy and wary; scuttle into cover at slightest suspicion. **Voice**: harsh *kuk.kaya..kaya. kark* or angry *kaghak..khagak..* uttered repeatedly. **Nesting**: February-May. Nest of twigs and rags, up in a tree. **Eggs**: 4-7, pale buff.

ಕಾಡುಕೋಳಿ ***(ಕಾಡ್‌ಕೋಳಿ)*** 60-80 ಸೆಂಮೀ. ಹುಂಜಕ್ಕೆ ಹಿಂದೆ, ಕತ್ತಿಯಂತೆ ಕೆಳಕ್ಕೆ ಬಾಗಿರುವ ಬಾಲದ ಗರಿಗಳು; ತಲೆ-ಗಲ್ಲದ ಮೇಲೆ ಅಚ್ಚ ಕೆಂಪು ಮಾಂಸಲ; ಮಣಿಗಳಂತಹ ಕಡುಬೂದು ಕತ್ತು, ಬೆನ್ನು; ಕಂದು ರೆಕ್ಕೆಗಳು. ಹೇಂಟೆಕೋಳಿಯದು ಚಿಕ್ಕ ಗಾತ್ರ; ಮೊಂಡು ಬಾಲ ಮತ್ತು ತಲೆ-ಗಲ್ಲದಲ್ಲಿ ಸಣ್ಣ ಮಾಂಸಲ. ಸದಾಹಸಿರು, ಉದುರೆಲೆ ಮತ್ತು ಕುರುಚಲುಕಾಡುಗಳಲ್ಲಿ ಲಾಂಟಾನ ಪೊದೆ, ಬಿದಿರು ಮೆಳೆಗಳಿರುವೆಡೆ ವಾಸ. ಪುಸಕ್ಕನೆ ಕಾಡು ಸೇರಿಕೊಳ್ಳುವ ಸ್ವಭಾವ. ಕರ್ಕಶ *ಕುಕ್.ಕಯಾ.ಕುಕ್..* ಕೂಗು ಮತ್ತು ರೆಕ್ಕೆ ಬಡಿದು ಶಬ್ದ ಮಾಡುತ್ತವೆ..

66. Indian Peafowl *(Pavo cristatus)* Common Peafowl R Vulture+ Our National bird. Male with gorgeous tail of 1 to 1.5 metres made of upper tail coverts; glistening bare neck and breast with a copper green sheen around the nape; white around the eyes, with a dark eye patch; wire-like crest; brown-black upperparts with black striations; rufous flanks; strong legs with spurs. Female has copper green neck; brown plumage; lacks the colourful tail. Solitary or in small parties;many females to one male, seen warily in forested area, ever alert; keen eyesight and hearing. Male erects and fans to display his colourful train to the hens and 'dances' during breeding. **Food**: also tubers, lizards, small snakes. **Voice**: loud *may-yow..may-yow..* call especially at dawn and dusk; nasal call and cackles. **Nesting**: January-October. Nest, a scrape in ground, in dense thicket, lined with sticks and leaves. **Eggs**: 3-5, glossy green.

ನವಿಲು *(ಪ್ಯೆಲ್)* 92-122 ಸೆಂಮೀ. ನಮ್ಮ ರಾಷ್ಟ್ರಪಕ್ಷಿ. ೧–೧.೫ ಮೀಟರು ಉದ್ದದ ಅಂದವಾದ *ಕಣ್ಣು*ಗಳಿರುವ ಬಾಲದ ಮೇಲ್ಭಾಗದ ಮಡಚು ಗರಿಗಳು; ಗೊರಸುಗಳಿರುವ ಉದ್ದ ಕಾಲು; ಹೊಳೆಯುವ ಕಡುಹಸಿರು ಕತ್ತು, ಎದೆ; ಬಿಳಿ ಕೆನ್ನೆಗೆ ಕಪ್ಪು ಕಣ್ಣುಪಟ್ಟಿ; ಸಣ್ಣ ಹೂ ಗುಚ್ಛದಂತಿರುವ ಕಿರೀಟ. ಹೆಣ್ಣಿಗೆ, ಬೂದುಗಂದು ದೇಹಕ್ಕೆ, ಬಿಳಿ ಕೆಳಮೈ; ಅಂದವಾದ ಬಾಲವಿಲ್ಲ. ಒತ್ತಾದ ಶೀತಗಾಡುಗಳಲ್ಲಿ ಬಹು ಎಚ್ಚರದಿಂದ ತಿರುಗಾಡುವುದನ್ನು ಕಾಣಬಹುದು. ಹಲ್ಲಿ, ಹಾವುಗಳೂ ಆಹಾರ. ಗಟ್ಟಿಯಾದ *ಮೇ.ಆ..ಮೇ.ಆ..* ಧ್ವನಿ. ತನ್ನ ಸೊಬಗು, ಬಣ್ಣ ಮತ್ತು ನರ್ತನಕ್ಕೆ ಪ್ರಸಿದ್ಧಿ. ನಡೆದಾಡುವಾಗ, ಹಾರುವಾಗ ಅದರ ಬಾಲ ದೇಹಕ್ಕೆ ಭಾರವಿಲ್ಲ.

Buttonquails / BustardQuails *(Turnicidae)*

ಗುಡುಗಾಡು ಹಕ್ಕಿಗಳು *(ತೊರ್‌ಪೆಕೊಟ್ಟ)*

Small terrestrial birds that look like true quails, but because of the absence of hind toe, their three-toed feet resemble that of a bustard. Female is larger and more brightly coloured and holds territory; polyandrous and takes active role in courtship. Flies with noisy whirr of wings soon to drop back into cover. Food consists of seeds of grass, weeds, grains, green shoots and small insects. Nest is a scrape or depression in the ground, sometimes lined with and arched over by grass. Eggs, 4; male incubating and rearing the chicks. Young down covered and precocial.

ಗೌಜಲು ಹಕ್ಕಿಗಳಂತೆ ಕಂಡರೂ, ಹಿಂಬದಿಯ ಕಾಲ್ಬೆರಳು ಇಲ್ಲ; ಹಾಗಾಗಿ ಮೂರೇ ಬೆರಳುಗಳು. ಕೀಟ, ಬೀಜ, ಚಿಗುರು ಮುಂತಾದ ಆಹಾರಕ್ಕಾಗಿ ನೆಲವನ್ನಾಶ್ರಯಿಸುತ್ತವೆ. ತನ್ನ ಗಡಿಪ್ರದೇಸವನ್ನು ಗುರುತಿಸಿ, ಅದಕ್ಕಾಗಿ ಹೋರಾಡುತ್ತಾ, ಬಹುಪತಿತ್ವವನ್ನನುಸರಿಸುವ, ಗಾತ್ರದಲ್ಲಿ ತುಸು ಹಿರಿದಾದ ಹೆಣ್ಣುಹಕ್ಕಿಯೇ ಹೆಚ್ಚು ಆಕರ್ಷಕ. ಭರ್ರನೇ ಹಾರಿ, ಪುಸಕ್ಕನೆ ಪೊದೆಗಳ ಮಧ್ಯೆ ಅವಿತುಕೊಳ್ಳುವ ಸ್ವಭಾವ. ಹುಲ್ಲು–ಧಾನ್ಯಗಳ ಬೀಜ, ಚಿಗುರು–ಕಾಂಡ ಮತ್ತು ಕೀಟಗಳೇ ಆಹಾರ. ನೆಲದ ಗುಳಿಯಲ್ಲಿ ಗೂಡು; ಕಾವು, ಗುಟುಕು ನೀಡುವುದು ಎಲ್ಲ ಗಂಡುಹಕ್ಕಿಯ ಕೆಲಸ.

67. Common Buttonquail *(Turnix suscitator)* Common or Blue-legged Bustard Quail R Quail- With bluish grey bill and legs and the yellowish eyes, the female is larger and more richly coloured; rufous above; rusty buff below; black bars on chin, throat and breast; pale buff shoulder patches, seen in flight. Pairs seen in scrub grasses, bamboo jungles in dry deciduous forests and standing crops, avoiding dense forests. Female fights with other hens to possess a cock; leaves the eggs to be tendered solely by him and goes in search of another mate. **Voice**: female utters a loud drumming *drrrrrrr...*, reminiscent of a distant motorbike. **Nesting**: not specific. **Eggs**: 3-4, greenish white, speckled with dark reddish brown.

ಗುಡುಗಾಡುಹಕ್ಕಿ *(ತೊರ್‌ಪೆಕೊಟ್ಟ)* 15 ಸೆಂಮೀ. ತಿಳಿ ಬೂದುಗಂದು ಮೈಮೇಲೆ ಬಿಳಿ–ಕಪ್ಪು ಅಡ್ಡಗೀರುಗಳು; ಬೂದು ಕೊಕ್ಕು–ಕಾಲುಗಳು; ಹಳದಿ ಕಣ್ಣು. ಜೋಡಿಯಾಗಿ ಕುರುಚಲು, ಬಿದಿರುಗಾಡುಗಳಲ್ಲಿ ವಾಸ. ಹೆಣ್ಣಿಗೆ ಎದೆ–ಗಲ್ಲದ ಮೇಲೆ ಕಪ್ಪು ಪಟ್ಟಿಗಳು. ಗಂಡಿಗಾಗಿ ಹೇಂಟೆಗಳು ಕಾದಾಡುತ್ತವೆ. ಮೊಟ್ಟೆಯಿಟ್ಟ ನಂತರ ಉಳಿದೆಲ್ಲ ಕೆಲಸ ಗಂಡಿನದೇ! *ಡ್ರ್ರ್ರ್ರ್ರ್....* ಹೆಣ್ಣಿನ ಕೂಗು.

68. Yellow-legged Buttonquail *(Turnix tanki)* R Quail- Bright yellow bill and eyes are diagnostic; broad rufous hind collar, sides of breast and flanks; white chin, throat, underparts with black spots seen in flight; male lacks the hind collar. Seen singly in damp grassy and cultivated areas; feeble flier; when disturbed, quickly plunges into a nearby bush. **Voice**: similar to, but softer than 67. Nesting and eggs: similar to 67.

ಹಳದಿಕಾಲಿನ ಗುಡುಗಾಡುಹಕ್ಕಿ ***(ಮಂಜಕಾಲ್‌ರ ತೊರ್‌ಪೆಕೊಟ್ಟ)*** 15 ಸೆಂಮೀ. ಹಳದಿ ಕೊಕ್ಕು, ಕಣ್ಣು ಮತ್ತು ಕಾಲುಗಳು; ಬಿಳಿ ಗಲ್ಲ ಮತ್ತು ಕೆಳಮೈ ಮೇಲೆ ಕಪ್ಪು ಚುಕ್ಕೆಗಳು; ಹೆಣ್ಣಿಗೆ ಕಂದು ಹಿಂಗತ್ತು, ಪಕ್ಕೆಗಳು. ಒಂಟಿಯಾಗಿ, ಗದ್ದೆಯ ಬದಿಗಳಲ್ಲಿ, ಜೊಂಡುಹುಲ್ಲಿನ ನಡುವೆ ಕಾಣಬಹುದು. ದುರ್ಬಲ ಹಾರಾಟ. ಉಳಿದದ್ದು ೬೭ರಂತೆ ಮತ್ತು ಅದಕ್ಕಿಂತ ಮೆದುವಾದ ಧ್ವನಿ.

69. Small Buttonquail *(Turnix sylvatica)* Little Bustard Quail R Quail- Smallest of the lot; its pointed tail diagnostic; rufous brown upperparts, chin, breast; dark brown crown and white 'centre parting'; pale underparts with rufous and black bars on flanks; rusty hindneck scalloped with buff. Singly or in pairs, seen close to cultivation and grass-scrub jungle; sedentary and parochial and difficult to flush. Food, voice, nesting and eggs, similar to 67.

ಸಣ್ಣ ಗುಡುಗಾಡುಹಕ್ಕಿ ***(ಚೆರಿಯ ತೊರ್‌ಪೆಕೊಟ್ಟ)*** 13 ಸೆಂಮೀ. ಬಾಲದ ತುದಿ ಚೂಪು; ಕೆಂಗಂದು ಮೇಲ್ಮೈ, ಗಲ್ಲ, ಎದೆ; ಕಡುಗಂದು ನೆತ್ತಿ; ಬಿಳಿ ಹುಬ್ಬಿನ ಜೊತೆಗೆ ಬಿಳಿ ಬೈತಲೆ. ಜೋಡಿಯಾಗಿ ಗದ್ದೆಗಳಲ್ಲಿ, ಹುಲ್ಲುಗಾಡುಗಳಲ್ಲಿ ವಾಸ. ಬೆದರಿಸಿ ಓಡಿಸುವುದು ಕಷ್ಟಸಾಧ್ಯ. ಉಳಿದೆಲ್ಲ ೬೭ರಂತೆ.

Rails, Moorhens and Coots *(Rallidae)*

ಜೌಗುಕೋಳಿ, ಹುಂಡುಕೋಳಿ, ಜಂಬುಕೋಳಿಗಳು (*ವೋರಂಗೋಳಿ*)

Medium sized waterside and marsh birds with hen-like general appearance; body laterally compressed; bill strong and stout; long legs and long, slender toes; tibiae partly bare; wings short, broad and rounded; short inconspicuous tail. Laboured fluttered flight with dangling legs, but strong and steady fliers. Sexes nearly alike. Feed on all types of animal and vegetable matter like insects, worms, molluscs, grain, paddy shoots and marsh plants. Nest on ground, in bushes; eggs incubated and nestlings reared by both sexes.

ಮಧ್ಯಮಗಾತ್ರದ, ನೀರಿನ ಅಂಚಿನಲ್ಲಿ ವಾಸಮಾಡುವ, ನೋಡಲು ಹೇಂಟೆ ಕೋಳಿಯ ತರಹ ಕಾಣುವ ಜೌಗು ಹಕ್ಕಿಗಳು. ಉದ್ದ ಕಾಲುಗಳು; ಗಟ್ಟಿಮುಟ್ಟಾದ ಕೊಕ್ಕು; ಹೆಚ್ಚುದೂರ ಹಾರಲಾರದ, ಗುಂಡಾದ, ಸಣ್ಣ ರೆಕ್ಕೆಗಳು; ಚಿಕ್ಕ ಬಾಲ. ಕಾಲುಗಳನ್ನು ಇಳಿಬಿಟ್ಟುಕೊಂಡು ಪಟಪಟ ರೆಕ್ಕೆ ಬಡಿದುಕೊಂಡು ಹಾರುವ ಸ್ವಭಾವ. ಕೀಟ, ಹುಳ-ಹುಪ್ಪಟ, ಕಾಳು, ಭತ್ತದ ಎಳೆಕಾಂಡ, ಮತ್ತು ಜೌಗು ಸಸ್ಯಗಳೇ ಮುಂತಾದ ಸಸ್ಯ-ಪ್ರಾಣಿಜನ್ಯ ಆಹಾರ. ನೆಲದ ಮೇಲೆ, ಜೊಂಡುಗಳ ಎಡೆಗಳಲ್ಲಿ ಗೂಡು.

70. Blue-breasted Rail *(Gallirallus striatus)* Slaty-breasted Rail R Partridge- A skulking marsh bird with dark brown upperparts that has white spots and narrow wavy

bands; chestnut head, nape and necksides; red beak and eyes; white chin and throat; ashy-blue foreneck and breast; blackish flanks and abdomen with bold, white bars; olive grey legs. Female is duller above with white underparts. Seen around reedy swamps, paddyfields and vegetation around village tanks, walking solitarily across mud, with bobbing head and tail constantly flirted; unobtrusive and very cautious, vanishes into reeds and low growth on slightest suspicion; long toes and slim body, flattened at the sides, make for easy movements through thick grass and reeds. Flies with legs dangled behind. **Voice**: usually silent; sharp, loud, two note whistling call and short jerky screams. **Nesting**: mid-June –October; a well hidden nest on ground or amidst reeds, made of pad of matted vegetation. **Eggs**: 5-7, smooth, creamy and glossy, blotched and spotted with red or purple.

ಕೆನ್ನೆತ್ತಿಯ ಜೌಗುಕೋಳಿ ೨೭ ಸೆಂ.ಮೀ. ಸೋಮಾರಿಯಂತೆ ಜೌಗು ಪ್ರದೇಶಗಳ್ಳಿ ಅಲೆದಾಡುವ ಈ ಹಕ್ಕಿಗೆ ಕಡುಗಂದು ಮೇಲ್ಮೈ ಮೇಲೆ ಬಿಳಿ ಚುಕ್ಕೆ ಮತ್ತು ಉದ್ದ ಗೀರುಗಳು; ಕೆಂಗಂದು ತಲೆ, ಹಿಂಗತ್ತು; ಕೆಂಪು ಕೊಕ್ಕು, ಕಣ್ಣುಗಳು; ಬಿಳಿ ಗಲ್ಲ; ಬೂದು–ನೀಲಿ ಎದೆ; ನಸುಗಪ್ಪು ಕೆಳಮೈ ಮೇಲೆ ಬಿಳಿ ಪತ್ತೆಗಳು; ತಿಳಿ ಹಸಿರುಗಂದು ಕಾಲುಗಳು. ಹೆಣ್ಣು ಮಾಸಲು ಮೇಲ್ಮೈಗೆ ಬಿಳಿ ಕೆಳಮೈ. ಜೊಂಡುಹುಲ್ಲು, ಗದ್ದೆಗಳೆಡೆಯಲ್ಲಿ, ಕೆರೆ–ಕೊಳಗಳ ಸುತ್ತ ಒಂಟಿಯಾಗಿ ತಲೆಯೆತ್ತಿಕೊಂಡು, ಬಾಲವನ್ನು ಕುಣಿಸುತ್ತಾ ಅಡ್ಡಾಡುವುದನ್ನು ಕಾಣಬಹುದು; ಸ್ವಲ್ಪವೇ ಸಂಶಯ ಬಂದರೂ ಪುಸಕ್ಕನೆ ಹುಲ್ಲಿನ ನಡುವೆ ಮಾಯವಾಗುತ್ತದೆ; ಕಾಲುಗಳನ್ನು ಹಿಂದಕ್ಕೆ ಇಳಿಬಿಟ್ಟುಕೊಂಡು ಹಾರುತ್ತವೆ. ಗಟ್ಟಿಯಾದ ಎರಡು ಸ್ವರಗಳ ಸಿಳ್ಳೆ ಕೂಗು. ಜೊಂಡುಗಳ ಮಧ್ಯೆ, ಮರೆಯಲ್ಲಿ, ಎಲೆ–ನಾರುಗಳಿಂದ ಕೂಡಿದ ಗೂಡು.

71. White-breasted Waterhen *(Amaurornis phoenicurus)* R Partridge+/- Familiar waterside, hard-bitten bird with white forehead, sides of head; dark slaty grey upperparts and sides of breast, flanks; silky white below; rufous vent and under the tail. Solitary, seen at the margin of marshes, ponds and rice fields. Jerks stumpy tail as it walks with long strides; good tree climber. **Voice**: shy and silent, except during breeding, becomes very noisy; hoarse grunt, croaks culminating in a monotonous *krr..kwak..kwak.. krr..kwak..kwak.* or just *kuk..kuk..kook..*, especially on overcast days continuing into the nights. **Nesting**: June-October; nest, a shallow cup of twigs on open stem, up in a bush near water. **Eggs**: 6-7, cream pinkish white with reddish brown streaks.

ಹುಂಡುಕೋಳಿ *(ವೋರಂಗೋಳಿ)* 32 ಸೆಂಮೀ. ನೀರಿನ ಬಳಿ ವಾಸಿಸುವ ಸುಪರಿಚಿತ ಹಕ್ಕಿ. ಬಿಳಿ ಮುಖ, ಎದೆ, ಕೆಳಮೈ; ಕಡುಬೂದು ನೆತ್ತಿ, ಬೆನ್ನು; ಕಿಬ್ಬೊಟ್ಟೆ ಮತ್ತು ಬಾಲದ ಬುಡ, ಕೆಂಗಂದು. ಒಂಟಿಯಾಗಿ, ಜೌಗು, ಗದ್ದೆ, ತೋಡು, ಕೊಳಗಳ ಅಂಚುಗಳಲ್ಲಿ ವಾಸ. ಮೊಂಡುಬಾಲವನ್ನು ಆಗಾಗ ಮೇಲಕ್ಕೂ–ಕೆಳಕ್ಕೂ ಆಡಿಸುವ ಸ್ವಭಾವ. ಸಂತಾನ ಋತುವಿನಲ್ಲಿ *ಕ್ರ್..ಕ್ವಕ್.ಕ್ವಕ್.ಕ್ವಕ್.* ಕೂಗಾಟ.

72. Common Coot *(Fulica atra)* Coot RM Duck- Most aquatic of all rails; slaty-black plumage with stout ivory-white, pointed beak; flat white frontal shield; broad flat lobes along the sides of toes, enable it to paddle smoothly and efficiently in water; almost tailless and duck-like appearance. Seen in small group, near tanks and jheels. Scurries about when alarmed, half-flying, half-running on the surface of water. Needs pattering before getting airborne, but then flies well. **Voice**: clear, loud trumpet like *pyee* cry, often heard at night; also a sharp *kowk..* and series of long , soft *dp.dp.dp.* **Nesting**: July-September; nest, large mass of rushes and matted reed, above water

level, in bushes at water edge. **Eggs**: 6-10, buffy grey with reddish brown streaks and spots.

ನಾಮದಕೋಳಿ ***(ಕರ್ತ ವೋರಂಗೋಳಿ)*** 42 ಸೆಂಮೀ. ಸ್ಲೇಟುಕಪ್ಪು ದೇಹಕ್ಕೆ, ದಪ್ಪನಾದ, ಚೂಪಾದ, ಬಿಳಿ ಕೊಕ್ಕು; ಹಣೆಯ ಮೇಲೆ ದೂರದಿಂದಲೂ ಎದ್ದು ಕಾಣುವ ಬಿಳಿ ನಾಮ; ಈಜಾಡಲು ಅನುಕೂಲವಾದ, ಅಗಲ ಜಾಲಪಾದ. ಸಣ್ಣ ಗುಂಪಿನಲ್ಲಿ ಕೆರೆ-ತೊರೆಗಳಲ್ಲಿ, ನೀರಿನಲ್ಲಿ ವಾಸ. ಗಾಬರಿಯಾದಾಗ ಪಟಪಟನೆ ರೆಕ್ಕೆ-ಕಾಲು ಬಡಿದುಕೊಂಡು ನೀರಿನ ಮೇಲೇ ಓಡುತ್ತವೆ. ಹಾರುವಾಗ ನೀರಿನಿಂದ ಏಳಲು ಪರದಾಟವಾದರೂ, ನಂತರ ಸಮರ್ಥವಾಗಿ ಹಾರಬಲ್ಲದು. ಏರು ಧ್ವನಿಯ ಸ್ಪಷ್ಟ, ಕಹಳೆಯ ಕೂಗು.

Jaçanas *(Jacanidae)*

ದೇವನಕ್ಕಿಗಳು

73. **Bronze-winged Jaçana** (*Metopedius indicus)* R Swamp bird with glossy black head, neck and breast; small frontal shield from the base of yellow beak; glistening metallic bronze-green back and wings; broad white eyebrow extending to the nape; chestnut on rump and stubby tail; long legs with massive elongated, widely spread toes distribute the weight of the bird and enables it to walk effortlessly on the floating vegetation. Immature birds have rufous crown; black terminal band to the tail; white underparts with rufous buff breast. Sexes alike; female slightly larger, polyandrous. Seen in small parties on tanks with floating vegetation like water lily and singara; warily moving slowly and silently; flies low with trailing legs; good swimmer. **Food**: aquatic seeds, tubers; also insects, crustaceans and mollusks. **Voice**: loud, harsh *pipi.*grunt; wheezy piping *seek..eek.. seek.. eek..* especially during breeding. **Nesting**: June to September; nest made of a pad of weed stems on floating leaves. **Eggs**: 4-5, glossy brown with irregular black scrawls.

ಬಿಳಿಹುಬ್ಬಿನ ದೇವನಕ್ಕಿ ೩೦ ಸೆಂ.ಮೀ. ಜೊಂಡು, ಕೊಳದಾವರೆ ಮುಂತಾದ ಜಲಸಸ್ಯಗಳಿಂದಾವೃತವಾದ ಜೌಗು-ಹೂಳು ಪ್ರದೇಶದಲ್ಲಿ ವಾಸಿಸುವ ಹಕ್ಕಿ. ಹೊಳೆಯುವ ಕಂಚು-ಹಸಿರು ಮೇಲ್ಮೈ; ಕಡುಗಪ್ಪು ನೆತ್ತಿ, ಕತ್ತು ಮತ್ತು ಎದೆ; ಕಣ್ಣಿನ ಮೇಲೆ ಅಗಲವಾದ ಬಿಳಿ ಹುಬ್ಬು; ಮೊಂಡು ಕಂದು ಬಾಲ. ಅಪ್ರಾಪ್ತ ಹಕ್ಕಿಗಳಿಗೆ ಕೆಂಗಂದು ನೆತ್ತಿ; ಬಿಳಿ ಕೆಳಮೈ; ಕಪ್ಪು ಬಾಲದ ತುದಿ. ಜೇಡರ ಹುಳುವಿಗಿರುವಂತೆ ಉದ್ದ, ಸಪೂರವಾದ ಕಾಲ್ಬೆರಳುಗಳು; ನಡೆಯುವಾಗ ದೇಹದ ಭಾರ ಉದ್ದ-ಬಲಿಷ್ಠ ಕಾಲು ಹಾಗೂ ಬೆರಳುಗಳ ಮೇಲೆ ಹಂಚಿಹೋಗುವುದರಿಂದ ಕೊಳದಲ್ಲಿ ಬೆಳೆದ ತಾವರೆ ಮುಂತಾದ ಜಲಸಸ್ಯಗಳ ಮೇಲೆ ನಿರಾಯಾಸವಾಗಿ ಓಡಾಡುತ್ತವೆ. ಬಹುಪತಿತ್ವವನ್ನು ಅನುಸರಿಸುವ ಹೆಣ್ಣು ಹಕ್ಕಿ ಗಾತ್ರದಲ್ಲಿ ತುಸು ದೊಡ್ಡದು. ಸ್ವಲ್ಪ ಆಪತ್ತಿನ ಸೂಚನೆ ಕಂಡುಬಂದರೂ ಓಡಿ ಜೊಂಡುಹುಲ್ಲಿನ ನಡುವೆ ಅವಿತುಕೊಳ್ಳುತ್ತದೆ. ನೇರವಾಗಿ ಆಕಾಶಕ್ಕೆ ಚಿಮ್ಮಿ ಹಾರುತ್ತದೆಯಾದರೂ ಹೆಚ್ಚು ದೂರ ಹಾರಲಾರದು. ಸದ್ದಿಲ್ಲದೆ, ಸಣ್ಣ ಗುಂಪಿನಲ್ಲಿ ನಿಧಾನವಾಗಿ ಚಲಿಸುತ್ತ ಆಹಾರವನ್ನು ಅರಸುತ್ತವೆ. ಗೆಡ್ಡೆ-ಬೀಜ, ಕೀಟ-ಮೃದ್ವಂಗಿಗಳೇ ಆಹಾರ. ಕೊಳವೆಯಲ್ಲಿ ಊದಿದಂತೆ *ಸೀಕ್..ಈಕ್.. ಸೀಕ್.. ಈಕ್..* ಕೂಗು. ನೀರ ಮೇಲೆ ಅಥವಾ ಕರೆಗಳಲ್ಲಿ ಎಲೆ-ಕಡ್ಡಿಗಳಿಂದ ಕೂಡಿದ ತೇಲುವ ಗೂಡು.

Plovers and Lapwings *(Charadriidae)*

ಟಿಟ್ಟಿಭಗಳು *(ಉಪ್ಪುತೀತಿ)*

They are medium sized wading birds with upright stance; have rather broad head, thick neck and short, stout bill; large eyes; long and pointed wings the lap over each other at rest; short tail. Flight strong, rapid, direct and well sustained. Sexes alike. Food includes small invertebrates, molluscs, insects, worms and some vegetable matter from under soft mud. Nest on bare, open ground, well concealed.

ಮಧ್ಯಮ ಗಾತ್ರದ ಜಲವಾಸಿಗಳು. ಅಗಲವಾದ ತಲೆಗೆ ದೊಡ್ಡ ಕಣ್ಣುಗಳು; ಚಿಕ್ಕ, ಗಟ್ಟಿಮುಟ್ಟಾದ ಕೊಕ್ಕು; ಮೊಂಡು ಬಾಲ; ದೂರದ ಹಾರಾಟಕ್ಕೆ ತಕ್ಕುದಾದ ಉದ್ದ-ಚೂಪಾದ ರೆಕ್ಕೆಗಳು; ಈ ರೆಕ್ಕೆಗಳು ಒಂದರ ಮೇಲೊಂದು ಆವರಿಸಿಕೊಂಡಿರುತ್ತವೆ. ಆಕಾಶದಲ್ಲಿ ವೇಗದ ಹಾರಾಟ. ನೇರವಾದ ನಡೆ. ಅಕಶೇರುಕ, ಮೃದ್ವಂಗಿ, ಕೀಟ, ಮಣ್ಣಿನೊಳಗಿನ ಸಸ್ಯಜನ್ಯಗಳು ಆಹಾರ. ನೆಲದ ಮೇಲೆ ಗೂಡು. ಮೊಟ್ಟೆ-ಮರಿಗಳು ಸುತ್ತಲ ನೆಲದೊಂದಿಗೆ ಒಂದಾಗಿ, ಗುರುತಿಸುವುದು ಬಹಳ ಕಷ್ಟ. ನೈಸರ್ಗಿಕ ಛದ್ಮವೇಷದಿಂದ ಸುಳುಹು ಮರೆ ಮಾಡುವುದಕ್ಕೆ ಉತ್ತಮ ಉದಾಹರಣೆ.

74. Red-wattled Lapwing *(Vanellus indicus)* R Partridge+ Familiar bird whose four note piercing call *did-ye-do-it*, even late after dusk is diagnostic. Jet black head, neck, breast, edges of wings and tip of tail; bronze-greenish brown upperparts; white below, continuing as broad bands up the sides of the neck towards the eyes; fleshy crimson facial wattles in front of eyes; black-tipped yellowish red beak and yellow legs. Solitary, pairs when breeding, seen near water in open country near rain filled ditches and around cultivation; feeds during mornings and evenings; runs in small spurts; ceaselessly vigilant; raising loud and frantic alarm calls at slightest intrusion. **Nesting**: March-April. **Eggs**: 4, stone-greyish brown, blotched with black; laid on bare ground, sometimes in a depression, lined with similar pebbles, to camouflage; both sexes raise the brood.

ಕೆಂಪು ಟಿಟ್ಟಿಭ ***(ಉಪ್ಪುತೀತಿ)*** 33 ಸೆಂಮೀ. ಕಪ್ಪು ತಲೆ, ಕತ್ತು, ಎದೆ, ರೆಕ್ಕೆ ಮತ್ತು ಬಾಲದ ಅಂಚು; ತಿಳಿಗಂದು ಬೆನ್ನು; ಕಿವಿ-ಹಿಂಗತ್ತಿನಿಂದ ಹಿಡಿದು ಕೆಳಮೈ ಬಿಳಿ; ಕಪ್ಪುತುದಿಯ ಕೆಂಪು ಕೊಕ್ಕು; ಕಣ್ಣಿನ ಮುಂಭಾಗದಲ್ಲಿ ಅಚ್ಚಗೆಂಪು ಮಾಂಸಲ; ಹಳದಿ ಕಾಲು. ಹುಲ್ಲುಗಾವಲು, ಮೈದಾನ, ಕೃಷಿ ಪ್ರದೇಶ, ಕೊಳದ ದಂಡೆ, ನೀರು, ಗದ್ದೆಗಳ ಬಳಿ ವಾಸ. ನಿರಂತರ ಜಾಗರೂಕತೆಯಿಂದ, ನೆಲದ ಮೇಲಿಡುವ ಮೊಟ್ಟೆ-ಮರಿಗಳನ್ನು ಸಾಕುತ್ತದೆ. ಸ್ವಲ್ಪ ಅಪಾಯದ ಸೂಚನೆ ಕಂಡುಬಂದರೂ ತಕ್ಷಣ ಕೂಗಾಡಿ, ಗುಲ್ಲೆಬ್ಬಿಸಿ ಇತರ ಹಕ್ಕಿಗಳನ್ನೂ ಎಚ್ಚರಗೊಳಿಸಿಬಿಡುತ್ತದೆ. ಕತ್ತಲಾದ ನಂತರವೂ *ಡಿಡ್.ಯಿ.ಡೂ.ಇಟ್.* ಕೂಗು.

Sandpipers, and Snipes *(Scolopacidae)*

ಗದ್ದೆಗೊರವಗಳು *(ಬಂಡ್‌ಕೊತ್ತಿ)* ಮತ್ತು ಉಲ್ಲಂಕಿಗಳು

These are medium sized, migrating waders with an upright but more horizontal stance. Have rather slim neck; long bill that is slender and straight; legs with tibiae partly bare; wings long and pointed; tail medium. Sexes alike, female smaller. Flight strong, swift, direct and well sustained. Feed near dense marshy growth and wet paddyfields, often seen wagging their small tail; typically pick the food with rapid movement of the bill. Food includes small invertebrates, mollusks, insects, worms and some vegetable matter got from probing in soft mud. Migratory birds, breeding in the W Himalayas and Kashmir; visiting us in winter.

ತೆಳುವಾದ, ಉದ್ದ ಕೊಕ್ಕಿನ, ನೀಳ-ಸಪೂರ ಕಾಲಿನ, ಮಧ್ಯಮ ಗಾತ್ರದ ವಲಸೆಹಕ್ಕಿಗಳು. ವೇಗದ, ದೂರದ ಹಾರಾಟಕ್ಕೆ ತಕ್ಕುದಾದ, ಚೂಪಾದ ರೆಕ್ಕೆಗಳು; ಗದ್ದೆ ಮತ್ತು ನೀರ ಸುತ್ತಮುತ್ತ ವಾಸ. ನಿಂತರೆ, ನೆಲಕ್ಕೆ ಸಮಾನಾಂತರ ದೇಹ, ನೇರ ನಡೆ. ನೇರ, ವೇಗವಾದ ಹಾಗೂ ಸಮರ್ಥ ಹಾರಾಟ ವಲಸೆಗೆ ಸಹಕಾರಿ. ಅಕಶೇರುಕ, ಕೀಟ, ಮೃದ್ವಂಗಿ, ಹುಳು-ಹುಪ್ಪಟೆ ಮತ್ತು ಮಣ್ಣಿನೊಳಗಿನ ಸಸ್ಯಜನ್ಯ ಆಹಾರ. ಪಶ್ಚಿಮ ಹಿಮಾಲಯ ಮತ್ತು ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

75. Common Sandpiper *(Actitis hypoleucos)* M Quail+ Dull olive-brown above, streaked ashy brown on head and sides of neck; light brown streaks on breast; white below; narrow white wing-bar and brown rump best seen in flight. Seen singly or scattered along with other waders; quite active, making short dashes, bobbing and wagging the short tail. Flight low over water with 'vibrating' glide. **Voice**: shrill, piping *twee..tse...tse...* on the wings; pretty long-drawn *wheet.. wheeet..* One of the earliest migrants (August) and the last to leave (May).

ಗದ್ದೆಗೊರವ *(ಬಂಡ್‌ಕೊತ್ತಿ)* 21 ಸೆಂಮೀ. ಸಣ್ಣ ಕಂದು ಗೀರುಗಳಿರುವ ತಿಳಿ ಹಸಿರುಗಂದು ಮೇಲ್ಮೈ; ಬಿಳಿ ತಲೆ, ಹುಬ್ಬು, ಕತ್ತು; ಬಿಳಿ ಎದೆ ಮತ್ತು ಕೆಳಮೈ; ತಿಳಿಗಂದು ಕಾಲುಗಳು. ಹಾರುವಾಗ ಎದ್ದುಕಾಣುವ ಬಿಳಿ ರೆಕ್ಕೆಪಟ್ಟಿಗಳು ಮತ್ತು ಕಂದು ಪೃಷ್ಠ. ಮೊಂಡು ಬಾಲವಾಡಿಸುತ್ತ, ಅತ್ತಿಂದಿತ್ತ ಓಡಾಟ. ಜೌಗು, ನೀರಿನ ಅಂಚಿನಲ್ಲಿ ವಾಸ. ನೀರಿನ ಮೇಲೆ ಕೆಳಮಟ್ಟದಲ್ಲಿ ಹಾರಾಡುತ್ತಾ *ಟ್ವೀ.ಟ್ಸ್.ಟ್ಸ್..* ಕೂಗು. ಚಳಿಗಾಲದ ವಲಸೆಗಾರ.

76. Green Sandpiper *(Tringa ochropus)* M Quail Similar to 75. Stouter, more shy; glossy olive-brown above; darker upper body; white rump and blackish below wings, diagnostic in flight. Small flocks, seen along with other waders. Habits similar to 75. **Food**: also includes mosquito larvae. **Voice:** loud, distinct and sharp ringing *kluuweet..wit.wit.* calls when flushed. Winter visitor.

ಹಸಿರು ಗದ್ದೆಗೊರವ *(ಪಚ್ಚೆ ಬಂಡ್‌ಕೊತ್ತಿ)* 24 ಸೆಂಮೀ. ದುಂಡಾದ ದೇಹ. ಹಸಿರುಗಂದು ಮೇಲ್ಮೈ; ಕಂದು ಬೆನ್ನು; ಬಿಳಿ ಪೃಷ್ಠ; ಹಾರುವಾಗ ರೆಕ್ಕೆಯಡಿ ಕಪ್ಪು. ಇತರ ಜಲಪಕ್ಷಿಗಳೊಂದಿಗೆ ವಾಸ. ಗಟ್ಟಿ ಸ್ವರದ *ಕ್ಲುವೀಟ್.ವಿಟ್.ವಿಟ್.* ಕೂಗು. ಚಳಿಗಾಲದ ವಲಸೆಗಾರ.

77. Wood Sandpiper *(Tringa glariola)* Spotted Sandpiper M Quail+ Similar to 76, slender built; grey brown above with close white spots; white rump and tail; white below; brown breast; no wing-bar. Habits similar to 75. **Voice**: quite noisy; trilling, sharp *tluei..* call; shrill metallic *chiff...ifff..iff..* calls when flushed. Winter visitor.

ಅಡವಿ ಗದ್ದೆಗೊರವ *(ಕಾಡ್ ಬಂಡ್‌ಕೊತ್ತಿ)* 21 ಸೆಂಮೀ. ಸಪೂರ ದೇಹ. ಒತ್ತಾದ ಬಿಳಿ ಗೀರುಗಳಿರುವ ಬೂದುಗಂದು ಮೇಲ್ಮೈ; ತಿಳಿಗಂದು ಎದೆ; ಬಿಳಿ ಕೆಳಮೈ; ಹಾರುವಾಗ ಎದ್ದು ಕಾಣುವ ಬಿಳಿ ಪೃಷ್ಠ ಮತ್ತು ಬಾಲ. ತೀಕ್ಷ್ಣ *ಚಿಫ್.ಚಿಫ್..* ಕೂಗು. ಚಳಿಗಾಲದ ವಲಸೆಗಾರ.

78. Wood Snipe *(Gallinago nemoricola)* M Sandpiper+ Totally camouflaged with its plump body; brown above, streaked with black, rufous and buff; white below; long beak; 18 feathers in tail. Solitary, secretive and silent. Short erratic flight when flushed. **Voice**: loud *pench..* call on the wings. Winter visitor.

ಅಡವಿ ಉಲ್ಲಂಕಿ *(ಕೊರ್ಜಿಪಕ್ಷಿ)* 31 ಸೆಂಮೀ. ಬಹು ಸಂಕೋಚ ಸ್ವಭಾವ. ಕಪ್ಪುಗೀರುಗಳಿರುವ ಕಂದು ಮೇಲ್ಮೈ; ಕೆಂಗಂದು, ಬೂದು, ಬಿಳಿ ಕೆಳಮೈಯೊಂದಿಗೆ, ಪರಿಸರದೊಂದಿಗೆ ಸಂಪೂರ್ಣ ಅಡಗಿಸುವ ದೇಹದ ಮೈಬಣ್ಣ; ಉದ್ದ ಕೊಕ್ಕು. ಹಾರುವಾಗ *ಪೆಂಚ್* ಕೂಗು. ಚಳಿಗಾಲದ ವಲಸೆಗಾರ.

Terns, Gulls and Noddies *(Laridae)*

ರೀವಗಳು

Gregarious, bulky, aquatic birds with grey, white and black bodies; legs short, webbed; hallux vestigial; wings long, narrow and pointed; tail often forked. Sexes alike. Flight strong and buoyant with slow and shallow wingbeats along with soaring, gliding and swooping. Food includes fish, scavenging animal or vegetable matter. Roost and breed in colonies. Nest on ground, cliff and in trees or on water surface.

ಗುಂಪಾಗಿ ವಾಸಿಸುವ, ಉದ್ದನಾದ, ಸಪೂರ, ಚೂಪಾದ ರೆಕ್ಕೆಗಳು, ಜಾಲಪಾದವಿರುವ ಗಿಡ್ಡ ಕಾಲುಗಳು ಮತ್ತು ಕವಲು ಬಾಲವಿರುವ ಸ್ಥೂಲಕಾಯದ ಜಲಪಕ್ಷಿಗಳು. ಮೀನು, ಸತ್ತ ಜೀವಿಗಳು ಮತ್ತು ನೀರಬಳಿಯಿರುವ ಸಸ್ಯಜನ್ಯಗಳು ಆಹಾರ. ಸಂಘಜೀವನದಲ್ಲಿ ತಂಗುವುದು, ಗೂಡುಕಟ್ಟುವುದು. ನೆಲ, ಬಂಡೆ, ಮರಗಳ ಮೇಲೆ ಅಥವಾ ನೀರಿನ ಮೇಲೆ ತೇಲುವ ಗೂಡುಗಳು.

79. River Tern *(Sterna aurantia)* Indian River Tern R Slim Pigeon Light grey above; jet black cap, nape; white below; narrow pointed wings; deeply forked tail; bright

yellow pointed beak and red legs diagnostic. In non-breeding adults, head is grey with black streaks and blobs. Seen sociably on rivers, jheels, flying up and down. Hover above the surface of water, plunging with closed wings and surfacing with a fish; resume flight; victim is jerked up and swallowed headfirst. Food also includes crustaceans, tadpoles, and aquatic insects. **Voice**: occasional harsh screech. **Nesting**: March-May. **Eggs**: 2-3, laid on bare ground on sand banks; greyish stony white, streaked with brown.

ನದಿ ರೀವ 38-46 ಸೆಂಮೀ. ತಿಳಿ ಬೂದು ಮೇಲ್ಮೈ; ತಲೆ, ಕತ್ತು, ಕೆಳಮೈ ಬಿಳಿ; ಅಚ್ಚಗಪ್ಪು ಟೊಪ್ಪಿ, ಹಿಂಗತ್ತು; ಹಳದಿ ಕೊಕ್ಕು; ಗಿಡ್ಡ ಕೆಂಪು ಕಾಲುಗಳು; ಬಿಳಿಯಾದ ಸೀಳುಬಾಲ. ಹಾರುವಾಗ ಚೂಪಾದ ರೆಕ್ಕೆಯಂಚುಗಳು ಮತ್ತು ಸೀಳುಬಾಲ ಎದ್ದು ಕಾಣುತ್ತವೆ. ಗುಂಪಾಗಿ, ಹರಿವ ನೀರ ಬಳಿ, ಬಂಡೆಗಳಿರುವೆಡೆ, ಏರಿ, ಕೆರೆಯ ತೀರಗಳಲ್ಲಿ ವಾಸ. ಏಡಿ, ಗೊದಮೊಟ್ಟೆ, ನೀರಿನ ಕೀಟಗಳು ಆಹಾರ. ಹಾರುತ್ತಿರುವಾಗಲೇ ನೀರಿನಿಂದ ಮೀನು ಹಿಡಿದು, ಹಾರುತ್ತಲೇ ಆ ಮಿಕವನ್ನು ಬಿಸಾಡಿ, ಗಾಳಿಯಲ್ಲೇ ಗುಳುಂ ಎಂದು ನುಂಗುತ್ತದೆ! ಅಪರೂಪಕ್ಕೆ ಕೀರಲು ಧ್ವನಿಯಲ್ಲಿ ಅರಚುವಿಕೆ. ಮರಳದಂಡೆ ಅಥವಾ ನೆಲದ ಮೇಲೆ ಮೊಟ್ಟೆಯಿಡುವುದು.

Pigeons and Doves *(Columbidae)*

ಪಾರಿವಾಳಗಳು *(ಪಾರ್ಯೋಳ)* ಮತ್ತು ಕಪೋತಗಳು *(ತೋರೆ)*

All are gregarious, arboreal and terrestrial birds falling into two groups, the larger, bulkier pigeons and the smaller, more slightly built doves. They have dense, soft plumage; head small; neck short; bill medium with naked cere. Flight swift, direct and powerful with loud clatter of wings. Sexes mostly alike. Food includes chiefly seeds, gram and drupe; drink water by sucking. Nest is an indiscriminate and unelaborate platform of few sticks in trees, on ledges or holes in cliffs or buildings. Both sexes share in incubating and caring of young; initially, nestlings are fed on a secretion of the parent's crop known as *pigeon's milk*. The fact that some species can be domesticated and their homing instinct was used to carry messages before the advent of telegraphs and during wars.

ಚಿಕ್ಕ ತಲೆ, ಗಿಡ್ಡ ಕತ್ತಿನ, ಆಹಾರಕ್ಕಾಗಿ ಮರ ಹಾಗೂ ನೆಲವನ್ನು ಆಶ್ರಯಿಸುವ, ಮಧ್ಯಮಗಾತ್ರದ ಹಕ್ಕಿಗಳು. ಪಾರಿವಾಳಗಳು ಗಾತ್ರದಲ್ಲಿ ಹಿರಿಯವಾದರೆ, ಕಪೋತಗಳು ಚಿಕ್ಕವು. ಒತ್ತಾದ, ಮೃದುವಾದ ಪುಕ್ಕಗಳು; ಕಾಳು-ಬೀಜಗಳು, ಹಣ್ಣುಗಳು ಆಹಾರ. ಬಾಯಾರಿದಾಗ ಕೊಕ್ಕನ್ನು ನೀರಿನಲ್ಲಿರಿಸಿ, ತಲೆಯೆತ್ತದೆ, ನೇರವಾಗಿ ತಡೆಯಿಲ್ಲದೆ ನೀರು ಹೀರುತ್ತವೆ. ಪಟಪಟನೆ ರೆಕ್ಕೆ ಬಡಿದುಕೊಂಡು ವೇಗದ, ನೇರವಾದ ಹಾರಾಟ. ಮರದ ಮೇಲೆ, ಕಡ್ಡಿಗಳಿಂದ ತಯಾರಾದ ಹರುಕು-ಮುರುಕು ಅಟ್ಟಣಿಗೆ ಗೂಡು. ಮನೆಗೆ ಹಿಂದಿರುಗುವ ಸ್ವಭಾವವಿರುವ ಹಕ್ಕಿಗಳಾದ್ದರಿಂದ ಹಿಂದೆ ಈ "ಅಂಚೆ"ಗಳನ್ನೇ ಸಂದೇಶ ರವಾನೆಗೆ ಬಳಸುತ್ತಿದ್ದರು. ದೇಹದಲ್ಲಿ ತಯಾರಾಗುವ ಹಾಲಿನಂತಹ ವಿಶಿಷ್ಟ ದ್ರವವನ್ನು ಮರಿಗಳಿಗೆ ಉಣಿಸುತ್ತವೆ.

80. Blue Rock Pigeon *(Columba livia*) R Pigeon+ Overall slaty grey plumage, lighter on underside; glistening metallic sheen of green, purple and magenta on the neck and breast; red eyes and legs; two black bars on wings and black tail tip. Flight strong and determined. Flocks seen as colony, around human habitation and near cultivation; grain warehouses, railway stations, old and uninhabited buildings being favourite haunts. **Voice**: deep, muffled *gootr..goo..gootr…goo..* prancing and neck-swelling display of males. **Nesting**: undefined. **Eggs**: 2, white, elliptical.

ಪಾರಿವಾಳ *(ಕಾಡ್ ಪಾರ್ಯೋಳ)* 33 ಸೆಂಮೀ. ಬೂದು ಮೈ; ಕೆಳಮೈ ತುಸು ತಿಳಿ; ಕತ್ತು, ಎದೆಯ ಮೇಲೆ ಹೊಳೆಯುವ ಹಸಿರು-ನೇರಿಳೆ-ಕಡುಗೆಂಪು ವರ್ಣ; ಕೆಂಪು ಕಣ್ಣು, ಕಾಲುಗಳು; ಕಪ್ಪು ಬಾಲದ ತುದಿ ಮತ್ತು ರೆಕ್ಕೆಗಳ ಮೇಲೆ ಎರಡು ಕಪ್ಪು ಪಟ್ಟಿಗಳು. ಕತ್ತನ್ನು ತಿರುಗಿಸದೇ ೩೦೦° ವಿಸ್ತಾರದ ದೃಶ್ಯವನ್ನು ನೋಡಬಲ್ಲದು. ಗುಂಪಾಗಿ, ಜನವಾಸವಿಲ್ಲದ ಹಳೆ ಕಟ್ಟಡದ ಮೇಲೆ, ರೈಲ್ವೆ ನಿಲ್ದಾಣ, ಉಗ್ರಾಣಗಳಲ್ಲಿ, ಬಂಡೆಗಳ ಸಂದುಗಳಲ್ಲಿ ವಾಸ. ಗಂಟಲನ್ನು ಉಬ್ಬಿಸಿ, ಆಳವಾದ *ಗುಟ್ರ್.ಗೂ...ಗುಟ್ರ್.ಗೂ...* ಕೂಗು.

81. Nilgiri Wood-Pigeon *(Columba elphinstonii*) R Pigeon+ Seldom seen except in dashing flight. Reddish brown forest pigeon with grey head and underparts; metallic purple green on upper back; white throat; black-white chessboard on hindneck. Solitary or small group; mostly arboreal, descends to ground to pick fallen fruits or snails; flies with speed and agility, silently. **Food:** also flower buds. **Voice**: langoor-like *who!* followed by 3-4 quick-repeated *who.who.who..* **Nesting**: April-June. **Eggs**: single, pure white.

ನೀಲಗಿರಿ ಪಾರಿವಾಳ *(ಪರ ಕೋಂಬಕ್ಕಿ)* 42 ಸೆಂಮೀ. ಕೆಂಗಂದು ಬೆನ್ನಿಗೆ, ಬೂದು ತಲೆ, ಕೆಳಮೈ; ಬಿಳಿ ಗಂಟಲು; ಹಿಂಗತ್ತಿನ ಮೇಲೆ ಚದುರಂಗದ ಕಪ್ಪು-ಬಿಳಿ ಹಾಸು. ಸಣ್ಣ ಗುಂಪಾಗಿ, ದಟ್ಟ ಅರಣ್ಯಗಳಲ್ಲಿ ವಾಸ. ಬಹುವೇಗದ, ನಿಶ್ಶಬ್ದ ಹಾರಾಟ; ಹಾಗಾಗಿ, ಕಾಣುವುದೇ ಕಷ್ಟ. ಆಳವಾದ, ಗಂಭೀರ *ಹು..ಹುಹುಹು..* ಕೂಗು.

82. Mountain Imperial-Pigeon *(Ducula badia*) Maroon-backed Imperial Pigeon R Pigeon+ Large forest pigeon with a grey head, neck and underparts; pale copper brown above, with greenish hue; white chin. Pairs or small group, seen in tall trees, hidden among foliage; characteristic 'switch back' aerial courtship display. **Food**: frugivorous, chiefly banyan and other figs, nutmeg, often swallowing large drupes. **Voice**: deep booming, far-reaching *ul-ook..ook*. **Nesting**: January-May. **Eggs**: single, glossy white.

ಗುಮ್ಮಾಡಲು *(ಕೋಂಬಕ್ಕಿ)* 51 ಸೆಂಮೀ. ಕಂಚುಗಂದು ಬಣ್ಣದ ಬೆನ್ನು; ಬೂದು ತಲೆ, ಕುತ್ತಿಗೆ, ಕೆಳಮೈ; ಬಿಳಿ ಗಂಟಲು. ಸಣ್ಣ ಗುಂಪಾಗಿ, ಎತ್ತರದ ಮರದ ಮೇಲೆ ಎಲೆಗಳ ನಡುವೆ ಕಾಣಬಹುದು. ಅತ್ತಿ-ಆಲ, ಜಾಯಿಕಾಯಿ ಹಣ್ಣುಗಳಿರುವ ಮರಗಳೆಂದರೆ ಪಂಚಪ್ರಾಣ. ಆಳವಾದ *ಉಲ್.ಊಕ್..ಊಕ್..* ಕೂಗು.

83. Green Imperial-Pigeon *(Ducula aenea*) R Pigeon+ Grey head, neck and underparts; metallic bronze green back and tail; chocolate undertail coverts; red legs and eyes. Usually solitary or in small flock, seen at the ripening of fruits; arboreal; descends only to drink water; flight, swift and powerful, often seen sunning at the tip of a dry tree, at early morning and evening; swallows large fruits. **Voice**: deep, quite pleasant and ventriloquist *wuk..wuk..woor* or *wuk..woor..woor*. **Nesting**: March-June. **Eggs**: one, white.

ಹಸಿರು ಮನಿಯಾಡಲು *(ಕುಗ್ಗ್‌ಲ್)* 43 ಸೆಂಮೀ. ಹಸಿರು ಬೆನ್ನು, ಬಾಲ; ಬೂದು ತಲೆ, ಕತ್ತು, ಕೆಳಮೈ; ಕೆಂಪು ಕಣ್ಣುಗಳು; ಕಂದು ಬಾಲದ ಬುಡ. ಬೆಳಿಗ್ಗೆ ಮತ್ತು ಸಂಜೆ ಒಂಟಿಯಾಗಿ, ಎತ್ತರದ ಮರಗಳ ತುದಿಯಲ್ಲಿ, ಬಿಸಿಲು ಕಾಯುತ್ತಾ ಕುಳಿತಿರುವುದನ್ನು ಕಾಣಬಹುದು. ಫಲಾಹಾರ ಪ್ರಿಯ. ಆಳವಾದ *ಉಕ್.ಉಕ್.ಊರ್..* ಸ್ವಗತದ ಕೂಗು.

84. Pompadour Green-Pigeon *(Treron pompadora)* Grey-fronted Green Pigeon R Pigeon- Male has a grey crown, nape; chestnut-maroon back, scapulars; yellow in the wings; black in shoulder; bright yellow green throat; greyish yellow underparts; tail with broad grey terminal band; red legs. Female, overall olive green plumage, dull buff undertail coverts. Habits similar to other pigeons; seen with other frugivorous birds. **Voice**: musical, fluty, whistles up and down the scale. **Nesting**: December-March. **Eggs**: 2, white.

ಹಸಿರು ಪಾರಿವಾಳ *(ಪಡ್‌ಚಿತೋರೆ)* 28 ಸೆಂಮೀ. ತಿಳಿ ಬೂದು ನೆತ್ತಿ, ಹಿಂಗತ್ತು; ತಿಳಿಹಸಿರು-ಹಳದಿ ದೇಹಕ್ಕೆ ಹಳದಿಯಂಚಿನ ಕೆಂಗಂದು ರೆಕ್ಕೆಗಳು; ಕೆಂಪು ಕಾಲು. ಇತರ ಜಾತಿಯ ಪಾರಿವಾಳಗಳೊಂದಿಗೆ ಫಲಭರಿತ ಮರಗಳ ಮೇಲೆ ವಾಸ. ಏರಿಳಿತದ ಸ್ವರಗಳಿರುವ ಮೃದುವಾದ ಸಿಳ್ಳೆ ಕೂಗು. ಅಪಾಯದ ಅರಿವಾದೊಡನೆ ತಟಸ್ಥವಾಗುತ್ತವೆ.

85. Yellow-Legged Green-Pigeon *(Treron phoenicoptera)* Common Green Pigeon R Pigeon Ashy olive-grey above; olive yellow collar; yellow in the wings and underparts; the yellow legs and lilac shoulder patch diagnostic. Female duller; shoulder patch often missing. Small flocks, frugivorous and camouflaged in foliage. **Voice**: similar up and down flute notes as 84, but on lower key. **Nesting**: March-June. **Eggs**: 2, glossy white.

ಮನಿಯಾಡಲು *(ಮಂಜಕಾಲ್‌ರ ಪಡ್‌ಚಿತೋರೆ)* 33 ಸೆಂಮೀ. ಆಳರಂತೆ, ಆದರೆ, ಬೂದು-ಹಳದಿ ಮೈಗೆ, ಕೆಂಗಂದು ಭುಜಪಟ್ಟೆ; ಹಳದಿ ಕಾಲುಗಳು. ಫಲಭರಿತ ಮರದ ಮೇಲೆ ಕುಳಿತ ಹಕ್ಕಿಗಳು ಗಾಬರಿಯಾಗಿ ಹಾರುವಾಗ, ಅವುಗಳ ಸಂಖ್ಯೆ ಅಚ್ಚರಿಗೊಳಿಸುತ್ತದೆ! ಆಳರ ಸ್ವಭಾವ; ಸ್ವಲ್ಪ ಕೆಳಸ್ತರದ ಅದರದ್ದೇ ಸಿಳ್ಳೆ ಉಲಿತ.

86. Orange-breasted Green-Pigeon *(Treron bicincta)* R Pigeon- Similar to 84; male, with grey collar and orange breast; cinnamon undertail coverts with pale yellow edge and slaty grey central tail feathers. Female with slaty grey mid-tail feathers. Gregarious, arboreal and frugivorous. **Voice**: series of fluty, mellow, undulating whistles. **Nesting**: March-September. **Eggs**: 2, white.
ಕಿತ್ತಳೆಎದೆಯ ಪಾರಿವಾಳ *(ಪೋಣ್)* 29 ಸೆಂಮೀ. ನೋಡಲು ಆಳರಂತೆಯೇ, ಆದರೆ ಹಿಂಗತ್ತಿನಲ್ಲಿ ಬೂದು, ಜೊತೆಗೆ ಕಿತ್ತಳೆ ಬಣ್ಣದ ಎದೆ. ಗುಂಪಾಗಿ ಹಣ್ಣಿನ ಮರದ ಮೇಲೆ ಕುಳಿತು ಏರಿಳಿತದ ಸ್ವರಗಳಲ್ಲಿ ಸಮೂಹಗೀತೆ.

87. Oriental Turtle-Dove *(Streptopelia orientalis)* Rufous Turtle Dove RM Pigeon-Rufous plumage; rufous brown back and scapulars, with black markings; grey and black spots on necksides; slaty grey lower back, rump; broad, dark, round tail with white terminal band, best seen as the bird alights. Pairs or loose parties, seen feeding on ground, granivorous; flight swift, pigeon-like. **Food**: paddy, cereals, bamboo and grass seeds. **Voice**: deep, low, mournful *ghur..ghoo...gooo..* **Nesting**: May-July. Many migrate from North to join the residents. **Eggs**: 2, white.

ಕೆಂಗಂದು ಬೆಳವ *(ಬಡುವತೋರೆ)* 33 ಸೆಂಮೀ. ತಿಳಿ ಕೆಂಗಂದು ಮೈಗೆ, ರೆಕ್ಕೆ–ಬಾಲದ ಮೇಲೆ ಕಪ್ಪು; ಕತ್ತಿನ ಬದಿಗಳಲ್ಲಿ ಬೂದು–ಕಪ್ಪು ಚುಕ್ಕೆಗಳು; ಕಡುಬೂದು ಪೃಷ್ಠ; ಹಾರಲು ಮೇಲೇಳುವಾಗ, ಕಪ್ಪು ಬಾಲದ ಅಂಚಿನಲ್ಲಿ ಬಿಳಿ. ಸಣ್ಣ ಗುಂಪಿನಲ್ಲಿ ನೆಲದ ಮೇಲೆ ಆಹಾರಾನ್ವೇಷಣೆ. ವಿಷಾದದ *ಗುರ್.ಗು.ಗೂ..* ಕೂಗು.

88. Little Brown Dove *(Streptopelia senegalensis)* R Myna+ Earthy brown and grey plumage with pink hue; pinkish white underparts; 'chessboard' on sides of neck; white tipped outer tail feathers and broad grey wing patch, best seen in flight. Pairs or small flocks, along with other doves, feeding on ground, silently. **Voice**: soft *coo.croo..curu.ru.roo..*; peculiar bungling and calling courtship display by male. **Nesting**: throughout the year; nest especially on a Euphorbia clump or on rafters in inhabited dwelling. **Eggs**: 2, white, elliptical.

ಕಂದು ಬೆಳವ 27 ಸೆಂಮೀ. ಮಣ್ಣುಗಂದು ದೇಹಕ್ಕೆ ಬೂದುಗಂದು ರೆಕ್ಕೆಗಳು; ಕತ್ತಿನ ಬದಿಗಳಲ್ಲಿ ಚದುರಂಗದ ಹಾಸು; ಬಿಳಿ ಹೊಟ್ಟೆ; ಬಾಲದ ಅಂಚು ಬಿಳಿ. ಸಣ್ಣ ಗುಂಪಾಗಿ, ಕುರುಚಲುಕಾಡುಗಳಲ್ಲಿ ಪೊದೆ ಮತ್ತು ಮರಗಳ ಮೇಲೆ ವಾಸ. ನೆಲದ ಮೇಲೆ ಆಹಾರಾನ್ವೇಷಣೆ. ಮೆದುಸ್ವರದಲ್ಲಿ, *ಕು.ಕ್ರೂ..ಕುರು.ರುರೂ...* ಕೂಗು.

89. Spotted Dove *(Streptopelia chinensis)* R Myna+ Grey and pinkish brown above with white spots; black-white 'chessboard' hindneck collar; dark tail with broad white tips to outer feathers, seen in flight; light brown breast; white belly. Young birds lack chessboard. Pairs or small parties, seen on ground, paths and roads, picking grains and seeds. **Voice**: familiar, soft, repetitive, mournful, *uk.cru.croo..croo..croo*.. **Nesting**: yearlong; nest even in inhabited bungalows. **Eggs**: 2, white.

ಚೋರೆಹಕ್ಕಿ *(ಮಣಿತೋರೆ)* 30 ಸೆಂಮೀ. ತಿಳಿಗಂದು ಮೈ; ಬೂದುಗಂದು ರೆಕ್ಕೆಗಳು; ಹಿಂಗತ್ತಿನಲ್ಲಿ ಚದುರಂಗದ ಹಾಸು; ಬಿಳಿ ಕೆಳಹೊಟ್ಟೆ. ಸಣ್ಣ ಗುಂಪಿನಲ್ಲಿ, ಸದಾಹಸಿರು, ಉದುರೆಲೆ, ಕುರುಚಲುಕಾಡು, ಕೃಷಿಭೂಮಿ, ಜನವಸತಿ ಪ್ರದೇಶಗಳಲ್ಲಿ ಮರ–ಪೊದೆಗಳಲ್ಲಿ ವಾಸ. ಸಾಮಾನ್ಯವಾಗಿ ಹೊಲ–ಗದ್ದೆಗಳಲ್ಲಿ, ಹಾದಿಗಳ ಮೇಲೆ, ಕಾಳು–ಕೀಟಗಳನ್ನು ಹೆಕ್ಕುವುದನ್ನು ಕಾಣಬಹುದು. ಸುಪರಿಚಿತ, ನಿರಂತರವಾದ, ವಿಷಾದದ *ಉಕ್.ಕ್ರು.ಕ್ರೂ..ಕ್ರೂ..ಕ್ರೂ...* ಕೂಗು.

90. Red Collared-Dove *(Streptopelia tranquebarica)* Red Turtle Dove R Myna+/- Ashy grey head; black hindneck collar; pinkish red back; greyish brown lowerback, rump and upper tail with white tail tips, except central feathers. Female has overall pale brown. Solitary or small flocks, often along with other doves, feeding on ground, especially after harvest. **Voice**: quick repeated *groo-gur-goo, groo-gur-goo*. **Nesting**: yearlong. **Eggs**: 2, white.

ಕೆಂಪು ಬೆಳವ *(ಚೋಂದತೋರೆ)* 23 ಸೆಂಮೀ. ಎಣ್ಣೆಗೆಂಪು–ಕಂದು ಮೇಲ್ಮೈಗೆ, ಬೂದು ತಲೆ; ಹಿಂಗತ್ತಿನಲ್ಲಿ ಕಪ್ಪು ಕಾಲರ್; ಬಿಳಿ ಬಾಲದಂಚು. ಸುಗ್ಗಿಯ ನಂತರ, ನೆಲದ ಮೇಲೆ ಸಣ್ಣ ಗುಂಪಿನಲ್ಲಿ ಕಾಳು ಹೆಕ್ಕುವುದನ್ನು ಕಾಣಬಹುದು. ವೇಗವಾದ, ಮರುಕಳಿಸುವ *ಗ್ರೂ.ಗುರ್.ಗೂ..* ಕೂಗು.

91. Eurasian Collared-Dove *(Streptopelia decaocto)* Indian Ring Dove R Pigeon- Greyish brown plumage, with lilac wash on head and neck; black half ring-collar on nape; brown tail with broad white tips, seen as a band when the bird alights; ashy grey underbody. Young ones are paler and lack the ring. Seen in small flocks, in

association with other doves feeding on ground. **Voice**: deep 3-note *kuk ooh..uk*; males also have courtship display with *koon..koon..koon*. **Nesting**: yearlong. **Eggs**: 2, white.

ಬೂದು ಬೆಳವ 32 ಸೆಂಮೀ. ಬೂದುಮೈಗೆ, ತಿಳಿಗಂದು ಬೆನ್ನು; ಕಂದು ರೆಕ್ಕೆ, ಬಾಲ; ಹಿಂಗತ್ತಿನ ಮೇಲೆ ಕಪ್ಪು ಕಾಲರ್; ಬಾಲದ ತುದಿಯಲ್ಲಿ ಅಗಲವಾದ ಬಿಳಿ ಪಟ್ಟಿ. ಉದುರೆಲೆ, ಕುರುಚಲುಕಾಡು ಪ್ರದೇಶಗಳಲ್ಲಿ ಮರ-ಪೊದೆಗಳಲ್ಲಿ ವಾಸ. ಕುಯ್ಲು ಮುಗಿದ ಮೇಲೆ ಹೊಲ-ಗದ್ದೆಗಳಲ್ಲಿ, ನೆಲದ ಮೇಲೆ ಆಹಾರಾನ್ವೇಷಣೆ. ಮೂರು ಸ್ವರದ *ಕುಕ್.ಊ..ಕುಕ್..* ಕೂಗು.

92. Emerald Dove *(Chalcophaps indica)* Bronze-winged Dove R Myna+ Bronze-emerald green upperparts; white forehead, eyebrows; grey crown, neck; pinkish brown breast, underparts; coral-red beak and legs; white rump and chestnut underside of wings. Singly or in pairs, seen on forest paths, bamboo clearings; darting through tree, at top speed. **Food:** also berries. **Voice**: soft, deep, plaintive *hoo..oon....hoo..oon…* with a nasal ending. **Nesting**: January-May. **Eggs**: 2, pale ashy brown.

ಹರಳು ಚೋರೆ ***(ಪೈಂದೋರೆ)*** 27 ಸೆಂಮೀ. ಸುಂದರವಾದ, ಹೊಳೆಯುವ ಕಂದು-ಹಸಿರು ಮೇಲ್ಮೈ; ಬಿಳಿ ಹಣೆ, ಹುಬ್ಬು; ಬೂದು ನೆತ್ತಿ, ಕತ್ತು; ಬೂದುಗೆಂಪು ಎದೆ, ಕೆಳಮೈ; ಬಿಳಿ ಪೃಷ್ಠ; ಕೆಂಪು ಕೊಕ್ಕು-ಕಾಲುಗಳು. ಕಾಡುಗಳಲ್ಲಿ, ಹಾದಿಯ ಮೇಲೆ, ಬಿದಿರು ಮೆಳೆಗಳ ನಡುವೆ, ಮೇಯುವುದನ್ನು ಕಾಣಬಹುದು. ವೇಗವಾದ ಮಿಂಚಿನ ಹಾರಾಟ. ಆಳವಾದ, ವಿಷಾದದ *ಹ್ಞೂ... ಹ್ಞೂ..* ಕೂಗು.

Parakeets and Hanging Parrots *(Psittacidae)*

ಗಿಳಿಗಳು *(ಗ್ಣಿ)*

Parakeets are smaller parrots. A typical parakeet is a slender, round headed bird with an overall grass green colour and a long pointed tail. It has a short, massive, rounded and deeply hooked bill; the upper bill is mobile; zygodactyl feet. They are always seen in groups, as noisy parties around cultivated lands, fruiting trees and wooded country. These flocks do considerable damage to the standing crops and ripening fruity trees, gnawing and wasting far more than they actually eat. As dusk falls, they roost among groves of leafy trees, often many species together, where they make a big clatter during night. A parakeet's flight is graceful, direct and swift with leisurely wing beats. The flocks turn and twist, flying swiftly through the foliage, with astonishing celerity and orderliness. Nest of parakeets consist of excavated holes on the tree trunks, often many pairs in the neighbouring trees to have a loose colony. Sometimes natural tree hollows or holes in the walls of old buildings are also used. The eggs are white and both the sexes share the domestic duties.

ಗಿಳಿಹಸಿರು ಬಣ್ಣದ, ಸಪೂರ ದೇಹದ, ನೀಳವಾದ ಬಾಲವುಳ್ಳ, ಸುಪರಿಚಿತ ಹಕ್ಕಿಗಳು. ಗುಂಡಾದ ತಲೆ; ಸಣ್ಣ, ಬಾಗಿದ, ಬಲವಾದ ಕೊಕ್ಕು; ಕಾಲಿನಲ್ಲಿ ಎರಡು ಬೆರಳುಗಳು ಮುಂದೆ, ಎರಡು ಹಿಂದೆ. ಕೊಕ್ಕಿನ ಮೇಲ್ದವಡೆ ಅಲುಗಾಡಬಲ್ಲದು. ಬೆಳೆದು ನಿಂತ ಪೈರಿರುವ, ರೈತರ ಹೊಲ-ಗದ್ದೆಗಳಲ್ಲಿ, ದಾಂಧಲೆ ಎಬ್ಬಿಸುವುದಲ್ಲದೆ, ತೋಟಗಳಲ್ಲಿ ಹಣ್ಣುಗಳನ್ನು ತಿನ್ನುವುದಕ್ಕಿಂತ, ಅವುಗಳನ್ನು ತಮ್ಮ ಕೊಕ್ಕಿನಿಂದ ಕುಕ್ಕಿ, ಕುಕ್ಕಿ, ನಾಶಪಡಿಸುವುದೇ ಹೆಚ್ಚು! ಇದಲ್ಲದೆ, ರಾತ್ರಿವೇಳೆ, ಮರಗಳಲ್ಲಿ ಕುಳಿತು *ಕಚ-ಪಿಚ* ಅರಚಾಟ ಬೇರೆ. ಇಷ್ಟಾದರೂ, ತಮ್ಮ ಆಕರ್ಷಕ ನಿಲುವು, ಗುಂಪಾಗಿ ಹಾರಾಡುವ ವೇಗ, ಲಾಲಿತ್ಯ, ಕರಾರುವಾಕ್ಕಾದ ರೆಕ್ಕೆ ಬಡಿತ, ಇವೆಲ್ಲವುಗಳಿಂದ ಗಿಳಿಗಳು ಚಿತ್ತಾಕರ್ಷಕ ಮತ್ತು ಮನಸ್ಸಿಗೆ ಮುದನೀಡುವ ಹಕ್ಕಿಗಳು. ಮರದ ಒಣ ಕಾಂಡಗಳಲ್ಲಿ ಅಥವಾ ಹಳೆಯ ಗೋಡೆಗಳಲ್ಲಿ, ಕೊರೆದ ತೂತುಗಳೊಳಗೆ ಗುಂಪಾಗಿ ಗೂಡು ಕಟ್ಟುತ್ತವೆ.

93. Rose-ringed Parakeet *(Psittacula krameri)* R Myna+ The commonest and most familiar of all parakeets; overall grass green coloured with a red, hooked bill; the male having rose-red and black collar, which the female lacks. With two toes pointing forwards and two back, they are fully adapted for climbing about in the trees, they sometimes visit the ground, where they have a peculiar rolling gait. **Voice:** loud, harsh *kee ak..kee ak..kee..ee...* uttered both at rest and on the wing. Popular cage bird; learns to utter few words and also some tabletop tricks. **Nesting**: February-April. **Eggs**: 4-6, oval round.

ಗುಲಾಬಿಕೊರಳಿನ ಗಿಳಿ *(ಗ್‌ಣಿ)* 42 ಸೆಂಮೀ. ನೀಳದೇಹಕ್ಕೆ ಕೆಂಪು ಕೊಕ್ಕು; ಗಂಡಿಗೆ ಕತ್ತಿನ ಮೇಲೆ ಗುಲಾಬಿ ಮತ್ತು ಕಪ್ಪು ಸರ. ಉದುರೆಲೆ, ಕುರುಚಲುಕಾಡು, ಕೃಷಿಭೂಮಿ, ಎಸ್ಟೇಟು, ತೋಪು ಮತ್ತು ಜನವಸತಿಯಿರುವೆಡೆ ವಾಸ. ನೆಲದ ಮೇಲೆ ಓಲಾಡುವ ನಡೆ; ಪಂಜರದ ಪಕ್ಷಿ; ಹತ್ತಾರು ಪದಗಳನ್ನೂ ಕಲಿತೀತು, ಈ ಗಿಳೀರಾಮನ ಶಾಸ್ತ್ರವನ್ನು ಜನರೂ ಕೇಳಿಯಾರು. ಗಟ್ಟಿಯಾದ *ಕೀ.ಕೀ.ಕೀಕ್..ಕೀಕ್..* ಕಿರುಚಾಟ.

94. Alexandrine Parakeet *(Psittacula eupatria)* Large Indian Parakeet R Pigeon+/- Large grass green parakeet with a massive red bill; a conspicuous maroon patch on each shoulder; males also have pink-rose and black collar. Prefer forests to human habitation. **Voice**: rather harsh *cheek...cheek... chee..ee..* uttered both when perched and on the wing. **Nesting**: December-April. **Eggs**: 2-4, blunt ovals.

ರಾಮಗಿಳಿ *(ಹೆಗ್ಗ್‌ರಗ್‌ಣಿ)* 53 ಸೆಂಮೀ. ಎಲ್ಲಕ್ಕಿಂತ ದೊಡ್ಡ ಗಿಳಿ; ದಪ್ಪ ಗಿಳಿಕೊಕ್ಕು; ಭುಜದ ಮೇಲೆ ಅಚ್ಚಗೆಂಪು ಬಣ್ಣದ ಮಚ್ಚೆ; ಗಂಡಿಗೆ ಕತ್ತಿನ ಗುಲಾಬಿ-ಕಪ್ಪು ಸರ. ಜನವಸತಿಗಿಂತಲೂ ಉದುರೆಲೆ, ಎಸ್ಟೇಟು, ಕೃಷಿಭೂಮಿ ಮತ್ತು ಕಾಡು ಇರುವೆಡೆ ಅಧಿಕವಾಗಿ ಕಂಡುಬರುತ್ತವೆ. ಕೂಗು, ೯೦ಕ್ಕಿಂತ ಕರ್ಕಶ. ಅನುಕರಣಾ ಸಾಮರ್ಥ್ಯವುಳ್ಳ ಹಕ್ಕಿ.

95. Plum-headed Parakeet *(Psittacula cyanocephala)* Blossom-headed Parakeet R Myna- Males have bluish red head, maroon shoulder patch and yellow-orange hooked bill; the white tips of the central tails in flight, diagnostic; females have greyer head and bright yellow collar around the neck; no shoulder patch. They prefer more wooded country. **Voice**: Inquisitive *chooi....? chooi...?* uttered both on the wing and while perched on a tree. **Nesting**: January-May. **Eggs**: 4-6, smooth oval round.

ಕೆಂದಲೆ ಗಿಳಿ *(ಚುಂಡೆಗ್‌ಣಿ)* 36 ಸೆಂಮೀ. ಗಂಡಿಗೆ ನೇರಳೆ ತಲೆ; ಅಚ್ಚಗೆಂಪು ಭುಜಪಟ್ಟಿ; ಹಳದಿ ಕೊಕ್ಕು; ಬಾಲದ ತುದಿ ಬಿಳಿ. ಹೆಣ್ಣಿನದು ಬೂದು ತಲೆ, ಆದರೆ, ಸರ-ಭುಜಪಟ್ಟಿಯಿಲ್ಲ. ಉದುರೆಲೆ ಕಾಡೆಂದರೆ ಇಷ್ಟ. ಪ್ರಶ್ನಾರ್ಥಕ *ಚುಯ್?..ಚುಯ್?..* ಕೂಗು.

96. Blue-winged Parakeet *(Psittacula columboides)* R Myna Endemic to Western Ghats. An overall greyish green parakeet, with brilliant bluish-green and black collar; conspicuous blue wings and yellow-tipped pointed tail; red bill; no shoulder patch. Female is duller, lacking the blue collar but with a greyish black bill. Food also includes grains, wild figs, flower petals and nectar **Voice:** Harsh, distinct double noted *chew...chewee...* uttered chiefly on the wing. **Nesting**: January-March. **Eggs**: 4, spherical.

ಮಲೆಗಿಳಿ ***(ನಾಯಿಗ್‌ಣಿ)*** 38 ಸೆಂಮೀ. ಪಶ್ಚಿಮ ಘಟ್ಟದ ಹಕ್ಕಿ. ಬೂದುಮಿಶ್ರಿತ ಹಸಿರು ಮೈ; ಅಚ್ಚ ನೀಲಿ–ಹಸಿರು ಮತ್ತು ಕಪ್ಪು ಬಣ್ಣದ ಸರ; ಹಳದಿ ತುದಿಯ ನೀಲಿಬಾಲ. ಹೆಣ್ಣಿಗೆ ಬೂದುಗಪ್ಪು ಕೊಕ್ಕು ಆದರೆ ಕತ್ತಿನ ಪಟ್ಟಿಯಿಲ್ಲ. ಸದಾಹಸಿರು, ತೇವವುಳ್ಳ ಉದುರೆಲೆಕಾಡು ಮತ್ತು ಎಸ್ಟೇಟು ಪ್ರದೇಶಗಳಲ್ಲಿ ವಾಸ. ಎರಡು ಸ್ವರದ *ಚು.ಚುವೀ..* ಕರ್ಕಶ ಕೂಗು.

97. Indian Hanging-Parrot *(Loriculus vernalis)* Indian Lorikeet R Sparrow+ Small Parakeet with short, square tail; a crimson rump; red bill; male has a bluish throat patch. Seen singly or in small flocks in well-wooded country, feeding in a suitable tree, following one another with quick, dipping flight across the clearings. They have a curious habit of roosting upside down, hanging from the branch. **Voice:** though difficult to see, the squeaky, pleasant triple note whistle s*chee.chee..cheee...* repeated every other second, is a sure guide to their presence. **Nesting**: January-April. **Eggs**: 3, round oval.

ಚಿಟ್ಟುಗಿಳಿ ***(ಶಾಯಿಗ್‌ಣಿ)*** 14 ಸೆಂಮೀ. ನೀಳಬಾಲವಿಲ್ಲದ ಪುಟ್ಟ ಹಸಿರು ಗಿಳಿ; ಕೆಂಪು ಕೊಕ್ಕು ಮತ್ತು ಪೃಷ್ಠ. ಗಂಡಿಗೆ ನೀಲಿ ಗಂಟಲು. ಉದುರೆಲೆಕಾಡು, ಎಸ್ಟೇಟುಗಳಲ್ಲಿ, ಹೂದೋಟಗಳಲ್ಲಿ ವಾಸ. ರಾತ್ರಿ ವೇಳೆ ಬಾವಲಿಯಂತೆ ನೇತಾಡಿಕೊಂಡು ನಿದ್ರಿಸುತ್ತವೆ. ಇಂಪಾದ ಮೂರು ಸ್ವರದ *ಸ್ಚಿ.ಚಿ.ಚಿ..* ಕೂಗು.

Cuckoos, Malkohas and Coucals *(Cuculidae)*

ಕೋಗಿಲೆಗಳು *(ಕೋಗಿಲೆ)* ಮತ್ತು ಕೆಂಬೂತಗಳು *(ಚೊಂಬುಕ)*

Arboreal or terrestrial, medium sized birds with a stout, slightly decurved bill; legs short and zygodactyl; rather long, broad, heavy and graduated tail. Sexes alike. Young birds have overall rufous plumage with brown crossbars. Perch conspicuously on wires, treetops or bushes especially when calling and often skulk in cover. Food consists of insects, mollusks, lizards, snakes, small invertebrates and fruits. Very vocal during breeding; song consisting of notes that typically has an ascending pattern. Well known for brood parasitism, build no nests, but lay single eggs in the nests of passerine birds, breeding corresponding with the nesting season of the hosts and eggs matching theirs in colour, size and markings; some are non-parasitic. Young nidicolous.

ಆಹಾರಕ್ಕಾಗಿ ಮತ್ತು ತಂಗಲು, ನೆಲ ಮತ್ತು ಮರಗಳನ್ನಾಶ್ರಯಿಸುವ ಮಧ್ಯಮ ಗಾತ್ರದ ಹಕ್ಕಿಗಳು. ಗಟ್ಟಿಮುಟ್ಟಾದ, ಸ್ವಲ್ಪ ಬಾಗಿದ ಕೊಕ್ಕು; ಚಿಕ್ಕ ಕಾಲುಗಳು; ಕಾಲ್ಬೆರಳುಗಳು ಎರಡು ಮುಂದೆ, ಎರಡು ಹಿಂದೆ; ಪಟ್ಟೆಗಳುಳ್ಳ, ಉದ್ದವಾದ, ದೇಹಕ್ಕೆ ಭಾರವೆನಿಸುವ ಬಾಲ. ಅಪ್ರಾಪ್ತ ಹಕ್ಕಿಗಳು ಸಾಧಾರಣವಾಗಿ, ಗೀರುಗಳಿರುವ ಕಂದುಬಣ್ಣದ ದೇಹವನ್ನು ಹೊಂದಿರುತ್ತವೆ. ಮೃದ್ವಂಗಿ, ಹಾವು-ಹಲ್ಲಿಗಳು, ಸಣ್ಣ ಅಕಶೇರುಕಗಳು, ಹಣ್ಣುಗಳು ಆಹಾರ. ಪ್ರಜನನ ಕಾಲದಲ್ಲಿ ಉತ್ಸಾಹಭರಿತ ಗಾನ; ಸರಿಸುಮಾರು ಎಲ್ಲ ಪ್ರಭೇದಗಳೂ ತಮ್ಮ ಹಾಡಿನ ಸ್ವರಗಳನ್ನು ಅವರೋಹಣ ಗತಿಯಲ್ಲಿ ಹಾಡುವುದು ಒಂದು ವಿಶೇಷ. ಯಾವುದೇ ಗೂಡು ಕಟ್ಟುವ ಗೋಜಿಲ್ಲದೆ, ಮೊಟ್ಟೆಗಳಿಗೆ ಕಾವು, ಗುಟುಕು ನೀಡದೇ, ಇತರ ಹಕ್ಕಿಗಳ ಗೂಡಿನಲ್ಲಿ ತಮ್ಮ ಮೊಟ್ಟೆಯನಿಟ್ಟು ಕೈತೊಳೆದುಕೊಳ್ಳುವ ಪಕ್ಷಿಗಳು. ಆ ಹಕ್ಕಿಯದೇ ಮೊಟ್ಟೆಯ ಗಾತ್ರ, ಆಕಾರ, ಬಣ್ಣಗಳಿರುವ ಮೊಟ್ಟೆಗಳನ್ನು ತಾನೂ ಇಡುತ್ತದೆ.

98. Indian Cuckoo *(Cuculus micropterus)* R Pigeon+/- Slaty brown above; grey on head, throat and breast; white below with broadly spaced black cross bars; broad black subterminal band in tail. Female has rufous brown wash on throat and breast. Solitary, arboreal, on top of trees and flying hawk-like; also descends to ground to search litter. **Food**: also caterpillars. **Voice**: distinct diagnostic, loud, monotonous, far-reaching, 4-note, mellow whistle *booko..taako*. or *cross-word-puzzle*, especially during breeding. **Nesting**: March-August; brood parasite on drongos, orioles, etc.

ಪಟ್ಟೆಬಾಲದ ಕೋಗಿಲೆ *(ಬೂದ್ ಕೋಗಿಲೆ)* 33 ಸೆಂಮೀ. ತಿಳಿ ಬೂದುಗಂದು ಮೇಲ್ಮೈ, ತಲೆ, ಕತ್ತು, ಎದೆ; ಬಿಳಿ ಕೆಳಮೈ ಮೇಲೆ ಅಡ್ಡಡ್ಡಲಾದ ಕಪ್ಪು ಗೀರುಗಳು; ಕಪ್ಪು ಪಟ್ಟೆ ತುದಿಯ ಬೂದು ಬಾಲ. ೪ ಸ್ವರದ *ಬೂಕೋ.ಟಾಕೋ* ಅಥವಾ *ಈಚು.ಪೀಚು* ಕೂಗು. ಒಂಟಿಯಾಗಿ ಮರಗಳ ಮೇಲೆ ಕಾಣಬಹುದು. ಕಳಿಂಗ, ಸುವರ್ಣ ಮುಂತಾದ ಪಕ್ಷಿಗಳೊಂದಿಗೆ ಪರತಂತ್ರ ಜೀವನ.

99. Common Cuckoo *(Cuculus canorus)* The Cuckoo R Pigeon+/- Ashy grey above; grey on head, throat, breast; white below, with wide spaced black barring; brown-black long tail with white tip and spots. Female has rufous tinge on upper breast, throat and sides of neck. Solitary, arboreal, keeps to well-wooded canopy. **Voice**: distinct, repetitive, far-reaching *kuk..koo.. kuk..koo..*, once every second; female has very rapid, bubbling *puhuhuhuhu*. **Nesting**: same as 98.

ಕಪ್ಪುಬಾಲದ ಕೋಗಿಲೆ *(ಕೋಗಿಲೆ)* 33 ಸೆಂಮೀ. ಬೂದು ಮೇಲ್ಮೈ, ತಲೆ, ಕತ್ತು, ಎದೆ; ಬಿಳಿ ಕೆಳಮೈ ಮೇಲೆ ಅಡ್ಡಲಾದ ಕಪ್ಪು ಗೀರುಗಳು; ಬಿಳಿತುದಿ ಮತ್ತು ಚುಕ್ಕೆಗಳಿರುವ ಉದ್ದವಾದ ಕಂದುಗಪ್ಪು ಬಾಲ. ಹೆಚ್ಚು ಒತ್ತಾದ ಕಾಡುಗಳಲ್ಲಿ ವಾಸ. ನಿರಂತರ *ಕುಕ್.ಕೂ.. ಕುಕ್.ಕೂ..* ಕೂಗು. ೯೮ರಂತೆ ಪರತಂತ್ರಜೀವಿ.

100. Pied Crested Cuckoo *(Clamator jacobinus)* LM Myna+ Black above with a crest; white in wings and tip of long tail feathers, best seen in flight; white chin, throat, breast and underbody. Solitary or small flock, seen in wooded country; not shy; local migration controlled by SW monsoon. **Voice**: noisy, loud, metallic *piu..piu..pee..pee..piu..* **Nesting**: June-August, coinciding with their parasitic hosts, *Turdoides* babblers.

ಚಾತಕಪಕ್ಷಿ *(ಚಾತಕಪಕ್ಷಿ)* 33 ಸೆಂಮೀ. ಜುಟ್ಟಿರುವ ಕಪ್ಪು-ಬಿಳಿ ಹಕ್ಕಿ. ಕಪ್ಪು ಮೇಲ್ಮೈ; ಬಿಳಿ ಕೆಳಮೈ; ರೆಕ್ಕೆ-ಬಾಲದಲ್ಲಿ ಬಿಳಿ. ಉದುರೆಲೆ, ಕುರುಚಲು ಮತ್ತು ಬಿದಿರುಗಾಡುಗಳಲ್ಲಿ ಮರದ ಮೇಲೆ ವಾಸ. ಮಳೆಗಾಲದ ಮುನ್ಸೂಚನೆಯನ್ನು ನೀಡುತ್ತಾ, ಅತ್ತಿಂದಿತ್ತ ವಲಸೆ. ತಲೆಯೆತ್ತಿ ನೇರವಾಗಿ ಮಳೆನೀರನ್ನು ಕುಡಿಯುತ್ತದೆ ಎಂಬ ಪ್ರತೀತಿ. *ಪ್ಯೂ.ಪ್ಯೂ..ಪೀ.ಪೀ.* ಚೀರಾಟದ ಕೂಗು. ಸಂತಾನಾಭಿವೃದ್ಧಿಗೆ ಹರಟೆಮಲ್ಲದ ಗೂಡಿನಾಶ್ರಯ.

101. Brainfever Bird *(Hierococcyx varius)* Common Hawk Cuckoo R Pigeon Ashy grey on back; dull white below with ashy rufous breast, barred below; brown wings with rufous barring; deep rufous and barred tail. Looks like a shikra-hawk. Solitary, seen on tall trees, light forests, gardens and human habitations; not easily seen among foliage. **Food:** also caterpillars and wild figs. **Voice**: silent during non-breeding season; endlessly repeated **triple** note *brain-fever..brain-fever..* or *pee..kahan?* utterance, becoming more frenzied as the call rises higher and higher in pitch. **Nesting**: March-June; nest parasite on *Turdoides* babblers.

ಕೋಗಿಲೆಚಾಣ 34 ಸೆಂಮೀ. ಬೂದು ಮೇಲ್ಮೈ; ಕೆಂಗಂದು ಎದೆ; ಬಿಳಿ ಕೆಳಮೈ ಮೇಲೆ ಕಂದು ಗೀರುಗಳು; ಪಟ್ಟಿಯಿರುವ ಕೆಂಗಂದು ಬಾಲ. ಒಚಿಟಿಯಾಗಿ, ಸದಾಹಸಿರು, ಉದುರೆಲೆ, ಕುರುಚಲುಕಾಡುಗಳಲ್ಲಿ ಎತ್ತರದ ಮರದ ಮೇಲೆ ವಾಸ. ಎಲೆಗಳ ನಡುವೆ ಅವಿತು ಕುಳಿತರೆ, ಕಾಣುವುದೇ ಕಷ್ಟ. ಸಂತಾನ ಋತುವಿನಲ್ಲಿ, ಉನ್ಮಾದದಿಂದ ಏರುಗತಿಯಲ್ಲಿ *ಪೀ.ಕ.ಹಾಂ..ಪೀ.ಕ.ಹಾಂ..?* ಕೂಗು. ಹರಟೆಮಲ್ಲಗಳ ಪರತಂತ್ರಜೀವಿ.

102. Banded Bay Cuckoo *(Cacomantis sonneratii)* Indian Bay-banded Cuckoo R Myna+ Rufous upperparts, cheek; white supercilium, underparts with wavy, brown crossbars; rufous tail with white tip. Seen singly in wooded country, arboreal. **Voice**: distinct, 4 note monotonous whistle *wee..ti..tee..ti.*; also clear *tee.titee.tee.titee..* whistle in ascending scale. **Nesting**: brood parasite of Ioras, Bulbuls, Minivets and some babblers, season coinciding with that of hosts.

ಪಟ್ಟೆ ಕೋಗಿಲೆ *(ಪಟ್ಟೆ ಕೋಗಿಲೆ)* 24 ಸೆಂಮೀ. ಕೆಂಗಂದು ಮೇಲ್ಮೈ; ಬಿಳಿ ಹುಬ್ಬು ಮತ್ತು ಕೆಳಮೈ; ಕೆಳಮೈ ಮೇಲೆ ಅಲೆಗಳಂತಿರುವ ಕಂದು ಗೀರುಗಳು; ಬಿಳಿ ತುದಿಯ ಕೆಂಗಂದು ಬಾಲ. ಕಾಡಿನಲ್ಲಿ ಒಂಟಿಯಾಗಿ ಮರಗಳ ಮೇಲೆ ಓಡಾಟ. ೪ ಸ್ವರದ *ವೀ.ಟಿ.ಟೀ.ಟಿ..* ಕೂಗು ಮತ್ತು ಏರುಗತಿಯ *ಟಿ.ಟಿಟೀ.ಟೀ.ಟಿಟೀ..* ಸಿಳ್ಳು. ಮಧುರಕಂಠ, ಪಿಕಳಾರ, ಗುಲಗಂಜಿ ಮತ್ತು ಹರಟೆಮಲ್ಲಗಳ ಗೂಡಿನಾಶ್ರಯ.

103. Indian Plaintive Cuckoo *(Cacomantis passerinus)* Plaintive Cuckoo R Bulbul+ Male, dark grey head, throat, upper breast; greenish brown upper body; pale white below; black tail with white tip and white patch on underside of black wings, seen in flight. Female in hepatic phase, chestnut upperparts and throat; white underparts, all barred with black. Solitary, seen in scrub, open woods, dense growth, making short sally, moving from one patch to another, active and noisy during monsoon. **Voice**: high-pitched *pit.teer..pit.teer*; also plaintive *pipipeepeeepee*, whistle from an exposed treetop. **Nesting**: July-September; nest parasite on Tailorbirds and Ashy Prinias.

ಬೂದು ಕೋಗಿಲೆ 23 ಸೆಂಮೀ. ಕಡುಬೂದು ದೇಹ; ಬಿಳಿ ಕೆಳಮೈ; ಕೆಂಗಣ್ಣು; ಬಿಳಿತುದಿಯ ಕಪ್ಪು ಬಾಲ; ಕಪ್ಪು ರೆಕ್ಕೆಗಳ ಕೆಳಬದಿ ಬಿಳಿ. ದಟ್ಟ ಕಾಡುಗಳಲ್ಲಿ, ಒಂಟಿಯಾಗಿ, ಅತ್ತಿಂದಿತ್ತ ಹಾರಾಟ. ತೀಕ್ಷ್ಣ ಸ್ವರದ *ಪಿ.ಟೀರ್..ಪಿ.ಟೀರ್..* ಮತ್ತು ಏರುಗತಿಯ *ಪೀಪಿಪೀಪೀಪೀಪೀ..* ಕೂಗು. ಸಿಂಪಿಗ, ಟುವ್ವಿಹಕ್ಕಿಗಳ ಪರತಂತ್ರಜೀವಿ.

104. Drongo Cuckoo *(Surniculus lugubris)* R Myna+ Glossy black plumage, forked tail, closely resembling Black Drongo but outer tail feathers are white at the base; white and barred undertail coverts, diagnostic. Young ones are dull, speckled white. Solitary, cuckoo-like flight; arboreal in the canopy of trees and shrubs. **Voice**: distinct, monotonous, high-pitched *pee..pee..pee..pi* call, rising the pitch with each *pee*, from an exposed branch during monsoon. **Nesting**: March-October; brood parasite on drongos, minivets, babblers etc.,

ಕಾಜಾಣಕೋಗಿಲೆ 25 ಸೆಂಮೀ. ನೋಡಲು ಕಾಜಾಣದಂತೆ, ಹೊಳೆಯುವ ಕಪ್ಪು ದೇಹ, ಸೀಳುಬಾಲ, ಆದರೆ ಬಾಲದ ಕೆಳಗೆ ಮತ್ತು ಪಟ್ಟೆಗಳಿರುವ ಹೊರಗರಿಗಳ ಬುಡ ಬಿಳಿ. ಕೋಗಿಲೆಯಂತೆ ಮರಗಳ ಮೇಲೆ ಹಾರಾಟ. ಏರುಗತಿಯ, ತೀಕ್ಷ್ಣಸ್ವರದ *ಪೀ.ಪೀ.ಪೀ.ಪೀ.ಪೀ.ಪಿ.* ಕೂಗು. ಕಾಜಾಣ, ಗುಲಗಂಜಿ, ಹರಟೆಮಲ್ಲಗಳ ಗೂಡಿನಾಶ್ರಯ.

105. Asian Koel *(Eudynamys scolopacea)* Koel R Crow Male, metallic black plumage; greenish yellow beak; ruby eyes. Female, dark brown with profuse white spots and barring. Solitary or in pairs, arboreal, seen around gardens, groves, among large, leafy trees. **Voice**: silent between July-February; increasingly noisy as spring approaches; male has a familiar *ku-oo..ku-oo..ku-oo* calls in crescendo reaching feverish pitch, then starts all over again, after break. Female has quick repeated *kek-kek-kek*, on the wings. **Food**: also snails, eggs of small birds. **Nesting**: April-August; brood parasite on House and Jungle crows. **Eggs**: smaller than crows', pale green, speckled and blotched with brown.

ಕೋಗಿಲೆ (ಕರ್ತ ಕೋಗಿಲೆ) 43 ಸೆಂಮೀ. ಗಂಡಿಗೆ, ಅಚ್ಚ ಕಪ್ಪು ಮೈ; ಹಳದಿ ಕೊಕ್ಕು; ಕೆಂಪು ಕಣ್ಣು. ಹೆಣ್ಣಿನದು ಕಡುಗಂದು ಮೈತುಂಬ ಬಿಳಿ ಗೀರು ಮತ್ತು ಮಚ್ಚೆಗಳು. ಜೋಡಿಯಾಗಿ, ತೋಪುಗಳಲ್ಲಿ ಮತ್ತು ಜನವಸತಿಯಿರುವೆಡೆ ಮರಗಳ ಮೇಲೆ ವಾಸ. ಚಳಿಗಾಲದಲ್ಲಿ ಮೌನ. ಸಂತಾನಋತುವಿನಲ್ಲಿ, ವಸಂತಾಗಮನವಾದೊಡನೆ, ಸುಪರಿಚಿತ, ಏರುಗತಿಯ *ಕು.ಹೂ..ಕುಹೂ..* ಕೂಗು. ಪರಪುಟ್ಟ; ಕಾಗೆ ಗೂಡಿನಾಶ್ರಯ.

106. Small Green-billed Malkoha *(Phaenicophaeus viridirostris)* R Crow- Ashy green upperparts, darker wings and tail; bright, hooked green bill; blue naked patch around the eyes; light greenish rufous underparts; long graduated, white tipped tail. Singly or in pairs, seen in thorn jungle, creeping and clambering among branches; a poor flier. **Food**: also lizards, caterpillars, grasshoppers and small animals. **Voice**: silent; low *kraa..* croak. **Nesting**: March-May; nest made of untidy platform of thorny twigs on a Euphorbia or bamboo bush. **Eggs**: 2, round, chalky white.

ಕೈರಾತ 39 ಸೆಂಮೀ. ತಿಳಿ–ಹಸಿರು ಬೂದು ಮೈಬಣ್ಣ; ಹಸಿರುಕೊಕ್ಕು; ಕಣ್ಣಿನ ಸುತ್ತ ನೀಲಿ ಮಚ್ಚೆ; ಬಿಳಿತುದಿಯ ಉದ್ದವಾದ ಪಟ್ಟೆ ಬಾಲ. ಜೋಡಿಯಾಗಿ ಉದುರೆಲೆ, ಕುರುಚಲುಕಾಡುಗಳಲ್ಲಿ ಪೊದೆಗಳಲ್ಲಿ ಅಡ್ಡಾಡುತ್ತವೆ. ಹಲ್ಲಿ, ಮಿಡತೆ, ಸಣ್ಣ ಪ್ರಾಣಿಗಳು ಆಹಾರ. ಅಪರೂಪಕ್ಕೆ ಸಣ್ಣದನಿಯಲ್ಲಿ ಗುರುಗುಟ್ಟುವಿಕೆ. ಮುಳ್ಳುಕಂಟಿ ಅಥವಾ ಬಿದಿರುಮೆಳೆಯಲ್ಲಿ, ಒಣ ಮುಳ್ಳುರೆಂಬೆಗಳನ್ನು ಜೋಡಿಸಿದ ಗೂಡು.

107. Sirkeer Malkoha *(Phaenicophaeus leschenaultii)* Sirkeer Cuckoo R Crow+/- Earthy rufous plumage; fine black shaft streaks to feathers; bright yellow tipped cherry-red beak;long, graduated tail with broad white tips to black outer feathers, seen in flight. Solitary or small flock, seen running swiftly on ground among dense

undergrowth or climbing a tree, hopping from branch to branch; weak flier. **Voice**: low, sharp *kek..kek..kek..kerek..kerek* clicking notes. **Nesting**: March-September; nest, shallow cup of twigs lined by leaves in a thorn bush. **Eggs**: 2-3, chalky white.

ಕೆಂಗಂದು ಕೈರಾತ 42-44 ಸೆಂಮೀ. ತಿಳಿ ಕೆಂಗಂದು ದೇಹಕ್ಕೆ ಹಳದಿ ತುದಿಯ ಕೆಂಪು ಕೊಕ್ಕು; ಬಿಳಿಯಂಚು-ತುದಿಯ, ಉದ್ದನಾದ ಕಪ್ಪು ಪಟ್ಟೆ ಬಾಲ. ಒಂಟಿಯಾಗಿ, ಚುರುಕಾಗಿ, ಒತ್ತಾದ ಕುರುಚಲು ಗಿಡಗಳಿರುವಲ್ಲಿ, ನೆಲದ ಮೇಲೆ ಅಥವಾ ಗಿಡಗಳ ಮೇಲೆ ಕುಪ್ಪಳಿಸುವುದನ್ನು ಕಾಣಬಹುದು. ಮಂದಸ್ವರದ *ಕೆ.ಕ್ಕೆ.ಕ್ಕೆ.ಕ್ಕೆ.* ಉಲಿತ.

108. Greater Coucal *(Centropus sinensis)* Crow Pheasant R Crow+ Glossy black plumage; bright chestnut wings; coral red eyes; black, broad, graduated and heavy tail. Female bigger. Seen singly clambering and hopping in light forests, scrubs, cultivation and in human vicinity. **Food**: also snails, young mice and birds' eggs. **Voice**: familiar, deep, resonant, far-reaching, *hhu.hhoo.hhoo.hhoo..*, often in duet; occasional chuckles and coughs. **Nesting**: February-September; nest, a large untidy globular mass of twigs and dry leaves with a lateral entrance, placed amid thorny shrub. **Eggs**: 3-4, chalky white.

ಕೆಂಬೂತ *(ಚೊಂಬುಕ)* 48 ಸೆಂಮೀ. ಹೊಳೆಯುವ ಕಪ್ಪು ದೇಹಕ್ಕೆ ಅಚ್ಚ ಕೆಂಗಂದು ರೆಕ್ಕೆಗಳು; ಕೆಂಪು ಕಣ್ಣುಗಳು. ಸಡಿಲವಾದ ಉದ್ದವಾದ ಕಪ್ಪು ಪಟ್ಟೆ ಬಾಲ. ಕುರುಚಲು, ಬಿದಿರುಕಾಡು, ಬಯಲುಪ್ರದೇಶ ಮತ್ತು ಜನವಸತಿಯಿರುವೆಡೆ ಸಣ್ಣ ಮರಗಳ ಪೊದೆಗಳಲ್ಲಿ ವಾಸ; ಗಿಡ-ಗಂಟಿಗಳಲ್ಲಿ ಕುಪ್ಪಳಿಸುವ ನಡೆ. ಇಲಿ, ಹಲ್ಲಿ, ಅಳಿಲು, ಕಪ್ಪೆ, ಹಕ್ಕಿಗಳ ಮೊಟ್ಟೆ, ಮೃದ್ವಂಗಿಗಳು ಆಹಾರ. ಪರಿಚಿತವಾದ, ಪ್ರತಿಧ್ವನಿತ, *ಹ್ಹು.ಹ್ಹೂ.ಹ್ಹೂ.ಹ್ಹೂ....* ಕೂಗು.

Barn Owls (*Tytonidae)*

ಕಣಜಗೂಬೆಗಳು *(ಕಳಗೂಮ)*

109. Barn Owl *(Tyto alba)* Screech Owl R Crow- Golden buff above, finely speckled black and white; heart-shaped white facial disc with ruff of stiff feathers surrounding the pinched out face; white below with fine dark spots. Sexes alike, adult female larger. Pairs, near human habitations; nocturnal; spend day standing upright in some dark niches; emerge after dusk, with a wheezy screech, flying silently, ghost-like, hunting. Eyes and ears are very sensitive; very feeble rustle or squeak of a rodent is enough for the owl to pounce on the prey. **Food**: almost exclusively rats and mice, thus a farmer's friend. **Voice**: shrill, hoarse, drawn-out shriek *shreeee.,* with variety of snoring, hissing notes. **Nesting**: undefined, coincides with paddy harvest, when there is abundance of rodent population; nest, a collection of straw, rags, rubbish padded into tree hollows, holes in walls or any such space, same site used year after year; also uses man-made owl boxes. **Eggs**: 4-7, white, smooth and round.

ಕಣಜಗೂಬೆ *(ಕಳಗೂಮ)* 36 ಸೆಂಮೀ. ಹೃದಯಾಕಾರದ ಮುಖ; ಬೂದು-ಹೊಂಬಣ್ಣದ ದೇಹದಲ್ಲಿ ಚಿಕ್ಕ ಬಿಳಿ-ಕಪ್ಪು ಚುಕ್ಕೆಗಳು; ಬಿಳಿ ಕೆಳಮೈ. ಕಣ್ಣು ಮತ್ತು ಕಿವಿ ಅತ್ಯಂತ ಚುರುಕು. ಕತ್ತಲಿನಲ್ಲಿ ಕುಳಿತಲ್ಲಿಂದಲೇ ದಂಶಕಗಳ ಕನಿಷ್ಟ ಚಲನೆ ಮತ್ತು ತೀಕ್ಷ್ಣ ಸ್ವರಗಳನ್ನು ಗ್ರಹಿಸಿ, ಅತಿ ವೇಗವಾಗಿ ಅವುಗಳ ಮೇಲೆ ಎರಗುವುವು. ಹಗಲು ಹೊತ್ತಿನಲ್ಲಿ ಯಾವುದಾದರೂ ಸಂದು ಅಥವಾ ಪೊಟರೆಯೊಳಗೆ ಗುಮ್ಮನೆ ಕುಳಿತು, ಸಂಜೆಯಾದೊಡನೆ ಬೇಟೆಗೆ ಅಣಿಯಾಗುತ್ತವೆ. ಕುರುಚಲುಕಾಡು, ಬೃಹತ್ ಮರ, ಕೋಟೆ, ಹಳೆಕಟ್ಟಡ ಮುಂತಾದೆಡೆ ವಾಸ. ಬೇಟೆಯಾಡುವಾಗ ನಿಶ್ಶಬ್ದ ಹಾರಾಟ. ಸುಗ್ಗಿಯ ಸಮಯದಲ್ಲಿ, ಹೊಲಗದ್ದೆಗಳಲ್ಲಿ, ಅಧಿಕ ಸಂಖ್ಯೆಯಲ್ಲಿ ವೃದ್ಧಿಯಾಗುವ ಇಲಿಗಳೇ ಮುಖ್ಯ ಆಹಾರವಾದ್ದರಿಂದ, ರೈತನ ಗೆಳೆಯ. ಮೂಳೆ, ಪುಕ್ಕಗಳನ್ನು ಪಚನ ಮಾಡಿಕೊಳ್ಳಲಾರದೆ, ಆಗಾಗ ಅವುಗಳನ್ನು ಉಂಡೆಯಂತೆ ಉಗುಳುತ್ತದೆ. ಚೀರಾಟದ *ಶ್ರೀೕೕ.* ಕೂಗು. ಗೋಡೆ, ಮರಗಳಲ್ಲಿನ ಸಂದು-ಬಿಲಗಳಲ್ಲಿ, ಕಸ-ಕಡ್ಡಿಗಳಿಂದ ತಯಾರಾದ ಗೂಡು; ಮನುಷ್ಯ-ನಿರ್ಮಿತ ಗೂಡುಗಳೂ ಆಗಬಹುದು.

Owls *(Strigidae)*

ಗೂಬೆಗಳು *(ಗೂಮ)*

These are versatile, fascinating, mysteriously appealing and cryptically coloured birds that are arboreal and chiefly nocturnal birds of prey. The large round head with large, glaring forward-facing eyes set on a flat face; short tail and chunky, seemingly neckless body; noticeable external ears, are unique to owls. The bill is small, strong and hooked; tarsus and toes powerful and feathered; outer toe reversible; claws strongly hooked. The large broad wings with soft pads at the contour feathers give them the uncanny ability to fly silently. Visual acuity is about 100 times more than ours, their 'rubber' neck, enables them to turn up to 270 degrees, expanding their visual and auditory horizon even in darkness. Ears are sensitive even to minute sounds of squeals or slight rustling of a prey at a distance. Sexes alike, female larger. Food entirely made of rodents and small creatures. Nest, in holes or hollows. Young nidicolous and downy. Both sexes share the domestic duties.

ಗೂಬೆಗಳಷ್ಟು ನಿಗೂಢತೆಯನ್ನು ಪ್ರತಿನಿಧಿಸುವ, ಕುತೂಹಲಕಾರಿ, ಹಕ್ಕಿ ಬೇರೊಂದಿಲ್ಲ. ರಾತ್ರಿಯ ವೇಳೆ ಅವುಗಳ ಆಕೃತಿ, ಕೂಗು ಸಂಚಾರ ಇವುಗಳೆಲ್ಲ ಯಾರನ್ನಾದರೂ ಅಧೀರರನ್ನಾಗಿಸುವುದು. ಮುಖದ ಮುಂದೆ ನೇರ ದೃಷ್ಟಿಯ ದೊಡ್ಡ ಕಣ್ಣುಗಳು, ಎದ್ದು ಕಾಣುವ ಕಿವಿಗಳು; ಚಿಕ್ಕ, ಗಟ್ಟಿಮುಟ್ಟಾದ ಕೊಕ್ಕೆಯಂತಹ ಕೊಕ್ಕು; ಇದ್ದೂ ಇಲ್ಲದಂತಿರುವ ಕತ್ತು; ಗರಿಗಳಿಂದಾವೃತ ಕಾಲುಗಳು, ಚೂಪಾದ ಕಾಲುಗುರುಗಳು; ಚಿಕ್ಕ ಬಾಲ. ಹೆಣ್ಣು ಗಾತ್ರದಲ್ಲಿ ತುಸು ದೊಡ್ಡದು. ಹಾರುವಾಗ ನಿಶ್ಶಬ್ದವಾಗಿರಲು, ಅಗಲವಾದ ರೆಕ್ಕೆಯ ಬುಡದಲ್ಲಿ ಮೃದುವಾದ ತುಪ್ಪಳ; ನಮಗಿಂತ ೧೦೦ ಪಟ್ಟು ತೀಕ್ಷ್ಣ ದೃಷ್ಟಿ; ತಲೆಯನ್ನು ೨೭೦ ಡಿಗ್ರಿ ಕೋನ ತಿರುಗಿಸಲು ರಬ್ಬರ್ ಕುತ್ತಿಗೆ; ಅತಿ ಸೂಕ್ಷ್ಮ ಶಬ್ದವನ್ನೂ ಗ್ರಹಿಸುವ ಕಿವಿ, ಇವೆಲ್ಲವೂ ರಾತ್ರಿ ಬೇಟೆಗೆ ಹೇಳಿ ಮಾಡಿಸಿದಂತಿವೆ. ಮರಗಳಲ್ಲಿ ವಾಸ. ಇಲಿ ಮುಂತಾದ ದಂಶಕಗಳೆ ಮುಖ್ಯ ಆಹಾರ. ರಾತ್ರಿಯಲ್ಲಿ ಹೊಲ-ಗದ್ದೆ, ಉಗ್ರಾಣಗಳ ಕಾವಲುಗಾರ. ಗುಳಿ, ರಂಧ್ರಗಳಲ್ಲಿ ಗೂಡು.

110. Eurasian Scops-Owl *(Otus scops)* Scops Owl LM Myna- Greyish brown, delicately vermiculated plumage with profuse white marks; greyish underbody, longitudinally streaked and mottled black; small ear tufts and feathered legs. Solitary or in pairs; nocturnal; spend the day remaining motionless in tree hollows or thick canopy, camouflaged; difficult to spot; fly around dusk. **Voice**: short, clear, monotonous *tuk..tuk..tuk* repeated every 3 seconds all through night, confused with tree frog. **Nesting**: February-May. **Eggs**: 3-4, white.

ಚಿಟ್ಟುಗೂಬೆ ***(ಕ್ರ್‌ಗೂಮ)*** 19 ಸೆಂಮೀ. ಹಳದಿ ಕಣ್ಣಿನ, ಗೂಬೆ ಮುಖಕ್ಕೆ, ಸಣ್ಣ ಕಿವಿಗಳು; ಬೂದು ದೇಹದ ಪೂರಾ ಬಿಳಿ–ಕಪ್ಪು ಗೀರುಗಳು; ಗರಿಗಳಿಂದಾವೃತವಾದ ಕಾಲುಗಳು. ಹಗಲು ಮರಗಳ ಬಿಲಗಳಲ್ಲಿ ಅಲುಗಾಡದೆ, ಅವಿತು ಕುಳಿತು, ಸಂಜೆಯ ನಂತರ, ಬೇಟೆಗೆ ಸಿದ್ಧ. ರಾತ್ರಿಯಿಡೀ ೩ ಸ್ವರದ *ಟಕ್.ಟಕ್.ಟಕ್.* ಕೂಗು.

111. Collared Scops-Owl *(Otus bakkamoena)* R Myna+/- Greyish or rufous brown above, vermiculated and mottled white; yellow eyes and ear tufts; buffy nuchal collar diagnostic; lighter underparts with dark vertical bars and stipples. Singly or in pairs, in open forest, groves and trees near human habitation; nocturnal. **Voice**: often heard than seen; soft interrogatory *wut?* repeated every 2-3 seconds during night. **Food**: also lizard, beetles, other insects. **Nesting**: January-April; nest, also in discarded nests of woodpecker or barbet; unlined. **Eggs**: 3-5, white, spherical.

ಕೊರಳುಪಟ್ಟಿಯ ಚಿಟ್ಟುಗೂಬೆ 23-25 ಸೆಂಮೀ. ಕಂದು ಮುಖದಲ್ಲಿ ಎದ್ದುಕಾಣುವ ಕಿವಿಗಳು; ಕಡು ಬೂದುಗಂದು ಮೇಲ್ಮೈಲ ಮೇಲೆ ಉದ್ದವಾದ ಬಿಳಿ ಮಚ್ಚೆ–ಗೀರುಗಳು; ಪೇಲವ ಕೆಳಮೈ ಮೇಲೆ ಉದ್ದ ಕಪ್ಪು ಗೀರುಗಳು; ಹಿಂಗತ್ತಿನ ಮೇಲೆ ಅಚ್ಚ ಬೂದು ಕಾಲರ್. ಉದುರೆಲೆಕಾಡು, ತೋಪು ಮತ್ತು ವಿರಳ ಕಾಡುಗಳಲ್ಲಿ ಮರದ ಮೇಲೆ ವಾಸ; ರಾತ್ರಿ ಬೇಟೆ. ರಾತ್ರಿವೇಳೆ ಪ್ರಶ್ನಾರ್ಥಕ *ವಟ್?* ಕೂಗು.

112. Eurasian Eagle-Owl *(Bubo bubo)* Indian Great Horned Owl R Kite- Powerful, impressive owl with brown plumage, mottled and streaked dark; prominent ear tufts; orange eyes and fully feathered legs diagnostic. Solitary or in pairs; nocturnal; spend day on leafy trees and shelters; haunt steep, scrubbed bank of rivers and streams; avoids heavy forest. **Food**: farmer's friend, taking heavy toll of rats and mice; also large insects, fish and crabs. **Voice**: deep, far-carrying, muffled hoot *bu..hoo* call; female having these notes on a higher scale. **Nesting**: November-April. **Eggs**: 3-4, glossy white, laid on bare, natural recess in earth bank or under shelter.

ಕೊಂಬಿನ ಗೂಬೆ ***(ಬಲ್ಯ ಗೂಮ)*** 56 ಸೆಂಮೀ. ನೇರದೃಷ್ಟಿಯ, ಹೊಳೆಯುವ ತಿಳಿಗಿತ್ತಳೆ ಕಣ್ಣುಗಳು; ಮುಖದಲ್ಲಿ ಎದ್ದುಕಾಣುವ ನಿಮಿರಿದ ಕಿವಿಗಳು; ಕಂದು ಮೈಯಲ್ಲಿ ಕಪ್ಪು ಗೀರುಗಳು. ಗರಿಗಳಿಂದಾವೃತ ಕಾಲುಗಳು. ಬಂಡೆಪ್ರದೇಶ, ಹಳೆ ಕಟ್ಟಡ ಮತ್ತು ನೀರ ಬಳಿ ಮರಗಳ ಮೇಲೆ ವಾಸ; ರಾತ್ರಿಬೇಟೆ. ಮೀನು, ಏಡಿಗಳೊಂದಿಗೆ, ಇಲಿಗಳು ಆಹಾರ. ಆಳವಾದ, ಭಯ ಹುಟ್ಟಿಸುವ *ಬು..ಬೂ..* ಕೂಗು.

113. Forest Eagle-Owl *(Bubo nipalensis)* R Kite- Greyish brown plumage; black-white erect ear tufts; brown eyes; light underparts, transverse black streaks on throat, breast; fully feathered legs. Solitary or in pairs, in dense forests; nocturnal; powerful enough to kill peafowl or jackal sized animals. **Voice**: deep, penetrating, moaning hoot. **Nesting**: December-March. **Eggs**: one, white.

ಗಿಡುಗಗೂಬೆ *(ಕ್‌ಡುವಗೂಮ)* 63 ಸೆಂಮೀ. ತಿಳಿಬೂದು ಮುಖಕ್ಕೆ ಕಪ್ಪು-ಬಿಳಿ ಕಿವಿಗಳು; ಬೂದುಗಂದು ಮೇಲ್ಮೈ ಮತ್ತು ತಿಳಿಯಾದ ಕೆಳಮೈ ಮೇಲೆ ಕಪ್ಪು ಗೀರುಗಳು. ತನ್ನ ದೇಹಕ್ಕಿಂತ ದೊಡ್ಡ ಪ್ರಾಣಿಗಳನ್ನು ಕೊಲ್ಲುವ ತಾಕತ್ತು. ಆಳವಾದ, ಫೂತ್ಕಾರದ ಕೂಗು.

114. Brown Fish-Owl *(Ketupa zeylonensis)* R Kite- Brown plumage, mottled and streaked dark; prominent ear tufts; yellow eyes; white throat patch; lighter underparts with black vertical streaks; bare legs and feet adapted for catching and holding fish. Solitary or in pairs; nocturnal; spend daytime in large tree foliage, near water. **Food**: chiefly fish. **Voice**: explosive, deep, eerie, moaning *boom..hu.boo..* **Nesting**: December-March. **Eggs**: 1-2, white and round.

ಮೀನುಗೂಬೆ *(ಗೂಮ)* 56 ಸೆಂಮೀ. ಹಳದಿ ಕಣ್ಣಿನ ಮುಖದಲ್ಲಿ ಎದ್ದುಕಾಣುವ ನಿಮಿರಿನಿಂತ ಕಿವಿಗಳು; ಕಂದು ಮೈಗೆ ನೀಳ ಕಪ್ಪು ಗೀರುಗಳು; ಬಿಳಿ ಗಂಟಲು ಪಟ್ಟಿ; ಗರಿಯಿಲ್ಲದ ಕಾಲುಗಳು ಮೀನು ಹಿಡಿಯಲು ಅನುಕೂಲ. ಒಂಟಿಯಾಗಿ, ರಾತ್ರಿವೇಳೆ, ನೀರಿನಬಳಿ ಬೇಟೆ. ಅಳುವ *ಬೂಂ.ಉ.ಬೂಂ..* ಕೂಗು.

115. Brown Hawk-Owl *(Ninox scutulata)* R Pigeon+ Dark greyish brown above; bright orange-yellow eyes; white below breast with large rufous-brown bars; brown and white graduated tail. Solitary; crepuscular and nocturnal; flight with rapid wing beats and glides akin to a hawk. **Food**: large insects, frogs, lizards, mice, small birds. **Voice**: distinct, soft, musical *uk.uk.oo..uk.uk.oo...* repeated more than ten times. **Nesting**: January-July. **Eggs**: 3-4, white and round.

ಕಂದು ಗಿಡುಗಗೂಬೆ *(ಚೋಂದ ಕ್‌ಡುವಗೂಮ)* 32 ಸೆಂಮೀ. ಹೊಳೆಯುವ ತಿಳಿಗಿತ್ತಳೆ ಕಣ್ಣುಗಳು; ಕಡುಗಂದು ಬೂದು ಮೇಲ್ಮೈ; ಬಿಳಿ ಎದೆ ಮತ್ತು ಕೆಳಮೈ ಮೇಲೆ ದೊಡ್ಡ ಕಂದು ಮಚ್ಚೆಗಳು; ಕಂದು-ಬಿಳಿ ಪಟ್ಟೆ ಬಾಲ. ಒಂಟಿಯಾಗಿ, ರಾತ್ರಿವೇಳೆ ಗಿಡುಗನಂತೆ ಹಾರುತ್ತ, ನಿಶ್ಶಬ್ದವಾಗಿ, ಕೀಟ, ಕಪ್ಪೆ, ಸರೀಸೃಪ, ದಂಶಕಗಳ ಬೇಟೆ. ಮೃದುಸ್ವರದ *ಉಕ್.ಉಕ್ಊ..ಉಕ್.ಉಕ್ಊ.* ಕೂಗು.

116. Jungle Owlet *(Glaucidium radiatum)* Barred Jungle Owlet R Myna+/- Dark brown above with rufous and white bars; rufous and black barred flight feathers; white moustachial stripe, breast and abdomen with transverse bars of dark grey and brown: no ear tufts. Solitary or in pairs; crepuscular and nocturnal; also active during day seen in mixed teak and bamboo jungles. **Food**: chiefly beetles and other insects, also rodents and small birds. **Voice**: loud, musical *kua..kak...kua..kak..* rising in crescendo with abrupt end. **Nesting**: March-May. **Eggs**: 2-4, oval.

ಕಾಡು ಹಾಲಕ್ಕಿ *(ಕಾಡ್ ಗೂಮ)* 20 ಸೆಂಮೀ. ಕೆಂಗಂದು ಬೋಳುತಲೆಗೆ ಬಿಳಿ ಮೀಸೆ, ಹುಬ್ಬು; ಕಡುಗಂದು ಮೇಲ್ಮೈಗೆ ಕಂದು-ಬಿಳಿ ಪಟ್ಟೆಗಳು; ಬಿಳಿ ಕೆಳಮೈ ಮೇಲೆ ಬೂದು ಅಡ್ಡ ಪಟ್ಟಿಗಳು. ತೇಗ, ಬಿದಿರು ಕಾಡುಗಳಲ್ಲಿ ಒಂಟಿ ಅಥವಾ ಜೋಡಿಯಾಗಿ ರಾತ್ರಿಬೇಟೆ; ಹಗಲಿನಲ್ಲಿಯೂ ಕ್ರಿಯಾಶೀಲ. ಏರುಗತಿಯ *ಕ್ವಾ.ಕಕ್.ಕ್ವಾ.ಕಕ್.* ಕೂಗು.

117. Spotted Owlet *(Athene brama)* R Myna- One of the most familiar owls. Greyish brown above with white spots; yellow eyes; white-buff broken nuchal collar; no ear tufts; lighter underparts with brown spots and streaks. Pairs or small parties; rest during day in some hollow; typically, comically bob and stare at, when intruded. Food, similar to 116. **Voice**: varied notes of cackling, chiding, quibbling and often in

duet. **Nesting**: November-April. **Eggs**: 3-4, white, oval, laid on untidy pad of fibres in tree hollows or deserted rooftops.

ಹಾಲಕ್ಕಿ *(ಬೊಟ್ಸ್ ಗೂಮ)* 21 ಸೆಂಮೀ. ಗುಂಡುಮುಖಕ್ಕೆ ಹಳದಿ ಕಣ್ಣುಗಳು; ಬೂದುಗಂದು ದೇಹದಲ್ಲಿ ಬಿಳಿ ಚುಕ್ಕೆಗಳು; ಹಿಂಗತ್ತಿನಲ್ಲಿ ಪೇಲವ ಕಾಲರು; ಎದೆಯಲ್ಲಿ ತಿಳಿಗಂದು ಮಚ್ಚೆಗಳು; ಬಿಳಿ ಕೆಳಮೈ. ಸಣ್ಣ ಗುಂಪಿನಲ್ಲಿ ಉದುರೆಲೆ, ಕುರುಚಲುಕಾಡು, ಜನವಸತಿ ಪ್ರದೇಶಗಳಲ್ಲಿ ವಾಸ. ಹೆದರಿಸಿದಾಗ ಪಟಪಟ ರೆಕ್ಕೆ ಬಡಿದು, ಪಕ್ಕದಲ್ಲಿ ಹೋಗಿ ಕುಳಿತು, ತಲೆಯನ್ನು ಪುಟಿಸುತ್ತಾ ತಮಾಷೆಯಾಗಿ, ಆಗುಂತಕನನ್ನು ಗುಮ್ಮನೆ ದಿಟ್ಟಿಸಿ ನೋಡುವ ಸ್ವಭಾವ. ಹಗಲೆಲ್ಲಾ ಮರದ ಪೊಟರೆ, ಬಿರುಕುಗಳಲ್ಲಿ ವಿಶ್ರಮಿಸುತ್ತದೆ. ಮುಂಜಾವು–ಮುಸ್ಸಂಜೆಯಲ್ಲಿ ಬೇಟೆ. ದುಂಬಿ, ಮಿಡತೆ, ಇಲಿಮರಿಗಳೇ ಆಹಾರ.

118. Mottled Wood-Owl *(Strix ocellata)* R Kite +/- Reddish brown plumage; no ear tufts; white facial disc with black concentric bars; white throat and underparts, stippled with chestnut and black; white half-collar on foreneck. Crepuscular and nocturnal; seen singly or in pairs, in thickly wooded areas especially in mango, tamarind and banyan groves. **Food**: also small mammals, lizards, beetles, crabs, insects; farmer's friend, as it takes a great toll of rodent pests. **Voice**: loud, eerie but pleasant *chuhuva..*; also single mellow hoot during night. **Nesting**: November-April; nest, natural, unlined hollow in tree. **Eggs**: 2-3, round creamy white.

ಚುಕ್ಕೆ ಕಾಡುಗೂಬೆ *(ಬೊಟ್ಸ್ ಕಾಡ್‌ಗೂಮ)* 48 ಸೆಂಮೀ. ಬೋಳು ತಲೆಯ ಬಿಳಿ ಮುಖದ ಮೇಲೆ ಕಪ್ಪು ರಿಂಗಣ; ಕೆಂಗಂದು ದೇಹ; ಬಿಳಿ ಮುಂಗತ್ತು ಪಟ್ಟಿ; ಬಿಳಿ ಕೆಳಮೈ ಮೇಲೆ ಕೆಂಗಂದು–ಕಪ್ಪು ಮಚ್ಚೆಗಳು ಮತ್ತು ಅಡ್ಡಡ್ಡ ಗೀರುಗಳು. ಕೃಷಿಭೂಮಿ, ವಿರಳ ಕಾಡು, ತೋಪುಗಳಲ್ಲಿ ಒಂಟಿ ಅಥವಾ ಜೋಡಿಯಾಗಿ, ಮರದ ಮೇಲೆ ವಾಸ. ರೈತನ ಗೆಳೆಯ. ಗಟ್ಟಿಯಾದ, ನಿಗೂಢವಾದ ಛುವ್ವ.. ಕೂಗು.

Frogmouths *(Podargidae)*

ಕಪ್ಪೆಬಾಯಿಗಳು

119. Ceylon Frogmouth *(Batrachostomus moniliger)* R Myna+/- They are confined to the western ghats. Crepuscular, nocturnal birds with soft silky plumage; thick, short neck; broad, flat and triangular bill with a very wide gape and hooked tip; base overhung by bristly feathers; short legs; small weak feet with elongated middle toe; round wings. Male, overall dark brown, cryptically patterned with grey, black and white on neck and abdomen; graduated tail. Female, dark greyish brown in place of dark brown of male. Spend the day perched on bare branch, body tilted at an upward angle, bill pointing to sky, simulating a broken stump. **Food**: insects. **Voice**: chuckling *whu!* **Nesting**: June-November; nest, small pad of leaves and twigs lined with bird's under plumage, placed in fork of a branch. **Eggs**: 1-3, white. Both sexes share the household duties.

ಕಪ್ಪೆಬಾಯಿ 23 ಸೆಂಮೀ. ಬಲು ನಾಚಿಕೆ ಸ್ವಭಾವದ, ಸುತ್ತಲ ವಾತಾವರಣದಲ್ಲಿ ಕಂಡೂ ಕಾಣದಂತಿರುವ, ನಿಶಾಚರ ಹಕ್ಕಿಗಳು. ಅಗಲವಾದ, ಚಪ್ಪಟೆಯಾದ, ತ್ರಿಕೋಣಾಕಾರದ ಕೊಕ್ಕು; ಕಪ್ಪೆಯಂತಹ ಬಾಯಿ; ಗಿಡ್ಡ ಕತ್ತು-ಕಾಲುಗಳು. ಮೃದುವಾದ ತುಪ್ಪಳದ ಕಡುಗಂದು ದೇಹದಲ್ಲಿ ಬೂದು, ಕಪ್ಪು, ಬಿಳಿ ಅಡ್ಡಡ್ಡ ಗೀರು-ಪಟ್ಟಿಗಳು; ಪಟ್ಟೆ ಬಾಲ. ಹೆಣ್ಣು ಹಕ್ಕಿಗೆ ತುಸು ಬೂದು ಛಾಯೆ. ಸದಾಹಸಿರು, ತೇವವಿರುವ ಉದುರೆಲೆ ಹಾಗೂ ಬಿದಿರುಕಾಡುಗಳಲ್ಲಿ ಚಿಕ್ಕಮರ-ಪೊದೆಗಳಲ್ಲಿ ವಾಸ. ಹಗಲಿನಲ್ಲಿ ಮರಗಳ ಮೇಲೆ ಒಣಬೊಡ್ಡೆಯ ರೀತಿ ಮಲಗಿರುತ್ತದೆ; ಅಣಕಿಸುವ *ವ್ಹು!* ಕೂಗು. ರಾತ್ರಿ, ಕೀಟಗಳ ಬೇಟೆ. ಕೊಂಬೆಗಳ ಕವೆಯಲ್ಲಿ ಒಣಎಲೆ, ನಾರುಕಡ್ಡಿ ಮತ್ತು ಅದರದ್ದೆ ಕೆಳಮೈ ಗರಿಗಳಿಂದ ಕೂಡಿದ ಗೂಡು.

Nightjars *(Caprimulgidae)*

ನತ್ತಿಂಗಗಳು *(ಕುರುಡಂಪಕ್ಷಿ)*

Crepuscular and nocturnal birds with soft plumage; cryptically patterned with rufous, buff, grey, black-white camouflaging colours. Best identified by their calls. Head rather flat with large eyes ; neck short; beak small and weak, with extremely wide gape; middle toe long with pectinate claw; wings long and pointed. Flight silent, very buoyant and agile, with abrupt twists and turns, lands with equal abruptness on ground or branch. Sexes usually alike. Food, mainly beetles, moths and other insects, captured in flight. No nest making. Eggs, 1-2, laid on bare ground. Both sexes incubate.

ಕೆಂಗಂದು, ಬೂದು, ಕಪ್ಪು, ಬಿಳಿ ಬಣ್ಣಗಳ, ಮರೆಮಾಚಿಸುವ, ಚಿತ್ರವಿಚಿತ್ರ ವಿನ್ಯಾಸಗಳನ್ನು ಹೊಂದಿರುವ, ಬಹು ಸಂಕೋಚ ಸ್ವಭಾವದ, ರಾತ್ರಿಬೇಟೆಯನ್ನರಸುವ ಹಕ್ಕಿಗಳು. ಹಗಲಿನಲ್ಲೂ ಕಣ್ಣಿಗೆ ಕಾಣುವುದು ಅಪರೂಪ. ಎಷ್ಟೋ ವೇಳೆ ಅವುಗಳ ಕೂಗಿನಿಂದಲೇ ಗುರುತು ಹಿಡಿಯಬೇಕಷ್ಟೆ. ಮೃದು ಗರಿಗಳು, ದೇಹಕ್ಕೆ ದೊಡ್ಡ ತಲೆ, ಕಣ್ಣು; ಗಿಡ್ಡ ಕುತ್ತಿಗೆ; ಹಾರುತ್ತಿರುವಾಗಲೇ ಕೀಟಗಳನ್ನು ಭಕ್ಷಿಸಲು ಅನುಕೂಲವಾದ, ಅಗಲ ಬಾಯಿಗೆ ದುರ್ಬಲ ಕೊಕ್ಕು; ನೀಳ, ಚೂಪಾದ ರೆಕ್ಕೆಗಳು. ಅತಿಚಿಕ್ಕ ದುರ್ಬಲ ಕಾಲುಗಳು. ನಿಶ್ಶಬ್ದ, ಲೀಲಾಜಾಲ ಹಾರಾಟ; ವೇಗವಾಗಿ, ಎರ್ರಾಬಿರ್ರನೆ ಅತ್ತಿಂದಿತ್ತ ಚಲಿಸುತ್ತಾ, ಹಠಾತ್ತನೆ ಕೊಂಬೆಯ ಅಥವಾ ನೆಲದ ಮೇಲೆ ಕುಳಿತುಬಿಡುತ್ತವೆ. ಹಾರಾಡಿಕೊಂಡೇ ಹಿಡಿದ ದುಂಬಿ, ಪತಂಗ ಮುಂತಾದ ಕೀಟಗಳೆ ಆಹಾರ. ನೆಲದ ಮೇಲೇ ನೇರವಾಗಿ ಮೊಟ್ಟೆಯಿಟ್ಟು ಕಾವು ಕೊಡುವುವು.

120. Common Indian Nightjar *(Caprimulgus asiaticus)* R Myna+/- Usually seen at dusk on roads or tracks, their eyes gleam red when vehicle headlights fall on them. Mottled greyish brown and buff above, streaked with black; white throat patches on either sides of the throat and on wings, conspicuous in flight. Solitary, actively hawking insects at dusk, in open, bushy, lightly wooded country. Beautifully controlled, but apparently aimless and erratic flight. Spends day squatting under shelter of bush, totally camouflaged. **Voice**: diagnostic, soft *chp.chp.chp.chprrr…* like a stone gliding over frozen pond. **Nesting**: February-September. **Eggs**: 2, laid on ground in bamboo and bush jungle; pale pink to deep salmon, spotted and blotched with reddish brown or purple.

ನತ್ತಿಂಗ *(ಕುರುಡಂಪಕ್ಷಿ)* 24 ಸೆಂಮೀ. ಕಾಡು ಹಾದಿಯ ಮೇಲೆ, ಸಂಜೆಯ ವೇಳೆ ಕಾಣಬಹುದು. ಬೂದುಗಂದು ದೇಹದ ಮೇಲೆ ಬಿಳಿ-ಕಪ್ಪು ವಿನ್ಯಾಸಗಳು; ಗಂಟಲ ಎರಡೂ ಬದಿಗಳಲ್ಲಿ ಮತ್ತು ರೆಕ್ಕೆಗಳ ಮೇಲೆ ಬಿಳಿ ಮಚ್ಚೆಗಳು. ಉದುರೆಲೆ, ಕುರುಚಲುಗಾಡು, ಬಂಡೆಪ್ರದೇಶಗಳಲ್ಲಿ ವಾಸ. ಮುಸ್ಸಂಜೆಯ ನಂತರ, ನಿಶ್ಶಬ್ದವಾಗಿ, ಅಡ್ಡಾದಿಡ್ಡಿ ಹಾರಾಡಿದಂತೆ ಕಂಡರೂ, ಹಾರುವ ಕೀಟಗಳ ಬೇಟೆ. ರಾತ್ರಿವೇಳೆ ವಾಹನದ ಅಥವಾ ಟಾರ್ಚ್ ಬೆಳಕು ಬಿದ್ದಾಗ, ನೆಲದ ಮೇಲೆ ಅವಿಚಿಕೊಂಡು ಕುಳಿತಿರುವುದನ್ನು ಕಾಣಬಹುದು. ಮೆಲುದನಿಯ *ಚ್‌ಪ್.ಚ್‌ಪ್.ಚ್‌ಪ್‌ರ್‌ರ್‌ರ್..* ಕೂಗು.

121. Indian Jungle Nightjar (*Caprimulgus indicus)* R Pigeon- Highly effective plumage; brownish buff, mottled and streaked black; white throat; males have white tipped tail; no white spot on primaries; tarsus feathered. Cryptic, unseen during day; emerges at dusk, hawks insects on silent wings. Habits and food similar to 120. **Voice**: uninterrupted *chkoo..chkoo..* call, repeated at 3-5 minutes interval throughout night, particularly on moonlit nights; also *uk..kruthroo..* call. **Nesting**: March-May. **Eggs**: 2, creamy with black or deep red spots.

ಅಡವಿ ನತ್ತಿಂಗ *(ಕಾಡ್ ಕುರುಡಂಪಕ್ಷಿ)* 29 ಸೆಂಮೀ. ಎಲ್ಲವೂ ೧೨೦ರಂತೆ, ಆದರೆ, ಬಾಲದ ತುದಿ ಬಿಳಿ; ರೆಕ್ಕೆಗಳಲ್ಲಿ ಬಿಳಿ ಬಣ್ಣವಿಲ್ಲ; ಬಿಳಿ ಗಲ್ಲ; ಕಾಲಿನಲ್ಲಿ ಗರಿಗಳು. ಶೀತಪ್ರದೇಶಗಳಲ್ಲಿ ವಾಸ. ೧೨೦ರದ್ದೇ ಸ್ವಭಾವ. ಹಗಲು ಮರದ ಬೊಡ್ಡೆ, ದಿಬ್ಬಗಳ ಮೇಲೆ ಕಳೆದು, ಇಡೀ ರಾತ್ರಿ ಕೀಟಗಳ ಬೇಟೆ. ತಡೆರಹಿತ *ಚ್‌ಕೂ.ಚ್‌ಕೂ.ಚ್‌ಕೂ.ಚ್‌ಕೂ..* ಸಿಳ್ಳು ಕೂಗು ಬೆಳದಿಂಗಳ ಇರುಳು ಪೂರಾ ಕೇಳಬಹುದು.

122. Franklin's Nightjar *(Caprimulgus affinis)* Allied Nightjar R Myna+/- Male, Greyish brown with dark mottling; white patches on either sides of throat; buffy V on the back, from shoulders to the middle of the back, conspicuous while squatting; two pairs of outer tail feathers white, with pale tips; white wing patches. Female has barred outer tail feathers and rufous buff wing patches. Singly, seen in scrubby hillsides, light deciduous forests and grasslands, coming out at dusk. Habits, food similar to **120. Voice**: distinct *chwoy. chwoy.* whistle, neither loud nor penetrating, heard from dusk to dawn, during breeding. **Nesting**: March-August. **Eggs**: 2, pale to rich salmon; spotted, blotched with deep red.

ಬಿಳಿಮಚ್ಚೆ ನತ್ತಿಂಗ 25 ಸೆಂಮೀ. ೧೨೦ರಂತೆ, ಆದರೆ, ಭುಜದಿಂದ ಹಿಡಿದು, ಬೆನ್ನವರೆಗೆ V ಆಕಾರದ ಮಾಸಲು ಪಟ್ಟಿ; ಗಂಟಲಿನ ಎರಡೂ ಬದಿ ಬಿಳಿ ಮಚ್ಚೆ; ರೆಕ್ಕೆ ಮತ್ತು ಬಾಲದ ಅಂಚಿನಲ್ಲಿ ಬಿಳಿ. ಒಂಟಿಯಾಗಿ ಹುಲ್ಲು-ಕುರುಚಲುಗಾಡುಗಳಲ್ಲಿ ವಾಸ. ಮುಸ್ಸಂಜೆಯಿಂದ ಮುಂಜಾವಿನವರೆಗೂ, ಅದರಲ್ಲೂ ಪ್ರಜನನ ಕಾಲದಲ್ಲಿ, ಅದರ ವಿಶಿಷ್ಟವಾದ *ಚೊಂಯ್.ಚೊಂಯ್..* ಸಿಳ್ಳೆಯಿಂದ ಕಂಡು ಹಿಡಿಯಬಹುದು.

123. Large-tailed Nightjar *(Caprimulgus macrurus)* Long-tailed Nightjar R Pigeon+/- Larger than 120 with darker plumage; black streaks on crown; white throat patch; white spots on first four primaries and outer tail feathers that are tipped broad white; tarsus feathered. Sexes alike. Solitary, seen in mixed bamboo and secondary scrub jungles. Habits and food similar to other nightjars. **Voice**: loud metallic *chaunk..chaunk…* repeated 40-50 times continuously during breeding and moonlit nights. **Nesting**: March-May. **Eggs**: similar to 122.

ನೀಳಬಾಲದ ನತ್ತಿಂಗ ***(ಉದ್ದಬಾಲ್‌ರ ಕುರುಡಂಪಕ್ಷಿ)*** 28 ಸೆಂಮೀ. ೧೨೦ರಂತೆ, ಆದರೆ, ಕಡುಗಂದು ಬಣ್ಣ; ನೆತ್ತಿಯ ಮೇಲೆ ಕಪ್ಪು ಗೀರುಗಳು; ರೆಕ್ಕೆ, ಬಾಲದಂಚು ಬಿಳಿ; ಕಾಲುಗಳಲ್ಲಿ ಗರಿಗಳು. ಒಂಟಿಯಾಗಿ ಬಿದಿರುಗಾಡುಗಳಲ್ಲಿ ವಾಸ. ಪ್ರಜನನ ಕಾಲದಲ್ಲಿ ಮತ್ತು ಬೆಳದಿಂಗಳ ರಾತ್ರಿಯಲ್ಲಿ, *ಥಾಂಕ್.ಥಾಂಕ್.* ಕೂಗು.

Swifts *(Apodidae)*

ಬಾನಾಡಿ ಹಕ್ಕಿಗಳು *(ಮಳೆಪಕ್ಷಿ)*

Like fighter jets in the sky, swifts with their compact body and short neck, are the most aerial of all birds. They are totally adapted to an almost permanent aerial existence, spending much of their life on the wings that they feed, bathe, court and mate while flying. Some even 'roost' overnight on the wing! Brown or black plumage with white or grey patches; small, slightly downcurved bill with a large gape; short legs; small feet with hind toe completely reversible; forwardly directed toes and needle sharp curved claws that help in neither walking nor perching; wings bow shaped, long, narrow and pointed. Sexes alike. Capable of sustained, high speed flight, with great mastery and control, spending almost whole day on the wings with much twisting and turning and banking, so that it is difficult to appreciate their plumage details. Perching capability is extremely limited that they rest by clinging to rough vertical surfaces of rocks, walls and tree trunks. Highly sociable, freely mixing with swallows. Have screaming cries, often delivered as they sweep at high speed towards the approach of their nest sites. Food is made exclusively of insects, hawked in flight. Nest made of grass, tow etc., glued together by saliva and attached to a vertical surface in buildings or holes or crevices in cliff faces; some species build the nest entirely made of saliva, which is edible. Both sexes share domestic duties.

ಜೆಟ್ ವಿಮಾನಗಳಂತೆ ಆಕಾಶದಲ್ಲಿ, ಅತಿ ವೇಗವಾಗಿ ಹಾರಾಡುವ ಹಕ್ಕಿಗಳ ಕುಟುಂಬ. ಹಾರುವಾಗ ಗಾಳಿಗೆ ಒಂದಿಷ್ಟೂ ತಡೆಯೊಡ್ಡದ ಸಣ್ಣ ಶರೀರವನ್ನು ಹೊಂದಿರುವ, ಆಕಾಶದಲ್ಲಿಯೇ ತಮ್ಮ ಜೀವಮಾನವನ್ನೆಲ್ಲಾ ಕಳೆಯುತ್ತವೆಯೇನೋ ಎನಿಸುತ್ತದೆ; ಅಷ್ಟೇಕೆ, ಹಾರಿಕೊಂಡೇ ವಿಶ್ರಾಂತಿ ಪಡೆಯುತ್ತವೆ! ಅಗಲವಾದ ಬಾಯಿ, ಸ್ವಲ್ಪ ಕೆಳಬಾಗಿದ ಕೊಕ್ಕು ಗಾಳಿಯಲ್ಲಿ ಕೀಟಗಳನ್ನು ಹಿಡಿಯಲು ಸಹಕಾರಿ; ಹಾರಾಟದಲ್ಲಿ ಪ್ರಭುತ್ವ ಮತ್ತು ಹತೋಟಿಯಿದ್ದು, ದಿನಪೂರ್ತಿ ಆಕಾಶದಲ್ಲಿ ಹಾರಾಡಲು ತಕ್ಕ ಬಿಲ್ಲಿನಂತಹ, ಉದ್ದ, ಸಪೂರ, ಚೂಪಾದ ರೆಕ್ಕೆಗಳು. ಮುಂಜಾನೆಯ ಹೊತ್ತು ಇದ್ದಕ್ಕಿದ್ದಂತೆ ಎಲ್ಲಿಂದಲೋ, ಒಮ್ಮೆಲೇ ನೂರಾರು ಬಾನಾಡಿಗಳು ಪ್ರತ್ಯಕ್ಷವಾಗಿ ಬಿಡುತ್ತವೆ; ಸಂಜೆಯ ವೇಳೆಗೆ ಬಂದ ರೀತಿಯಲ್ಲೇ ಎತ್ತಲೋ ಹೋಗಿಬಿಡುತ್ತವೆ. ವಿವಿಧ ಪ್ರಭೇದದ ಆಕಾಶಗುಬ್ಬಿಗಳು ಒಟ್ಟಿಗೇ ವೇಗವಾಗಿ ಅತ್ತಿಂದಿತ್ತ ತೀಕ್ಷ್ಣಸ್ವರದ, ಸಂಭ್ರಮದ ಉಲಿತದೊಂದಿಗೆ ಹಾರುತ್ತಿರುವಾಗ, ಅವುಗಳನ್ನು ಗುರುತು ಹಿಡಿಯುವುದೇ ಕಷ್ಟ. ಅತಿ ಚಿಕ್ಕ ಕಾಲ್ಬೆರಳುಗಳು ಮುಂಚಾಚಿರುವುದರಿಂದ ನೆಲದ ಮೇಲೆ ಅಥವಾ ಕೊಂಬೆಗಳ ಮೇಲೆ ಕುಳಿತುಕೊಳ್ಳಲಾರವು. ಬದಲಿಗೆ ಗೋಡೆ, ಬದು, ಮರದ ತೊಗಟೆಗೆ ಆತು ಕುಳಿತು, ಸಾಮೂಹಿಕವಾಗಿ ತಂಗುತ್ತವೆ. ಎಂಜಲಿನೊಂದಿಗೆ, ಹುಲ್ಲು,

ಎಲೆಗಳೊಂದಿಗೆ, ಮಣ್ಣು ಸೇರಿಸಿ, ಆ ಹಿಟ್ಟಿನಿಂದ ತಯಾರಾದ ಗೂಡನ್ನು, ಬಟ್ಟಲಿನ ರೀತಿ ಯಾವುದಾದರೂ ಗೋಡೆಗೆ ಅಂಟಿಸುತ್ತದೆ. ಸಂಪೂರ್ಣ ಎಂಜಲಿನಿಂದಲೇ ತಯಾರಾದ ಗೂಡು, ದುಬಾರಿ ಖಾದ್ಯವಸ್ತು.

124. House Swift *(Apus affinis)* R Sparrow- Smoky black plumage; white throat and rump diagnostic; square tail and long, sickle-like wings. Gregarious, seen around human habitations. **Voice**: shrill,

joyous twittering screams uttered on the wing. **Nesting**: February-September; nest plastered in the angle of walls and ceilings or archea galleries, with a slit between the wall and the nest, for entrance. **Eggs**: 2-4, white, long ovals.

ಬಾನಾಡಿ *(ಮಳೆಪಕ್ಷಿ)* 15 ಸೆಂಮೀ. ಹೊಗೆಗಪ್ಪು ದೇಹಕ್ಕೆ, ಬಿಳಿ ಗಂಟಲು, ಪೃಷ್ಠ. ಗುಂಪಾಗಿ, ಮನೆಗಳು, ಪಾಳು ಕಟ್ಟಡಗಳು, ಹಳೇಕೋಟೆ, ಬಾವಿ ಮುಂತಾದೆಡೆ ವಾಸ. ಹಾರಾಡುವಾಗ ಕೀಚಲುಧ್ವನಿಯಲ್ಲಿ, ಹರ್ಷದ ಕೂಗಾಟ. ಸಂಜೆಯ ವೇಳೆ, ಆಕಾಶದಲ್ಲಿಯೇ ಕೀಟಗಳ ಬೇಟೆ.

125. Asian Palm-Swift *(Cypsiurus balasiensis)* Palm Swift R Sparrow- Slim sooty-brown swift; long sickle-like wings; deeply forked tail diagnostic. Gregarious around Palmyra or toddy palm groves, the leaves of which are best suited for the nest of the bird. Other habits similar to 124. **Voice**: three note *tri-ti-tee*, on the wing. **Nesting**: February-September; tiny purse shaped nest, glued to the underside of palm leaf. **Eggs**: 2-3, white pointed ovals.

ತಾಳೆಬಾನಾಡಿ *(ಪನೆಪಕ್ಷಿ)* 13 ಸೆಂಮೀ. ಕಡುಬೂದುಗಂದು ದೇಹ; ಆಳವಾಗಿ ಸೀಳಿದ ಬಾಲ. ಹೆಚ್ಚಾಗಿ ಈಚಲು, ತಾಳೆ ಮರಗಳಿರುವೆಡೆಯಲ್ಲಿ ಗುಂಪಾಗಿ ವಾಸ. ದಿನಪೂರ್ತಿ ಆಕಾಶದಲ್ಲಿ ಕೀಟಗಳ ಬೇಟೆ. ಮೂರು ಸ್ವರದ *ಟ್ರಿ.ಟಿ.ಟೀ*.. ಕೂಗು.

126. Brown-backed Needletail-Swift *(Hirundapus giganteus)* Large Brown-throated Spinetail Swift R Myna Prefers a forested area; typical swift with a sooty brown plumage; rufous throat; brown back; spine tipped tail diagnostic. Rest similar to 124.

ಕಂದುಗತ್ತಿನ ಸೂಜಿಬಾಲದ ಬಾನಾಡಿ 23 ಸೆಂಮೀ. ಕಡುಬೂದುಗಂದು ದೇಹ; ಕೆಂಗಂದು ಗಂಟಲು; ಕಂದು ಬೆನ್ನು; ಸೂಜಿಮೊನೆಗಳಂತಿರುವ ಬಾಲ. ಉಳಿದೆಲ್ಲ ೧೨೪ರಂತೆ.

127. White-rumped Needletail-Swift *(Zoonavena sylvatica)* White-rumped Spinetail R Sparrow- Similar to 126, smaller; white rump and spine tipped tail diagnostic. Rest similar to 124.

ಸೂಜಿಬಾಲದ ಬಾನಾಡಿ 11 ಸೆಂಮೀ. ೧೨೬ರಂತೆ, ಆದರೆ, ಹಾರುವಾಗ ಎದ್ದುಕಾಣುವ ಬಿಳಿಪೃಷ್ಠ ಮತ್ತು ಸೂಜಿಮೊನೆಗಳಿರುವ ಬಾಲ. ೧೨೪ರ ಸ್ವಭಾವ.

128. Pacific Swift *(Apus pacificus)* Large White-rumped Swift R Bulbul Similar to 124, but with a deeply forked tail. Gregarious, on the wing during day, hawking insects around cliffs and human habitations. **Voice**: soft, disyllabic *sii.irr*. Rest similar to 124.

ಕವಲುಬಾಲದ ಬಾನಾಡಿ 18 ಸೆಂಮೀ. ಎಲ್ಲವೂ ೧೨೪ರಂತೆ, ಆದರೆ, ಆಳವಾಗಿ ಸೀಳಿದ ಬಾಲ. ಗುಂಪಾಗಿ, ಹಗಲಿಡೀ ಪರ್ವತಗಳ ಕಮರಿಗಳಲ್ಲಿ, ಕೀಟಗಳನ್ನು ಬೇಟೆಯಾಡುತ್ತವೆ. ಉಳಿದದ್ದು ೧೨೪ರಂತೆ.

129. Alpine Swift *(Tachymarptis melba)* RM Bulbul+ Dark brown upperparts and white underparts; diagnostic brown band across the breast; short, square cut tail with dark undertail coverts. Loose party, seen dashing across the sky, around hilltops and cliffs; extremely strong flier, covering enormous distance, at 120-250 Kmph, thus suddenly appearing from nowhere in the morning, none to be seen by dusk. **Food**: winged insects; also, insects disturbed by forest fire. **Voice**: high-pitched, pleasant, trilling, *trr,tititi..* or *chrr..chee..chee..*, in flight and at the roost. **Nesting**: December-January; nest, made of a paste f saliva mixed with straw, fibres and feathers, placed on ledges in fissures of cliffs and natural caves, in colonies. **Eggs**: 2-4, pale white, pointed ovals.

ಪರ್ವತ ಬಾನಾಡಿ ***(ಕುಂದ್ ಮಳೆಪಕ್ಷಿ)*** 22 ಸೆಂಮೀ. ಕಡುಗಂದು ಮೇಲ್ಮೈ ಮತ್ತು ಬಿಳಿ ಕೆಳಮೈ; ಎದೆಯ ಮೇಲೆ ಅಗಲವಾದ ಕಂದು ಪಟ್ಟಿ; ಸಣ್ಣ, ಚೊಟ್ಟೆ ಬಾಲ. ಅತಿವೇಗವಾಗಿ, ಆಕಾಶದಲ್ಲಿ ದಿನಕ್ಕೆ ನೂರಾರು ಕಿಮೀ. ಹಾರಾಡಿಕೊಂಡು ಕೀಟಗಳನ್ನು ಹಿಡಿಯುತ್ತವೆ. ಸಂಭ್ರಮದ *ಚಿರ್ರ್.ಚಿ.ಚಿ.ಚಿ.* ಕೂಗು. ಹುಲ್ಲು, ನಾರು, ಗರಿಗಳೊಂದಿಗೆ ಎಂಜಲನ್ನು ಸೇರಿಸಿ ತಯಾರಿಸಿದ ಮಿಶ್ರಣವನ್ನು ಗುಹೆ, ಬಂಡೆಯ ಕೊರಕಲುಗಳಲ್ಲಿ ಅಂಟಿಸಿದ ಗೂಡು.

130. Indian Edible-nest Swiftlet *(Collocalia uniicolor)* R Sparrow- Dark brown plumage, with lighter underbody; slightly forked blackish tail. Gregarious and colonial, on cliffsides and caves; leave early morning, spend the day high over mountains and countryside, hawking insects, often with other swifts; arrive back by dusk, when bats take over the sky; also use echo-location in dark underground caves. **Food**: also bugs, wasps and bees. **Voice**: chittering throughout night at roost. **Nesting**: March-June; densely clustered nest colony, made exclusively from saliva, grass and moss; edible, so exploited. **Eggs**: 2, white ovals.

ಕಿರುಬಾನಾಡಿ *(ಕ್ಠ್ ಮಳೆಪಕ್ಷಿ)* 12 ಸೆಂಮೀ. ಕಡುಗಂದು ಮೇಲ್ಮೈಗೆ ತಿಳಿ ಕೆಳಮೈ; ತುಸು ಸೀಳಿದ ಕಪ್ಪು ಬಾಲ. ದೊಡ್ಡ ಗುಂಪಾಗಿ, ಕಮರಿ, ಗುಹೆಗಳಲ್ಲಿ ವಾಸ. ಹಗಲು ಆಕಾಶದಲ್ಲಿ ಕೀಟಗಳ ಬೇಟೆ. ಪ್ರತಿಧ್ವನಿತ ಶಬ್ದತರಂಗಗಳನ್ನು ಗ್ರಹಿಸಿ, ಕತ್ತಲಿನಲ್ಲಿ ಓಡಾಡುವ ಸಾಮರ್ಥ್ಯ. ಎಂಜಲು, ಪಾಚಿಹುಲ್ಲು ಮಿಶ್ರಣದ ಗೂಡು, ದುಬಾರಿ ಖಾದ್ಯ.

Tree Swifts *(Hemiprocnidae)*

ಮರಬಾನಾಡಿಗಳು *(ಕೊಟ್ಟ್ ಮಳೆಪಕ್ಷಿ)*

These are non-swift like, in that they perch on bare branches; often seen perched on telephone wire in a large congregation; flight graceful, but not as fast a swift. Rest of the habits similar to Swifts.

ಬಾನಾಡಿಗಳಂತಿದ್ದರೂ, ಮರಗಳ ಮೇಲೆ ಆರಾಮವಾಗಿ ಕುಳಿತುಕೊಳ್ಳಬಲ್ಲವು; ಟೆಲಿಫ಼ೋನ್ ತಂತಿಯ ಮೇಲೆ ತೋರಣ ಕಟ್ಟಿದಂತೆ ಕುಳಿತು ಚಕ್ಕಂದ ನಡೆಸುತ್ತವೆ. ಹಾರಾಟ ಆಕರ್ಷಕವಾದರೂ, ಆಕಾಶಗುಬ್ಬಿಗಳಷ್ಟು ವೇಗವಿಲ್ಲ. ಉಳಿದೆಲ್ಲ ಸ್ವಭಾವ ಆಕಾಶಗುಬ್ಬಿಗಳಂತೆ.

131. Crested Tree-Swift *(Hemiprocne coronata)* R Sparrow Male, bluish grey above with a faint green wash; chestnut sides of face, throat; ashy grey breast; pale white below; backward curved, erectile crest; long deeply forked tail diagnostic. Female lacks the chestnut on face. Pairs or small parties fly during day; also drink water from forest pools, in flight. **Voice**: faint, double note *whik-uk.. wheek-uk..*; some loud, harsh note from perch. **Nesting**: December-July; a very tiny, shallow, saucer-like nest made of bark and feathers, glued and attached to the upper surface of a slender leafless branch, 4-15 metres up the tree, undetectable from below. **Eggs**: 1, pale grey, elliptical.

ಮರಬಾನಾಡಿ *(ಕೊಟ್ಪ್ ಮಳೆಪಕ್ಷಿ)* 23 ಸೆಂಮೀ. ತಿಳಿಬೂದು-ನೀಲಿ ಮೇಲ್ಮೈಲ; ತಿಳಿ ಕೆಂಗಂದು ಕೆನ್ನೆ, ಗಲ್ಲ; ಬೂದು-ಬಿಳಿ ಕೆಳಮೈ; ತಲೆಯ ಮೇಲೆ ಜುಟ್ಟು; ಆಳವಾಗಿ ಸೀಳಿದ ಬಾಲ. ಸಣ್ಣ ಗುಂಪಾಗಿ, ಕಾಡುಗಳಲ್ಲಿ ವಾಸ. ಹಾರುತ್ತಿರುವಾಗಲೇ ಬೇಟೆ ಮತ್ತು ನೀರು ಕುಡಿಯುವ ಸ್ವಭಾವ. ಕೆಳದನಿಯಲ್ಲಿ *ವಿಕ್‌ಉಕ್. ವೀಕ್‌ಉಕ್.* ಮೆಲ್ಲುಲಿ. ಒಣಕೊಂಬೆಯ ಮೇಲ್ಭಾಗದಲ್ಲಿ ಅಂಟಿಸಿದ ತಟ್ಟೆಯಂತಹ ಗೂಡು; ಕೆಳಗಿನಿಂದ ಕಾಣುವುದೇ ಇಲ್ಲ. ಮೊಟ್ಟೆಗಳು ಬಿದ್ದುಬಿಡುವ ಸಂಭವವಿರುವುದರಿಂದ ಅವುಗಳನ್ನೂ ಅಂಟಿಸಿರುತ್ತವೆ.

Trogons *(Trogonidae)*

ಕಾಕರಣೆ ಹಕ್ಕಿಗಳು

Brightly coloured, arboreal birds, soft, dense plumage and thin delicate skin; short neck; bright bare orbital rings; bill short; legs and feet small and weak; first and second toes turned back; wings short and rounded; tail long and graduated. Sexes dimorphic. They peculiarly perch erect and motionless in branches for long periods. Flight is swift and for short distances. Food includes insects and berries. Nest in holes in trees; both sexes incubate. Young are naked and blind and dependent on parents for food and remain in the nest for a time after hatching.

ಮೃದುವಾದ ಗರಿಯುಳ್ಳ, ಗಿಡ್ಡಕತ್ತು, ಕೊಕ್ಕು, ಕಾಲುಗಳ, ಉಜ್ವಲವಾದ ಬಣ್ಣದ, ಸದಾಹಸಿರುಗಾಡುಗಳಲ್ಲಿರುವ ಮರಗಳಲ್ಲಿ ವಾಸಿಸುವ ಹಕ್ಕಿಗಳು. ಕಣ್ಣಿನ ಸುತ್ತ ನಗ್ನ ಉಂಗುರ; ಚಿಕ್ಕ ಕೊಕ್ಕು ಮತ್ತು ಕಾಲುಗಳು; ದುರ್ಬಲವಾದ ಪಾದ; ಸಣ್ಣ, ಗುಂಡಾದ ರೆಕ್ಕೆಗಳು; ಉದ್ದ ಪಟ್ಟೆ ಬಾಲ. ಮರಗಳ ಮೇಲೆ ಬಹಳ ಹೊತ್ತು ಅಲುಗಾಡದೆ ಕೂರುವ ಸ್ವಭಾವ; ವೇಗವಾಗಿ ಹಾರಿದರೂ ದೂರದ ಕ್ರಮಣವಿಲ್ಲ. ಹಣ್ಣು, ಕೀಟಗಳು ಆಹಾರ. ಮರಗಳ ಪೊಟರೆಗಳಲ್ಲಿ ಗೂಡು. ಮರಿಗಳು ಬಹು ದುರ್ಬಲವಾದ್ದರಿಂದ ಹೆಚ್ಚುಕಾಲದ ಪೋಷಣೆ ಅಗತ್ಯ.

132. Malabar Trogon *(Harpactes fasciatus)* R Myna Rather quiet and inactive bird. Male, black head, neck, breast; bright red underparts; white breast necklace; yellowish brown back; black wings with wary white barring; long, square, black tail, graduated and white edges. Female, dark brown head and crimson underparts; brown barring on wings. Solitary or pairs, difficult to see; hunts flycatcher style; flicks tail and bends body when disturbed. **Voice**: 3-5 note whistling *cue..cue..cue..* calls, diagnostic. **Nesting**: February-June. **Eggs**: 2-4, round glossy white.

ಕಾಕರಣೆ *(ಕೆಂಬಕ್ಕಿ)* 31 ಸೆಂಮೀ. ಕಪ್ಪು ತಲೆ, ಕತ್ತು, ಎದೆ; ಎದೆಯ ಮೇಲೆ ಬಿಳಿ ಸರ; ಹೊಳೆಯುವ ಕೆಂಪು ಕೆಳಮೈ; ಹಳದಿಗಂದು ಬೆನ್ನು; ಕಪ್ಪು ರೆಕ್ಕೆಗಳಲ್ಲಿ ಬಿಳಿ ಪಟ್ಟಿಗಳು; ಉದ್ದನಾದ ಕಪ್ಪು ಪಟ್ಟೆ ಬಾಲಕ್ಕೆ, ಬಿಳಿಯಂಚು. ವಿಚಲಿತಗೊಂಡಾಗ, ಬಾಲ ಮೇಲೆತ್ತಿ, ಗೂನಿಕೊಂಡು ಕೂರುವುದು. ಕ್ಯ.ಕ್ಯ.ಕ್ಯ. ಸಿಳ್ಳು ಕೂಗು.

Kingfishers *(Alcedinidae)*

ಮಿಂಚುಳ್ಳಿಗಳು *(ಮೀಂಗೊತ್ತಿ)*

Kingfishers are generally fish eaters. So they seek a favourite place near the rivers, jheels, irrigation tanks, tidal creeks, perched on a favourite rock or branch of a tree or a pole, intently waiting for a prey. All Kingfishers have squat large head; stout, long pointed bill, and a stumpy tail; legs have the colour of their bill. Both sexes are alike. The usual food of these birds includes fish, tadpoles, frogs and other aquatic insects got from plunge-diving into water. Nests are typical to Kingfishers, consisting of a round, horizontal tunnel of about 30-120 cms. with a large egg chamber, excavated in the earth bank of a river, stream, paddyfield, creek, earth cutting or even a nullah. They use the beak to dig the mud and legs to clear the loose soil. The eggs are spherical and white in colour. Both sexes share domestic duties.

ಮಿಂಚಿನಂತೆ ಹೊಳೆಯುವ ಅಂದವಾದ ಬಣ್ಣ ಮತ್ತು ಮಿಂಚಿನ ವೇಗವುಳ್ಳ ಹಕ್ಕಿಗಳೇ ಮಿಂಚುಳ್ಳಿಗಳು. ಮಿಂಚುಳ್ಳಿಗಳು ಮತ್ಸ್ಯಪ್ರಿಯ ಹಕ್ಕಿಗಳು. ಭೂಮಿ–ಆಕಾಶ–ನೀರು ಈ ಮೂರೂ ವ್ಯಾಪ್ತಿಗಳಲ್ಲಿಯೂ ಲೀಲಾಜಾಲವಾಗಿ ಸಂಚರಿಸಬಲ್ಲ ಹಕ್ಕಿಗಳು. ನೀರಿರುವೆಡೆಗಳಲ್ಲಿ ಅವುಗಳ ವಾಸ. ಚಟ್ಟೆತಲೆಗೆ ಉದ್ದವಾದ, ದಪ್ಪನಾದ, ಚೂಪಾದ ಕೊಕ್ಕು, ಅವುಗಳ ಮುಖಕ್ಕೆ ಭೂಷಣಪ್ರಾಯವಾಗಿ ಎದ್ದು ಕಾಣುತ್ತದೆ; ಕೊಕ್ಕು–ಕಾಲು ಒಂದೇ ಬಣ್ಣ. ಹಾರುವಾಗ ಮಿಂಚುವ ಬಣ್ಣಗಳು, ಕಣ್ಣಿಗೆ ಸೊಬಗು. ಮೀನು, ಕಪ್ಪೆ, ಅದರ ಗೊದಮೊಟ್ಟೆ, ಇನ್ನಿತರ ಜಲಜೀವಿಗಳೇ ಆಹಾರ. ಮೊಂಡುಬಾಲದ ಈ ಹಕ್ಕಿಗಳು ನೀರಿನ ಬಳಿ, ಗದ್ದೆಯ ಬದುಗಳಲ್ಲಿ ಗೂಡುಕಟ್ಟುತ್ತವೆ. ಕೊಕ್ಕಿನಿಂದ ಕೊರೆದು, ಕಾಲುಗಳಿಂದ ಮಣ್ಣನ್ನು ಬಗೆದು ತೆಗೆಯುತ್ತವೆ. ಒಂದರಿಂದ ನಾಲ್ಕು ಅಡಿ ಉದ್ದದ ಸುರಂಗದ ಒಳಗೆ ದೊಡ್ಡ ಕೋಣೆ ಮತ್ತು ತಾನು ತಿಂದುಳಿಸಿದ ಮೀನು ಮೂಳೆಗಳ ಹಾಸಿಗೆ: ದುರ್ವಾಸನೆ!

133. Small Blue Kingfisher *(Alcedo atthis)* Common Kingfisher R Sparrow+ Little kingfisher with blue-green head, cheeks, wings and back; white and a rusty cheek patch; white neck patch; deep rusty underparts. Seen singly perched on an overhanging branch, scanning the water for a catch. When it finds a suitable quarry, drops, bill foremost, picks its catch and back to the perch. Occasionally, it also hovers over the water, before it dips. **Voice**: It dashes fast just above the surface of water, making shrill whistle *chichee...chicheee...* uttered on the wings. **Nesting**: March-June. **Eggs**: 3-7.

ನೀಲಿ ಮಿಂಚುಳ್ಳಿ *(ಮೂಂಗೊಟ್ಟು)* 18 ಸೆಂಮೀ. ಗುಬ್ಬಚ್ಚಿಗಿಂತ ದೊಡ್ಡದಾದ ಈ ಹಕ್ಕಿಗೆ ನೀಲಿ–ಹಸಿರು ತಲೆ, ಕೆನ್ನೆ, ಮೇಲ್ಮೈ; ಕೆಂಪು–ಕಂದು ಕೆಳಮೈ; ಬಿಳಿಗಲ್ಲ, ಗಂಟಲು ಮತ್ತು ಕೆನ್ನೆ ಮಚ್ಚೆಗಳು. ನದೀತೀರದಲ್ಲಿ, ನೀರಿನ ಮೇಲೆ ಬಾಗಿರುವ ಕೊಂಬೆಯ ಮೇಲೋ, ಜೊಂಡಿನ ಮೇಲೋ ಕುಳಿತು ಮೀನಿಗೆ ಹೊಂಚು ಹಾಕುತ್ತದೆ. ಆಗಾಗ ಕುಳಿತಲ್ಲೇ ಕುಪ್ಪಳಿಸಿ, ಮೋಟುಬಾಲವನ್ನು ಕುಣಿಸುತ್ತದೆ. ಬೇಟೆ ಕಂಡೊಡನೆ, ಪುಳಕ್ಕನೆ ನೀರಿಗೆ ಧುಮುಕಿ, ಮೀನನ್ನು ಕಚ್ಚಿಕೊಂಡು ಪುಟಿಯುತ್ತದೆ; ಹಿಂದಿರುಗಿ, ಬೇಟೆಯನ್ನು ಹೊಡೆದು, ಕೊಂದು ನುಂಗುತ್ತದೆ. ಹಾರುವಾಗ ತೀಕ್ಷ್ಣ ಧ್ವನಿಯ *ಚೀ..ಚೀ..ಚೀ..ಚೀ..* ಕೂಗು.

134. Lesser Pied Kingfisher (*Ceryle rudis*) R Myna+ Large black and white, speckled and barred kingfisher; white neck and underparts; dagger shaped, grey and black bill; male has more than one neck ring, almost complete in front, whereas in female, the single neck ring is broken in front. Seen singly or in pairs, perched on rocks, flicking its tail up and down or flying incessantly in air; hovers in mid air like a helicopter and dives suddenly, when it finds a prey. **Voice**: repeated, noisy, sharp, rapid *kwik.kwik*. or cheery *chiruk.chiruk*.. uttered on the wings. **Nesting**: October-May. **Eggs:** 5-6.

ಕಪ್ಪುಬಿಳಿ ಮಿಂಚುಳ್ಳಿ *(ಬೊಲ್ತ ಮೀಂಗೊತ್ತಿ)* 31 ಸೆಂಮೀ. ಮೈನಾಗಾತ್ರದ ಕಪ್ಪು–ಬಿಳಿ ಹಕ್ಕಿಗೆ, ಕೊಕ್ಕು ಕೂಡ ಬೂದುಗಪ್ಪು; ನೆತ್ತಿಯ ಮೇಲೆ ಕೆದರಿದ ಜುಟ್ಟು; ಗಂಡಿಗೆ ಕತ್ತಿನಲ್ಲಿ ಕಪ್ಪು ಸರಗಳು; ಹೆಣ್ಣಿಗೆ ತುಂಡಾದ ಒಂದೇ ಸರ. ಹೆಲಿಕಾಪ್ಟರಿನಂತೆ, ನೀರಿನಮೇಲೆ ರೆಕ್ಕೆ ಬಡಿಯುತ್ತ ನಿಂತು ಬೇಟೆಯನ್ನು ಗಮನಿಸುತ್ತದೆ; ಧೊಪ್ಪನೆ ನೀರಿಗೆ ಧುಮುಕಿ, ಬೇಟೆಯನ್ನು ಹಿಡಿಯುತ್ತದೆ. ಹಾರುವಾಗ ತೀಕ್ಷ್ಣವಾದ, ತೀವ್ರಗತಿಯ *ಕ್ವಿಕ್.ಕ್ವಿಕ್..* ಕೂಗು.

135. Stork-billed Kingfisher *(Halcyon capensis)* Brown-headed Kingfisher R Pigeon- Brightly coloured, large kingfisher with a brown head, pale greenish blue upperparts and yellowish brown underparts; an over sized blood red bill. Singly near well-wooded wetlands, perches hidden by foliage; does not hover like 134. **Food**: also crabs, small reptiles, young birds and eggs. **Voice**: cacophonic explosive, chattering laugh *ke..kke..kke..ke…*; also a pleasant *peer…peer. .pee…* when in happy mood. **Nesting:** January-July. **Eggs**: 4-5.

ಹೆಮ್ಮಿಂಚುಳ್ಳಿ *(ಬಲ್ಯ ಮೀಂಗೊತ್ತಿ)* 38 ಸೆಂಮೀ. ಎಲ್ಲಕ್ಕಿಂತ ದೊಡ್ಡ ಮಿಂಚುಳ್ಳಿ; ತಲೆಗಿಂತ ದೊಡ್ಡ ಕೆಂಪು ಕೊಕ್ಕು; ಕಡುಗಂದು ತಲೆ; ತಿಳಿ ಹಸಿರು–ನೀಲಿ ಮೇಲ್ಮೈ; ಹಳದಿಗಂದು ಕೆಳಮೈ. ಒಂಟಿಯಾಗಿ, ಜೌಗು, ಕೆರೆ, ಕೊಳ ಮುಂತಾದ ನೀರಿರುವೆಡೆ, ಮರದ ಎಲೆಗಳ ನಡುವೆ ಅವಿತು ಕುಳಿತು ಬೇಟೆ ಹೊಂಚು ಹಾಕುವುದನ್ನು ಕಾಣಬಹುದು. ಏಡಿ, ಸಣ್ಣ ಸರೀಸೃಪಗಳು, ಪುಟ್ಟ ಹಕ್ಕಿಗಳು ಮತ್ತು ಅವುಗಳ ಮೊಟ್ಟೆ ಆದರ ಆಹಾರದ ಪಟ್ಟಿಯಲ್ಲಿ ಸೇರಿವೆ. ಹೆಲಿಕಾಪ್ಟರಿನಂತೆ ತೂಗಿ ನಿಲ್ಲದು. *ಕೆ.ಕ್ಕೆ.ಕ್ಕೆ.ಕ್ಕೆ..* ಅಪಹಾಸ್ಯದ ಕೂಗು.

136. White-breasted Kingfisher *(Halcyon smyrnensis)* R Myna Chocolate brown head, neck and underparts; brilliant turquoise-blue underparts; bright white, conspicuous patch on the breast; white flags on the under surface of the wings, seen in flight; blood red bill. Solitary, seen to take its favourite perch early morning on a telephone wire or a branch of a tree, away from any water point; pounces on any creeping prey and flies off, to another perch nearby, batters its victim and swallows. **Food**: also lizards, grasshoppers, mice, insects, occasionally young birds and eggs. **Voice:** loud, cackling *ke..kke..kke..ke…*, chiefly uttered in flight; also a non-musical repeating and chattering song *ke..kkekekeke*…, when in happy mood. **Nesting**: March-July. **Eggs**: 4-7.

ಗದ್ದೆ ಮಿಂಚುಳ್ಳಿ ***(ಪೂಂಗೊಟ್ಟು)*** 28 ಸೆಂಮೀ. ಕಡುಗಂದು ತಲೆ, ಕೆಳಮೈ; ಹೊಳೆಯುವ ನೀಲಿ ಮೇಲ್ಮೈ; ಕೆಂಪು ಕೊಕ್ಕು; ಬಿಳಿ ಎದೆ, ಹಾರುವಾಗ ಮಿಂಚುವ ನೀಲಿ ರೆಕ್ಕೆಗಳು ಮತ್ತು ತಳದಲ್ಲಿ ಬಿಳಿ ಬಾವುಟದಂತಹ ತೇಪೆ ಕಣ್ಣಿಗೆ ಅಂದ. ಎಸ್ಟೇಟು, ಕೃಷಿಭೂಮಿ, ನದೀತೀರ, ಕೆರೆ-ಕುಂಟೆ ಇರುವೆಡೆ ವಾಸ. ಮಿಡತೆ, ಇಲಿ, ಕೀಟಗಳನ್ನೂ ತಿನ್ನುವುದರಿಂದ ನೀರಿನ ಎಡೆ ಬೇಕೆಂದಿಲ್ಲ. ಬೆಳಿಗ್ಗೆಯೇ ಎತ್ತರದ ಕಂಬ ಅಥವಾ ಮರದ ಮೇಲೆ ತನ್ನ ಬೇಟೆಗೆ ಸೂಕ್ತವಾದ ತಾಣವನ್ನು ಗುರುತಿಸಿಕೊಂಡು ಕುಳಿತುಬಿಡುತ್ತದೆ. ರೈತನ ಗೆಳೆಯ ಕೂಡ. ನಗುವಿನಂತಹ ತೀಕ್ಷ್ಣ *ಕೆ.ಕ್ಕೆ.ಕ್ಕೆ..ಕ್ಕೆ..* ಕೂಗು.

137. Oriental Dwarf Kingfisher *(Ceyx erithaca)* Three-toed Kingfisher R Bulbul Tiny kingfisher with dark wings, shiny purple back, with orange buff coloured head and underparts; red bill. Habits, nesting and eggs, similar to 133.

ಮೂರುಬೆರಳಿನ ಮಿಂಚುಳ್ಳಿ ***(ಕ್‌ರ್ ಮೀಂಗೊತ್ತಿ)*** 13 ಸೆಂಮೀ. ನೋಡಲು ೧೩೩ರಂತಿದ್ದರೂ, ನೇರಳೆ ಬಣ್ಣದ ಬೆನ್ನು, ರಕ್ತವರ್ಣದ ಕೊಕ್ಕು; ಮಾಸಲು ಕಿತ್ತಳೆ ಬಣ್ಣದ ತಲೆ, ಕೆಳಮೈ. ಉಳಿದೆಲ್ಲ ೧೩೩ರಂತೆ.

138. Blue-eared Kingfisher *(Alcedo meninting)* R Sparrow+/- Similar to 133, with deep purplish blue upperparts; blue ear coverts. Singly, seen near deep forest streams. Rest similar to 133.

ಕಿರು ಮಿಂಚುಳ್ಳಿ ***(ನೀಲಿಕೆಮಿರ ಮೀಂಗೊತ್ತಿ)*** 16 ಸೆಂಮೀ. ೧೩೩ರಂತೆ, ಕಡುನೀಲಿ ಬೆನ್ನು ಮತ್ತು ನೀಲಿ ಕಿವಿಗರಿಗಳು. ದಟ್ಟ ಅರಣ್ಯಗಳ ತೊರೆಗಳ ಸಮೀಪ ವಾಸ. ಉಳಿದೆಲ್ಲ ೧೩೩ರಂತೆ.

Bee-eaters *(Meropidae)*

ಪತ್ರಂಗಗಳು *(ಬೊತ್ತ್‌ಅಳ್ಪ)*

Bee-eaters are one of the most attractive birds of the open country, seen typically in small groups perched on posts or wire, where they often line up, looking restlessly, hither and thither, waiting, and launch out after an insect. They are slender, social birds, generally bright green coloured, with black stripe extending from the base of the bill through the eye; bill long, sleek, laterally compressed, and curved downwards; wing long and pointed; tail long with central pair of rectives usually elongated as tail pins. Sexes alike. Their food includes insects, chiefly bees and wasps caught on the wings, by aerial maneuvers or by sudden swoop and chase from an exposed perch. Nest, a self-excavated hole with wider egg chamber in sandy banks or sloping tunnel on the ground. Eggs, 2-8, white and roundish oval. Incubation and feeding the young shared by both sexes. A social behaviour is seen in colonial nesting where 'helpers' also take part in nest building.

ಆಕರ್ಷಕ ಹಕ್ಕಿಗಳು. ಸಣ್ಣ ಗುಂಪಿನಲ್ಲಿ ಉದ್ಯಾನ, ಗದ್ದೆಯಂಚು, ಒಣಕಾಡುಗಳಲ್ಲಿ, ಬೇಲಿ, ಒಣರೆಂಬೆ, ತಂತಿಗಳ ಮೇಲೆ, ಚಡಪಡಿಸುತ್ತ, ಅತ್ತಿತ್ತ ನೋಡುತ್ತ, ಬೇಟೆಗೆ ಹೊಂಚುಹಾಕುತ್ತದೆ. ಸರ್ರನೆ ಹಾರಿ, ಕೀಟಗಳನ್ನು ಹಿಡಿದು, ತನ್ನ ಜಾಗಕ್ಕೆ ಹಿಂದಿರುಗಿ, ಬಡಿದು ಕೊಂದು ತಿನ್ನುತ್ತದೆ. ಹಸಿರು ಬಣ್ಣದ ದೇಹ; ಕಣ್ಣಿಗೆ ಕಳ್ಳನ ಪಟ್ಟಿ;

ಉದ್ದ, ಸಪೂರ, ತುಸು ಕೆಳಗೆ ಬಾಗಿದ ಕೊಕ್ಕು; ಉದ್ದ, ಚೂಪಾದ ರೆಕ್ಕೆಗಳು; ಬಾಲದ ಕೊನೆಯಲ್ಲಿ ಎರಡು ನೀಳ ಕಡ್ಡಿಗಳು, ಇವು ಸಾಮಾನ್ಯ ಲಕ್ಷಣಗಳು. ಜೇನುನೊಣ, ಕಣಜ ಮತ್ತು ಅಂತಹ ಕೀಟಗಳೇ ಆಹಾರ. ಗದ್ದೆಯ ಬದುಗಳಲ್ಲಿ ಕೊರೆದ ಸುಮಾರು ೪–೫ ಅಡಿ ಉದ್ದದ ಸುರಂಗದ ಒಳಗೆ ದೊಡ್ಡ ಕೋಣೆಯ ಗೂಡು. ಗಂಡು–ಹೆಣ್ಣು ಹಕ್ಕಿಗಳೆರಡೂ ಮರಿಹಕ್ಕಿಗಳ ಪೋಷಣೆಯ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತವೆ. ಗೂಡುಕಟ್ಟುವ ಕಾರ್ಯದಲ್ಲಿ ಕುಟುಂಬದ ಇತರ ಹಕ್ಕಿಗಳೂ ಸೇರಿ ಸಹಾಯ ಮಾಡುವುದನ್ನು ಕಾಣಬಹುದು.

139. Small Bee-eater (*Merops orientalis)* Green Bee-eater R Sparrow+ A bright green bird with reddish brown head and nape; black eye band; pale blue chin and throat bordered by a black necklace; central tail feathers drawn into long tail-pins. Seen in small parties, perched on telegraph wire or bare branches on the open country in the neighbourhood of cultivation and gardens, often along with Drongos, Cattle egrets and Mynas. Launch gracefully on the winged insects, batter the prey before swallowing. Known to be a menace to the honey industry. **Voice:** repeated, subdued, cheerful, pleasant trilling *tree.tree.tree.* uttered both at rest and on the wings. **Nesting**: February-May. **Eggs**: 4-7.

ಸಣ್ಣ ಕಳ್ಳಿಪೀರ *(ಬೊತ್ತ್ ಅಳ್ಪ)* 21 ಸೆಂಮೀ. ಅಚ್ಚಹಸಿರು ದೇಹಕ್ಕೆ ಕೆಂಗಂದು ತಲೆ, ಹಿಂಗತ್ತು; ನೀಲಿ ಗಲ್ಲ; ಕಪ್ಪುಸರ; ಬಾಲದ ಮಧ್ಯದೆರಡು ಗರಿಗಳು ಕಡ್ಡಿಗಳಂತೆ ಉದ್ದ. ಸಣ್ಣ ಗುಂಪಿನಲ್ಲಿ ಎಸ್ಟೇಟು, ಬಿದಿರುಗಾಡು, ಗದ್ದೆಯ ಬದಿ, ಜನವಸತಿ ಮತ್ತು ಉದ್ಯಾನಗಳಲ್ಲಿ, ಇತರ ಹಕ್ಕಿಗಳೊಡನೆ, ಬಾಗಿದ ಕೊಂಬೆಯ ತುದಿ ಅಥವಾ ತಂತಿಯ ಮೇಲೆ ಕುಳಿತು ಕೀಟಗಳ ಬೇಟೆ; ಹಾರುತ್ತಿರುವ ಜೇನುನೊಣವನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು, ಹಿಂದಿರುಗಿ ಅಲ್ಲಿಗೇ ಬಂದು ಕುಳಿತು, ಬೇಟೆಯನ್ನು ಬಡಿದು ಕೊಂದು ತಿನ್ನುತ್ತದೆ. ಹರ್ಷದ *ಟ್ರೀ.ಟ್ರೀ..* ಕೂಗಾಟ. ಸಂಜೆ ಗುಂಪಿನಲ್ಲಿ ಮರದ ಎಲೆಗಳ ನಡುವೆ ತಂಗುವಿಕೆ. ಬೆಳಿಗ್ಗೆ ಏಳಲು ಸೋಮಾರಿ.

140. Blue-tailed Bee-eater *(Merops philippinus)* LM Bulbul+ Greenish above; faint blue on wings; yellow upper throat patch and chestnut throat and breast; bluish rump and tail with long central feathers, diagnostic. Seen in scrub and dry deciduous jungles, in the vicinity of cultivation and open country; breeds in N Pakistan, NE and C India, S Nepal and Bangladesh and is a winter visitor. Voice: *te-tew?...te-tew?...* mistaken to be that of Red-vented Bulbul.

ನೀಲಿಬಾಲದ ಕಳ್ಳಿಪೀರ *(ನೀಲಿಬಾಲ್‌ರ ಬೊತ್ತ್ ಅಳ್ಪ)* 31 ಸೆಂಮೀ. ಹಸಿರುಗಂದು ಮೈ; ಕೆಂಗಂದು ಗಂಟಲು, ಎದೆ; ನೀಲಿ ಪೃಷ್ಠ, ಬಾಲ; ಬಾಲದ ಮಧ್ಯದೆರಡು ಗರಿಗಳು ಉದ್ದ. ಕುರುಚಲು, ಒಣಕಾಡುಗಳಲ್ಲಿ, ಹೊಲಗಳೆಡೆ, ವಾಸ. ಪಿಕಳಾರದಂತೆ, *ಟೀ.ಟ್ಯೂ? .ಟೀ.ಟ್ಯೂ?* ಕೂಗು. ಚಳಿಗಾಲದ ವಲಸೆಗಾರ.

141. Chestnut-headed Bee-eater *(Merops leschenaulti)* R Bulbul +/- Similar to 140. Head, crown, nape, upper back chestnut coloured; yellow chin, throat with a rufous and black necklace; central pair of feathers do not project much beyond the tail. Seen in dry and moist deciduous jungles, preferring foothills. Voice similar to 140. **Nesting**: February-May. **Eggs**: 5-6.

ಕೆಂದಲೆ ಕಳ್ಳಿಪೀರ *(ಚೋಂದಮಂಡೆ ಬೊತ್ತ್ ಅಳ್ಪ)* 21 ಸೆಂಮೀ. ಅಚ್ಚ ಹಸಿರು ದೇಹಕ್ಕೆ ಕೆಂಗಂದು ತಲೆ, ಹಿಂಗತ್ತು, ಬೆನ್ನು; ಹಳದಿ ಕೊರಳು; ಕಪ್ಪು ಸರ; ಉದ್ದ ಬಾಲದಲ್ಲಿ ಕಡ್ಡಿಗಳಿಲ್ಲ. ಹಸಿರೆಲೆ ಕಾಡುಗಳು, ಬೆಟ್ಟದ ಬುಡದ ಎಸ್ಟೇಟುಗಳಲ್ಲಿ ವಾಸ. ಸರಿಸುಮಾರು ೧೪೦ರಂತೆ ಕೂಗು.

142. Blue-bearded Bee-eater *(Nyctyornis athertoni)* R Pigeon+ Grass green above; bluish forehead; blue throat and breast streaked dark blue that appears like a beard, especially seen when the bird is calling; ashy yellow below the breast, streaked with green; tails lack the central pins. The bird is mostly arboreal, seen making sallies after the winged insects. **Voice**: harsh *korrr...korrr...* croaking notes with soft chuckling. **Nesting**: February-May. **Eggs**: 3-5.

ನೀಲಿಗಲ್ಲದ ಕಳ್ಳಿಪೀರ ***(ಬಲ್ಯ ಬೊತ್ತ್ ಅಳ್ಪ)*** 36 ಸೆಂಮೀ. ಹಸಿರು ಮೇಲ್ಮೈ; ನೀಲಿ ಗಂಟಲು, ಎದೆಯ ಮೇಲೆ ಗಡ್ಡದಂತೆ ಉದ್ದ ಗೀರುಗಳು; ಬೂದು-ಹಳದಿ ಕೆಳಮೈ ಮೇಲೆ ಉದ್ದ ಹಸಿರು ಗೀರುಗಳು; ಬಾಲದಲ್ಲಿ ಕಡ್ಡಿಗಳಿಲ್ಲ. ಒತ್ತಾದ ಕಾಡುಗಳಲ್ಲಿ ಮರಗಳಲ್ಲಿ ವಾಸ. ನೇರವಾಗಿ ಜೇನುಹುಟ್ಟಿಗೇ ಧಾಳಿಯಿಡಬಲ್ಲದು. ಕರ್ಕಶ *ಕರ್ರ್.ಕರ್ರ್..* ಕೂಗು.

Rollers *(Coraciidae)*

ನೀಲಕಂಠಗಳು *(ನೀಲಕಂಟ)*

These are noisy, aggressive, large arboreal birds with large head, short neck and bright brown and blue plumage; bill wide, strong, slightly hooked; legs short; feet strong; wings broad and tail long. They are usually seen perched on prominent perches in trees, on posts or wires. Sexes alike. Flight strong with slightly hesitant flapping wingbeats. Courtship display, accompanied by shrieks and screeches and acrobatics – tumbling, rolling, looping-the-loop. Food consists of insects caught in air and small crawling animals caught by dropping from perch to pick the prey from ground. Unlined nests in tree holes. Eggs, 2-4. Both parents share household duties.

ಮರದಲ್ಲಿಯೇ ವಾಸ ಮಾಡುವ, ದೊಡ್ಡಗಾತ್ರದ, ಗಲಾಟೆಕೋರ ಹಕ್ಕಿಗಳು. ದೊಡ್ಡ ತಲೆ, ಚಿಕ್ಕ ಕತ್ತು, ಉಜ್ವಲ ಕಂದು-ನೀಲಿ ಮೈ; ಅಗಲವಾದ, ಗಟ್ಟಿಮುಟ್ಟಾದ, ತುಸು ಕೊಕ್ಕೆಯಂತಹ ಕೊಕ್ಕು; ಉದ್ದ ರೆಕ್ಕೆ ಮತ್ತು ಬಾಲ. ನೋಡಲು ಗಂಡು-ಹೆಣ್ಣು ಒಂದೇ ರೀತಿ. ಒಂದನ್ನೊಂದು ಆಕರ್ಷಿಸಲು, ಆಕಾಶದಲ್ಲಿ ಅದ್ಭುತವಾದ ಸರ್ಕಸ್ ಮಾಡುತ್ತವೆ. ಒರಟಾಗಿ, ತೀಕ್ಷ್ಣಸ್ವರದಲ್ಲಿ ಅರಚುತ್ತಾ, ಸುರುಳಿ-ಸುರುಳಿಯಾಗಿ, ಉಂಗುರುಂಗುರವಾಗಿ ಹಾರುವುದು, ಧೊಪ್ಪನೆ ಬೀಳುವುದು ನೋಡಲು ಆಹ್ಲಾದ. ಹಾರುತ್ತಿರುವಾಗಲೇ ಕೀಟಗಳ ಭಕ್ಷಣೆ ಅಲ್ಲದೆ, ನೆಲದಲ್ಲಿ ತೆವಳುವ ಸಣ್ಣ ಪ್ರಾಣಿಗಳು ಆಹಾರ. ಮರದ ರಂಧ್ರಗಳಲ್ಲಿ ಗೂಡು.

143. Indian Roller *(Coracias benghalensis)* Blue Jay R Pigeon+/- Appearing rather dull and lumpy, but brilliant dark turquoise and light blue pattern on the wings show up, once the bird lifts from the perch. Brown and blue upperparts with dark blue tail; black beak; rufous brown streaked breast. Solitary or pairs, seen perched on stumps, wires, bushtops, in open country and light forests; pounces on crawling insect, frog or lizard, on the ground; batters before swallowing. **Voice**: loud, harsh *khak.kak.kak.* screams, croaks and chuckles. **Nesting**: March-July; nest, straw, rags and rubbish in a hole of tree or wall. **Eggs**: 4, glossy white, roundish ovals.

ನೀಲಕಂಠ ***(ನೀಲಕಂಟ)*** 31 ಸೆಂಮೀ. ಒಂಟಿಯಾಗಿ ತಂತಿಯ ಮೇಲೋ, ಮರದ ಬೊಡ್ಡೆಯ ಮೇಲೋ ಕುಳಿತಿರುವಾಗ, ಅನಾಕರ್ಷಕ, ಮುದಿಗೊಡ್ಡಿನಂತೆ ಕಂಡರೂ, ಹಾರಲು ಮೇಲೆದ್ದೊಡನೆ, ಉಜ್ವಲ ಕಡು ನೀಲಿ, ತಿಳಿನೀಲಿ ಬಣ್ಣದ ರೆಕ್ಕೆಗಳು ಮತ್ತು ಸಂಗಾತಿಯನ್ನು ಆಕರ್ಷಿಸಲು ಆಗಸದಲ್ಲಿ ಹಾರಿ, ಗಿರಕಿ ಹೊಡೆದು ಮಾಡುವ ಸರ್ಕಸ್ ಮನೋಹರ. ಉದುರೆಲೆ, ಕಾಡಿನ ಅಂಚು, ಕುರುಚಲು ಕಾಡು, ಜೌಗು ಮತ್ತು ವ್ಯವಸಾಯ ಪ್ರದೇಶಗಳ ಸುತ್ತ-ಮುತ್ತ ವಾಸ. ತಂತಿ, ಮರದ ಬೊಡ್ಡೆ, ಕಂಬ ಅಥವಾ ಬಂಡೆಯ ಮೇಲೆ ಕುಳಿತು ಬೇಟೆಯನ್ನು ಹೊಂಚು ಹಾಕುತ್ತದೆ. ನೆಲದ ಮೇಲೆ ಹರಿದಾಡುವ ಜಂತು, ಹಾರುವ ಕೀಟಗಳೇ ಆಹಾರ; ರೈತನ ಮಿತ್ರ. ನಿಶ್ಯಬ್ದ ಜೀವಿಯಾದರೂ, ಗಟ್ಟಿಯಾಗಿ *ಖಕ್.ಖಕ್.* ಕೆಮ್ಮು. ಗೋಡೆಯ ರಂಧ್ರಗಳಲ್ಲೂ ಗೂಡು.

144. Oriental Broad-billed Roller *(Eurystomus Orientalis)* Broadbilled Roller R Pigeon Overall bluish black and dark greenish brown, with a black head; light blue wing patch seen in flight; short broad red bill, red eye-ring and legs; pale streaks on neck; dark bluish buff underbody. Singly, seen in heavy forests, forest clearings and cardamom estates. **Voice**: occasional *chack.chack..* **Nesting**: March-May; nest in even those of barbets and woodpeckers. **Eggs**: 3-4, white, spherical.

ಕರಿ ನೀಲಕಂಠ ***(ಕರ್ತ ನೀಲಕಂಟ)*** 31 ಸೆಂಮೀ. ಕಡುನೀಲಿಗಪ್ಪು-ಹಸಿರುಗಪ್ಪು ದೇಹಕ್ಕೆ, ಕಪ್ಪು ತಲೆ; ರೆಕ್ಕೆಗಳಲ್ಲಿ ತಿಳಿನೀಲಿ ಪಟ್ಟೆಗಳು; ಕೆಂಪು ಅಗಲವಾದ ಕೊಕ್ಕು, ಕಣ್ಣುಂಗುರ ಮತ್ತು ಕಾಲು; ನೀಲಿಗಪ್ಪು ಕೆಳಮೈ. ಒಂಟಿಯಾಗಿ, ಒತ್ತಾದ ಅರಣ್ಯಗಳಲ್ಲಿ, ಏಲಕ್ಕಿ ತೋಟಗಳಲ್ಲಿ ಕಾಣಬಹುದು. ಅಪರೂಪಕ್ಕೊಮ್ಮೆ *ಚಾಕ್..ಚಾಕ್..* ಕೂಗು. ಕುಟ್ರುಹಕ್ಕಿ ಅಥವಾ ಮರಕುಟ್ಟಿಗದ ಗೂಡೂ ಆಗಬಹುದು.

Hoopoes *(Upupidae)*

ಚಂದ್ರಮುಕುಟಗಳು *(ಹೂಪ್)*

145. Common Hoopoe *(Upupa epops)* Hoopoe R Bulbul+ Fawn plumage; black and white and buff zebra-like stripes on back, wings and tail; black and white tipped fan-like crest fully fanned when alighting or when agitated; long, slender beak, gently curved down; short tarsi; long toes; wings broad and rounded; paler underbody; square tail. Sexes alike. Solitary or scattered pairs, seen probing ground; surprisingly unobtrusive until it takes spectacularly to the wing, only to seemingly vanish again as it drops back to ground. Flits among tree branches, in lightly wooded country, gardens around villages; crest fanned open intermittently. Flight undulating; walks and runs with waddling gait. **Food**: insects, grubs, pupae, thus farmer's friend. **Voice**: pleasant, distinct, hollow *hoo.po..po..*, repeated for 6-10 minutes. **Nesting**: February-May; nest, a natural tree hollow or hole in wall, untidily lined with straw and rubbish. **Eggs**: 5-6, white. Incubated by female; nestlings fed by both; nestlings squirt their foul smelling liquid faeces at intruders, when threatened.

ಚಂದ್ರಮುಕುಟ ***(ಹೂಪ್)*** 31 ಸೆಂಮೀ. ತಿಳಿಗಂದು ದೇಹಕ್ಕೆ ಕಪ್ಪು-ಬಿಳಿ ರೆಕ್ಕೆ; ಪಟ್ಟೆ ಬಾಲ; ಬಿಳಿ ಕೆಳಹೊಟ್ಟೆ; ಉದ್ದನಾದ, ತುಸು ಕೆಳಕ್ಕೆ ಬಾಗಿದ ಕೊಕ್ಕು; ತಲೆಯ ಮೇಲೆ ಜಪಾನ್ ಬೀಸಣಿಗೆಯಂತಹ ಕಿರೀಟದಲ್ಲಿ, ಬಿಳಿ-ಕಪ್ಪು ಅಂಚುಳ್ಳ ಗರಿಗಳು. ಕುರುಚಲು ಕಾಡು, ಬಯಲು ಪ್ರದೇಶ, ತೆಳು ಕಾಡುಗಳಲ್ಲಿ ಮತ್ತು ತೋಟಗಳಲ್ಲಿ, ನೆಲದ ಮೇಲೆ ಕ್ರಿಮಿ-ಕೀಟಗಳಿಗಾಗಿ ಕೆದಕುತ್ತ ಅಡ್ಡಾಡುತ್ತವೆ; ಅಲ್ಲದೆ ಕೀಟಗಳೊಂದಿಗೆ ಗೂಡುಗಳೊಳಗಿರುವ ಅವುಗಳ ಮರಿಹುಳಗಳು ಅತಿಪ್ರಿಯ; ಹಾಗಾಗಿ ರೈತನ ಅತ್ಯಂತ ಗೆಳೆಯ. ಅತ್ತಿತ್ತ ತಿರುಗುವಾಗ, ಒಂದೊಂದು ಸಾರಿಗೂ ಶಿಖೆಯನ್ನು ತೆಗೆದು ಮುಚ್ಚುತ್ತಿರುತ್ತವೆ. ಹಾರುವಾಗ ಅಲೆಅಲೆಯಂತೆ ಓಲಾಟ; ನೆಲದ ಮೇಲೆ ಜೂಗಾಟದ ನಡೆ. ಕಿವಿಗೆ ಇಂಪಾದ *ಹುಪ್.ಪುಪ್.ಪುಪ್.* ಕೂಗು. ಮರದ ಪೊಟರೆ, ಗೋಡೆಯ ರಂಧ್ರಗಳಲ್ಲಿ ಚಿಂದಿ, ಕಸ-ಕಡ್ಡಿಗಳ ಗೂಡು. ಗೂಡಿನ ಬಳಿ ಹೋದವರಿಗೆ, ಮರಿಗಳ ದುರ್ವಾಸನೆಯ ಪಿಚಕಾರಿ!

Hornbills *(Bucerotidae)*

ಮಂಗಟ್ಟೆ ಹಕ್ಕಿಗಳು *(ಕಿತ್ತೋಳೆಪಕ್ಷಿ)*

Large arboreal birds, having greyish white to brown plumage. Bill enormous, brightly coloured with a large peculiar protuberance called *casque* on the culmen; eyes have bare and brightly coloured skin; wings are broad and tails long and heavy. Seen in pairs or small party. Mainly frugivorous and also feed on insects and small animals. Their nest making is even more peculiar than their beaks. They seek a tree hole either natural or scooped out, new or the one of previous year. The female hornbill walls herself inside the nest, with the help of her droppings and mud-paste, leaving a small opening through which the male feeds her during incubation, sometimes even till the young ones fledge out, making the whole family vulnerable as the lone male is in danger of getting killed. The females also undergo a moult during this period.

ದೊಡ್ಡಗಾತ್ರದ ಹಕ್ಕಿಗಳು; ಮುಖದಲ್ಲಿ ತಲೆಗಿಂತ ದೊಡ್ಡದಾದ, ಎದ್ದುಕಾಣುವ ಕೊಕ್ಕು, ಅದರ ಮೇಲೆ ದೊಡ್ಡ ಕೋಡು, ಈ ಪಕ್ಷಿಗಳ ವೈಶಿಷ್ಟ್ಯ. ಈ ಕೋಡುಗಳು ಅವುಗಳ ಧ್ವನಿಯನ್ನು ಒಂದಷ್ಟು ಪಟ್ಟು ಹೆಚ್ಚಿಸುತ್ತವೆ. ಕಣ್ಣಿನ ಸುತ್ತ ನಗ್ನ ಚರ್ಮ; ಅಗಲವಾದ ದೊಡ್ಡ ರೆಕ್ಕೆಗಳು; ಉದ್ದನಾದ, ದೇಹಕ್ಕೆ ಭಾರವೆನಿಸುವ ಬಾಲ. ಆಯುಷ್ಯದ ಹೆಚ್ಚು ವೇಳೆಯನ್ನು ಮರದ ಮೇಲೆಯೇ ಕಳೆಯುತ್ತವೆ. ಅಂಜೂರದ ಜಾತಿಯ, ಕಾಡು ಮರಗಳ, ಧೂಪದ ಮರದ ಹಣ್ಣುಗಳೆಂದರೆ ಪ್ರಿಯ. ಜೊತೆಗೆ ಓತಿ, ಇಲಿ, ಪಕ್ಷಿಮರಿಗಳೂ ಆಹಾರ. ದಪ್ಪ ಧ್ವನಿಯ ಕರ್ಕಶ ಚೀರಾಟ. ಮರದಿಂದ ಮರಕ್ಕೆ ಹಾರುವಾಗ ಅಲೆಯ ಹಾಗೆ, ಗಾಳಿಯಲ್ಲಿ ತೇಲುವ ಹಾರಾಟ. ಗೂಡುಕಟ್ಟುವ ಪರಿ, ಇನ್ನೂ ವಿಚಿತ್ರ: ಗಂಡು-ಹೆಣ್ಣು ಹಕ್ಕಿಗಳು ಒಂದರ ಹಿಂದೆ ಒಂದು ಬಿಟ್ಟಿರದೆ ಹಾರಾಡುತ್ತಿರುತ್ತವೆ. ನಿರ್ದಿಷ್ಟ ಸಮಯ ಬಂದಾಗ, ಹೆಣ್ಣು ಮಂಗಟ್ಟೆಯನ್ನು ಒಂದು ಮರದ ಪೊಟರೆಯೊಳಗೆ ಕುಳ್ಳಿರಿಸಿ, ಬರೇ ಕೊಕ್ಕು ಹೊರಗೆ ಕಾಣುವಂತೆ ಸುತ್ತಲೂ ಮಣ್ಣು ಮೆತ್ತಿ ಮುಚ್ಚುತ್ತದೆ. ಅಲ್ಲಿಂದ ಮೊಟ್ಟೆಯೊಡೆದು, ಮರಿಗಳು ದೊಡ್ಡದಾಗುವವರೆಗೂ, ಇಡೀ ಸಂಸಾರಕ್ಕೆ ಆಹಾರ ಒದಗಿಸುವ ಭಾರವನ್ನು ಗಂಡುಹಕ್ಕಿಯೇ ಹೊರುತ್ತದೆ. ಈ ಸಮಯದಲ್ಲಿ ಗಂಡುಹಕ್ಕಿಗೆ ಅಪಾಯ ಸಂಭವಿಸಿದರೆ, ಇಡೀ ಕುಟುಂಬವೇ ನಾಶವಾಗುವ ಸಂಭವವಿದೆ!

146. Indian Grey Hornbill *(Ocyceros birostris)* Common Grey Hornbill R Kite- Overall greyish brown plumage; with an enormous black and white beak that is curved downward, surmounted by the casque; long graduated tail, with a black and white tip. In the female, casque is smaller. Seen in dry deciduous forests, along with other frugivorous birds in the fruiting season. Flight, graceful and undulating from one tree to the other, in the typical follow-the-leader pattern. **Voice**: Noisy, made of a shrill squeaking notes and some screams plus a loud cackling *ke.ke.kke.kkae*… **Nesting**: March-June. **Eggs**: 2-3 dull white.

ಬೂದು ಮಂಗಟ್ಟೆ ***(ಬೂದ್ ಕಿತ್ತೋಳೆಪಕ್ಷಿ)*** 61 ಸೆಂಮೀ. ಬೂದುಗಂದು ಮೈ; ಕೋಡುಳ್ಳ, ಉದ್ದವಾದ, ತುಸು ಕೆಳಕ್ಕೆ ಬಾಗಿದ ಕಪ್ಪು-ಬೂದು ಕೊಕ್ಕು; ಭಾರವಾದ ಬಾಲದ ತುದಿ, ಕಪ್ಪು-ಬಿಳಿ. ದಟ್ಟ ಕಾಡುಗಳಲ್ಲಿ ವಿರಳ. ಗುಂಪಾಗಿ ಅಥವಾ ಜೋಡಿಯಾಗಿ, ಉದುರೆಲೆ ಕಾಡು, ತಿಳಿಗಾಡು-ತೋಪುಗಳಿರುವೆಡೆ, ಉಳಿದ ಹಕ್ಕಿಗಳೊಂದಿಗೆ ಫಲಭರಿತ ಮರಗಳಲ್ಲಿ ಕಾಣಬಹುದು. ಬೀಜಪ್ರಸರಣದಲ್ಲಿ ಮುಖ್ಯ ಪಾತ್ರ. ಕೀಚಲುಧ್ವನಿಯ ಅರಚಾಟ, *ಕೆ.ಕ್ಕೆ..ಕ್ಕೆ..* ಅಟ್ಟಹಾಸದ ನಗುವಲ್ಲದೆ, *ಕ್ಯೆಯಾಂ.. ಕ್ಯೆಯಾಂ..* ಕೂಗು.

147. Malabar Grey Hornbill *(Ocyceros griseus)* R Kite- Similar to 146; yellow-orange bill; casque on the beak missing; white streaks on head, throat and breast; white tipped black tail except central feathers. **Voice:** distinct, loud, puerile *ayein. ayein*. and loud cackling *ke.ke.kke.kkae*. calls. Habits, Nesting, Eggs similar to 146.

ಮಲೆ ಮಂಗಟ್ಟೆ ***(ಕಿತ್ತೋಳೆಪಕ್ಷಿ)*** 59 ಸೆಂಮೀ. ಈ ಪ್ರದೇಶದಲ್ಲಿ ಸಾಮಾನ್ಯ. ಬೂದು ಮೈ; ಕಿತ್ತಳೆ-ಹಳದಿ ಕೊಕ್ಕು; ಅದರ ಮೇಲೆ ಕೋಡಿಲ್ಲ; ಭಾರವಾದ ಕರಿಬಾಲದ ತುದಿಯಲ್ಲಿ ಬಿಳಿಯಂಚು. ಸದಾಹಸಿರು, ತೇವ-ಉದುರೆಲೆ ಕಾಡು, ಎಸ್ಟೇಟುಗಳಲ್ಲಿ ವಾಸ. *ಏ.ಂಯ್..ಏ.ಂಯ್..* ಎಂದು ಚಿಕ್ಕ ಮಗು ಅತ್ತಂತೆ ಕೂಗು. ಉಳಿದೆಲ್ಲ ೧೪೬ರಂತೆ.

148. Great Pied Hornbill *(Buceros bicornis)* R Kite Black and white neck, wings and tail; black face and underparts; black wings with two white bars; white neck, lower abdomen and tail; broad black tail band; huge black and yellow beak; concave-topped casque; the secretion of the tail gland smears the neck with yellow. Female smaller. They are noisy even on the wings as the air rushing through the base of the outer quills of the wing feathers, heard even from a long distance. Seen in evergreen, moist deciduous forests with large fruiting trees. Flight, with flapping and gliding, less undulating than other species. **Voice**: loud *he.he.hhe.hhae*… or a raucous cackling or of a yelping puppy. **Nesting**: March-June. **Eggs**: 2-4, white with brownish tinge.

ದೊಡ್ಡ ದಾಸಮಂಗಟ್ಟೆ ***(ಮಲೇರಪ್ಪ)*** 130 ಸೆಂಮೀ. ಎಲ್ಲಕ್ಕಿಂತ ದೊಡ್ಡ ಗಾತ್ರದ ಕಪ್ಪು-ಬಿಳಿ ಬಣ್ಣದ ಮಂಗಟ್ಟೆ; ಕಪ್ಪು ಮುಖ, ಮೇಲ್ಮೈ ಮತ್ತು ಕೆಳಮೈ; ಹಳದಿ-ಕಪ್ಪು ಕೊಕ್ಕು ಮತ್ತು ಕೋಡು; ಬಿಳಿ ಕತ್ತು, ಗಂಟಲು, ಕಿಬ್ಬೊಟ್ಟೆ; ರೆಕ್ಕೆಯ ಮೇಲೆ ಎರಡು ಬಿಳಿ ಪಟ್ಟಿ; ಬಿಳಿಬಾಲದಲ್ಲಿ ಅಗಲವಾದ ಕಪ್ಪು ಅಡ್ಡಪಟ್ಟಿ; ಬಾಲದ ಬುಡದಲ್ಲಿ ಸ್ರವಿಸುವ ದ್ರವದಿಂದಾಗಿ ಕತ್ತು ತಿಳಿಹಳದಿ. ದಟ್ಟ ಅರಣ್ಯವಾಸಿ; ಸದಾಹಸಿರು, ತೇವವುಳ್ಳ ಉದುರೆಲೆ ಕಾಡು ಇದರ ವಾಸಸ್ಥಳ; ಒತ್ತಾದ ಹಣ್ಣಿನ ಮರಗಳಿರುವ ಎಸ್ಟೇಟುಗಳಿಗೂ ನುಸುಳುವುವು. ಗಟ್ಟಿಯಾದ, ಪ್ರತಿಧ್ವನಿಸುವ *ಹೆ.ಹ್ಹೆ.ಹ್ಹೆ.ಹ್ಹೆ..* ಕೂಗು. ನಿರಂತರ ಬೇಟೆಯ ಕಾರಣದಿಂದ ವಿನಾಶದ ಅಂಚಿನಲ್ಲಿರುವ ಹಕ್ಕಿ.

149. Malabar Pied Hornbill *(Anthracoceros coronatus)* R Kite Black above; black neck, throat and breast; white below; outer tail feathers white; black and yellow beak and large laterally flattened casque, that is sharply ridged along the top with a sharp tip. Seen in the dry and moist deciduous forest range. **Voice**: loud cackles and screams, rapid *pak...pak...pak...* Nesting and Eggs, similar to 148.

ಮಲೆ ದಾಸಮಂಗಟ್ಟೆ *(ಕಿತ್ತಳಂಬಕ್ಕಿ)* 92 ಸೆಂಮೀ. ಕಪ್ಪು-ಬಿಳಿ ಹಕ್ಕಿ; ಕಪ್ಪು ಕತ್ತು, ಗಂಟಲು, ಎದೆ ಮತ್ತು ಮೇಲ್ಮೈ; ಬಿಳಿ ಕೆಳಮೈ; ಬಾಲದ ಹೊರಗರಿಗಳು ಬಿಳಿ; ಚಪ್ಪಟೆಯಾದ ಕೋಡುಳ್ಳ ಕಪ್ಪು-ಹಳದಿ ಕೊಕ್ಕು. ಉಳಿದೆಲ್ಲ ೧೪೮ರಂತೆ.

Barbets *(Capitonidae)*

ಕುಟ್ರಹಕ್ಕಿಗಳು *(ಕುಡ್‌ಕ್‌ಪಕ್ಷಿ)*

Arboreal birds, generally having leaf green coloured body with coarse plumage, giving an effective camouflage amongst the foliage; large head; large, heavy, slightly curved beak with moustaches at the base; short and strong legs with feet that are large and zygodactyl; round wings; short and truncated tail. Sexes alike. Groups, seen in forests, coffee and cardamom estates; flight weak. Food includes insects and small creatures, fruits and flowers; love to devour fruits especially figs of peepal and banyan. Calls loud and monotonous. Four species are found in this region; while two species make *kutroo..kutroo...* calls, the other two make *tnk.tnk.tnk* ... similar to that of a tin-maker. Nest consists of holes in softwood trees; both the sexes share the responsibilities of nest making, incubation and feeding of the young.

ಮಲೆನಾಡಿನ ಕಾಡುಗಳಲ್ಲೆಲ್ಲ ದಿನಪೂರ್ತಿ ಕೇಳುವ ಸುಪರಿಚಿತ *ಕುಟ್ರೊ..ಕುಟ್ರೊ..* ಕೂಗು, ಈ ಕುಟ್ರಹಕ್ಕಿಗಳದ್ದು. ನಮ್ಮಲ್ಲಿ ಕಂಡುಬರುವ ಮತ್ತೆರಡು ಸಣ್ಣ ಗಾತ್ರದ ಕುಟ್ರಹಕ್ಕಿಗಳು *ಟ್ಂಕ್.ಟ್ಂಕ್...* ಎಂದು ಕಮ್ಮಾರನು ಪಾತ್ರೆ ಕುಟ್ಟುವ ರೀತಿ ಕೂಗುತ್ತವೆ. ಎಲೆಹಸಿರು ಬಣ್ಣದ ದೇಹ; ಒಟ್ಟಾರೆ ಎಲೆಗಳ ಮಧ್ಯೆ ಮರೆಮಾಚುವ ಬಣ್ಣ; ದಪ್ಪನಾದ, ತುಸು ಬಾಗಿದ ಕೊಕ್ಕು; ಕೊಕ್ಕಿನ ಬುಡದಲ್ಲಿ ಉದ್ದನಾದ ಮೀಸೆ; ಗಟ್ಟಿಮುಟ್ಟಾದ ಸಣ್ಣ ಕಾಲುಗಳು; ಎರಡು ಬೆರಳು ಮುಂದೆ, ಎರಡು ಹಿಂದೆ; ಗುಂಡಾದ ರೆಕ್ಕೆಗಳು; ಚಿಕ್ಕ, ಏಣು ಸವರಿದಂತ ಬಾಲ. ಹಣ್ಣುಗಳೆಂದರೆ ಬಹಳ ಇಷ್ಟ, ಅದರಲ್ಲೂ ಕಾಫಿ, ಏಲಕ್ಕಿ ಎಸ್ಟೇಟುಗಳಲ್ಲಿರುವ ಆಲ, ಅರಳಿ, ಬಸರಿ ಹಣ್ಣುಗಳೆಂದರೆ, ಗುಂಪಾಗಿ ಬಂದು ಔತಣ ಕೂಟದಲ್ಲಿ ಭಾಗವಹಿಸುತ್ತವೆ; ಅಲ್ಲದೆ ಕೀಟಗಳು, ಸಣ್ಣ ಜೀವಿಗಳು ಮತ್ತು ಹೂ ಮಕರಂದವೇ ಆಹಾರ. ಕೊಕ್ಕಿನ ಬುಡದಲ್ಲಿರುವ ಕೂದಲಿನಲ್ಲಿ ಪರಾಗಗಳು ಅಂಟಿಕೊಂಡು, ಪರಾಗಸ್ಪರ್ಶದಲ್ಲಿ ಭಾಗವಹಿಸುತ್ತವೆ. ಮರದ ಪೊಟರೆಗಳೊಳಗೆ ಗೂಡು.

150. White-cheeked Barbet *(Megalaima viridis)* Small Green Barbet R Myna-Overall grass green body with brown head, neck and breast, streaked white; white chin and throat; white patch on cheek diagnostic; black naked ring around the eyes. **Voice**: *kutrr.rrr.. kutroo. kutroo..* calling, about 60 times per minute, sometimes in groups,

one after the other, resonating throughout the forest. **Nesting:** March-June. **Eggs:** 3 or 4, pale white.

ಸಣ್ಣ ಕುಟ್ರ ***(ಕುಟ್ರುಪಕ್ಷಿ)*** 23 ಸೆಂಮೀ. ನಮ್ಮಲ್ಲಿ ಸಾಮಾನ್ಯವಾಗಿ ಕಂಡುಬರುವ ಎಲೆಹಸಿರು ಹಕ್ಕಿ. ಬಿಳಿ ಗೀರುಗಳಿರುವ ಕಂದು ತಲೆ ಮತ್ತು ಎದೆ; ಕೆನ್ನೆಯ ಮೇಲೆ ಬಿಳಿ ಮಚ್ಚೆಗಳು. ಕಣ್ಣಿನ ಸುತ್ತ ಕಪ್ಪು ನಗ್ನ ಉಂಗುರ; ಬಿಳಿ ಗಲ್ಲ, ಬೆನ್ನ ಮೇಲೆ ಕಂದು ಗೀರುಗಳು. ಸದಾಹಸಿರು, ತೇವ–ಉದುರೆಲೆ ಕಾಡು, ಎಸ್ಟೇಟು, ಉದ್ಯಾನವನಗಳಲ್ಲಿ ವಾಸ. ಇಡೀ ಕಾಡು ತುಂಬುವ ಹಾಗೆ, ಒಂದರಮೇಲೆ ಒಂದರಂತೆ *ಕುಟ್‌ರ್.ರ್...ಕುಟ್ರೂ.ಕುಟ್ರೂ..* ಕೂಗು. ಬೀಜ ಪ್ರಸರಣದಲ್ಲಿ ಮೇರು ಪಾತ್ರ.

151. Brown-headed Barbet *(Megalaima zeylanica)* Large Green Barbet R Myna+ Arboreal bird with leaf-green body; brown head, neck, breast and upper back, streaked with white; heavy yellow bill; conspicuous orange bare patch around the eyes. Sparser than 150. **Voice**: similar to 150, *kutrr.rr.. ootroo.ootroo.. hu.hu.hu..* calls, slower than 150, and longer. **Nesting:** March-June. **Eggs:** 3 to 4, dull white.

ದೊಡ್ಡ ಕುಟ್ರ ***(ಬಲ್ಯ ಕುಟ್ರುಪಕ್ಷಿ)*** 27 ಸೆಂಮೀ. ಇಲ್ಲಿಯ ಕಾಡುಗಳಲ್ಲಿ ವಿರಳ. ಹಸಿರು ದೇಹ; ಕಂದು ತಲೆ, ಕತ್ತು, ಬೆನ್ನು, ಎದೆಯಲ್ಲಿ, ಬಿಳಿಗೀರುಗಳು. ಹಳದಿ ಕೊಕ್ಕು; ಕಣ್ಣಿನ ಸುತ್ತ ನಗ್ನ ಕಿತ್ತಳೆ ಉಂಗುರ. ಗುಂಪಿನಲ್ಲಿ ಒಂದಾದ ಮೇಲೊಂದರಂತೆ *ಕುಟ್‌ರ್.ರ್..ಉಟ್ರೂ.ಉಟ್ರೂ.ಹುಹುಹು..* ಕೂಗು.

152. Crimson-throated Barbet *(Megalaima rubricapillus)*: R Bulbul- Leaf-green body; crimson coloured forehead, crown, chin, throat and upper breast; pale blue cheek and breast. **Voice**: *tnk-tnk-tnk…* a sound that resembles that made by a Coppersmith, from the tip of a tree, about 90-120 times a minute, looking hither-thither, which makes it very difficult to locate, even though the bird is on the tree just in front of you! **Nesting**: February to late May. **Eggs:** usually 3, pale white.

ಕೆಂಪುಕತ್ತಿನ ಕಂಚುಕುಟಿಗ ***(ಪೂಕುಡ್‌ಕ್)*** 17 ಸೆಂಮೀ. ಎಲೆಹಸಿರು ಹಕ್ಕಿಗೆ ತಿಳಿನೀಲಿ ಕೆನ್ನೆ, ಎದೆ; ಮುಖವನ್ನು ಕುಂಕುಮದಲ್ಲಿ ಅದ್ದಿ ತೆಗೆದಂತೆ, ಎದ್ದುಕಾಣುವ ಕೆಂಪು ನೆತ್ತಿ, ಹಣೆ, ಗಲ್ಲ. ನಿಮಿಷಕ್ಕೆ ೧೦೦ರಿಂದ ೧೨೦ ಬಾರಿ *ಟ್‌ಂಕ್..ಟ್‌ಂಕ್...* ಕೂಗು. ಗುಂಪಿನಲ್ಲಿ ಸದಾಹಸಿರು, ಉದುರೆಲೆ, ಕುರುಚಲು ಕಾಡು, ಎಸ್ಟೇಟು, ಜನವಸತಿ ಮುಂತಾದೆಡೆ ವಾಸ. ಎತ್ತರದ ಮರದ ತುದಿಯಲ್ಲಿ ಕುಳಿತು, ಅತ್ತಿತ್ತ ನೋಡುತ್ತಾ ಕೂಗುತ್ತಿರುವಾಗ ಕಾಣುವುದೇ ದುಸ್ಸಾಧ್ಯ!

153. Coppersmith Barbet *(Megalaima haemacephala)* Crimson-breasted Barbet R Sparrow+ Leaf-green body; crimson breast and forehead; black cheeks; yellow throat and eye ring; green streaked yellow underparts. Seen singly or in loose parties; sparser than 152. **Voice**: Similar to 152; *tnk.tnk..* calls 60-80 times a minute. **Nesting and Eggs:** Similar to 152.

ಕಂಚುಕುಟಿಗ ***(ಚೆಂಬುಕುಟ್ಟಿ)*** 17 ಸೆಂಮೀ. ನಮ್ಮ ಕಾಡುಗಳಲ್ಲಿ ವಿರಳ; ಎಲೆಹಸಿರು ಮೈ; ಕೆಂಪು ಹಣೆ, ಎದೆ; ಕಪ್ಪು ಕೆನ್ನೆ; ಹಳದಿ ಗಲ್ಲ ಮತ್ತು ಕಣ್ಣಿನುಂಗುರ. ಹಳದಿ ಕೆಳಮೈ ಮೇಲೆ ಹಸಿರು ಗೀರುಗಳು; ೧೫೨ಕ್ಕಿಂತ ನಿಧಾನಗತಿಯ *ಟ್‌ಂಕ್..ಟ್‌ಂಕ್..* ಕೂಗು. ಉಳಿದೆಲ್ಲ ೧೫೨ರಂತೆ.

Woodpeckers *(Picidae)*

ಮರಕುಟಿಗಗಳು *(ಮರಕೊಟ್ಟ)*

Woodpeckers have a large head compared to their body and a strong, long chisel-like beak. The neck though slender is very strong. The tongue is extremely long, cylindrical, protrusive and barb-tipped, which helps to catch insects and to skewer larvae from pupal galleries in the tree bark. Legs are short, feet zygodactyl and very strong. Wings are round and powerful. Tail, round or wedge shaped, retrices rigid and pointed, acting as a third leg to support while the bird is climbing and chiselling the bark. The large head is especially adapted to the enormous force with which it has to tap on the stem; the well-developed facial muscles absorb the impact and act as shock absorbers, thus protecting the brain. Sexes are dimorphic. Flight is strong, undulating and bounding and for small distances between trees. Highly distinctive shuffling, sliding motion on the tree trunks and branches; jerky climb on the tree stems, directly or in spirals, also sliding down in the 'reverse gear', tapping on the bark and chiseling away rotten wood for insects and larvae. Advertise their presence by hammering on dead, hollow branches or trunks, an action called 'drumming'. Food made up of chiefly insects, also fruits and nectar. Nest consists of unlined holes in the tree trunks and branches. Both sexes share the domestic duties.

ದೇಹಕ್ಕೆ ದೊಡ್ಡದೆನಿಸುವ ತಲೆಗೆ, ಉಳಿಯಂತೆ ದಪ್ಪ, ಉದ್ದ ಹಾಗೂ ಗಟ್ಟಿಮುಟ್ಟಾದ ಕೊಕ್ಕು ಮರವನ್ನು ಕುಕ್ಕಿ, ತೊಗಟೆಯನ್ನು ಸೀಳಲು ತಕ್ಕುದಾಗಿದೆ. ಒಳಗಿರುವ ಕೀಟ, ಮರಿಹುಳಗಳನ್ನು ಹೆಕ್ಕಿ ತಿನ್ನಲು ಅನುಕೂಲವಾದ, ಮುಳ್ಳುತುದಿಯ, ಉದ್ದವಾದ ನಾಲಿಗೆ; ಸಣ್ಣದಾದರೂ, ಶಕ್ತಿಯುತವಾದ ಕತ್ತು; ಚಿಕ್ಕದಾದರೂ ಬಲಿಷ್ಟವಾದ ಕಾಲು ಮತ್ತು ಕಾಲ್ಬೆರಳುಗಳು; ಎರಡು ಬೆರಳು ಮುಂದೆ, ಎರಡು ಹಿಂದೆ; ಎಲ್ಲಕ್ಕಿಂತ ಹೆಚ್ಚಾಗಿ, ರಭಸವಾಗಿ ಕುಕ್ಕುವಾಗ, ಆಧಾರಕ್ಕೆ ಮೂರನೆ ಕಾಲಿನಂತಿರುವ ಬೆಣೆಯಂತಹ ಬಾಲ, ಮರವನ್ನಾತು ಕುಳಿತು ಕೊಕ್ಕಿನಿಂದ ಕುಕ್ಕಲು ಸಹಕಾರಿ; ಆಘಾತವನ್ನು ತಡೆದುಕೊಳ್ಳಬಲ್ಲ ಮುಖದ ಸ್ನಾಯುಗಳು ಮೆದುಳಿಗೆ ರಕ್ಷಣೆ ನೀಡುತ್ತವೆ. ಗಂಡು-ಹೆಣ್ಣು ನೋಡಲು ವಿಭಿನ್ನ. ಮರದ ಮೇಲೆ ಕುಪ್ಪಳಿಸುತ್ತ, ಸುರುಳಿಯಾಗಿ ಹತ್ತುತ್ತಾ, ಇಳಿಯುತ್ತಾ, ಮರವನ್ನು ಆಗಾಗ ಕುಟ್ಟಿ, ಶಬ್ದದಿಂದ ಟೊಳ್ಳು ಕಾಂಡವನ್ನೂ, ಅದರೊಳಗಿರುವ ಜೀವಿಗಳ ಇರವನ್ನೂ ಪತ್ತೆಹಚ್ಚಬಲ್ಲವು. ನೇರವಾದ, ವೇಗದ, ಅಲೆಯಂತಹ ಹಾರಾಟ. ಕೀಟ, ಮರಿಹುಳಗಳಲ್ಲದೆ, ಹಣ್ಣುಗಳು, ಹೂ ಮಕರಂದ ಇವೆಲ್ಲ ಆಹಾರದ ಪಟ್ಟಿಯಲ್ಲಿವೆ. ಸಂತಾನ ಋತುವಿನಲ್ಲಿ ಮರಕುಟ್ಟುವುದು ಹೆಚ್ಚು. ಮರದ ಪೊಟರೆಗಳೊಳಗೆ ಹೆಚ್ಚೇನೂ ಆಡಂಬರವಿಲ್ಲದ ಗೂಡು.

154. Greater Golden-backed Woodpecker *(Chrysocolaptes lucidus)* Large Golden-backed Woodpecker R Pigeon- The male has crimson crown and crest; golden yellow upperparts; white and black throat, sides of the face; spotted black on the foreneck and

speckled on the underbody; crimson rump; black tail and flight feathers. Female has white-spotted black crown and crest. Pairs or small group seen in wooded estates; arboreal, move jerkily up along the tree. **Voice**: other than drumming, it has loud grating scream; calls mostly on the wing. **Nesting**: March-August. **Eggs**: 3, glossy white.

ದೊಡ್ಡ ಹೊಂಬೆನ್ನಿನ ಮರಕುಟಿಗ ***(ಬಲ್ಯ ಮರಕುಟಿಕು)*** 33 ಸೆಂಮೀ. ಹೊಂಬಣ್ಣದ ಮೇಲ್ಮೈಗೆ ಕೆಂಪು ನೆತ್ತಿ, ಜುಟ್ಟು; ಬಿಳಿ–ಕಪ್ಪು ಗಂಟಲು, ಮುಖ; ಬಿಳಿ ಕೆಳಮೈ ಮೇಲೆ ಕಪ್ಪು ಚುಕ್ಕೆ–ಮಚ್ಚೆಗಳು; ಕೆಂಪು ಪೃಷ್ಠ; ಕಪ್ಪು ಬಾಲ ಮತ್ತು ಹಾರುರೆಕ್ಕೆಗಳು. ಎಸ್ಟೇಟುಗಳಲ್ಲಿ, ಮರಗಳ ಮೇಲೆ ಓಡಾಟ. ಮರಕುಟ್ಟುವ ಶಬ್ದವಲ್ಲದೆ, ಹಾರುವಾಗ, ಗಟ್ಟಿಯಾದ ಕಿರ್ರೆನ್ನುವ ಕೂಗು.

155. Lesser Golden-backed Woodpecker *(Dinopium benghalense)* R Myna+/- Male, bright golden yellow and black above; crimson crown and crest; black throat, sides of head, with fine white streaks; black nape and tail; white underparts, streaked black. Female has black crown with white spots and crimson crest. Pairs or small flocks, seen with mixed hunting parties; also descend to ground. **Food**: also caterpillars and centipedes. **Voice**: drumming faster than 154; loud high-pitched cackle like laughter, uttered mostly on the wing. Flight, Nesting and Eggs, similar to 154.

ಹೊಂಬೆನ್ನಿನ ಮರಕುಟಿಗ ***(ಚೆರಿಯ ಮರಕುಟಿಕು)*** 29 ಸೆಂಮೀ. ಗಂಡಿಗೆ ಹೊನ್ನು–ಹಳದಿ ಮತ್ತು ಕಪ್ಪು ಮೇಲ್ಮೈ; ಕೆಂಪು ನೆತ್ತಿ, ಜುಟ್ಟು; ಬಿಳಿ ಮಚ್ಚೆಗಳಿರುವ ಕಪ್ಪು ಗಂಟಲು, ಕಪೋಲ; ಬಿಳಿ ಕೆಳಮೈ ಮೇಲೆ ಕಪ್ಪು ಗೀರುಗಳು; ಕಪ್ಪು ಹಿಂಗತ್ತು, ಬಾಲ ಮತ್ತು ರೆಕ್ಕೆ. ಹೆಣ್ಣಿಗೆ ಕಪ್ಪು ನೆತ್ತಿ ಮತ್ತು ಬಿಳಿ ಮಚ್ಚೆಗಳಿರುವ ಕೆಂಪು ಜುಟ್ಟು. ಸದಾಹಸಿರು, ಉದುರೆಲೆ, ಕುರುಚಲು ಕಾಡು, ಎಸ್ಟೇಟುಗಳ ಮರಗಳ ಮೇಲೆ ವಾಸ. ಮರದ ಮೇಲಲ್ಲದೆ, ನೆಲಕ್ಕಿಳಿದು ಹುಳಗಳ ಬೇಟೆ. ೧೫೪ಕ್ಕಿಂತ ವೇಗವಾದ ಮರಕುಟ್ಟುವಿಕೆ. ಹಾರುವಾಗ ಕರ್ಕಶ ನಗುವಂತಹ ಕೂಗು.

156. Common Golden-backed Woodpecker *(Dinopium javanense)* Indian Golden-backed Threetoed Woodpecker R Myna+/- Confusingly similar to 155, but has a black nape and a single black malar stripe; crimson rump and orange tinged golden back. Habits similar to 154. **Voice:** distinct tinny scream. **Nest:** January-May. **Eggs:** 2-4, white.

ಮೂರುಬೆರಳಿನ ಮರಕುಟಿಗ ***(ಮರಕುಟಿಕು)*** 28 ಸೆಂಮೀ. ನೋಡಲು ಹಾಗೂ ಸ್ವಭಾವವೆಲ್ಲ ೧೫೫ರಂತಿದ್ದರೂ, ಸಣ್ಣಗಾತ್ರ, ಕಪ್ಪು ಹಿಂಗತ್ತು ಮತ್ತು ಕೆನ್ನೆಯ ಮೇಲೆ ಒಂದೇ ಪಟ್ಟಿ; ಕೆಂಪು ಪೃಷ್ಠ; ಕಿತ್ತಳೆ ಮಿಶ್ರಿತ ಹೊಂಬಣ್ಣದ ಬೆನ್ನಿನಿಂದ ಗುರುತು ಹಿಡಿಯಬಹುದು. ಉಳಿದದ್ದು ೧೫೪ರಂತೆ.

157. Black-shouldered Woodpecker *(Chrysocolaptes festivus)* Black Backed Woodpecker R Myna+ Male similar to 156, with a white V on the black back; 5 narrow longitudinal streaks on the foreneck; black shoulders; no crimson rump. Female has yellow crest. Rest similar to 154. **Nesting:** November-March. **Eggs:** 1, white.

ಕಪ್ಪುಬೆನ್ನಿನ ಮರಕುಟಿಗ ***(ಕರ್ತಬೆನ್ನ್‌ರ ಮರಕೊಟ್ಟ)*** 29 ಸೆಂಮೀ. ಗಂಡು ೧೫೬ರಂತೆ, ಆದರೆ, ಕಪ್ಪು ಬೆನ್ನಿನಲ್ಲಿ V ಆಕಾರದ ಬಿಳಿ ಪಟ್ಟಿ. ಗಂಟಲ ಮೇಲೆ ೫ ಉದ್ದನಾದ ಕರಿ ಗೀರುಗಳು; ಕೆಂಪು ಪೃಷ್ಠವಿಲ್ಲ. ಹೆಣ್ಣಿಗೆ ಹಳದಿ ಜುಟ್ಟು. ಉದುರೆಲೆ, ಬಿದಿರುಕಾಡು, ಎಸ್ಟೇಟುಗಳ ಮರಗಳ ಮೇಲೆ ವಾಸ. ಸ್ವಭಾವ, ಉಳಿದೆಲ್ಲ ೧೫೪ರಂತೆ.

158. Great Black Woodpecker *(Dryocopus javensis)* Indian Great Black Woodpecker R Crow- Male has a black head, upperparts and breast; white underparts below breast; white rump; crimson crown, forehead, crest and cheeks. Female, crimson confined to nape. One or more pairs, seen on tall trees in dense forests. Habits typical to woodpeckers. **Food:** also beetle larvae. **Voice**: loud, metallic *chiank..* note and loud drumming. **Nesting**: December-March. **Eggs:** 2, white.

ಹೆಮ್ಮರಕುಟಿಗ ***(ಕರ್ತ ಮರಕೊಟ್ಟ)*** 48 ಸೆಂಮೀ. ಗಂಡಿನ ಅಚ್ಚಗಪ್ಪು ದೇಹಕ್ಕೆ, ಕೆಂಪು ನೆತ್ತಿ, ಹಣೆ, ಜುಟ್ಟು ಮತ್ತು ಕೆನ್ನೆ; ಬಿಳಿ ಕೆಳಹೊಟ್ಟೆ ಮತ್ತು ಪೃಷ್ಠ. ಹೆಣ್ಣಿಗೆ ಹಿಂಗತ್ತು ಮಾತ್ರ ಕೆಂಪು. ಸದಾಹಸಿರು, ತೇವ–ಉದುರೆಲೆ ಮುಂತಾದ ಕಾಡುಗಳಲ್ಲಿ, ಎಸ್ಟೇಟುಗಳ ದೊಡ್ಡ ಮರಗಳ ಮೇಲೆ ಕಾಣಬಹುದು. ಗಟ್ಟಿಯಾದ *ಚ್ಯಂಕ್..* ಕೂಗು.

159. Rufous Woodpecker *(Celeus brachyurus)* R Myna+ Chestnut-brown woodpecker, crisscrossed with black on the wings and tail; pale edges of feathers give a scaly appearance; males have crimson patch under the eyes. **Food**: adult *Crematogaster* tree ants, their eggs and pupae and wild figs. **Voice**: High-pitched, nasal *knk knk knk knk..* repeated in quick succession. **Nesting**: February-April. There seems to be a strange symbiotic relationship between the bird and *Crematogaster* tree ants. The ferocious insects do not allow any creature near their arboreal carton-like nest. The woodpecker not only makes its nest in a hole excavated in the ant's colony, but also devours its inmates; while the bird's brood is raised, the whole family does not suffer any wrath from the ants. **Eggs**: 2-3, pure white.

ಕಂದು ಮರಕುಟಿಗ ***(ಉರ್ಪ್ ಮರಕೊಟ್ಟ)*** 25 ಸೆಂಮೀ. ಕೆಂಗಂದು ಮೈ; ರೆಕ್ಕೆ–ಬಾಲದಲ್ಲಿ ಕಪ್ಪು ಗೀರುಗಳು; ಗಂಡಿಗೆ ಕಣ್ಣಿನ ಕೆಳಗೆ ಕೆಂಪು ಬಣ್ಣದ ಅರ್ಧಚಂದ್ರ ಮಚ್ಚೆ. *ಕ್ರಿಮೆಟೋಗಾಸ್ಟರ್* ಪ್ರಭೇದದ ಕೆಂಚಿರುವೆ ಗೂಡಿನಲ್ಲಿ ಮೊಟ್ಟೆಯಿಟ್ಟು, ಮರಿಗಳನ್ನು ಸಾಕುತ್ತವೆ; ಅವು ಇರುವೆಗಳ ಮೊಟ್ಟೆ ಮತ್ತು ಮರಿಹುಳಗಳನ್ನೇ ತಿಂದರೂ, ಈ ಕ್ರೂರ ಇರುವೆಗಳು ಮೌನವಾಗಿ ಸಹಿಸಿಕೊಂಡಿರುವುದು ಆಶ್ಚರ್ಯದ ಸಂಗತಿ. *ಕ್ನ್ ಕ್ನ್ ಕ್ನ್..* ಉಚ್ಚಸ್ವರದ, ವೇಗಗತಿಯ ಕೂಗು.

160. Little Scaly-bellied Green Woodpecker *(Picus xanthopygaeus)* R Myna+ Males, green above; crimson crown, crest; orange and black on nape; white eyebrow and malar stripe; yellow rump; white underbody with pale green breast, with black scaly streaks; grey throat also streaked. Females have black crown and crest. Seen solitary or in pairs. Habits, food, similar to other species. **Voice:** mostly silent; occasional feeble *pick*...; drum during breeding. Rest similar to 154.

ಹಸಿರು ಮರಕುಟಿಗ ***(ಪಚ್ಚೆ ಮರಕೊಟ್ಟ)*** ೨೯ ಸೆಂಮೀ. ಹಸಿರು ಮೇಲ್ಮೈ; ಗಂಡಿಗೆ ಕೆಂಪು ನೆತ್ತಿ, ಜುಟ್ಟು; ಹಳದಿ ಪೃಷ್ಠ; ಕಿತ್ತಳೆ–ಕಪ್ಪು ಹಿಂಗತ್ತು; ಬಿಳಿ ಹುಬ್ಬು ಮತ್ತು ಕೆನ್ನೆಯ ಪಟ್ಟಿ; ಬಿಳಿ ಕೆಳಮೈ; ತಿಳಿಹಸಿರು ಎದೆ ಮತ್ತು ಬೂದು ಗಂಟಲ ಮೇಲೆ ಹುರುಪೆಯಂತಹ ಗೀರುಗಳು. ಹೆಣ್ಣಿಗೆ ಕಪ್ಪು ನೆತ್ತಿ, ಜುಟ್ಟು. ಉಳಿದ ಮರಕುಟ್ಟಿಗಗಳ ಸ್ವಭಾವ. ಮರ ಕುಟ್ಟುವುದು ಬಿಟ್ಟರೆ ಬಹುತೇಕ ಮೌನ.

161. Small Yellow-naped Woodpecker *(Picus chlorolophus)* R Myna+ Similar to 160; males have yellowish green upperparts with crimson forehead crest; golden yellow nuchal crest and crimson moustachial streaks; no yellow rump. Females have black crown and crest. **Voice:** single, long, nasal *cheenk..* repeated every 6-9 seconds by both sexes, monotonously; drum during breeding. **Nesting**: January-July. **Eggs**: 2, white, blunt oval.

ಹಳದಿಹಿಂಗತ್ತಿನ ಮರಕುಟಿಗ 27 ಸೆಂಮೀ. ಗಂಡಿನ ಹಸಿರುಗಂದು ದೇಹಕ್ಕೆ, ಅಚ್ಚ ಹಳದಿ ಹಿಂಗತ್ತು; ಕೆಂಪು ನೆತ್ತಿ, ಜುಟ್ಟು ಮತ್ತು ಕೆನ್ನೆಮಚ್ಚೆ; ಹಳದಿ ಪೃಷ್ಠವಿಲ್ಲ. ಹೆಣ್ಣಿಗೆ ಕಪ್ಪು ನೆತ್ತಿ, ಜುಟ್ಟು. ಉಳಿದ ಮರಕುಟ್ಟಿಗಗಳ ಸ್ವಭಾವ. ಏಕತಾನದ *ಚೇಂಕ್..* ಕೂಗು.

162. Yellow-fronted Pied Woodpecker *(Dendrocopos mahrattensis)* Marahta Woodpecker R Bulbul +/- Male, brownish black above with irregular spots of black and white; golden crown and forehead; small scarlet crest; pale fulvous underparts, streaked brown; scarlet abdominal patch and vent. Female lacks the scarlet crest. Solitary or in pairs, along with mixed hunting party in open forests, human vicinity and scrubs. Habits similar to other Woodpeckers. **Voice**: short, rather unpleasant *clik..clik..clik.rrrr...* **Nesting**: January-May; nest, a hole in a decaying branch, with an entry from underside. **Eggs**: 3, glossy white.

ಹಳದಿನೆತ್ತಿಯ ಮರಕುಟಿಗ *(ಮಂಜ ಮರಕೊಟ್ಟ)* 18 ಸೆಂಮೀ. ಗಂಡಿನ ಕಪ್ಪುಗಂದು ಮೇಲ್ಮೈಯಲ್ಲಿ, ಕಪ್ಪು-ಬಿಳಿ ಮಚ್ಚೆಗಳು; ಹೊಂಬಣ್ಣದ ಹಣೆ, ನೆತ್ತಿ; ಸಣ್ಣ ಕೆಂಪು ಜುಟ್ಟು; ತಿಳಿ ಕೆಳಮೈ ಮೇಲೆ ಕಂದು ಗೀರುಗಳು; ಕಿಬ್ಬೊಟ್ಟೆ ಮತ್ತು ಪೃಷ್ಠದ ಮೇಲೆ ಕೆಂಪು ಮಚ್ಚೆ. ಹೆಣ್ಣಿಗೆ ಕೆಂಪು ಜುಟ್ಟಿಲ್ಲ. ಜೋಡಿಯಾಗಿ ತೋಪು-ತೋಟಗಳಲ್ಲಿ, ವಿರಳಗಾಡುಗಳಲ್ಲಿ ಕಾಣಬಹುದು. ಕಿವಿಗೆ ಅಹಿತವಾದ *ಕ್ಲಿಕ್.ಕ್ಲಿಕ್.ರ್ರ್.* ಕೂಗು. ಒಣಮರದ ಕೊಂಬೆಯ ತಳಭಾಗದಲ್ಲಿ ಗೂಡು.

163. Brown-capped Pigmy Woodpecker *(Dendrocopos nanus)* Pigmy Woodpecker R Sparrow- Males, barred dark brown and white upperparts; pale crown with narrow scarlet streaks on either sides of crown; prominent white band from above the eyes extending unto neck; pale dirty white below, with brown vertical streaks. Females lack the scarlet streak. Solitary or in pairs, actively foraging in trees of open biotope. Habits, flight similar to other species. **Voice**: faint, shrill, squeak like *chk..rrrr...*; drums during breeding. **Nesting**: March-May. **Eggs**: similar to 162.

ಚಿಟ್ಟು ಮರಕುಟಿಗ *(ಕ್‌ರ್ ಮರಕೊಟ್ಟ)* 14 ಸೆಂಮೀ. ಗರ್ಜರ ಚಿಕ್ಕ ರೂಪ. ಗಂಡಿಗೆ ಕಡುಗಂದು-ಬಿಳಿ ಪಟ್ಟೆಗಳುಳ್ಳ ಮೇಲ್ಮೈ; ಎದ್ದುಕಾಣುವ ಬಿಳಿಹುಬ್ಬು, ನೆತ್ತಿಯ ಎರಡೂ ಬದಿಗಳಲ್ಲಿ ಚಿಕ್ಕ ಕೆಂಪು ಮಚ್ಚೆಗಳು; ಮಾಸಲು ಬಿಳಿ ಕೆಳಮೈ ಮೇಲೆ ಕಂದು ಉದ್ದ ಗೀರುಗಳು. ಹೆಣ್ಣಿಗೆ ಕೆಂಪು ಮಚ್ಚೆಗಳಿಲ್ಲ. ಇತರ ಮರಕುಟ್ಟಿಗಗಳ ಸ್ವಭಾವ. ಸದಾಹಸಿರು, ಉದುರೆಲೆ ಕಾಡು, ಎಸ್ಟೇಟುಗಳಲ್ಲಿ ವಾಸ. ಮೆದು-ಕೀಚಲು ಧ್ವನಿಯಲ್ಲಿ *ಚ್‌ಕ್.ರ್ರ್..* ಕೂಗು.

164. Heart-spotted Woodpecker *(Hemicircus canente)* R Sparrow- Male, black forehead, crown and crest; black back; broad pale buff wing patch with heart shaped spots; black flight feathers; white chin, throat, nape and breast; black buff and olive below; stumpy rounded tail. Female has large buff white on forehead, giving the appearance of an eye band. Pairs or small parties, move up and around the tree stems in teak and bamboo forests. **Voice**: vocal, especially in flight; harsh *chrk..chrk...* on the wing; drums during breeding. **Nesting**: November-April. **Eggs**: 3, white.

ಚುಕ್ಕೆ ಮರಕುಟಿಗ *(ಬೊಟ್ಟ್ ಮರಕೊಟ್ಟ)* 16 ಸೆಂಮೀ. ಕಪ್ಪು ಹಣೆ, ತಲೆ, ಜುಟ್ಟು, ಬೆನ್ನು; ಬಿಳಿ ಗಂಟಲು, ಹಿಂಗತ್ತು ಮತ್ತು ಕೆಳಮೈ; ಕಪ್ಪು ರೆಕ್ಕೆಗಳ ಬಿಳಿ ಪಟ್ಟಿಯ ಮೇಲೆ ಹೃದಯಾಕಾರದ ಕಪ್ಪು ಮಚ್ಚೆಗಳು. ಹೆಣ್ಣಿಗೆ ಬಿಳಿ ಹಣೆ. ಜೋಡಿಯಾಗಿ, ತೇಗ, ಬಿದಿರು ಕಾಡುಗಳಲ್ಲಿ ಮರಗಳ ಮೇಲೆ ಅತ್ತಿಂದಿತ್ತ ಓಡಾಡುವುದನ್ನು ಕಾಣಬಹುದು. *ಚ್‌ರ್ಕ್.ಚ್‌ರ್ಕ್..* ಕೂಗು.

165. Speckled Piculet *(Picumnus innominatus)* R Sparrow- Olive green above; two white stripes on the sides of head, upper one being longer; dark olive band through eyes; creamy white below, with large black spots; male also has orange and black on forecrown. Usually seen in pairs, moving on thin branches, clinging even upside down. **Voice**: sharp, rapid *tsp…tsp…*; drums during breeding. Nesting and Eggs, similar to 163.

ಮಚ್ಚೆ ಮರಕುಟಿಗ *(ಕುಂ ಮರಕೊಟ್ಟ)* 10 ಸೆಂಮೀ. ತಿಳಿ ಹಸಿರುಗಂದು ದೇಹ; ಕಣ್ಣು ಪಟ್ಟಿ; ಬೋಳುತಲೆಯ ಇಬ್ಬದಿಗಳಲ್ಲಿ ಎರಡು ಬಿಳಿ ಪಟ್ಟಿಗಳು; ಮಾಸಲು ಬಿಳಿ ಕೆಳಮೈ ಮೇಲೆ ದೊಡ್ಡ ಕಪ್ಪು ಚುಕ್ಕೆಗಳು. ಗಂಡಿಗೆ ಹಣೆಯಲ್ಲಿ ತುಸು ಕಪ್ಪು-ಕಿತ್ತಳೆ. ಕಾಡುಮರಗಳ ಒಣರೆಂಬೆಗಳ ಮೇಲೆ-ಕೆಳಗೆ, ಸರ್ಕಸ್ ಮಾಡುತ್ತ ಓಡಾಡುತ್ತವೆ.

166. Eurasian Wryneck *(Jynx torquilla)* Wryneck. M Bulbul Silver-greyish brown upperparts, streaked and vermiculated with black and fulvous; pale white underparts with dark irregular cross bands; rather long rounded tail, with speckled crossbars. Singly, seen in scrub and thorn jungles, often missed as it has both the habits of woodpecker and sparrow: taps trees and perches crosswise, hops on ground to pick ants and other insects; comical way of stretching neck and bill up and twisting its head slowly from side to side, especially when threatened. **Voice**: clear, ringing, quick *chewn.chewn.chewn*. call diagnostic. Winter visitor from across Kashmir.

ವಕ್ರಕಂಠ 19 ಸೆಂಮೀ. ತಿಳಿ ಬೂದುಗಂದು ದೇಹದ ಮೇಲೆ, ಕಪ್ಪು-ಕಂದು ಗೀರುಗಳು; ಬಿಳಿ ಕೆಳಮೈ ಮೇಲೆ ಕಂದು ಅಡ್ಡಗೀರುಗಳು; ಉದ್ದವಾದ ಬಾಲದಲ್ಲಿ, ಪಟ್ಟಿ-ಗೀರುಗಳು. ಒಂಟಿಯಾಗಿ ಕುರುಚಲು, ಮುಳ್ಳುಗಾಡುಗಳಲ್ಲಿ ಕಾಣಬಹುದು. ಮರಕುಟ್ಟಿಗ-ಗುಬ್ಬಚ್ಚಿಗಳ ಸ್ವಭಾವ. ವಿಚಲಿತವಾದಾಗ, ನಿಧಾನವಾಗಿ, ಕತ್ತು ತಿರುಗಿಸಿ ನೋಡುವ ವಿಚಿತ್ರ ಸ್ವಭಾವ; ಚ್ಯು.. ಚ್ಯು.. ಕೂಗು. ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

Pittas *(Pittidae)*

ನವರಂಗಗಳು *(ಓಣೆಕುಂಯ್‌ಕ)*

Plump, solitary, largely terrestrial, brightly coloured birds with short neck, strong and slightly curved bill, strong and long legs; large feet; wings short and rounded; tail short and stumpy. Sexes alike. Perch, sing and roost on trees; hop on ground; flight strong. Food consists of insects, larvae and other invertebrates. Have a rich whistle and trilling calls. Nest on ground. Both sexes share the domestic duties.

ದುಂಡುದೇಹದ, ನೆಲದ ಮೇಲೆ ಒಂಟಿಯಾಗಿ ಓಡಾಡುವ, ಉಜ್ವಲ ಬಣ್ಣಗಳುಳ್ಳ, ಗಿಡ್ಡಕತ್ತಿನ ಹಕ್ಕಿಗಳು. ಗಟ್ಟಿಮುಟ್ಟಾದ, ತುಸು ಬಾಗಿದ ಕೊಕ್ಕು; ನೀಳ, ಬಲಿಷ್ಟ ಕಾಲುಗಳು, ಸಣ್ಣ, ಉರುಟಾದ ರೆಕ್ಕೆಗಳು; ಮೊಂಡುಬಾಲ. ಮರಗಳ ಮೇಲೆ ವಿಶ್ರಾಂತಿ; ನೆಲದ ಮೇಲೆ ಅಕಶೇರುಕ, ಕ್ರಿಮಿ-ಕೀಟ, ಮರಿಹುಳಗಳ ಬೇಟೆ. ಸ್ನಿಗ್ಧ, ಕಿವಿಗೆ ಇಂಪಾದ ಸಿಳ್ಳೆ. ನೆಲದ ಮೇಲೆ ಗೂಡು.

167. Indian Pitta *(Pitta brachyura)* LM Quail+/- Multicoloured, stout bird, with bright blue, green, black, white and fulvous above; black crest and band through eyes upto the nape; white chin, throat; greenish brown underparts with a distinct crimson vent; white spot in wing tips, seen in flight. Singly, seen hopping on the mulch, on forest floor and estates, digging into damp earth for insects and grubs, with slow and deliberate wagging of stumpy tail. **Voice**: loud, two-note musical whistle *whee..pew..* uttered during morning and evening, sometimes, 3-4 joining in; local migration controlled by SW monsoon. **Nesting**: March-April; large globular nest made of twigs, grass, roots on ground under a bush or in the fork of a low tree. **Eggs**: 4-6, glossy white with purple spots and speckles.

ನವರಂಗ ***(ಮರ ಓಣಿಕುಂಯ್‌ಕ)*** 19 ಸೆಂಮೀ. ಉಜ್ವಲ ನೀಲಿ, ಹಸಿರು, ಬಿಳಿ, ಕಪ್ಪು ಮತ್ತು ಬೂದು ಮೇಲ್ಮೈ; ಕಣ್ಣಿಗೆ ಕಪ್ಪು ಪಟ್ಟಿ; ಕಪ್ಪು ನೆತ್ತಿ; ಬಿಳಿ ಗಲ್ಲ; ತಿಳಿ ಹಸಿರುಗಂದು ಕೆಳಮೈಗೆ, ಕೆಂಪು ಕಿಬ್ಬೊಟ್ಟೆ; ಹಾರುವಾಗ ರೆಕ್ಕೆಗಳ ತುದಿಯಲ್ಲಿ ಬಿಳಿ ಮಚ್ಚೆ ಸ್ಪಷ್ಟ. ಕಾಡು, ಎಸ್ಟೇಟುಗಳ ನೆಲದ ಮೇಲೆ, ಕುಪ್ಪಳಿಸಿಕೊಂಡು, ತರಗೆಲೆಗಳನ್ನು ಮೊಗಚುತ್ತಾ, ಬಾಲವನ್ನು ಮೇಲೆಕ್ಕೂ-ಕೆಳಕ್ಕೂ ಆಡಿಸುತ್ತಾ ಬೇಟೆ ಹುಡುಕುತ್ತವೆ. ಬೆಳಿಗ್ಗೆ-ಸಂಜೆ, ಎರಡು ಸ್ವರದ, ಮಾಧುರ್ಯಭರಿತ ವೀ..ಪ್ಯೂ. ಸಿಳ್ಳು; ಅದಕ್ಕೆ ವಿವಿಧ ದಿಕ್ಕುಗಳಿಂದ ಮತ್ತೆರಡು ಹಕ್ಕಿಗಳ ಮರುತ್ತರ. ನೆಲದ, ತಗ್ಗಿನ ಗಿಡಗಳ ಮೇಲೆ, ಕಡ್ಡಿ-ಹುಲ್ಲಿನ ಗೂಡು.

Larks *(Alaudidae)*

ನೆಲಗುಬ್ಬಿಗಳು *(ಜುಟ್ಟ್‌ಪಕ್ಷಿ)*

Small ground-dwelling birds of open country with light brown to sandy plumage clouration; bill either long and curved or short and stout; hind claw straight, long and sharp; wings broad, long and pointed; short tail. Sexes usually alike. Gregarious, but difficult to spot owing to their cryptic colouration and posture; usually found feeding in cultivations and stubbles. Flight strong, but rather hesitant and with undulating progression; run or walk on ground; many are migratory. Food consists of seeds of grass, weeds and insects, feeding on a crouched, ground-hugging posture, with legs inconspicuous. Good songsters, known for soaring flight song. Nest made up of a scrape on ground, without much lining.

ಒಣಹುಲ್ಲು ಬಣ್ಣದ, ನೋಡಲು ಹೆಣ್ಣು ಗುಬ್ಬಚ್ಚಿಯಂತೆ ಕಾಣುವ, ನೀಳ-ಚೂಪು ರೆಕ್ಕೆಯಿದ್ದು, ವೇಗದ ಹಾರಾಟವುಳ್ಳ, ನೆಲದ ಹಕ್ಕಿಗಳು. ಅಗಲವಾದ, ಉದ್ದವಾದ, ಚೂಪಾದ ರೆಕ್ಕೆಗಳು; ಪುಟ್ಟ ಬಾಲ. ಗುಂಪಾಗಿ, ತೆರವು ಪ್ರದೇಶಗಳಲ್ಲಿ, ಅತ್ತಿತ್ತ ಓಡಾಡಿಕೊಂಡು ನೆಲದ ಮೇಲಿನ ಕಾಳು, ಬೀಜ, ಧಾನ್ಯ ಮತ್ತು ಕೀಟಗಳನ್ನು ಅರಸುತ್ತವೆ. ಆದರೂ ಮರೆಮಾಚುವ ಮೈಬಣ್ಣದಿಂದ ಕಣ್ಣಿಗೆ ಕಾಣುವುದೇ ಕಷ್ಟ. ಆಹಾರ. ಸುಶ್ರಾವ್ಯ ಹಾಡುಗಾರರು. ಒಮ್ಮೆಲೇ ಮೇಲಕ್ಕೆ ಹಾರಿ, ಸಿಳ್ಳೆ ಹಾಕಿಕೊಂಡು ಸರ್ರನೆ ಕೆಳಕ್ಕಿಳಿಯುವ ಸ್ವಭಾವ. ನೆಲವನ್ನು ಕೆರೆದು, ಮಾಡಿದ ಸಣ್ಣ ಹಳ್ಳದಲ್ಲಿ ಗೂಡು.

168. Singing Bush-Lark *(Mirafra cantillans)* R Sparrow+/- Similar to female sparrow; yellowish brown above with dark streaks on head, nape; inconspicuous crest; light fulvous below streaked with brown triangular marks; rufous on wings, best seen in flight; white outer tail feathers. Pairs seen in fallow cultivation, dry bush-covered foothills; flight undulating. **Voice**: breeding male has a typical flight song consisting of an unassorted mixture of melodious notes; the bird raises upto 30m in air, hovers and floats in the breeze for long period with spirited calls, which imitates many local birds. **Nesting**: March-September. **Eggs**: 2-4, pale white.

ಭಾರದ್ವಾಜ ***(ಬಾರದ್ವಾಜ)*** 15 ಸೆಂಮೀ. ಹಳದಿಗಂದು ದೇಹಕ್ಕೆ, ಕಂದು ಗೀರುಗಳು; ತಲೆಯ ಮೇಲೆ ಪುಟ್ಟ ಜುಟ್ಟು; ತಿಳಿ ಕೆಳಮೈ ಮೇಲೆ ಕಂದು ಗೀರುಗಳು; ರೆಕ್ಕೆಯಲ್ಲಿ ಕೆಂಗಂದು ಮತ್ತು ಬಾಲದ ಅಂಚಿನಲ್ಲಿ ಬಿಳಿ. ಕುರುಚಲು ಕಾಡು, ಹುಲ್ಲುಗಾವಲು, ಹೊಲಗಳಿರುವೆಡೆ, ನೆಲದಮೇಲೆ, ಜೋಡಿಯಾಗಿ ಕಾಣಬಹುದು. ಕುಳಿತಲ್ಲಿಂದ ಆಗಾಗ ಆಕಾಶಕ್ಕೆ ಚಿಮ್ಮಿ, ತೇಲಿಕೊಂಡು ಕೆಳಗಿಳಿಯುತ್ತದೆ. ಸಂತಾನ ಋತುವಿನಲ್ಲಿ, ಗಂಡುಹಕ್ಕಿಯ ಹಲವು ಮಧುರ ಸ್ವರಗಳ ವಿಶೇಷ ಹಾರುಸಿಳ್ಳೆ; ಅಣಕು ಹಾಡುಗಾರ ಕೂಡ.

169. Red-winged Bush-Lark *(Mirafra erythroptera)* R Sparrow+/- Very similar to 168, with a large chestnut patch on the wings, best seen in flight; pale white chin, throat. Pairs or small parties moving quietly on the ground or perched singly on leafless bush; typically stiff outstretched wings, legs dangling, when alighting. **Voice**: spectacular flight song by breeding male; rises upto 10m in air, trilling a quick, mousy *si.si.si.si..*, followed by *swee..swee.swee.swee,* as it parachutes back to the perch. **Nesting**: April-October. **Eggs**: 2-4, pale greyish white, with brown speckles.

ಕೆಂಪುರೆಕ್ಕೆಯ ನೆಲಗುಬ್ಬಿ 14 ಸೆಂಮೀ. ೧೬೮ರಂತೆ, ಆದರೆ, ಮಾಸಲು ಗಲ್ಲ; ರೆಕ್ಕೆಯ ಮೇಲೆ ಕೆಂಗಂದು ಬಣ್ಣ, ಇನ್ನೂ ಎದ್ದು ಕಾಣುವುದು. ನೆಲದ ಮೇಲೆ, ಒಣರೆಂಬೆಗಳ ಮೇಲೆ ಕಾಣಬಹುದು. ಗಂಡಿನ ಹಾರುಸಿಳ್ಳೆ. ಪ್ಯಾರಾಚೂಟ್‌ನಂತೆ ಕೆಳಗಿಳಿಯುವಾಗ, *ಸ್ವೀ.ಸ್ವೀ..* ಕೂಗು.

170. Ashy-crowned Sparrow-Lark *(Eremopterix grisea)* Ashy-crowned Finch-Lark R Sparrow- Small, squat, thick-billed, crestless lark. Male, sandy brown above; ashy crown; white cheek and sides of breast; black eye streak, neck, underparts and tail, with white outer feathers. Female, overall dull sandy brown, lighter underparts. Pairs or small parties scattered over open scrub and bushy country, ploughed fields; creep about unobtrusively with legs flexed, as they search for seeds. **Voice**: accompanied with the male's courtship display; he shoots up a vertical 10m rise, nosedives a few metres down, again rises up, dives down till near the ground, he flattens out - all these with a pleasant trilling song. **Nesting**: undefined. **Eggs**: 2-3, female alone builds the nest.

ಕರಿಎದೆಯ ನೆಲಗುಬ್ಬಿ 13 ಸೆಂಮೀ. ಗಂಡಿನ ಬೂದುಗಪ್ಪು ದೇಹಕ್ಕೆ ಬೂದು ನೆತ್ತಿ; ಕಪ್ಪು ಹುಬ್ಬು, ಗಂಟಲು, ಎದೆ, ಕೆಳಮೈ; ರೆಕ್ಕೆಯ ಮೇಲೆ ಕಪ್ಪು ಗೀರುಗಳು; ಬಿಳಿಯಂಚಿನ ಕಪ್ಪು ಬಾಲ. ಹೆಣ್ಣಿಗೆ ಮಣ್ಣುಗಂದು ದೇಹ; ತಿಳಿ ಕೆಳಮೈ. ಸುತ್ತಲ ಪರಿಸರದಲ್ಲಿ ಮರೆಮಾಚುವ ಮೈಬಣ್ಣ. ಅಂಕುಡೊಂಕಾದ ಓಟ; ಆಕಾಶದಲ್ಲಿ ಮನಮೋಹಕ ದೊಂಬರಾಟದೊಂದಿಗೆ ಗಂಡಿನ ಹಾರುಸಿಳ್ಳೆ.

171. Rufous-tailed Finch-Lark *(Ammomanes phoenicurus)* R Sparrow+/- Dark brown above; rufous below, with brown streaks on throat, breast; rich rufous tail with a black band across tip. Small flocks, often with other larks, seen in open scrub and bush country, ploughed fields, making zigzag spurts on ground. **Voice**: spectacular aerial display with pleasant whistling and chirping songs. **Nesting**: February-May. **Eggs**: 3-4, creamy white with reddish brown spots.

ಕೆಂಗಂದುಬಾಲದ ನೆಲಗುಬ್ಬಿ 16 ಸೆಂಮೀ. ಕಡುಗಂದು ಮೇಲ್ಮೈ; ಕೆಂಗಂದು ಕೆಳಮೈ; ಅಚ್ಚಕೆಂಗಂದು ಬಾಲದ ತುದಿಯಲ್ಲಿ ಕಪ್ಪು ಪಟ್ಟಿ. ಸಣ್ಣ ಗುಂಪಿನಲ್ಲಿ, ಕುರುಚಲು, ಪೊದೆಗಾಡುಗಳಲ್ಲಿ, ಉಳುಮೆಯಾಗಿರುವ ಹೊಲಗಳಲ್ಲಿ, ನೆಲದ ಮೇಲೆ ಅಡ್ಡಾಡುತ್ತಿರುತ್ತವೆ. ಗಂಡಿನ ಆಕರ್ಷಕ ಹಾರುಸಿಳ್ಳೆ.

172. Malabar Crested Lark *(Galerida malabarica)* R Sparrow- Overall rufous brown with pointed, upstanding crest; brown streaks on chest; dark wing with rufous outer feathers. Flocks affect scrubby hill and cultivated fields; seen sitting on bushtops, stumps and wires. **Voice**: the aerial display and flight song is made up of mixed melodious notes and mimicked calls of other birds. **Nesting**: March-September. **Eggs**: 2-3, greyish white stippled with brown.

ಮಲೆ ನೆಲಗುಬ್ಬಿ *(ಜುಟ್ಟುಪಕ್ಷಿ)* 13 ಸೆಂಮೀ. ತಿಳಿ ಕೆಂಗಂದು ದೇಹದ ಮೇಲೆ, ಕಂದು ಗೀರುಗಳು; ತಲೆಯ ಮೇಲೆ ನಿಮಿರಿ ನಿಂತ ಜುಟ್ಟು. ಗುಂಪಾಗಿ ಕುರುಚಲು ಗುಡ್ಡ, ಹೊಲಗಳೆಡೆ, ಪೊದೆ, ಒಣರೆಂಬೆ, ತಂತಿಯ ಮೇಲೆ ಕುಳಿತಿರುತ್ತವೆ. ಇತರ ಹಕ್ಕಿಗಳ ಅಣಕು ಕೂಗುಗಳೊಂದಿಗೆ, ಸುಮಧುರ ಸ್ವರಗಳ ಗಂಡಿನ ಹಾರುಸಿಳ್ಳೆ.

Swallows *(Hirundinidae)*

ಕವಲುತೋಕೆಗಳು *(ಕವಟೆಪಕ್ಷಿ)*

Streamlined, elegant looking, gregarious, aerial birds similar to swifts, with dark plumage; slender body, short neck, short flattened bill with very wide gape; very short legs; tarsi feathered in some species; small, weak feet, but strong claws; wings long and pointed; tail pointed and forked. Sexes almost alike. Completely at home in the air, their flight is fast, strong and graceful. Unlike swifts, they perch freely on wires and suitable locations, but have an awkward, slow, shuffling gait on ground. Food consists mainly of insects taken on the wing. Colonial nesting, with conglomerated mud pellets attached to buildings or rocks, also burrows in earth banks. Young nidicolous, cared by both sexes.

ಆಕಾಶಗುಬ್ಬಿಗಳಂತೆ, ಹಾರುವಾಗ ಎದುರುಗಾಳಿಗೆ ತಡೆಯೊಡ್ಡದ ದೇಹವುಳ್ಳ, ಗುಂಪಾಗಿ ಆಕಾಶದಲ್ಲಿ ಹಾರಾಡಿಕೊಂಡು, ಹಗಲು ಹೊತ್ತು ಕೀಟಗಳನ್ನು ಭಕ್ಷಿಸುವ ಹಕ್ಕಿಗಳು. ಸಪೂರ ದೇಹ; ಹಾರುವ ಕೀಟಗಳನ್ನು ಹಾರುತ್ತಲೇ ಕಬಳಿಸಲು ಅಗಲವಾದ ಬಾಯಿ; ಉದ್ದ-ಚೂಪಾದ ರೆಕ್ಕೆಗಳು; ಸಣ್ಣ ದುರ್ಬಲ ಕಾಲುಗಳು;

ಆಳವಾಗಿ ಕವಲೊಡೆದ ಬಾಲ. ಹಗಲು ವೇಳೆ ಸದಾ ಹಾರಾಡಿಕೊಂಡೇ ಇರುವ ಈ ಹಕ್ಕಿಗಳು ಅಪರೂಪಕ್ಕೊಮ್ಮೆ ವಿಶ್ರಮಿಸಿಕೊಳ್ಳಲು ತಂತಿಯ ಮೇಲೆ ಕೂರುತ್ತವೆ. ನೆಲದ ಮೇಲೆ ಅಂಕು–ಡೊಂಕಾದ ನಡೆ. ವೇಗವಾದ, ಶಕ್ತಿಯುತ, ಹಾರಾಟ. ಹಾರುವಾಗ ಹಲವು ತೀವ್ರ ರೆಕ್ಕೆ ಬಡಿತ, ನಂತರ ಚಿತ್ತಾಕರ್ಷಣೀಯ ತೇಲಾಟ! ಜೊಲ್ಲು ಮತ್ತು ಹಸಿಮಣ್ಣಿನ ಹೆಂಟೆಗಳನ್ನು ಕಲೆಸಿ ಕಟ್ಟಡಗಳ, ಕಲ್ಲುಬಂಡೆಗಳ ಮೇಲೆ ಅಂಟಿಸಿದ ಅಥವಾ ಬದುಗಳಲ್ಲಿ ಕೊರೆದ ತೂತುಗಳೊಳಗೆ ಸಾಮೂಹಿಕ ಗೂಡು.

173. Common Swallow *(Hirundo rustica)* Swallow. M Sparrow+/- Glossy steel-blue above, with chestnut forehead, throat; black pectoral band; pale pinkish white underparts; deeply forked long tail, seen prominently in flight. Large party seen flocked on a telephone wire or hawking midges, over open country or marshland; roosts in reedbeds or thickets near water; flight with few wing beats and long agile glide. **Voice**: low, pleasant chittering notes. Winter visitor; arrival- September/October, departure- April/May; breeds in Himalayas from Kashmir to NE India.

ಕವಲುತೋಕೆ ***(ಕವಟೆಪಕ್ಷಿ)*** 18 ಸೆಂಮೀ. ಕಡುನೀಲಿ ಮೇಲ್ಮೈ; ಕೆಂಗಂದು ಹಣೆ, ಗಂಟಲು; ಕಪ್ಪು ಎದೆಪಟ್ಟಿ; ಬಿಳಿ ಕೆಳಮೈ; ಆಳವಾಗಿ ಸೀಳಿದ ಚೂಪುಬಾಲ. ತಂತಿಯ ಮೇಲೆ ಸಾಲಾಗಿ ಕುಳಿತು ಚಕ್ಕಂದ ಹೊಡೆಯುತ್ತಲೋ, ಆಕಾಶದಲ್ಲಿ ಹಾರಾಡುತ್ತ ಕೀಟಗಳನ್ನು ಕಬಳಿಸುತ್ತಲೋ ಇರುವುದನ್ನು ಕಾಣಬಹುದು. ನೀರಿನ ಬಳಿಯ ಜೊಂಡಿನಲ್ಲಿ ತಂಗುವಿಕೆ. ಮೆದುಸ್ವರದಲ್ಲಿ ಉಲಿತ. ಕಾಶ್ಮೀರ–ಈಶಾನ್ಯ ಭಾರತದಿಂದ ಚಳಿಗಾಲದ ವಲಸೆಗಾರರು.

174. House Swallow *(Hirundo tahitica)* Nilgiri House Swallow R Sparrow- Metallic green-black upperparts, with chestnut forehead, chin, throat, upper breast; pale ashy underparts; deeply forked tail. Habits similar to other swallows, seen huddled on bare branches. **Voice**: pleasing twittering note on the wing and when perched. **Nesting**: March-May; nest, half saucer of mud pellets attached to walls, beams or rafters in houses; same nest used year after year. **Eggs**: 2-3, white.

ಸಣ್ಣಬಾಲದ ಕವಲುತೋಕೆ ***(ಚೆರಿಯ ಕವಟೆಪಕ್ಷಿ)*** 13 ಸೆಂಮೀ. ಹೊಳೆಯುವ ಹಸಿರುಗಪ್ಪು ಮೇಲ್ಮೈ; ಕೆಂಗಂದು ಹಣೆ, ಗಂಟಲು, ಎದೆ; ಪೇಲವ ಬೂದು ಕೆಳಮೈ; ಆಳವಾದ ಸೀಳುಬಾಲ. ಸ್ವಭಾವ, ಇತರ ಕವಲುತೋಕೆಗಳಂತೆ. ಮರದ ಕೊಂಬೆಗಳ ಮೇಲೆ ಗುಂಪಾಗಿ ಕುಳಿತಿರುತ್ತವೆ. ಹಾರುವಾಗ, ಕುಳಿತಿರುವಾಗ, ಮೆದುದನಿಯಲ್ಲಿ ಉಲಿತ. ಮನೆಯ ಗೋಡೆ, ತೀರುಗಳಲ್ಲಿ ಮಣ್ಣಿನಿಂದ ಮಾಡಿದ ಬಟ್ಟಲಿನಾಕಾರದ ಗೂಡು.

175. Wired-tailed Swallow *(Hirundo smithii)* R Sparrow+/- Glistening steel-blue above, with chestnut cap; glistening white underparts, with two long wires in the outer tail feathers, diagnostic; tail wires in female shorter. Solitary or small parties, seen in open cultivations, invariably near water. **Voice**: lively *chit-chit* while hawking; male also has twittering song. **Nesting**: March-September; mud saucer nest attached to culvert or rock near water. **Eggs**: 3-5, white.

ತಂತಿಬಾಲದ ಕವಲುತೋಕೆ ***(ತಂತಿಬಾಲ್‌ರ ಕವಟೆಪಕ್ಷಿ)*** 14 ಸೆಂಮೀ. ಹೊಳೆಯುವ ಕಡುನೀಲಿ ಮೇಲ್ಮೈಗೆ, ಕೆಂಗಂದು ಟೋಪಿ; ಶುಭ್ರ ಬಿಳಿ ಕೆಳಮೈ ಮತ್ತು ನೀಳವಾದ ತಂತಿಯಂತಹ ಬಾಲದ ಎರಡು ಹೊರಗರಿಗಳು. ಒಂಟಿಯಾಗಿ ಕೆರೆ, ಕೊಳ, ನದಿಯ ಸೇತುವೆ, ಜನವಸತಿ ಪ್ರದೇಶಗಳಲ್ಲಿ ನೀರಿನ ಬಳಿ ವಾಸ. *ಚಿಟ್.ಚಿಟ್* ಹಾಡು. ಬಂಡೆಗಳ ಮೇಲೆ ಮಣ್ಣಿನ ಬಟ್ಟಲಿನಾಕಾರದ ಗೂಡು.

176. Red-rumped Swallow *(Hirundo daurica)* Striated Swallow RM Sparrow+/- Stockier and slower swallow; deep glistening blue above with chestnut half collar on hindneck; chestnut rump; fulvous white underparts with brown striae; deeply forked tail. Pairs or small party hawking on insects about cliffs, ruined buildings and open country. In winter migratory race join the resident race, seen perched in hundreds on telephone wires. **Voice**: doleful, chirping notes; pleasant chittering nasal *tzuee.* call of breeding male. **Nesting**: April-August; retort shaped, mud nest with a narrow tubular entrance, clung flat against ceiling of rock cave or veranda of house. **Eggs**: 3-4, white.

ಕೆಂಪುಪೃಷ್ಠದ ಕವಲುತೋಕೆ ***(ಚೋಂದಬೆನ್ನ್‌ರ ಕವಟೆಪಕ್ಷಿ)*** 20-23 ಸೆಂಮೀ. ದಷ್ಟ-ಪುಷ್ಟ ದೇಹಕ್ಕೆ ಕಡುನೀಲಿ ಮೇಲ್ಮೈ; ಕೆಂಗಂದು ಹಿಂಗತ್ತು ಮತ್ತು ಪೃಷ್ಠ; ಗೀರುಗಳಿರುವ ಮಾಸಲು ಬಿಳಿ ಕೆಳಮೈ; ಸೀಳುಬಾಲ. ಸಣ್ಣ ಗುಂಪಿನಲ್ಲಿ, ಕಮರಿಗಳು, ಹಳೆ ಬಂಗಲೆಗಳೆಡೆಯಲ್ಲಿ ಬೇಟೆ. ಚಳಿಗಾಲದಲ್ಲಿ ವಲಸೆಬರುವ ಹಕ್ಕಿಗಳೊಡಗೂಡಿ, ಜನವಸತಿ ಪ್ರದೇಶಗಳಲ್ಲಿ ಟೆಲಿಫ್ಹೋನ್ ತಂತಿಗಳ ಮೇಲೆ ಕುಳಿತು, ಮೆಲುದನಿಯಲ್ಲಿ ಚಕ್ಕಂದ ಹೊಡೆಯುವುದನ್ನು ಕಾಣಬಹುದು. ಸೂರು ಅಥವಾ ಬಂಡೆಯಡಿಗಳಲ್ಲಿ ಮಣ್ಣಿನ ಗೂಡು.

177. Dusky Crag-Martin *(Hirundo concolor)* R Sparrow- Dark sooty-brown above; long swallow-like wings; paler underparts; short square tail with white spots on all but central and outermost tail feathers, conspicuously seen when the bird alights or takes to wings, diagnostic. Sexes alike. Small party seen around crags, ruins, old buildings and around human habitat along with other swallows and swifts. Habits similar to other swallows. **Voice**: cheerful twittering and soft faint *chit.chit..* as it flies. **Nesting:** June-October; nest made of a deep, oval saucer of mud, lined with fibres and feathers attached like a bracket to vertical rock face or wall, under overhang or archway of a building. **Eggs:** 2-3, white, minutely speckled with reddish brown spots.

ಕಂದುಗಪ್ಪು ಕಮರಿತೋಕೆ 13 ಸೆಂಮೀ. ಮಸಿಗಂದು ದೇಹ; ಉದ್ದ ರೆಕ್ಕೆ, ಗಿಡ್ಡ-ಮೊಂಡು ಬಾಲ; ಬಾಲದ ಮೇಲೆ, ನಡು ಮತ್ತು ಹೊರಗರಿಗಳನ್ನು ಬಿಟ್ಟು, ಉಳಿದ ಗರಿಗಳ ಮೇಲ್ಮೆ ಬಿಳಿ ಮಚ್ಚೆಗಳು; ಮಾಸಲು ಕೆಳಮೈ. ಸಣ್ಣ ಗುಂಪಿನಲ್ಲಿ ಸಂಭ್ರಮದಿಂದ ಮೆಲುದನಿಯಲ್ಲಿ ಚಿಲಿಪಿಲಿ ಹಾಡುತ್ತಾ ಕೀಟಗಳನ್ನರಸುತ್ತವೆ. ಎತ್ತರದ ಕಟ್ಟಡ-ಬಂಡೆಗಳ ಗೋಡೆಯ ಮೇಲೆ ಮಣ್ಣು, ನಾರು, ಮೆದುಗರಿಗಳಿಂದ ತಯಾರಾದ ಗೂಡು.

Shrikes *(Laniidae)*

ಕಳಿಂಗಗಳು *(ಕಾಡ್ಯಕಣ್ಣೆ)*

Shrikes are wary, wild, bold and aggressive, miniature hunter birds of open and shrubby country. Their size varies from bulbul to myna. They have a large head and a strong hooked bill; a characteristic black band across the face from the base of the bill through eyes; legs and feet strong, with sharp claws; whitish underparts seen even from a distance; tail long, narrow and graduated. Sexes alike. They are carnivorous, feeding on locusts and other insects,

grasshoppers, lizards, mice etc., Perch on exposed bushtops or treetops, fences or wires, from which they drop on to their prey. They have a habit of maintaining a larder, impaling surplus prey on thorn to devour at leisure – so called 'butcher birds'. They are accomplished mimics, sometimes mimicking those birds that have already migrated, thus confusing the birdwatcher. Nest consists of a deep cup of twigs, grass and wool placed in a thorn bush at a moderate height of 2-3 metres.

ಧೈರ್ಯವಂತ, ಬುದ್ಧಿವಂತ, ತೆರೆದ ಪ್ರದೇಶ–ಕುರುಚಲುಗಾಡುಗಳಲ್ಲಿ ವಾಸಮಾಡುವ ಕ್ರೂರ, ಬೇಟೆ ಹಕ್ಕಿಗಳು. ದೊಡ್ಡ ತಲೆಗೆ ಗಟ್ಟಿಮುಟ್ಟಾದ ಕೊಕ್ಕೆ ಕೊಕ್ಕು; ಕಣ್ಣಿಗೆ ಅಗಲವಾದ ಕಪ್ಪು ಪಟ್ಟಿ; ದೂರದಿಂದಲೂ ಗುರುತಿಸಬಹುದಾದ ಬಿಳಿಯಾದ ಕೆಳಮೈ; ಧೃಢವಾದ ಕಾಲು, ಪಾದ ಮತ್ತು ಚೂಪಾದ ಕಾಲುಗುರುಗಳು; ನೀಳ, ಸಪೂರ, ಪಟ್ಟೆ ಬಾಲ. ಒಣರೆಂಬೆ, ಬೇಲಿಯ ಕಂಬ ಅಥವಾ ತಂತಿಯ ಮೇಲೆ ಕುಳಿತು ಬೇಟೆಯನ್ನು ಹೊಂಚುತ್ತವೆ. ಕೀಟ, ಹಲ್ಲಿ, ಇಲಿ ಮುಂತಾದ ಮಾಂಸಾಹಾರ; ಬೇಟೆ ಅಧಿಕವಾದಲ್ಲಿ, ಮುಳ್ಳಿಗೆ ಕೀಟಗಳನ್ನು ಸಿಕ್ಕಿಸಿಟ್ಟು, ಆರಾಮವಾಗಿ ಕಬಳಿಸುವ ಸ್ವಭಾವ. *ಚರ್‍ರ್..ಕರ್‍ರ್..ಕ್ರ್ಯಾಕ್..* ಕೂಗಲ್ಲದೆ, ಪ್ರಜನನ ಸಮಯದಲ್ಲಿ ಇತರ ಹಕ್ಕಿಗಳ ಸಮರ್ಥ ಅಣಕುಗಾರ. ಮುಳ್ಳುಗಂಟಿಗಳಲ್ಲಿ ಕಡ್ಡಿ, ನಾರು, ಹತ್ತಿಯಿಂದ ಮಾಡಿದ ಆಳವಾದ ಗೂಡು.

178. Southern Grey Shrike *(Lanius meridionalis)* Grey Shrike R Myna+/- Light blue silver-grey above; black wings with white mirrors; black and white tail; white underparts, black stripe from base of the beak through eyes. Inhabit scrub jungle, dry and moist deciduous forests. Seen perched on bush tops or electric wires, surveying the neighbourhood for prey; pounces on the prey, batters and tears with beak before swallowing. **Voice**: harsh *kryak. kryak..*; breeding male makes pleasing tinkling song; a versatile mimic. **Nesting**: January-October. **Eggs**: 3-6, pale white, with purplish-brown spots.

ಬೂದು ಕಳಿಂಗ ***(ಬೂದ್ ಕಾಡ್ಯಕಣ್ಣೆ)*** 25 ಸೆಂಮೀ. ಬೆಳ್ಳಿಬೂದು ಮೇಲ್ಮೈ; ಕಣ್ಣಿಗೆ ಕಳ್ಳನ ಪಟ್ಟಿ; ಕಪ್ಪು ರೆಕ್ಕೆಗಳಲ್ಲಿ ಬಿಳಿ ಪಟ್ಟಿಗಳು; ಕಪ್ಪು–ಬಿಳಿ ಬಾಲ; ಬಿಳಿ ಕೆಳಮೈ. ಕುರುಚಲು, ವಿರಳಕಾಡುಗಲ್ಲಿ, ಮರದ ಮೇಲೋ, ಪೊದೆಗಳ ಮೇಲೋ, ತಂತಿಗಳ ಮೇಲೋ ಕುಳಿತು ಬೇಟೆಯನ್ನು ಹೊಂಚುತ್ತದೆ; ನೆಗೆದು ಬೇಟೆಯನ್ನು ಹಿಡಿದು ಕೊಕ್ಕಿನಿಂದ ಸೀಳಿ ತಿನ್ನುತ್ತದೆ. ಕರ್ಕಶ *ಕ್ರ್ಯಾಕ್.ಕ್ರ್ಯಾಕ್...* ಕೂಗಲ್ಲದೆ ಪ್ರಜನನ ಕಾಲದಲ್ಲಿ ಗಂಡುಹಕ್ಕಿ ಇತರ ಹಕ್ಕಿಗಳ ಅಣಕು ಸ್ವರಗಳನ್ನೂ ಮಾಡುವುದು.

179. Bay-backed Shrike *(Lanius vittatus)* R Bulbul- The smallest of Indian shrikes. Deep chestnut maroon back; black forehead and eye stripe; broad, grey crown, hindneck; distinctive white rump; black wings with white central feathers; white underparts; black-white graduated tail. Inhabits scrub, dry deciduous jungles, thinly wooded country and around cultivation. Habits and voice similar to 178. **Nesting**: April-September. Eggs: 3-5, smaller than 178.

ಕಡುಗಂದು ಕಳಿಂಗ ***(ಕಾಡ್ಯಕಣ್ಣೆ)*** 18 ಸೆಂಮೀ. ಬೂದು ನೆತ್ತಿ, ಹಿಂಗತ್ತು; ಕಪ್ಪು ಹಣೆ, ಕಣ್ಣುಪಟ್ಟಿ; ಕಡುಗಂದು ಬೆನ್ನಿಗೆ ಬಿಳಿ ಪೃಷ್ಠ; ಕಪ್ಪು ರೆಕ್ಕೆಗಳಲ್ಲಿ ಬಿಳಿ; ಬಿಳಿ ಕೆಳಮೈ; ಕಪ್ಪು ಕಾಲುಗಳು; ಕಪ್ಪು–ಬಿಳಿ ಪಟ್ಟೆಬಾಲ. ಒಣಪ್ರದೇಶ, ಕುರುಚಲು ಕಾಡುಗಳಲ್ಲಿ, ಹೊಲ–ಗದ್ದೆಗಳಿರುವೆಡೆ ಮುಳ್ಳುಗಂಟಿಗಳು, ಪೊದೆಗಳಲ್ಲಿ ವಾಸ. ಕಾಣಬಹುದು. ಉಳಿದದ್ದು ೧೭೮ರಂತೆ.

180. Rufous-backed Shrike *(Lanius schach)* R Myna- Pale grey crown to middle of the back; rufous from there to the rump; black forehead with black eyeband; white mirrors on the black wings; pale rufous sides of breast and flanks; white underparts. Found in scrub and dry deciduous jungles. Habits similar to 178. **Voice**: harsh scolding notes; breeding male has pleasant songs; good mimic. **Nesting**: February-July. **Eggs**: 3-6, smaller than 178.

ಕೆಂಗಂದುಬೆನ್ನಿನ ಕಳಿಂಗ ***(ಚೋಂದಬೆನ್ನ್ಸರ ಕಾಡ್ಯಕಣ್ಣೆ)*** 25 ಸೆಂಮೀ. ಬೂದು ನೆತ್ತಿ, ಹಿಂಗತ್ತು, ಬೆನ್ನಿನ ಮೇಲ್ಭಾಗ; ಅಲ್ಲಿಂದ ಕೆಳಗೆ ಕೆಂಗಂದು; ಕಪ್ಪು ಹಣೆ, ಕಣ್ಣುಪಟ್ಟಿ; ಕಪ್ಪು ರೆಕ್ಕೆಗಳಲ್ಲಿ ಬಿಳಿ; ಬಿಳಿ ಕೆಳಮೈ ಮೇಲೆ ತಿಳಿ ಕೆಂಗಂದು ಪಕ್ಕೆಗಳು. ಪ್ರಜನನ ಕಾಲದಲ್ಲಿ ಗಂಡಿನ ಸುಶ್ರಾವ್ಯ ಅಣಕು ಹಾಡು ಬಿಟ್ಟರೆ ಉಳಿದ ಸಮಯ ಕರ್ಕಶ ಬೈಗುಳದ ಕೂಗು. ಉಳಿದೆಲ್ಲ ೧೭೮ರಂತೆ.

181. Brown Shrike *(Lanius cristatus)* M Myna- Overall brown bird with white forehead, supercilium; white chin and breast; black band across the eyes; pale underparts. A rather shy bird, it is found in the scrub jungles, dry and moist deciduous forests, in the thickly wooded country, where it haunts tracks and forest clearings. Winter visitor to our place, breeding outside India.

ಕಂದು ಕಳಿಂಗ ***(ಚೋಂದ ಕಾಡ್ಯಕಣ್ಣೆ)*** 19 ಸೆಂಮೀ. ಕಂದು ಮೇಲ್ಮೈ, ಬಾಲ; ಬಿಳಿ ಹಣೆ ಮತ್ತು ಹುಬ್ಬು; ಕಪ್ಪು ಕಣ್ಣುಪಟ್ಟಿ; ಬಿಳಿ ಗಲ್ಲ, ಎದೆ; ಪೇಲವ ಕೆಳಮೈ; ಸಂಕೋಚ ಸ್ವಭಾವ, ಕುರುಚಲು, ಉದುರೆಲೆ ಕಾಡುಗಳಲ್ಲಿ ವಾಸ. ದೇಶದ ಹೊರವಲಯಗಳಿಂದ ಚಳಿಗಾಲದ ವಲಸೆಗಾರ.

Orioles *(Oriolidae)*

ಹೊನ್ನಕ್ಕಿಗಳು *(ಬಾಳೆಮಂಜ)*

These are rather slender, arboreal birds with bright golden yellow plumage; strong, pointed, slightly hooked bill; legs short, strong; wings broad and pointed. They are rather shy birds of treetops, despite the gaudy colouration, usually heard than seen. Sexes dimorphic. Flight is rapid, strong and undulating. Food includes fruits and insects. Loud, fluty, melodious voice. Nest consists of a deep cup, woven with grass and fibre, bound with cobweb, suspended hammock-like, in fork of a leafy branch 4-10 m up. Eggs: 2-5, white with reddish brown or black spots.

ಉಜ್ವಲ ಹೊಂಬಣ್ಣದ, ಸಪೂರ ದೇಹದ, ಮರದಲ್ಲಿ ವಾಸಿಸುವ ಹಕ್ಕಿಗಳು. ಉದ್ದವಾದ, ತುಸು ಬಾಗಿದ ಕೊಕ್ಕು; ಅಗಲವಾದ, ಚೂಪಾದ ರೆಕ್ಕೆಗಳು; ಸಣ್ಣ ಕಾಲುಗಳು. ವೇಗವಾದ, ಅಲೆಯಂತಹ ಹಾರಾಟ. ನಾಚಿಕೆ ಸ್ವಭಾವದಿಂದ ಮರದ ಎಲೆಗಳ ನಡುವೆಯೇ ಅವಿತುಕೊಳ್ಳುವುದರಿಂದ, ಕಾಣುವುದಕ್ಕಿಂತ ಕೇಳುವುದೇ ಹೆಚ್ಚು. ಆಲ, ಅರಳಿ ಮುಂತಾದ ಹಣ್ಣುಗಳು, ಮಕರಂದ ಮತ್ತು ಕೀಟಗಳೇ ಆಹಾರ. ಇಂಪಾದ ಕೊಳಲಿನ ಸ್ವರ. ಮರದ ತುದಿ–ಕವಲುಗಳ ಮಧ್ಯೆ ಹುಲ್ಲು, ನಾರು–ಬೇರುಗಳಿಂದ ನೇಯ್ದ ಸುಂದರ ತೂಗುಯ್ಯಾಲೆ ಗೂಡು.

182. Eurasian Golden Oriole *(Oriolus oriolus)* Golden Oriole M Myna Brilliant golden yellow plumage; black stripe through the red eyes; pink beak; black on wings and tail. Female and young, dull, with green tinge; dirty white below with brown streaks. Arboreal, in pairs, seen among leafy trees in wooded forests and estates; strong dipping flight. **Food**: insects, figs, berries, flower nectar. **Voice**: clear, fluty whistle *pee..lu..loo..*; harsh *cheah*. Breeds in Kashmir and across N India, winter visitor to our place.

ಹೊನ್ನಕ್ಕಿ ***(ಮಂಜಪಕ್ಷಿ)*** 25 ಸೆಂಮೀ. ಗಂಡಿಗೆ ಹೊಳೆಯುವ ಚಿನ್ನದ ಹಳದಿ ದೇಹಕ್ಕೆ ಕಪ್ಪು ಕಣ್ಣುಪಟ್ಟಿ; ಪಿಂಕ್ ಕೊಕ್ಕು; ರೆಕ್ಕೆಗಳ ಮೇಲೆ, ಬಾಲದಲ್ಲಿ ಕಪ್ಪು. ಹೆಣ್ಣು ಮತ್ತು ಅವಯಸ್ಕ ಹಕ್ಕಿಗಳಿಗೆ ಪೇಲವ ಹಸಿರು ಮಿಶ್ರಿತ ದೇಹ ಮತ್ತು ಕೆಳಮೈ ಮೇಲೆ ಕಂದು ಗೀರುಗಳು. ಜೋಡಿಯಾಗಿ, ಉದುರೆಲೆ ಮತ್ತು ಒತ್ತಾದ ಕಾಡುಗಳಲ್ಲಿ, ಎಸ್ಟೇಟುಗಳಲ್ಲಿ, ಫಲ-ಪುಷ್ಪಭರಿತ ಮರಗಳ ಆದರಲ್ಲೂ ಮಾವಿನ ಮರಗಳ ಮೇಲೆ ವಾಸ. *ಪೀ.ಲೂ.ಲು..* ಕೊಳಲಿನ ಉಲಿತ. ಉತ್ತರ ಭಾರತ, ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

183. Black-headed Oriole *(Oriolus xanthornus)* R Myna Bright golden yellow plumage; black head, throat, upper breast; black in wings and tail; shiny, deep pink bill; crimson eyes. Pairs, seen actively along with other mixed hunting birds, visiting fruiting and flowering trees. **Voice**: melodious fluty whistle *tee..yow..yow..*; harsh, nasal *kwaak*. **Nesting**: April-July; nest built along with those of Drongos, on account of the protection rendered by these bold and callous birds, against predators.

ಕರಿತಲೆಯ ಹೊನ್ನಕ್ಕಿ ***(ಕರ್ತಮಂಡೆ ಮಂಜಪಕ್ಷಿ)*** 25 ಸೆಂಮೀ. ೧೮೨ರಂತೆ, ಆದರೆ, ಅಚ್ಚ ಕಪ್ಪು ತಲೆ ಮತ್ತು ಕೊರಳು; ಕೆಂಪು ಕಣ್ಣುಗಳು; ಪಿಂಕ್ ಕೊಕ್ಕು. ಸದಾಹಸಿರು, ಉದುರೆಲೆ ಕಾಡಿನಲ್ಲಿ, ಎಸ್ಟೇಟುಗಳಲ್ಲಿ ಮರಗಳ ಮೇಲೆ ೧೮೨ರೊಂದಿಗೆ, ಕಾಣಬಹುದು. ಇಂಪಾದ *ಟಿ.ಯೋ.ಯೋ..* ಕೊಳಲಿನ ಉಲಿತ. ಇಡೀ ಮರವನ್ನು ದುಷ್ಟ ಜೀವಿಗಳಿಂದ ಕಾಪಾಡುವ ಕಾಜಾಣ, ಭುಜಂಗಗಳಿರುವೆಡೆ ಗೂಡು.

Drongos *(Dicruridae)*

ಕಾಜಾಣಗಳು *(ಕಾಕಳಿಚಿಟ್ಟೆ)*

The policemen of the forest, Drongos are easily recognised by their black and grey plumage and the deeply forked tail. They are mostly arboreal birds with reddish brown or red eyes; bill stout, hooked and notched; legs short, toes curved with needle sharp claws; wings long; tail long and forked. Flight swift and agile. Sexes similar. Food chiefly made of insects, small creatures and also flower nectar. Drongos are bold and fearless. They attack and drive away even larger birds intruding into the vicinity of their nesting tree. Many defenceless birds take advantage of this vigilant habit of Drongos and build nests in the same tree and are safe. Drongo's nest is a shallow cusp of twigs and grass with cobwebs, placed conspicuously in a horizontal fork of twigs, 4 to 10 metres up.

ಕಾಡಿನ ಕಾವಲುಗಾರರೆಂದೇ ಕರೆಯಲ್ಪಡುವ, ಕಪ್ಪು-ಕಡುಬೂದು ಮೈಬಣ್ಣದ, ಎಸ್ಟೇಟು, ವಿರಳಗಾಡು, ಕುರುಚಲುಗಾಡುಗಳಲ್ಲಿ ವಾಸಿಸುವ ಮರ ಹಕ್ಕಿಗಳು. ದಪ್ಪನಾದ ಕೊಕ್ಕೆ-ಕೊಕ್ಕು; ಹವಳದ ಕಣ್ಣುಗಳು; ಉದ್ದವಾದ ರೆಕ್ಕೆಗಳು; ಬಲಿಷ್ಟ ಕಾಲುಗಳಲ್ಲಿ ಚೂಪಾದ ಕಾಲುಗುರು; ಉದ್ದನಾದ ಸೀಳು ಬಾಲ. ಲೀಲಾಜಾಲವಾದ, ಅಷ್ಟೇ ಶಕ್ತಿಯುತ ಹಾರಾಟ. ಸಣ್ಣ ಜೀವಿಗಳು, ಕೀಟಗಳು, ಮಕರಂದವೇ ಆಹಾರ. ನಿರ್ಭಯ ಹಕ್ಕಿಗಳು; ಇತರ ಹಕ್ಕಿಗಳು ಹಿಡಿದ ಬೇಟೆಯನ್ನು ಬೆದರಿಸಿ ದರೋಡೆ ಮಾಡುತ್ತವೆ. ತಮ್ಮ ತಂಟೆಗೆ ಬಂದ ಯಾವುದೇ ಜೀವಿಯನ್ನೂ ಹೊಡೆದೋಡಿಸುವುದರಲ್ಲಿ ನಿಷ್ಣಾತ. ಆದ್ದರಿಂದ, ಎಷ್ಟೋ ದುರ್ಬಲ ಹಕ್ಕಿಗಳು ಅದೇ ಮರದಲ್ಲಿ ತಮ್ಮ ಗೂಡನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತವೆ. ಎತ್ತರದ ಮರದ ತುದಿಕವೆಗಳಲ್ಲಿ ಕಾಣುವಂತೆ, ಹುಲ್ಲು, ಜೇಡರ ಬಲೆ, ನಾರುಗಳಿಂದ ನೇಯ್ದ ಗೂಡು.

184. Black Drongo *(Dicrurus macrocercus)* King Crow R Bulbul+ A slim and agile bird with glossy black plumage; long, deeply forked tail. Singly or as a small party, in scrub and dry deciduous jungles, in open countryside and around cultivation. The commonest bird seen on telephone wire, keeping a lookout from exposed perches or rides atop and follows the grazing cattle to devour insects that are disturbed by the animal's movements; forest fire also attracts them for the same reason; launches or drops on the ground to capture the prey; does short sallies on the wing. **Food:** mainly insects, thus a farmer's friend, and also nectar. **Voice**: Harsh, scolding and challenging calls, which have an electronic tinge. **Nesting**: April-August. **Eggs**: 3-5, white with reddish brown spots. Both sexes share the domestic duties.

ಕಾಜಾಣ ***(ಕಾಕಳಿಚಿಟ್ಟೆ)*** 31 ಸೆಂಮೀ. ನೀಳ, ಸಪೂರ, ಅಚ್ಚಗಪ್ಪು ದೇಹ; ಉದ್ದವಾದ ಸೀಳುಬಾಲ. ಸಣ್ಣ ಗುಂಪಿನಲ್ಲಿ, ಸದಾಹಸಿರು, ಕುರುಚಲು- ವಿರಳ ಕಾಡುಗಳಲ್ಲಿ, ಕೃಷಿ ಪ್ರದೇಶ, ಎಸ್ಟೇಟುಗಳಲ್ಲಿ ವಾಸ. ಒಣರೆಂಬೆಯ ಮೇಲೋ, ತಂತಿಯ ಮೇಲೋ ಕುಳಿತು ಬೇಟೆಗೆ ಹೊಂಚುಹಾಕುತ್ತವೆ ಅಥವಾ ಗೋವುಗಳ ಮೇಲೆ ಕುಳಿತು, ಅವು ಮೇಯುತ್ತಿರುವಾಗ ಅಲುಗಾಟಕ್ಕೆ ಮೇಲೆದ್ದ ಕೀಟಗಳ ಮೇಲೆಗರಿ, ಭಕ್ಷಿಸುತ್ತವೆ. ಕರ್ಕಶ, ಬೈಗುಳದ, ಎಲೆಕ್ಟ್ರಾನಿಕ್ ಕೂಗು. ಕೀಟಭಕ್ಷಕ, ಆದ್ದರಿಂದ ರೈತನ ಮಿತ್ರ.

185. Greater Racket-tailed Drongo *(Dicrurus paradiseus)* R Myna Glossy blue-black plumage; prominent tufted forehead with long feathers curved backwards; outer tail feathers elongated like wire ending in 'rackets', giving an illusion as if the bird is pursued by a pair of bumble bees. Seen singly or as loose party in mixed dry and moist deciduous forests. Food similar to 184. **Voice**: very noisy, having a large repertoire of loud metallic calls, with wide variety of whistles and screams; an amazing mimic of over a dozen species. Even makes an amusing pet. **Nesting**: March-June. **Eggs**: 3-4, creamy white, speckled with reddish brown.

ಭೀಮರಾಜ ***(ಬೀಮರಾಜ)*** 31-35 ಸೆಂಮೀ. ಕಡುಗಪ್ಪು ದೇಹ; ತಲೆಯ ಮೇಲೆ ಕೆದರು ಜುಟ್ಟು; ಬಾಲದ ಹೊರಗರಿಗಳು ನೀಳವಾದ ಪೊರಕೆ ಕಡ್ಡಿಗಳಂತಿದ್ದು, ತುದಿಯಲ್ಲಿ ಸಣ್ಣ ಬಾವುಟಗಳು, ಹಾರುವಾಗ ಎರಡು ದುಂಬಿಗಳು ಹಕ್ಕಿಯನ್ನು ಹಿಂಬಾಲಿಸುತ್ತಿವೆಯೋ ಎಂಬಂತೆ ಕಾಣುವುದು. ತುಸು ದಟ್ಟವಾದ ಮರಗಳಿರುವೆಡೆ ವಾಸ. ಮಹಾ ಗಲಾಟೆಕೋರ; ನಿಪುಣ ಅಣಕುಗಾರನಾದರೂ, ಕೊನೆಯಲ್ಲಿ ತನ್ನದೇ ಛಾಪು.

186. White-bellied Drongo *(Dicrurus caerulescens)* R Bulbul Glossy indigo- black plumage above; long forked tail; grey throat and breast; white belly and under tail coverts. Pairs or small loose group found in estates, dry scrub and bamboo forests. Food and habits similar to other Drongos. **Voice**: Mixture of pleasant, whistling or some grating calls; good mimic. Nesting and Eggs similar to 184.

ಬಿಳಿಹೊಟ್ಟೆಯ ಕಾಜಾಣ ***(ಬೊಳ್ತ ಕಾಕಳಿಚಿಟ್ಟೆ)*** 24 ಸೆಂಮೀ. ಭುಜಂಗದಂತಿದ್ದರೂ, ಸಣ್ಣ ಗಾತ್ರ, ಬೂದು ಕೊರಳು, ಬಿಳಿ ಹೊಟ್ಟೆಯಿಂದ ಪತ್ತೆಹಚ್ಚಬಹುದು. ಉದುರೆಲೆ, ಕುರುಚಲು, ಬಿದಿರುಕಾಡು, ಎಸ್ಟೇಟುಗಳಲ್ಲಿ ಕಾಣಬಹುದು. ಒಳ್ಳೆಯ ಅಣಕುಗಾರ. ಉಳಿದದ್ದು ೧೮೪ರಂತೆ.

187. Spangled Drongo *(Dicrurus hottentottus)* Hair-crested Drongo R Myna+/- Glistening blue-black plumage; fine hair-like feathers on crest, long pointed beak that is curved downwards; tail long with shallow fork, square cut, with outer ends, up-curved and inwardly bent. Seen singly or in scattered pairs, in moist deciduous forests, plains and foothills. **Food**: Nectar and large insects. **Voice**: pleasant mixed metallic, whistling calls and harsh screams. **Nesting**: March-April. **Eggs**: 3-4, creamy with red freckles.

ಜುಟ್ಟು ಕಾಜಾಣ ***(ಕೈಕಣೆಬಾಲ)*** 31 ಸೆಂಮೀ. ಕಡು ನೀಲಿಗಪ್ಪು ದೇಹ; ತಲೆಯ ಮೇಲೆ ಕೂದಲಿನಂತಹ ಪುಚ್ಛ; ಉಳಿದೆಲ್ಲಕ್ಕಿಂತ ಉದ್ದನಾದ ಕೊಕ್ಕು; ಉದ್ದ ಬಾಲದ ಸೀಳು, ಮೇಲಕ್ಕೆ ಮತ್ತು ಒಳಕ್ಕೆ ಮಡಿಚಿಕೊಂಡಂತೆ ಕಾಣುವುದು. ಉಳಿದೆಲ್ಲ ೧೮೪ರಂತೆ.

188. Bronzed Drongo *(Dicrurus aeneus)* Bronze Drongo R Bulbul+/- Highly glossy, bronze green and blue-black plumage; bill broad and flattened; shallow forked tail. Seen in evergreen and moist deciduous and scrub forests. Habit, Food and Nesting similar to 184.

ಕಂಚು ಕಾಜಾಣ 24 ಸೆಂಮೀ. ಕಡು ಕಂಚು–ಹಸಿರು ನೀಲಿಗಪ್ಪು ದೇಹ; ಬಾಲದಲ್ಲಿ ಸಣ್ಣ ಸೀಳು; ಸದಾಹಸಿರು, ಶೀತವಿರುವ ಉದುರೆಲೆ ಮತ್ತು ಕುರುಚಲು ಕಾಡುಗಳಲ್ಲಿ ವಾಸ. ಉಳಿದದ್ದು ೧೮೪ರಂತೆ.

189. Ashy Drongo *(Dicrurus leucophaeus)* Grey Drongo M Bulbul+ Similar to 184, but with conspicuous crimson eyes; dull grey below. Habits similar to 184, but prefers well-wooded forests. **Food**: also reptiles, small birds. **Voice**: chatter with variety of notes, also good mimic. Winter visitor from Himalayas.

ಬೂದು ಕಾಜಾಣ ***(ಬೂದ್ ಕಾಕಳಿಚಿಟ್ಟೆ)*** 30 ಸೆಂಮೀ. ಸ್ಲೇಟು ಕಪ್ಪು ದೇಹ; ಹೊಳೆಯುವ ಕೆಂಪು ಕಣ್ಣುಗಳು; ಕಡುಬೂದು ಕೆಳಮೈ; ಆಳವಾಗಿ ಸೀಳಿದ ಬಾಲ. ೧೮೪ರ ಸ್ವಭಾವ. ದಟ್ಟಕಾಡು ಮತ್ತು ಏಲಕ್ಕಿ ಎಸ್ಟೇಟುಗಳಿಗೆ, ಹಿಮಾಲಯದಿಂದ ಚಳಿಗಾಲದ ವಲಸೆಗಾರ.

Woodswallows and Swallowshrikes *(Artamidae)*

ಅಂಬರಕೀಚುಗಗಳು

190. Ashy Woodswallow *(Artamus fuscus)* Ashy Swallow-Shrike R Bulbul+/- Stout arboreal bird, with fine, soft, slaty grey plumage of powder-down feathers; short neck; stout bluish, finchlike beak, with wide gape; black eyeband; short, stout legs; long, pointed wings; pale rump; paler underparts; small square, white-tipped tail. Sexes alike. Parties seen huddled together on bare branch or wire; around palmyra trees. Flight, swallowlike, with several wingbeats and a gracious glide. **Food**: insects caught on the wing. **Voice**: harsh *chek.chek.chek*. **Nesting**: April-June; nest, loose cup of grass, roots and fibres, at the base of a palm leaf. **Eggs**: 2-3, greenish white with light brown spots.

ಬೂದು ಅಂಬರಕೀಚುಗ ***(ಬೂದ್ ಮಳೆಪಕ್ಷಿ)*** 19 ಸೆಂಮೀ. ದುಂಡುದುಂಡಾದ, ಈ ಮರದ ಹಕ್ಕಿಗೆ, ಮೃದುವಾದ, ಸ್ಲೇಟುಬೂದು ಬಣ್ಣದ ಗರಿಗಳು; ಅಗಲವಾದ ಬಾಯಿಗೆ ತಿಳಿನೀಲಿ ಬಣ್ಣದ ಗುಬ್ಬಚ್ಚಿ ಕೊಕ್ಕು; ಕಪ್ಪು ಕಣ್ಣುಪಟ್ಟಿ; ಸಣ್ಣ ಕತ್ತು; ಉದ್ದ-ಚೂಪಾದ ರೆಕ್ಕೆಗಳು; ಪೇಲವ ಪೃಷ್ಠ, ಕೆಳಮೈ; ಸಣ್ಣ, ಸಧೃಢ ಕಾಲುಗಳು; ಬಿಳಿ ತುದಿಯ ಮೊಂಡುಬಾಲ. ಗುಂಪಾಗಿ, ಒಣರೆಂಬೆಯ, ತಂತಿಯ ಮೇಲೆ ಸಾಲಾಗಿ ಕುಳಿತಿರುತ್ತವೆ; ಕುಳಿತಿರುವಾಗ ತಮ್ಮ ಮೊಂಡು ಬಾಲವನ್ನು ಅಡ್ಡಡ್ಡಲಾಗಿ ಆಡಿಸುವ ಸ್ವಭಾವ. ಹಾರುವಾಗ ಪಟಪಟನೆ ಒಂದಷ್ಟು ರೆಕ್ಕೆ ಬಡಿತ, ಅಲ್ಲಿಂದ ಸೊಬಗಿನ ತೇಲಾಟ. ಹಾರುತ್ತಿರುವಾಗ ಹಿಡಿದ ಕೀಟಗಳೇ ಆಹಾರ. ಕರ್ಕಶ *ಚೆಕ್.ಚೆಕ್.* ಕೂಗು. ಈಚಲ ಮರಗಳಿರುವೆಡೆ, ಗರಿಗಳ ಬುಡದಲ್ಲಿ, ಒಣಹುಲ್ಲು, ನಾರು-ಬೇರುಗಳಿಂದ ಮಾಡಿದ ಗೂಡು.

Starlings and Mynas *(Sturnidae)*

ಕಬ್ಬಕ್ಕಿ ಮತ್ತು ಗೊರವಂಕಗಳು *(ಕಾನಪಕ್ಷಿ)*

Mynas are medium sized birds, commonly seen around human habitation and mostly gregarious birds that are arboreal or terrestrial, with dark silky plumage. Have a straight, rather long, and slender bill; legs and feet strong; wings usually have white 'flags', seen especially in flight; tail short and square. Walks upright with a striding gait. Sexes nearly alike. Flight swift, strong and direct. Food includes insects, fruits, grains and flower nectar. Voice, garrulous, though generally harsh, some also have pleasing notes and whistles. They become aggressive when they get together and 'mob' an enemy like a cat or a snake. Some are serious pests of standing agricultural and horticultural crops. Nest consists of rags, twigs, roots, paper, rubbish in a hole in a tree, wall or ceiling. Both sexes share domestic duties.

ಹೆಚ್ಚಾಗಿ ಮಾನವನ ಸುತ್ತ-ಮುತ್ತಲ ವಾತಾವರಣದಲ್ಲಿ, ಗುಂಪಾಗಿ, ಮರ ಹಾಗೂ ನೆಲದ ಮೇಲೆ ವಾಸಿಸುವ ಮಧ್ಯಮ ಗಾತ್ರದ ಹಕ್ಕಿಗಳು. ಗಟ್ಟಿಮುಟ್ಟಾದ ಉದ್ದವಾದ, ಬಲಿಷ್ಟ ಕೊಕ್ಕು, ಸಧೃಢ ಕಾಲುಗಳು; ಅಗಲವಾದ-ಚೂಪಾದ ರೆಕ್ಕೆಗಳಲ್ಲಿ ಹಾರುವಾಗ ಎದ್ದುಕಾಣುವ ಅಗಲವಾದ ಬಿಳಿ ಬಾವುಟ; ಚಿಕ್ಕ, ಸಪಾಟು ಬಾಲ. ನೇರ ನಿಲುವು ಆದರೆ ಕುಂಟು ನಡೆ. ನೇರ ಶಕ್ತಿಯುತ ಹಾರಾಟ; ಕೀಟ, ಕಾಳುಗಳು, ಮಕರಂದ, ಇವೇ ಆಹಾರ. ಬೆಳೆದು ನಿಂತ ಪೈರು-ಹಣ್ಣುಗಳನ್ನು ನಾಶಮಾಡುವುದೂ ಉಂಟು. ಕೆಲವು ಹಾಡುಗಾರರನ್ನು ಬಿಟ್ಟರೆ ಉಳಿದವುಗಳದ್ದು ಕರ್ಕಶ, ವಟಗುಟ್ಟುವ ಕೂಗು. ಮರದ ಮೇಲೆ, ದೊಡ್ಡ ಸಂಖ್ಯೆಯಲ್ಲಿ ರಾತ್ರಿವೇಳೆ ವಿಶ್ರಮಿಸಿಕೊಳ್ಳುತ್ತವೆ. ಮರ, ಗೋಡೆಗಳ ರಂಧ್ರಗಳಲ್ಲಿ ಕಸ-ಕಡ್ಡಿಗಳನ್ನು ಪೇರಿಸಿ ಮಾಡಿದ ಗೂಡು.

191. Common Myna *(Acridotheres tristis)* Indian Myna R Pigeon- Familiar chirpy, trim dark brown bird; black head, neck, upper breast; yellow beak, leg and naked wattle around the eyes; large white *flags* in flight feathers, best seen in flight; black tail with broad white tip; pale white abdomen and vent. Pairs or parties seen in the neighbourhood of human habitations; haughty, confident, aggressive, curious and noisy; strutting about on the ground picking worms and eatables; attend grazing cattle and refuse dumps. **Voice**: variety of calls and chatter; loud scolding *keek.keek.; traio.traio.; churr.churr.* etc., uttered with their plumage rumpled and silly bungling of head. **Nesting**: April- August. **Eggs**: 4-5, glossy blue.

ಗೊರವಂಕ (ಉಣ್ಣೆಕುರುಳಿ) 23 ಸೆಂಮೀ. ಕಡುಗಂದು ದೇಹ; ಕಪ್ಪು ತಲೆ, ಕತ್ತು, ಎದೆ; ಹಳದಿ ಕೊಕ್ಕು-ಕಾಲುಗಳು; ಕಣ್ಣಿನ ಸುತ್ತ ನಗ್ನ ಹಳದಿ ಚರ್ಮ; ಹಾರುವಾಗ ರೆಕ್ಕೆಗಳ ಕೆಳಗೆ ಬಿಳಿ ಬಾವುಟ; ಕಪ್ಪು ಬಾಲಕ್ಕೆ ಬಿಳಿ ತುದಿ; ಬಿಳಿ ಕಿಬ್ಬೊಟ್ಟೆ. ಸಣ್ಣ ಗುಂಪಿನಲ್ಲಿ, ಕುರುಚಲು ಕಾಡು, ಜನವಸತಿ ಇರುವೆಡೆ ವಾಸ. ನಿರಾತಂಕದಿಂದ ಊರೊಳಗೇ ಇದ್ದುಕೊಂಡು ಮನುಷ್ಯರು ಎಸೆದ ತಿಂಡಿ-ತಿನಿಸು, ಕ್ರಿಮಿ, ಕೀಟಗಳು, ಹಣ್ಣುಗಳು, ಹೀಗೆ ಸರ್ವಭಕ್ಷಕರು. ಕಿವಿಗೆ ಇಂಪೆನಿಸದ ಅರಚಾಟ.

192. Jungle Myna *(Acridotheres fuscus)* R Myna+ Similar to 191, but overall greyish brown; no bare skin around eyes; orange beak; bushy upstanding feathers on forehead; white flags under the wings. Pairs or small party in well-wooded country, away from human habitation; attend to grazing cattle to get grasshoppers, insects. **Food**: also wild figs, berries and nectar. **Voice**: similar to 191, *keek.keek..* or *kek.kok..* **Nesting**: February-July. **Eggs**: similar to 191.

ಕಾಡು ಗೊರವಂಕ (ಜಡ್ಡುಕುರುಳಿ) 23 ಸೆಂಮೀ. ಎಲ್ಲವೂ ೧೯೧ರಂತೆ, ಆದರೆ ಬೂದುಗಂದು ದೇಹ; ಕಣ್ಣಿನ ಸುತ್ತ ಹಳದಿ ಮಚ್ಚೆ ಇಲ್ಲ; ಕಿತ್ತಳೆ ಕೊಕ್ಕು; ನಿಮಿರಿ ನಿಂತ ಹಣೆಗರಿಗಳು ಪರಾಗಸ್ಪರ್ಶದಲ್ಲಿ ಸಹಾಯಕಾರಿ; ರೆಕ್ಕೆಯಲ್ಲಿ ಬಿಳಿ ಬಾವುಟ. ಜೋಡಿ ಅಥವಾ ಸಣ್ಣಗುಂಪಾಗಿ, ಕುರುಚಲು ಕಾಡು, ಎಸ್ಟೇಟು, ಊರ ಹೊರಗಿನ ಕಾಡುಗಳಲ್ಲಿ ವಾಸ. ಮೇಯುವ ಗೋವುಗಳ ಮೇಲೆ ಸವಾರಿ ಮಾಡಿಕೊಂಡು ಕೀಟಗಳ ಬೇಟೆ, ಅಲ್ಲದೆ, ಹಣ್ಣು, ಮಕರಂದ ಆಹಾರ. ಉಳಿದೆಲ್ಲ ೧೯೧ರಂತೆ.

193. Southern Hill-Myna *(Gracula indica)* Hill Myna R Myna+ Glossy jet-black plumage; white *flags* on wings; orange-red beak; orange-yellow facial skin and fleshy wattle on nape and sides of face. Pairs or noisy flocks, in hilly forests, mostly arboreal, occasionally descend to bush or ground; hop among branches, especially on fruity trees, along with other frugivorous birds. **Food**: fruits, insects, lizards and nectar. **Voice**: excellent mimic, amazing vocalist with shrill whistles; sought after cage-bird; can also imitate human voice. **Nesting**: March-October. **Eggs**: 2-3, deep blue, with reddish brown spots.

ಕಾಮಳ್ಳಿ (ಕಾನಪಕ್ಷಿ) 25-29 ಸೆಂಮೀ. ಅಚ್ಚ ಕಪ್ಪು ದೇಹಕ್ಕೆ ಉಜ್ವಲ ಕಿತ್ತಳೆ ಕೊಕ್ಕು ಮತ್ತು ಕಾಲುಗಳು; ಮುಖದ ಮೇಲೆ ಕಿತ್ತಳೆ ಬಣ್ಣದ ಮಾಂಸಲ; ರೆಕ್ಕೆಯಲ್ಲಿ ಬಿಳಿ ಬಾವುಟ. ಸದಾಹಸಿರು, ಉದುರೆಲೆ ಕಾಡುಗಳಲ್ಲಿ ವಾಸ. ಕೊಂಬೆಗಳ ಮೇಲೆ ಕುಪ್ಪಳಿಸುತ್ತ, ಹಲ್ಲಿ, ಕೀಟ, ಮಕರಂದ, ಹಣ್ಣುಗಳ ಹುಡುಕಾಟ; ತಾರಕ ಸ್ವರದ ಸಿಳ್ಳೆ, ನಿಪುಣ ಮಾತುಗಾರ ಹಾಗೂ ಅಣಕುಗಾರ. ಬಹುಬೇಗ ನಮ್ಮ ಮಾತನ್ನೂ ಕಲಿಯಬಲ್ಲದು.

194. Grey-headed Starling *(Sturnus malabaricus)* Grey-headed Myna LM Myna- Silvery grey above; underparts are dull rufous above and brighter below; black and grey wings. Flocks in thinly wooded jungles; sociable and noisy, seen in all acrobatic positions to obtain nectar or fruit; reach the ground to pick insects. **Voice**: incessant metallic, whistling, squabbling and chatter with some pleasant musical notes. **Nesting**: March-June. **Eggs**: 3-5, pale blue. Female alone incubates.

ಬೂದುತಲೆ ಕಬ್ಬಕ್ಕಿ (ಪೈಂಗುರುಳಿ) 21 ಸೆಂಮೀ. ಬೆಳ್ಳಿ ಬಿಳಿ ಮೇಲ್ಮೈ; ಕೆಳಮೈಯಲ್ಲಿ ಎದೆಯ ಭಾಗ ಮಾಸಲು ಕೆಂಗಂದು, ಅಲ್ಲಿಂದ ಕೆಳಗೆ ಕೆಂಗಂದು; ಬೂದುಗಪ್ಪು ರೆಕ್ಕೆ. ಕಾಡುಗಳಲ್ಲಿ ವಾಸ. ಹಣ್ಣು, ಮಕರಂದಕ್ಕಾಗಿ ಕಚ್ಚಾಟ, ಕಿರುಚಾಟ. ಸಂಗೀತದ ಉಲಿತ.

Grey-headed Starling, White-headed Ssp. *(Sturnus malabaricus blythii)* R Myna- Similar to and sometimes seen along with 194, but head and underparts pure white. Rest same as 194.

ಬಿಳಿತಲೆಯ ಕಬ್ಬಕ್ಕಿ (ಬೊಳ್ತ ಪೈಂಗುರುಳಿ) 20 ಸೆಂಮೀ. ೧೯೪ರಂತೆ, ಆದರೆ ತಲೆ ಮತ್ತು ಕೆಳಮೈ ಅಚ್ಚಬಿಳಿ. ಎಷ್ಟೋ ಸಾರಿ ೧೯೪ರೊಂದಿಗೆ ಕಾಣಬಹುದು. ಉಳಿದೆಲ್ಲ ೧೯೪ರಂತೆ.

195. Brahminy Starling *(Sturnus pagodarum)* Black-headed Myna, Brahminy Myna R Myna- Grey above with a black crown, head and crest; buff on the sides of head, neck and underbody; black wings and brown tail with white on sides and tip. Female has smaller crest. Young ones have sooty brown head; crestless and generally dull coloured. Small flocks seen on flowering trees and open lands. Habits, voice similar to 194. **Nesting**: May-July. **Eggs**: same as 194.

ಕರಿತಲೆ ಕಬ್ಬಕ್ಕಿ (ಕರ್ತಮಂಡೆ ಕುರುಳಿ) 22 ಸೆಂಮೀ. ೧೯೪ರಂತೆ, ಆದರೆ, ಕಪ್ಪು ತಲೆ ಮತ್ತು ಉದ್ದವಾದ ಆಕರ್ಷಕ ಜುಟ್ಟು; ಮಾಸಲುಗಂದು ಕೆನ್ನೆ, ಕತ್ತು, ಕೆಳಮೈ; ಕಂದು ಬಾಲದಲ್ಲಿ ಬಿಳಿ. ಹೆಣ್ಣಿಗೆ ಸಣ್ಣ ಜುಟ್ಟು. ಕುರುಚಲು ಕಾಡು, ಹೂದೋಟ, ಜನವಸತಿ ಪ್ರದೇಶಗಳಲ್ಲಿ ವಾಸ. ಹಣ್ಣು-ಹೂಬಿಟ್ಟ ಮರಗಳಲ್ಲಿ ಗುಂಪಾಗಿ ಕಾಣಬಹುದು. ಉಳಿದೆಲ್ಲ ೧೯೪ರಂತೆ.

196. Rosy Starling *(Sturnus roseus)* Rosy Pastor M Myna Glistening black head, crest, neck, throat and upper breast, wing and tail; rosy-pink on rest of the plumage; brighter during spring emigration. Young ones crestless and dull brown. Gregarious flocks seen often with other Mynas; cause extensive damage to standing crops; also attend to grazing cattle; overall very aggressive. **Food**: also grains. **Voice**: very noisy; mixture of screams and chattering; also melodious whistles. Breed in eastern Europe, western and central Asia. Winter visitor during mid-August and depart in April.

ಗುಲಾಬಿ ಕಬ್ಬಕ್ಕಿ 23 ಸೆಂಮೀ. ಕಪ್ಪು ತಲೆ, ಜುಟ್ಟು, ಕತ್ತು, ಎದೆಯ ಮೇಲ್ಭಾಗ, ರೆಕ್ಕೆ ಮತ್ತು ಬಾಲ; ಉಳಿದೆಡೆ ತಿಳಿ ಗುಲಾಬಿ ಬಣ್ಣ. ಉಳಿದ ಮೈನಾಗಳೊಂದಿಗೆ, ಗುಂಪಾಗಿ ಬಯಲು, ಜನವಸತಿ ಪ್ರದೇಶಗಳಲ್ಲಿ ವಾಸ. ಸಾಮಾನ್ಯವಾಗಿ ಬೂರುಗ, ಹಾಲವಾಣ ಮರಗಳ ಹೂಗಳ ಮಕರಂದವನ್ನು ಹೀರುವುದನ್ನು ಕಾಣಬಹುದು; ಬೆಳೆದು ನಿಂತ ಪೈರಿಗೆ ಹಾನಿಕಾರಕ. ಬಹು ಗಲಾಟೆ ಸ್ವಭಾವ, ಸಮೂಹ ಉಲಿತ. ಯೂರೋಪ್, ಪಶ್ಚಿಮ-ಮಧ್ಯ ಏಷ್ಯಾದಿಂದ ಚಳಿಗಾಲದ ವಲಸೆಗಾರ.

Crows and Treepies *(Corvidae)*

ಕಾಗೆಗಳು *(ಕಾಕೆ)* ಮತ್ತು ಮಟಪಕ್ಷಿಗಳು *(ನೂಕರೆಬಾಲ)*

Crows are large, social, highly gregarious, passerine birds. Intelligent and resourceful, they are the most adaptable and successful of all bird families. Chief body colouration black. Bill is stout and powerful; wings and tail strong. Sexes alike. They are generally bold and aggressive. Some show highly developed mentality and have complex social organisation. Flight is strong and direct with deliberate wingbeats, also soar effortlessly. Food consists of animal and plant matter including insects, lizards, small birds, eggs, fruits, nectar and also kitchen scraps. Nest generally bulky, deep open structure made of thorn twigs, tied with rootlets, more than 3 metres up the tree. Eggs, 3-6. Both sexes share domestic duties. Treepies are arboreal birds and have long tail.

ಕಪ್ಪು ಬಣ್ಣದ, ದಪ್ಪ-ಗಟ್ಟಿಮುಟ್ಟಾದ ಕೊಕ್ಕಿನ, ದಷ್ಟಪುಷ್ಟ ರೆಕ್ಕೆ ಮತ್ತು ಬಾಲದ, ದೊಡ್ಡ ಗಾತ್ರದ ಸಂಘಜೀವಿಗಳೇ ಕಾಗೆಗಳು. ಧೈರ್ಯ, ಸಾಹಸ ಮತ್ತು ಆಕ್ರಮಣಕಾರಿ ಸ್ವಭಾವ. ಕೆಲವೊಮ್ಮೆ ಬುದ್ಧಿವಂತಿಕೆಯನ್ನೂ ತೋರಿಸುವುದುಂಟು. ವೇಗವಾಗಿ ರೆಕ್ಕೆ ಬಡಿದುಕೊಂಡು ಹಾರುವ, ನೇರವಾದ, ಸಬಲ ಹಾರಾಟ; ಆಕಾಶದೆತ್ತರದಲ್ಲಿ ರೆಕ್ಕೆ ಬಡಿಯದೇ ತೇಲುವುದುಂಟು. ತಿನ್ನಬಹುದಾದ ಯಾವುದೇ ವಸ್ತುವೂ ಅವುಗಳ ಆಹಾರಪಟ್ಟಿಯಲ್ಲಿವೆ; ಮಿಶ್ರಾಹಾರದಲ್ಲಿ, ಅಡಿಗೆಮನೆಯ ತ್ಯಾಜ್ಯ-ಉಳಿಕೆಗಳೂ ಸೇರಿದೆ. ಮರದ ಮೇಲೆ ಮುಳ್ಳುಗಂಟಿಗಳು, ನಾರು-ಬೇರುಗಳಿಂದ ತಯಾರಾದ ಆಳವಾದ ಗೂಡು. ಇದೇ ಕುಟುಂಬಕ್ಕೆ ಸೇರಿದ ಮಟಪಕ್ಷಿಗಳು, ಕಾಡಿನಲ್ಲಿ ಮರದ ಮೇಲೆ ವಾಸಿಸುವ ಉದ್ದ ಬಾಲದ ಹಕ್ಕಿಗಳು.

197. House Crow *(Corvus splendens)* R Crow Most familiar, highly gregarious bird with black plumage; grey collar, upper back, breast and abdomen; glossy black forehead crown and throat. An important scavenger bird, which is mostly dependent on man's presence; bold, confiding and wary; has communal roosting on trees; sometimes a menace. **Food**: omnivorous. **Voice**: familiar, rather harsh *kaa…kaa*. **Nesting**: April-June; nest is also strengthened by iron wires; sometimes several nests on the same tree. **Eggs**: 4-5, pale bluish green, speckled and streaked with brown. Commonly parasitised by Asian Koel.

***ಬೂದುಕಾಗೆ** (ಪೇಟೆಕಾಗೆ)* 43 ಸೆಂಮೀ. ಕಪ್ಪು ದೇಹಕ್ಕೆ ಬೂದು ಕುತ್ತಿಗೆ, ಎದೆ, ಹೊಟ್ಟೆ; ಕಡುಗಪ್ಪು ನೆತ್ತಿ, ಗಂಟಲು. ಯಾವತ್ತಿಗೂ ಮಾನವನ ನಿಕಟವರ್ತಿ. ಆಹಾರದ ವಿಷಯದಲ್ಲಿ ಯಾವುದೇ ಕಟ್ಟುಪಾಡಿಲ್ಲ. ಕಸದ ರಾಶಿಯನ್ನು ತಿಂದು ಕರಗಿಸಿ, ಪರಿಸರವನ್ನು ಚೊಕ್ಕಟವಾಗಿಡುವ ಕಾಯಕ. ಮರಗಳ ಮೇಲೆ ಗುಂಪಾಗಿ ತಂಗುವಿಕೆ. ಸುಪರಿಚಿತ, ಕರ್ಕಶ *ಕಾ..ಕಾ..* ಕೂಗು. ಕೋಗಿಲೆಯ ಮೊಟ್ಟೆ-ಮರಿಗಳಿಗೆ ಆಶ್ರಯದಾತ.

198. Jungle Crow *(Corvus macrorhynchos)* R Crow+ Jet black, glossy plumage; heavy beak with noticeable culmen curve. Usually solitary, seen on the outskirts of human habitat, near cultivation and wooded country, in association with vultures. Feeds on carrion. **Food**: omnivorous; destructive to eggs and chicks of other birds, young and small mammals. **Voice**: similar to 197 but less harsh. **Nesting**: December-April. Nest and eggs, similar to 197. Nests are parasitised by the Koel.

***ಕಪ್ಪುಕಾಗೆ** (ಕಾಗೆ)* 48-50 ಸೆಂಮೀ. ಸಂಪೂರ್ಣ ಕಪ್ಪು ದೇಹ. ಒಂಟಿಯಾಗಿ ಸದಾಹಸಿರು, ಕುರುಚಲು ಕಾಡು, ಬಯಲು, ಕೃಷಿ ಪ್ರದೇಶ, ಜನವಸತಿ ಮತ್ತು ಊರಿಂದ ಹೊರಗೆ ವಾಸ. ಇತರ ಹಕ್ಕಿಗಳು, ಅವುಗಳ ಮೊಟ್ಟೆಗಳು, ಸತ್ತ ಪ್ರಾಣಿಗಳು, ಆಹಾರ. ಸ್ವರ ೧೯೭ರಷ್ಟು ಕರ್ಕಶವಲ್ಲದ *ಕಾ.ಕಾ..* ಉಳಿದೆಲ್ಲ ೧೯೭ರಂತೆ. .ಕೋಗಿಲೆಯ ಮೊಟ್ಟೆ-ಮರಿಗಳಿಗೆ ಆಶ್ರಯದಾತ.

199. Indian Treepie *(Dendrocitta vagabunda)* R Myna+ Inquisitive, bold, but wary bird with a chestnut brown plumage; sooty grey brown head, neck and breast; greyish white patches on black wings, conspicuous in flight; long, graduated grey tail with black tip. Pairs or small group often with mixed hunting party; mostly arboreal, descends to ground to pick termites. Flight swift with noisy flapping, followed by undulating glide. **Food**: includes forest fruits and smaller creatures. **Voice**: three note *ko.ki.laa..* or *goo.go.lee..*; harsh, loud and guttural notes. **Nesting**: March-May. **Eggs**: 4-5, pale-salmon white, splashed with reddish brown.

***ಮಟಪಕ್ಷಿ** (ನೂಕರೆಬಾಲ)* 50 ಸೆಂಮೀ. ಚಾಕೊಲೇಟ್ ಬಣ್ಣದ ದೇಹಕ್ಕೆ, ಕಡು ಬೂದುಗಂದು ತಲೆ, ಕತ್ತು, ಎದೆ; ಕಪ್ಪು ರೆಕ್ಕೆಯಲ್ಲಿ ಬಿಳಿ ಮತ್ತು ಬೂದು; ಉದ್ದವಾದ ಬೂದುಬಾಲಕ್ಕೆ ಕಪ್ಪು ತುದಿ. ಜೋಡಿಯಾಗಿ ಉದುರೆಲೆ ಕಾಡು, ಎಸ್ಟೇಟು, ಮತ್ತು ತೋಪುಗಳ ಮರಗಳ ಮೇಲೆ ಕಾಣಬಹುದು. ಕಾಡು ಹಣ್ಣುಗಳಲ್ಲದೆ, ಕೊಳೆತ ಮಾಂಸ, ಪಕ್ಷಿಮರಿಗಳು, ಮೊಟ್ಟೆ, ಇಲಿ ಮುಂತಾದವುಗಳನ್ನು ತಿನ್ನುತ್ತವೆ. ಪಟಪಟ ರೆಕ್ಕೆ ಬಡಿದ ನಂತರ ಅಲೆಯಂತಹ ಹಾರಾಟ. ಗಡಸು ಧ್ವನಿಯ *ಕೆ.ಕ್ಕೆ..ಕ್ಕೆ..* ಮತ್ತು ಮೂರು ಸ್ವರದ ಸುಶ್ರಾವ್ಯ *ಕೋ.ಕಿ.ಲಾ.* ಕೂಗು.

200. White-bellied Treepie *(Dendrocitta leucogastra)* R Myna+ Similar to 199; black head, throat and upper breast; rufous back and vent; pure white nape, underparts and rump; large white patch on the wings; long, grey graduated tail tipped with broad black band. Habits similar to 199, but preferring moist and evergreen biotope. **Voice**: harsh as well as musical notes; *chuff...chuff..chufff...* calls with ludicrous bowing, and jumping up and down the perch, forepart depressed and tail cocked. **Nesting**: February-April. **Eggs**: 4-5, varied colours like creamy, reddish white, or greyish white; blotched and streaked with brown or lilac.

ಬಿಳಿಹೊಟ್ಟೆಯ ಮಟಪಕ್ಷಿ *(ಬೊಳ್ತ ನೂಕರೆಬಾಲ)* 50 ಸೆಂಮೀ. ೧೯೯ರಂತೆ ಕೆಂಗಂದು ಬೆನ್ನು, ಕಿಬ್ಬೊಟ್ಟೆ; ಕಪ್ಪು ತಲೆ, ಕತ್ತು, ಆದರೆ ಅಚ್ಚ ಬಿಳಿ ಹಿಂಗತ್ತು, ಎದೆ, ಕೆಳಮೈ ಮತ್ತು ಪೃಷ್ಠ; ರೆಕ್ಕೆಯ ಮೇಲೆ ದೊಡ್ಡ ಬಿಳಿ ಕಲೆ; ಉದ್ದವಾದ, ಕಪ್ಪು ತುದಿಯ ಬೂದು ಪಟ್ಟೆಬಾಲ. ಹೆಚ್ಚು ಶೀತವಿರುವ ಕಾಡುಗಳಲ್ಲಿ ವಾಸ. ಬೆನ್ನು ಬಾಗಿಸಿ, ರೆಕ್ಕೆ ಮುದುಡಿ, ಬಾಲವನ್ನು ಮೀಟಿಕೊಂಡು *ಚಫ್.ಚಫ್.ಚಫ್.* ಕೂಗು. ಉಳಿದೆಲ್ಲ ೧೯೯ರಂತೆ.

Cuckoo-Shrikes, Flycatcher-Shrikes, Woodshrikes and Minivets *(Campephagidae)*

ಕೀಚುಗಗಳು ಮತ್ತು ಚಿತ್ರಪಕ್ಷಿಗಳು *(ತಿತ್ತ್‌ಕಂಡಪಕ್ಷಿ)*

Arboreal birds with soft, loosely attached feathers; bill relatively heavy and slightly hooked; legs short; tail long and graduated. Sexes dimorphic. Keep to tree foliage, rarely descend to ground. Food consists chiefly of insects, larvae, flower nectar and fruits. Nest is a shallow open cup of twigs and rootlets bound together with cobweb and placed in a fork or secured to the branch. Eggs, 2-5, usually incubated by female. Minivets are colourful, cheerful birds.

ಜೀವನದ ಹೆಚ್ಚು ಸಮಯ ಮರಗಳಲ್ಲಿ, ಎಲೆಗಳ ನಡುವೆ ವಾಸಿಸುವ ಹಕ್ಕಿಗಳು. ಗಟ್ಟಿಮುಟ್ಟಾದ, ತುಸು ಕೊಕ್ಕೆಯಂತೆ ಬಾಗಿದ ಕೊಕ್ಕು; ಕಣ್ಣಿಗೆ ಕಪ್ಪುಪಟ್ಟಿ; ಸಣ್ಣ ಕಾಲುಗಳು; ಉದ್ದವಾದ ಪಟ್ಟೆ ಬಾಲ. ಗಂಡು-ಹೆಣ್ಣು ವಿಭಿನ್ನ. ಕೀಟಗಳು, ಮರಿಹುಳಗಳು, ಮಕರಂದ, ಹಣ್ಣುಗಳೇ ಆಹಾರ. ಮರದ ಕೊಂಬೆಗಳ ಕವಲುಗಳಲ್ಲಿ, ಕಡ್ಡಿ, ಬೇರು, ಜೇಡರಬಲೆಯಿಂದ ತಯಾರಾದ ಬಟ್ಟಲಿನಂತಹ ಗೂಡು. ಇನ್ನು ಇದೇ ಕುಟುಂಬಕ್ಕೆ ಸೇರಿದ ಚಿತ್ರಪಕ್ಷಿಗಳು, ಎತ್ತರದ ಹೂವರಳಿದ ವೃಕ್ಷಗಳ ಮೇಲೆ ಗುಂಪಾಗಿ, ಸಂಭ್ರಮದಿಂದ ಹಾರಾಡುತ್ತಾ ವನಕ್ಕೆ ಕಳೆಗಟ್ಟುವ ಉಜ್ವಲ ಬಣ್ಣದ ಹಕ್ಕಿಗಳು.

201. Large Cuckoo-Shrike *(Coracina macei)* R Pigeon- Rather self-effacing, thickset bird with grey plumage; broad dark stripe through eyes; black on wings and tail; greyish breast; white underparts. Female has grey-white bars below with paler eye stripe. Pairs seen among tree foliage in light forests and plantations; keep to upper branches, sometimes descend to bushes; typical flight with few wing beats and glide. **Voice**: distinct, shrill, double note *ti..teee..* **Nesting**: May-October; nest placed in fork of outhanging branch of a tall tree. **Eggs**: 3, pale green with dark brown or purple blotches.

ಕೋಗಿಲೆಕೀಚುಗ 28 ಸೆಂಮೀ. ದಷ್ಟಪುಷ್ಟವಾದ ಬೂದು ಹಕ್ಕಿ; ಕಣ್ಣಿಗೆ ಪಟ್ಟಿ; ರೆಕ್ಕೆ-ಬಾಲದಲ್ಲಿ ಕಪ್ಪು; ಬೂದು ಎದೆ; ಬಿಳಿ ಕೆಳಮೈ. ವಿರಳಕಾಡುಗಳಲ್ಲಿ, ಎಸ್ಟೇಟುಗಳಲ್ಲಿ ಎಲೆಗಳ ಮಧ್ಯೆ ಜೋಡಿಯಾಗಿ ಕಾಣಬಹುದು. ಎರಡು ಸ್ವರದ *ಟಿ.ಟೀ..* ಕೂಗು.

202. Black-headed Cuckoo-Shrike *(Coracina melanoptera)* R Bulbul+/- Inconspicuous greyish bird with a black head, wings; pale grey below breast and whitish underparts; white-tipped black tail except on mid-feathers. Female, greyish brown plumage with grey-white barred underparts. Pairs, occasionally small flocks

often as part of a mixed hunting party, in upper leafy tree branches near villages. **Voice**: during breeding, male has clear whistling notes ending in quick *vir..vir..virr..* silent otherwise. **Nesting**: March-September. **Eggs**: 2-3, greenish white with longitudinal brown blotches.

ಕರಿತಲೆ ಕೋಗಿಲೆಕೀಚುಗ 20 ಸೆಂಮೀ. ಕಡುಬೂದು ದೇಹಕ್ಕೆ ಕಪ್ಪು ತಲೆ, ರೆಕ್ಕೆ; ಬಿಳಿತುದಿಯ ಕಪ್ಪು ಬಾಲ; ಬಿಳಿ ಕೆಳಮೈ. ಹೆಣ್ಣಿಗೆ ಬೂದುಗಂದು ದೇಹ; ಬೂದು-ಬಿಳಿ ಪಟ್ಟೆ ಬಾಲ. ಜೋಡಿಯಾಗಿ, ಎಸ್ಟೇಟು, ಹೂದೋಟ ಮತ್ತು ಹಳ್ಳಿಗಳ ಆಸುಪಾಸಿನ ಮರಗಳಲ್ಲಿ, ಇತರ ಹಕ್ಕಿಗಳೊಂದಿಗೆ ವಾಸ. ಸಂತಾನಋತುವಿನಲ್ಲಿ ಗಂಡಿನ ಸಿಳ್ಳು, ಕೊನೆಯಲ್ಲಿ *ವಿರ್.ವಿರ್..*

203. Pied Flycatcher-Shrike *(Hemipus picatus)* R Sparrow+/- Black crown, nape, back and tail; black eye stripe; white chin and below; white in black wings, white rump and outer undertail coverts. In female, black portions are replaced by coal brown. Pairs or small parties in follow-the-leader pattern flying from tree to tree, search among leaves for insects; hunched-up profile; also have aerial sallies. **Voice**: mild squeaky *whi.riri..whi.riri..* notes. **Nesting**: March-June. **Eggs**: 2-3, pale greenish white with black blotches.

ಕಪ್ಪುಬಿಳಿ ಕೀಚುಗ 14 ಸೆಂಮೀ. ಗಂಡಿಗೆ ಕಪ್ಪು ಮೇಲ್ಮೈ; ಬಿಳಿ ಕೆಳಭಾಗ; ಕಪ್ಪು ಕಣ್ಣುಪಟ್ಟಿ, ನೆತ್ತಿ, ಹಿಂಗತ್ತು; ರೆಕ್ಕೆಯಲ್ಲಿ ಮತ್ತು ಬಾಲದಂಚು ಬಿಳಿ; ಬಿಳಿ ಪೃಷ್ಠ. ಹೆಣ್ಣಿಗೆ ಕಪ್ಪು ಬಣ್ಣದ ಬದಲು ಕರಿಗಂದು. ಮರದಿಂದ ಮರಕ್ಕೆ ಗುಂಪಾಗಿ ಒಂದರ ಹಿಂದೆ ಮತ್ತೊಂದು ಹಾರುವುವು. ಗೂನಿಕೊಂಡು ಕೂರುವ ಸ್ವಭಾವ. *ವ್ಹಿ.ರ್‍ರೀ..ವ್ಹಿ.ರ್‍ರೀ..* ಮೆದು ಉಲಿತ.

204. Large Woodshrike *(Tephrodornis gularis)* Malabar Woodshrike R Myna Ashy grey crown and nape; broad black eye stripe; ashy brown back; beak stout, strongly hooked and notched; white underparts and rump; brown, square-cut tail with rufous tip and outer feathers. Sexes alike. Pairs seen in thick wooded forest, often with mixed hunting party, flitting and making aerial sallies after insects. **Food**: large insects, caterpillar etc., **Voice**: loud, clear, musical *witoo.. witoo.. witoo.... chir... witoo..witoo..* **Nesting**: December-June. **Eggs**: 2-4, white tinged with green.

ದೊಡ್ಡ ಅಡವಿಕೀಚುಗ 23 ಸೆಂಮೀ. ಕಡುಬೂದು ಮೇಲ್ಭಾಗ; ಬಿಳಿ ಕೆಳಮೈ; ಅಗಲವಾದ ಕಪ್ಪು ಕಣ್ಣುಪಟ್ಟಿ; ದಪ್ಪ ಕೊಕ್ಕೆಯಂತಹ ಕೊಕ್ಕು; ಕಂದು ಬಾಲದಲ್ಲಿ ಕೆಂಗಂದು ಅಂಚು. ಕೀಟಗಳಿಗಾಗಿ ಗಾಳಿಯಲ್ಲಿ ಸರ್ಕಸ್ ಮಾಡುತ್ತಾ, ದಟ್ಟಕಾಡುಗಳಲ್ಲಿ ಉಳಿದ ಹಕ್ಕಿಗಳೊಂದಿಗೆ ಕಾಣಬಹುದು. *ವಿಟೂ..ವಿಟೂ..ಚಿರ್‍ರ್..* ಕೂಗು.

205. Common Woodshrike *(Tephrodornis pondicerianus)* R Bulbul- Greyish brown plumage with dark eye stripe and white supercilium; lighter underparts; short, square tail with white outer tail feathers. Female may have paler eye stripe. Pairs or small parties, seen on mid level branches in light wooded forests, often along with mixed hunting band; sometimes descend to ground. **Voice**: rich, liquid whistle *weet..weet..* followed by quick *whi..whi..whee..?* **Nesting**: February-September. **Eggs**: 3, greyish green with purple brown speckles.

ಅಡವಿಕೀಚುಗ 16 ಸೆಂಮೀ. ಬೂದುಗಂದು ಮೇಲ್ಮೈ; ಕಣ್ಣುಪಟ್ಟಿ; ಬಿಳಿ ಹುಬ್ಬು, ಕೆಳಮೈ ಮತ್ತು ಬಿಳಿಯಂಚಿನ ಕಪ್ಪು ಬಾಲ. ಉಳಿದ ಹಕ್ಕಿಗಳೊಂದಿಗೆ, ಕಾಡುಗಳಲ್ಲಿ, ಎಸ್ಟೇಟುಗಳಲ್ಲಿ ವಾಸ. *ವೀಟ್..ವೀಟ್..ವಿವಿವೀ..?* ಮಧುರ ಸಿಳ್ಳೆ.

206. Small Minivet *(Pericrocotus cinnamomeus)* R Sparrow- Male with dark grey head, back; black throat; black wings with orange-yellow patch; black tail; flame-orange breast; orange-yellow belly and undertail coverts. Female and young male, pale above with orange rump; pale white throat, breast; yellowish belly and undertail. Small party or pairs seen fluttering on treetops in forests, groves and estates. **Voice**: soft, musical *swee..sweee..* uttered while hunting and on the wing. **Nesting**: February-September. **Eggs**: 3, pale greenish white stippled with brown.

ಸಣ್ಣ ಚಿತ್ರಪಕ್ಷಿ ***(ಚೆರಿಯ ತಿತ್ತ್‌ಕಂಡಪಕ್ಷಿ)*** 15 ಸೆಂಮೀ. ಗಂಡಿಗೆ ಕಡುಬೂದು ನೆತ್ತಿ, ಹಿಂಗತ್ತು, ಬೆನ್ನು; ಕಪ್ಪು ಗಲ್ಲ; ಕಪ್ಪು ರೆಕ್ಕೆಗಳಲ್ಲಿ ಕಿತ್ತಳೆ-ಹಳದಿ ಪಟ್ಟಿಗಳು; ಕಿತ್ತಳೆ ಪೃಷ್ಠ; ಕಪ್ಪು ಬಾಲ; ತಿಳಿ ಕಿತ್ತಳೆ-ಹಳದಿ ಕೆಳಮೈ. ಹೆಣ್ಣಿಗೆ ತಿಳಿ ಬೂದು ಮೇಲ್ಮೈ ಮತ್ತು ಬಿಳಿ ಗಲ್ಲ, ಗಂಟಲು. ಸಣ್ಣ ಗುಂಪಿನಲ್ಲಿ, ವಿರಳ ಕಾಡು-ಎಸ್ಟೇಟುಗಳಲ್ಲಿ, ಮರಗಳ ತುದಿಯಲ್ಲಿ, *ಸ್ವೀ..ಸ್ವೀ..* ಉಲಿತದೊಂದಿಗೆ, ಹಾಡುತ್ತ ಹಾರಾಡುತ್ತವೆ.

207. Scarlet Minivet *(Pericrocotus flammeus)* R Bulbul- Male, glistening black head, throat, back and tail; deep scarlet on black wings, lower back, rump, breast, underparts and undertail coverts. Female, rich yellow forehead, supercilium, throat, neck, breast, underparts, undertail coverts; greyish yellow above; yellow in black wings; black tail. Small parties, flitting through treetops, give an entrancing sight. Habits similar to 206. **Voice**: pleasant, whistling groupsong *whee..tweet..* or *whiriri..whrirri..whiriri..* in flight and from perch. **Nesting**: April-July. **Eggs**: 2-4, pale green with brown spots and blotches.

ಚಿತ್ರಪಕ್ಷಿ ***(ತಿತ್ತ್‌ಕಂಡಪಕ್ಷಿ)*** 20 ಸೆಂಮೀ. ಗಂಡಿಗೆ ಅಚ್ಚಗಪ್ಪು ತಲೆ, ಕತ್ತು, ಬೆನ್ನು; ಕಪ್ಪು ರೆಕ್ಕೆಯಲ್ಲಿ, ಬಾಲದ ಕೆಳಗರಿಗಳು ಮತ್ತು ಕೆಳಮೈ, ಉಜ್ವಲ ಕೆಂಪು-ಕಿತ್ತಳೆ. ಹೆಣ್ಣಿಗೆ ಬೂದು ಮೇಲ್ಮೈ; ಹಳದಿ ಮುಖ, ಕತ್ತು ಮತ್ತು ಕೆಳಮೈ; ಕಪ್ಪು ರೆಕ್ಕೆ-ಬಾಲದಲ್ಲಿ ಹಳದಿ. ಸದಾಹಸಿರು, ತೇವ-ಉದುರೆಲೆ ಕಾಡುಗಳಲ್ಲಿ ಹೂತಳೆದ ಮರಗಳ ಮೇಲೆ ವಾಸ. ೨೦೬ರಂತೆ ಗುಂಪಾಗಿ ಹಾರಾಟ. ಒಟ್ಟಿಗೆ ಸಂಭ್ರಮದ *ವೀ.ಟ್ವೀಟ್..*, *ವಿರಿರಿ.ವಿರಿರಿ.* ಚಿಲಿಪಿಲಿ ಉಲಿತ.

Iora, Chloropsis and Fairy Bluebird *(Irenidae)*

ಮಧುರಕಂಠ *(ಉಗ್ಗೆಪಿತ)*, ಎಲೆಹಕ್ಕಿ *(ತೊಪ್ಪ್‌ಕುಡ್‌ಕ)* ಮತ್ತು ನೀಲಿಸಿಳ್ಳಾರಗಳು *(ಬಳ್ಳಿಕೂರ)*

These are small to medium sized arboreal birds with bright coloured plumage. Bill moderately long and slightly hooked, or slender and curved; legs short and thick; feet small; wings rounded; tail short to long, square or rounded. Sexes dimorphic, males brighter. Food includes fruits, berries, nectar and insects. Voice consists of melodious whistles, some are good mimics. Nest is a neat, cup shaped structure made of rootlets, fibres bound by cobweb, lined with soft grass or cotton, built in trees. Eggs, 2-4.

ಉಜ್ವಲ ಬಣ್ಣದ, ಮರದ ಮೇಲೆ ವಾಸಿಸುವ ಸಣ್ಣ ಅಥವಾ ಮಧ್ಯಮ ಗಾತ್ರದ ಹಕ್ಕಿಗಳು. ಸಣ್ಣ ಅಥವಾ ಸಪೂರವಾದ, ಬಾಗಿದ ಕೊಕ್ಕು; ಸದೃಢ ದುಂಡು ರೆಕ್ಕೆಗಳು; ಸಣ್ಣ ಕಾಲುಗಳು; ಸಪಾಟಾದ ಬಾಲ. ಗಂಡು-ಹೆಣ್ಣು

ನೋಡಲು ವಿಭಿನ್ನ. ಹಣ್ಣು, ಮಕರಂದ, ಕೀಟ ಮತ್ತು ಜೇಡಗಳೇ ಆಹಾರ. ಕುಟುಂಬದ ಎಲ್ಲ ಹಕ್ಕಿಗಳೂ ಉತ್ತಮ ಹಾಡುಗಾರರು; ನಿಸ್ಸೀಮ ಅಣಕುಗಾರರೂ ಕೂಡ. ಮರದ ಮೇಲೆ, ನಾರು–ಬೇರು ಜೇಡರ ಬಲೆಗಳಿಂದ ತಯಾರಾದ ಬಟ್ಟಲಿನ ಆಕಾರದ ಗೂಡು.

208. Common Iora *(Aegithina tiphia)* Iora R Sparrow Appearing as a yellow ball, it is more heard than seen. Male has black wings and tail; two white wing bars; bright yellow underbody; rich black above and with yellow rump, during breeding. Female has yellow-green plumage; pale greenish-brown wings and white wing bars. Pairs seen in gardens, groves and light forests and secondary jungles, hopping from twig to twig, clinging sideways and upside down, in search of insects among the foliage. **Food:** mainly insects, their eggs and larvae, spiders and nectar. **Voice:** the name *Shoubeegi* is onomatopoeic; rich, whistling and musical *whee.. whee.. chu* note. **Nesting:** May-August. **Eggs**: 2-4, pale white, blotched with purplish brown.

ಮಧುರಕಂಠ *(ಉಗ್ಗಿಐತ)* 14 ಸೆಂಮೀ. ಅಚ್ಚ ಹಳದಿ ಚೆಂಡು. ಕಪ್ಪು ಮೇಲ್ಭಾಗ; ಶುಭ್ರ ಹಳದಿ ಕೆನ್ನೆ, ಪೃಷ್ಠ, ಕೆಳಮೈ; ರೆಕ್ಕೆಯ ಮೇಲೆ ಎರಡು ಬಿಳಿ ಪಟ್ಟಿ; ಕಪ್ಪು ಬಾಲ. ಹೆಣ್ಣಿನದ್ದು ಹಳದಿ–ಹಸಿರು ದೇಹ; ರೆಕ್ಕೆಯಲ್ಲಿ ಪೇಲವ ಹಸಿರುಗಂದು. ಜೋಡಿಯಾಗಿ ಉದುರೆಲೆ ಕಾಡು, ಎಸ್ಟೇಟು, ಹೂದೋಟಗಳಲ್ಲಿ, ತೋಪುಗಳಲ್ಲಿ, ಹೂ–ಹಣ್ಣುಗಳಿರುವ ಮರಗಳ ಮೇಲೆ ಕುಪ್ಪಳಿಸುತ್ತ ಕೀಟಗಳ ಬೇಟೆಯಲ್ಲಿ ಓಡಾಡುತ್ತವೆ. ಇಂಪಾದ ಶ್ರೀಮಂತ *ಶೋ.ಬೀ..ಗೀ..* ಸಿಳ್ಳು; ಅಲ್ಲದೆ ಸಂಗೀತದ ವಿವಿಧ ಸ್ವರಗಳ ಕೂಗು.

209. Jerdon's Chloropsis *(Chloropsis cochinchinensis)* Gold-mantled Chloropsis R Bulbul+ Aggressive, bright leaf green bird. Male has yellow-green forehead; black chin and throat; bright purple-blue moustachial streaks; pale yellowish green band around the throat; slender, slightly curved black bill. Female has pale bluish-green chin and throat, bright greenish blue moustachial streaks. Pairs or parties among leafy trees; acrobatic swinging and searching through the blossom for nectar. **Voice:** Excellent mimic, often confusing the birdwatcher and also has a wide vocabulary of its own. **Nesting**: April-August. **Eggs**: 2-3, pale white and speckled and blotched with black, brown or purple.

ನೀಲಿರೆಕ್ಕೆಯ ಎಲೆಹಕ್ಕಿ *(ತೊಪ್ಪ್‌ಕುಡ್‌ಕ)* 18 ಸೆಂಮೀ. ಚಿಗುರು ಹಸಿರು ದೇಹಕ್ಕೆ ಕಪ್ಪು ಗಲ್ಲ, ಗಂಟಲು; ಹಸಿರು–ಹಳದಿ ಹಣೆ ಮತ್ತು ಕತ್ತಿನ ಸರ; ಹೆಣ್ಣಿಗೆ ಗಂಟಲಿನಲ್ಲಿ ಕಪ್ಪು ಬಣ್ಣವಿಲ್ಲ. ಸಣ್ಣ ಗುಂಪಿನಲ್ಲಿ, ಕಾಡು ಮತ್ತು ಎಸ್ಟೇಟು ಮರಗಳ ಎಲೆಮರೆಯಲ್ಲಿ, ಮಕರಂದಕ್ಕಾಗಿ ಕಸರತ್ತು ಮಾಡುತ್ತಾ ಬೇಟೆ ಹಿಡಿಯುತ್ತವೆ. ವಿವಿಧ ರೀತಿಯ ಇಂಪಾದ ಸ್ವರಗಳು, ಅಲ್ಲದೆ ಇತರ ಹಕ್ಕಿಗಳ ಅಣಕು ಸ್ವರಗಳಿಂದ ವೀಕ್ಷಕರನ್ನು ಬೇಸ್ತು ಬೀಳಿಸುತ್ತವೆ!

210. Gold-fronted Chloropsis *(Chloropsis aurifrons)* Green Bulbul R Bulbul+ Bright leaf green bird, with bright golden forehead; blue shoulder patches; almost purple-black chin; black cheeks, ear coverts and throat. Female pale and duller, without black cheek and throat. Lively pairs seen among leafy canopy. **Voice**: Noisy; *chi..chew.ch..ee...* call; assortment of whistling notes with imitation of other birds. Nesting same as 209. **Eggs**: 2, cream or light red, speckled with dark purplish red.

ಹೊನ್ನಹಣೆಯ ಎಲೆಹಕ್ಕಿ *(ಪಚ್ಚೆ ಕೊಟ್ಪ್ಂಬುಡ್‌ಚ)* 19 ಸೆಂಮೀ. ಅಚ್ಚ ಎಲೆಹಸಿರು ದೇಹ; ಕಪ್ಪು-ನೇರಿಳೆ ಕೆನ್ನೆ, ಗಲ್ಲ, ಗಂಟಲು; ಹಳದಿ ಸರ; ನೀಲಿ ಭುಜಮಚ್ಚೆ; ಹೊಳೆಯುವ ಸುವರ್ಣದ ಹಣೆ. ಹೆಣ್ಣಿಗೆ ಪೇಲವ ದೇಹ; ಗಂಟಲ ಮಚ್ಚೆಗಳಿಲ್ಲ. ಸದಾಹಸಿರು, ಉದುರೆಲೆ, ಕುರುಚಲು ಕಾಡು, ಎಸ್ಟೇಟುಗಳಲ್ಲಿ ವಾಸ. ಎಷ್ಟೋ ಸಾರಿ ೨೧೦ರೊಂದಿಗೆ ಕಾಣಬಹುದು. ವಾಸ, ಸ್ವಭಾವ, ಧ್ವನಿ, ಆಹಾರ, ಮತ್ತೆಲ್ಲವೂ ೨೧೦ರಂತೆ.

211. Asian Fairy-Bluebird *(Irena puella)* Fairy Bluebird R Myna+ Arboreal bird, with shining plumage. Male has glinting blue above; deep velvet-black sides of face, underbody and wings; blue under tail coverts; ruby eyes. Female has verditer blue plumage; dull black lores and flight feathers. Pairs or small loose party, seen along with other frugivorous birds in fruiting trees. **Food:** also insects and nectar. **Voice**: two note, fluid whistle *why..weet..* repeated every 6-8 seconds, with a sharp jerk of tail; also some harsh calls. **Nesting**: February-March; nest consists of a platform made of thick twigs, overlaid by green moss, leaf ribs and rootlets, placed 5 metres up in a fork of a tree, covered with dense foliage. **Eggs**: 2, olive grey with brown blotches.

ನೀಲಿಸಿಳ್ಳಾರ *(ಬಳ್ಳಿಕೂರ)* 27 ಸೆಂಮೀ. ಗಂಡು ಬಹು ಆಕರ್ಷಕ. ಬಿಸಿಲಿಗೆ ಮಿರುಗುವ ಕಡುನೀಲಿ ಮೇಲ್ಮೈಗೆ ಅಚ್ಚಗಪ್ಪು ಕೆನ್ನೆ, ಕೆಳಮೈ, ರೆಕ್ಕೆ, ಬಾಲ; ಬಾಲದ ಬುಡ ನೀಲಿ; ಕೆಂಪು ಕಣ್ಣುಗಳು. ಹೆಣ್ಣಿಗೆ ಹಸಿರು ಮಿಶ್ರಿತ ನೀಲಿ ದೇಹ. ಸದಾಹಸಿರು, ತೇವ-ಉದುರೆಲೆ ಹಾಗೂ ಕೊಡಗಿನ ಎಲ್ಲ ಕಾಡುಗಳಲ್ಲಿಯೂ ಫಲಭರಿತ ಮರಗಳ ಮೇಲೆ ಜೋಡಿಯಾಗಿ, ಸಣ್ಣ ಗುಂಪಿನಲ್ಲಿ ಕಾಣಬಹುದು. ಒಂದೊಂದು ಬಾರಿಗೂ ಬಾಲವನ್ನು ಮೀಟಿ, ವೈ..ವೀಟ್.. ಲಾಲಿತ್ಯದ ಸಿಳ್ಳೆ ಕೂಗು.

Bulbuls *(Pycnonotidae)*

ಪಿಕಳಾರಗಳು *(ಕೊಟ್ಪ್ಂಬುಡ್‌ಚ)*

Bulbuls are gregarious, slim, usually dull coloured arboreal birds, with an often inquisitive behaviour. They have short to medium sized, slightly curved beak; wings short and rounded; legs short, rather weak; tail comparatively longer; hair-like feathers on the nape and rictal bristles usually well developed. Sexes alike. Very vocal and conspicuous, their fluty cries are commonly heard in shrubbery and garden, gathering noisily in favoured trees to feed on fruits. Food includes nectar, berries, fruits and insects. Nest consists of an open cup of twigs and leaves built in the most open and obvious site in the bushes or trees. Eggs, 2 to 5; purplish white blotched with purplish brown. Both sexes share the parental duties.

ಸಂಗೀತದ ಮನೆತನಕ್ಕೆ ಸೇರಿದ, ಅದರಲ್ಲೂ ಸಮೂಹಗಾನಕ್ಕೆ ಹೆಸರಾದ, ಹಕ್ಕಿಗಳು. ಕಾಡಿನಲ್ಲಾಗಲೀ, ಹೂದೋಟಗಳಲ್ಲಾಗಲೀ ಹಾಡುತ್ತಾ, ಹಾರಾಡುತ್ತಾ ಕಣ್ಮನಗಳನ್ನು ತಣಿಸುತ್ತವೆ; ಮರದಿಂದ ಮರಕ್ಕೆ ಕುತೂಹಲದಿಂದ, ಲವಲವಿಕೆಯಿಂದ ಕುಪ್ಪಳಿಸುತ್ತಾ ಇಡೀ ವಾತಾವರಣವನ್ನೇ ಜೀವಂತಗೊಳಿಸುತ್ತವೆ. ಎಲ್ಲಾ ಜಾತಿಯವೂ ಸರಿಸುಮಾರು ಒಂದೇ ಗಾತ್ರ. ಮಾಸಲು ಬಣ್ಣದ ದೇಹ; ಸಣ್ಣ-ತುಸು ಬಾಗಿದ ಕೊಕ್ಕು; ಸಣ್ಣ-ದುಂಡಾದ ರೆಕ್ಕೆಗಳು; ಸಣ್ಣ ದುರ್ಬಲ ಕಾಲುಗಳು; ತುಸು ಉದ್ದವಾದ ಬಾಲ. ಬುಲ್‌ಬುಲ್‌ಗಳು ಹಣ್ಣು,

ಮಕರಂದ ಹಾಗೂ ಕೀಟಪ್ರಿಯರು. ಗಿಡ-ಗಂಟಿಗಳ ಕವಲುಗಳಲ್ಲಿ ಬಟ್ಟಲಿನಂತಹ ಪುಟ್ಟ ಗೂಡು ಕಂಡರೆ, ಹೆಚ್ಚಿನಪಾಲು ಅದು ಪಿಕರಾಳದ್ದೇ ಸರಿ.

212. Red-whiskered Bulbul *(Pycnonotus jocosus)* R Bulbul Brown above, slightly darker on the wings and tail; black head, cheeks, nape and perky crest pointed forwards; crimson 'whiskers' behind eyes; black breast collar, broken in the front; white underbody with a crimson vent. Sexes alike. Sociable, lively and energetic pairs or as small party seen around more wooded orchards, gardens and human habitations, enlivening the surrounding. Flight strong but uneven. Popular cage bird. **Voice**: cheerful whistling songs; also harsh grating alarming notes. **Nesting**: February-August, nest also built in thatch walls and roof of huts.

ಕೆಮ್ಮೀಸೆ ಪಿಕಳಾರ ***(ಜೋಂದದವಡೆ ಕೊಟ್ಪ್ಂಬುಡ್‌ಚ)*** 20 ಸೆಂಮೀ. ಸಾಮಾನ್ಯವಾಗಿ ಕಂಡುಬರುವ ಪಿಕಳಾರ; ಕಪ್ಪುತಲೆಯ ಮೇಲೆ ಮುಂದಕ್ಕೆ ಬಾಗಿರುವ ಪಿಳ್ಳುಜುಟ್ಟು; ಕಪ್ಪು ಹಿಂಗತ್ತು, ಕೆನ್ನೆ, ಎದೆಯ ಕಾಲರ್; ಕೆನ್ನೆಯ ಮೇಲೆ ಬಿಳಿ-ಕೆಂಪು ಮತ್ತು ಕೆಳ ಹೊಟ್ಟೆಯ ಮೇಲೆ ಕೆಂಪು ಮಚ್ಚೆ; ಕಂದು ಬೆನ್ನು ಮತ್ತು ಬಿಳಿ ಕೆಳಮೈ. ಗುಂಪಾಗಿ, ಕುರುಚಲು, ವಿರಳ ಕಾಡು, ಜನವಸತಿ ಪ್ರದೇಶಗಳಲ್ಲಿ ವಾಸ; ಮನೆಗಳ ಸುತ್ತ-ಮುತ್ತಲ ಹೂದೋಟಗಳಲ್ಲಿ ಅಡ್ಡಾಡುತ್ತಾ ಚೇತೋಹಾರಿ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಕಿವಿಗಿಂಪಾದ ಹಲವು ಸ್ವರಗಳ *ಚುರು.ಚುರುಳಿ..* ಕೂಗು.

213. Red-vented Bulbul *(Pycnonotus cafer)* R Bulbul Dark smoky-brown bird with black head and a slight crest; pale edges of the feathers on the back and breast give a scaly appearance; white rump and red vent diagnostic; dark tail with white tip. Pairs or small flocks, seen often along with 212, in lightly wooded gardens and around human habitations; love dust bathing. **Food**: swarm peepal and fig trees; food also includes winged termites and kitchen scraps. **Voice**: No song like that of 212 but joyous notes and a *tri*...*traw*...call. **Nesting**: February-May. Eggs similar to 212.

ಕೆಂಪುಕಿಬ್ಬೊಟ್ಟೆಯ ಪಿಕಳಾರ ***(ರರ್ತಮಂಡೆ ಕೊಟ್ಪ್ಂಬುಡ್‌ಚ)*** 20 ಸೆಂಮೀ. ೨೧೨ರಂತೆ, ಆದರೆ ವಿರಳ; ಕಡುಗಂದು ದೇಹ; ತಲೆಯ ಮೇಲೆ ಬೋಳುಜುಟ್ಟು; ದೇಹದಲ್ಲಿ ಹುರುಪೆಯಂತಹ ಗರಿಗಳ ವಿನ್ಯಾಸ; ಬಿಳಿ ಪೃಷ್ಠ; ಕೆಳಹೊಟ್ಟೆಯ ಮೇಲೆ ಕೆಂಪು ಮಚ್ಚೆ; ಬಾಲದ ತುದಿ ಬಿಳಿ. ಕುರುಚಲು ಕಾಡು, ತೋಟಗಳು, ಜನವಸತಿ ಪ್ರದೇಶಗಳ ಗಿಡ-ಪೊದೆಗಳಲ್ಲಿ ವಾಸ. ಪ್ರಜನನ ಸಮಯದಲ್ಲಿ ಹಲವು ಇಂಪಾದ ಸ್ವರಗಳು ಮತ್ತು *ಟ್ರಿ.ಟ್ರಾ..* ಕೂಗು. ಉಳಿದೆಲ್ಲ ೨೧೨ರಂತೆ.

214. White-browed Bulbul *(Pycnonotus luteolus)* R Bulbul Bright brownish olive green bird with conspicuous white eyebrows and forehead; light underparts. Inhabits dry scrub, light forests and village habitat; rather shy bird; skulks in dense low growth, seen only when it flies from one bushy patch to the other. **Voice**: loud explosive chatter; willow whistling notes and chuckles. Food, nesting and eggs similar to 212.

ಬಿಳಿಹುಬ್ಬಿನ ಪಿಕಳಾರ ***(ಬೊಳ್ತಪುಬ್ಬ್ಯರ ಕೊಟ್ಪ್ಂಬುಡ್‌ಚ)*** 20 ಸೆಂಮೀ. ತಿಳಿಗಂದು ಮಿಶ್ರಿತ ಎಲೆಹಸಿರು ಮೇಲ್ಮೈ; ಕೆಂಪುಗಣ್ಣು; ಬಿಳಿ ಹುಬ್ಬು; ತಿಳಿ ಕೆಳಮೈ. ಉದುರೆಲೆ, ಕುರುಚಲು, ವಿರಳಗಾಡು, ಹಳ್ಳಿಗಳ ಸುತ್ತಮುತ್ತ, ಹೂ-ಹಣ್ಣಿನ ತೋಟಗಳಲ್ಲಿ ವಾಸ. ಮಳೆ ಬಿದ್ದೊಡನೆ ಏಳುವ ರೆಕ್ಕೆ-ಗೆದ್ದಲುಗಳೆಂದರೆ ಬಲು ಇಷ್ಟ. ಎಲೆಗಳ ನಡುವೆ ಅಡಗಿಕೊಂಡಿದ್ದರೂ ಇಂಪಾದ ಸಿಳ್ಳೆಯಿಂದ ಪತ್ತೆಹಚ್ಚಬಹುದು. ಉಳಿದೆಲ್ಲ ೨೧೨ರಂತೆ.

215. Ruby-throated Bulbul *(Pycnonotus melanicterus gularis)* R Bulbul- A distinct subspecies of Black-crested Bulbul. Glossy black head and crest; olive-yellow nape and back; brownish tail; yellow underparts; ruby red throat diagnostic. **Voice**: cheerful whistles and 4-8 note song; harsh *churr*... call. Habits and nesting, similar to 212.

ಕೆಂಪುಕೊರಳಿನ ಪಿಕಳಾರ ***(ಚೋಂದಕತ್ತ್ರ ಕೊಟ್ಪ್ಂಬುಡ್‌ಚ)*** 18 ಸೆಂಮೀ. ಕಪ್ಪು ತಲೆ, ಜುಟ್ಟು; ಮಾಸಲು ಹಸಿರು ಮೇಲ್ಮೈ, ಹಿಂಗತ್ತು; ಕಂದು ಬಾಲ; ಹಳದಿ ಕೆಳಭಾಗ, ಕತ್ತಿನಲ್ಲಿ ಮಾಣಿಕ್ಯದ ಮಚ್ಚೆ. ಇಂಪಾದ ೪-೮ ಸ್ವರದ ಸಿಳ್ಳೆ. ಅರಣ್ಯ, ಕಾಫಿ ತೋಟಗಳಲ್ಲಿ ವಾಸ. ಉಳಿದದ್ದು ೨೧೨ರಂತೆ.

216. Yellow-browed Bulbul *(Iole indica)* R Bulbul Bright yellow olive brown above; bright yellow forehead, sides of the face, supercilium and underparts; wings have brownish tint. Small party seen in evergreen forests, sholas and shade trees of coffee and cardamom plantations. **Voice**: clear mellow double whistle and harsh alarm notes. **Nesting**: February-May; nest made up of deep round cup suspended hammockwise, in the horizontal fork of twigs, 2 to 3 metres up in a thick foliage cover. **Eggs**: 2-3, pale creamy pink, freckled and blotched with red.

ಹಳದಿಹುಬ್ಬಿನ ಪಿಕಳಾರ ***(ಮಂಜಪುಬ್ಬ್ರ ಕೊಟ್ಪ್ಂಬುಡ್‌ಚ)*** 20 ಸೆಂಮೀ. ಎಲ್ಲವೂ ೨೧೪ರಂತೆ, ಮಾಸಲು ಹಸಿರು ಮೇಲ್ಮೈ, ಆದರೆ ಅಚ್ಚ ಹಳದಿ ಹಣೆ, ಕೆನ್ನೆ, ಹುಬ್ಬು ಮತ್ತು ಕೆಳಭಾಗ; ಬಾಲದಲ್ಲಿ ಕಂದು. ಸದಾಹಸಿರು, ತೇವ-ಉದುರೆಲೆ, ಶೋಲಾ ಅರಣ್ಯ ಮತ್ತು ಕಾಫಿ-ಏಲಕ್ಕಿ ಎಸ್ಟೇಟುಗಳಲ್ಲಿ ವಾಸ. ೨ ಸ್ವರದ ಸಿಳ್ಳೆ, ಗುರುತು ಹಿಡಿಯಲು ಸಹಕಾರಿ. ಸುವರ್ಣಪಕ್ಷಿಯಂತೆ ಅಡ್ಡಕೊಂಬೆಯ ಕವಲಿಗೆ ಉಯ್ಯಾಲೆಯಂತೆ ನೇತುಹಾಕಿದ ಆಳವಾದ ಬಟ್ಟಲಿನಂತಹ ಗೂಡು. ಉಳಿದೆಲ್ಲ ೨೧೪ರಂತೆ.

217. Black Bulbul *(Hypsipetes leucocephalus)* R Bulbul+ Ashy grey plumage; black, loosely knit crest; coral red beak and legs diagnostic; white below the abdomen; slightly forked tail. Flocks seen in thick forest tree foliage with mixed hunting party; rarely descend to lower bushes; often seen catching insects in the air, with short twisting sallies from tree tops. **Voice**: squeaky whistles, chirping *chee.cheee.cheee..* or *whew.whe..* calls. **Nesting**: May-July; nest on a forked horizontal branch. **Eggs:** 2-4, pale pink with red tiny blotches.

ಕರಿ ಪಿಕಳಾರ ***(ಕರ್ತ ಕೊಟ್ಪ್ಂಬುಡ್‌ಚ)*** 23 ಸೆಂಮೀ. ಬೂದುಗಪ್ಪು ಮೈ, ಅಚ್ಚಕಪ್ಪು ತಲೆ; ಕೆಂಪು ಕೊಕ್ಕು, ಕಾಲುಗಳು; ಬಿಳಿ ಕೆಳಹೊಟ್ಟೆ. ದಟ್ಟಕಾಡಿನ ಮರಗಳ ಮೇಲೆ ಗುಂಪಾಗಿ ಹಣ್ಣು, ಕೀಟಗಳನ್ನು ಬೇಟೆಯಾಡುತ್ತವೆ. ಇಂಪಾದ *ಚಿ.ಚೀ..* ಅಥವಾ ವ್ಯ..ವಿ.. ಸಿಳ್ಳೆ.

218. Grey-headed Bulbul *(Pycnonotus priocephalus)* R Bulbul- Olive grey body, with a grey head, neck, broad square tail; pale yellow forehead and light coloured iris; black streaks on the lowerback and wingtips. Singly or small party, in thick forests, among lantana shrubs and swampy areas. **Voice**: clear, squeaky, *cheenk..* whistle. **Nesting**: March-July; nest, shallow cup of dead grass in dense canopy. **Eggs**: 1, pale pink.

ಬೂದುತಲೆಯ ಪಿಕಳಾರ *(ಬೂದ್ ಕೊಟ್ಸ್‌ಂಬುಡ್‌ಚ)* 19 ಸೆಂಮೀ. ಮಾಸಲು ಎಲೆಹಸಿರು ಬಣ್ಣದ ಮೈಗೆ ಬೂದು ತಲೆ, ಕತ್ತು; ಅಗಲವಾದ, ಚೊಟ್ಟೆ ಬಾಲ; ತಿಳಿ ಹಳದಿ ಹಣೆ; ಕೆಳಬೆನ್ನು ಮತ್ತು ರೆಕ್ಕೆಯ ತುದಿಗಳಲ್ಲಿ ಕಪ್ಪು ಗೀರುಗಳು. ದಟ್ಟ ಅರಣ್ಯದಲ್ಲಿ, ಲಂಟಾನಾ ಪೊದೆಗಳಿರುವೆಡೆ, ಜೌಗುಪ್ರದೇಶಗಳಲ್ಲಿ, ಸಣ್ಣ ಗುಂಪಿನಲ್ಲಿ ವಾಸ. *ಚೀಂಕ್..* ಸಿಳ್ಳು. ಒತ್ತಾದ ಎಲೆಗಳ ಮಧ್ಯೆ ಒಣಹುಲ್ಲಿನ ಗೂಡು.

Babblers, Laughingthrushes (Muscicapidae: *Timaliinae)*

ಹರಟೆಮಲ್ಲ *(ಗೆಜ್ಜಳಬಾಯ)* ಮತ್ತು ನಗೆಮಲ್ಲಗಳು

Small to medium sized, generally shy, but noisy, arboreal or terrestrial birds that inhabit scrubby thickets and small groves. They have soft, lax plumage; bill, legs, feet strong; wings short and rounded; loosely attached, long, graduated tail. They hop and bound often waving their long, prominent tail from side to side as they move. Gregarious, often traveling together in noisy related groups. Sexes alike. Flight weak and ill sustained, but glide well; groups often fly in 'follow-the-leader' fashion. Food consists of insects, small creatures, flower nectar and fruits. Have harsh calls, often in chorus; some are good songsters. Nest is made of a cup-shaped or domed structure on trees and bushes; both sexes share domestic duties. Brood host to many birds of Cuckoo family.

ಹೆಸರಿಗೆ ಹರಟೆಮಲ್ಲರಾದರೂ, ಬಹು ಸಂಕೋಚ ಸ್ವಭಾವದ, ಹೆಚ್ಚಾಗಿ ಬೇಲಿ, ದಟ್ಟಪೊದೆ, ಕುರುಚಲು, ಬಿದಿರು ಮತ್ತು ಗಿಡಗಂಟಿಗಳಲ್ಲಿ ಗುಂಪಾಗಿ ವಾಸಿಸುವ ಸಣ್ಣ ಅಥವಾ ಮಧ್ಯಮ ಗಾತ್ರದ ಹಕ್ಕಿಗಳು. ಸಡಿಲ ಗರಿಗಳು; ಗಟ್ಟಿಮುಟ್ಟಾದ ಕೊಕ್ಕು, ಕಾಲು ಮತ್ತು ಪಾದಗಳು; ಬಹುದೂರ ಹಾರಲಾಗದ, ಸಣ್ಣ-ಗುಂಡಾದ ರೆಕ್ಕೆಗಳು. ಸಡಿಲವಾಗಿ ಅಂಟಿಸಿರುವಂತೆ ಕಾಣುವ ಬಾಲ. ಸಾಧಾರಣವಾಗಿ ಆರರಿಂದ ಏಳು ಪಕ್ಷಿಗಳು ಒಟ್ಟಾಗಿ ವಾಸಮಾಡುತ್ತವೆ. ನೆಲದ ಮೇಲೆ, ಪೊದೆಗಳಲ್ಲಿ ಕುಪ್ಪಳಿಸಿಕೊಂಡು, ಬಾಲವನ್ನು ಅಡ್ಡಡ್ಡಲಾಗಿ ಆಡಿಸಿಕೊಂಡು ನಡೆಯುವ ಮತ್ತು ಹಾರುವಾಗ ಒಂದರ ಹಿಂದೆ ಒಂದು, ಒಟ್ಟಾಗಿ ಹಾರುವ ಸ್ವಭಾವ. ಕೀಟ, ಸಣ್ಣ ಜೀವಿಗಳು, ಹಣ್ಣು, ಮಕರಂದವೇ ಆಹಾರ. ಗುಂಪಾಗಿ, ಸಣ್ಣ ಸ್ವರದಲ್ಲಿ ಅರಚಾಡುವುವು; ಕೆಲವಕ್ಕೆ ಸುಶ್ರಾವ್ಯ ಕಂಠ. ಪೊದೆಗಳಲ್ಲಿ, ಒತ್ತಾದ ಮರಗಳಲ್ಲಿ, ಬಟ್ಟಲು ಆಕಾರದ ಗೂಡು. ಕೋಗಿಲೆ ಕುಟುಂಬದ ಹಕ್ಕಿಗಳ ಮೊಟ್ಟೆ-ಮರಿಗಳಿಗೆ ಆಶ್ರಯ ಮತ್ತು ಪೋಷಣೆ.

219. Common Babbler *(Turdoides caudatus)* R Bulbul+ Dull brown upperparts, profusely streaked; brown wings; long and graduated loose cross rayed olive-brown tail; dull white throat; pale, fulvous underbody, streaked on sides of breast. Pairs or small flocks, seen skulking in low bushes; peculiar bouncing hops, preferring dryer, thorn, scrub and shrubby vegetation; flight feeble; wary. **Voice**: when agitated, a chorus of short, rapid whistles *wch wch wch. ch ch. wee.*, nervously twitching wings and tail. **Nesting**: March-July; nest, compact cup of grass and rootlets in low thorny bush. **Eggs**: 3-4, beautiful turquoise, glossy; nests parasitised by Pied-crested and Hawk-Cuckoos.

ಹರಟೆಮಲ್ಲ ***(ಗೆಜ್ಜಳಬಾಯ)*** 23 ಸೆಂಮೀ. ಮಣ್ಣುಗಂದು ದೇಹದ ಮೇಲೆ ತಿಳಿ ಗೀರುಗಳು; ಉದ್ದ ಪಟ್ಟೆಬಾಲ; ಮಾಸಲು ಬಿಳಿ ಗಂಟಲು. ಸಣ್ಣ ಗುಂಪಿನಲ್ಲಿ, ಒಣ ಕುರುಚಲು, ಪೊದೆಗಾಡುಗಳಲ್ಲಿ ಕಾಣಬಹುದು. ವಿಚಲಿತಗೊಂಡಾಗ, ರೆಕ್ಕೆ ಬಾಲ ಬಡಿದುಕೊಂಡು ಸಾಮೂಹಿಕವಾಗಿ *ವಿಚ್.ವಿಚ್.ವಿಚ್.ವೀ..* ಕೂಗು ಮತ್ತು ಸಹಚರ್ಯವಿರಿಸಿಕೊಳ್ಳಲು ಮೊಟಕಾದ ಕಂಪನ ಧ್ವನಿಯ ಸರಣಿ ಸಿಳ್ಳು.

220. Spotted Babbler *(Pellornium ruficeps)* R Bulbul+ Olive brown upperparts with a dark rufous cap; buff white stripe over eyes; white throat; pale underparts with brown streaks and spots. Pairs or family, skulking in undergrowth of well wooded scrub and bamboo thickets, silently running about, rummaging ground for insects; shy and elusive. **Voice**: 3-4 plaintive whistle, *pretty-sweet* or *he-will-beat-you*, repeated. **Nesting**: March-May; nest, a ball of bamboo leaves with lateral entrance hole, on ground. **Eggs**: 2-3, dull white with brown blotches.

ಚುಕ್ಕಿ ಹರಟೆಮಲ್ಲ ***(ಬೊಟ್ಸ್ ಗೆಜ್ಜಳಬಾಯ)*** 15 ಸೆಂಮೀ. ಹಸಿರುಗಂದು ಮೇಲ್ಮೈಗೆ ಕೆಂಗಂದು ಟೋಪಿ; ಬಿಳಿ ಗಲ್ಲ, ಕೆಳಮೈ ಮೇಲೆ ಕಂದುಗಪ್ಪು ಉದ್ದ ಗೀರು ಮತ್ತು ಮಚ್ಚೆಗಳು. ಒತ್ತಾದ ಪೊದೆಗಳಲ್ಲಿ, ಬಿದಿರು ಮೆಳೆಗಳಲ್ಲಿ, ಗುಂಪಾಗಿ, ಬಹುಜಾಗರೂಕತೆಯಿಂದ, ನಿಶ್ಯಬ್ದವಾಗಿ, ಚಲಿಸಾಡುವುದನ್ನು ಕಾಣಬಹುದು. *ವೀಟೀ.ಪೀಟ್ಯೂ..* ಸಿಳ್ಳೆ ಕೂಗು.

221. Large Grey Babbler *(Turdoides malcolmi)* R Myna Greyish brown above with grey forehead; long graduated, cross-rayed tail with white outer feathers; fulvous grey below. Gregarious; seen hopping and moving on ground in cultivated plains, thorn jungles, avoiding wooded forests; weak flight to lower tree branches; very noisy; come together at first sign of danger. **Voice**: *kay.kay,kay,kay*. monotonous chorus with jerking tail. **Nesting**: undefined; nest, loose cup of roots and twigs on tree. **Eggs**: 3-4, blue. Nest parasitised by Pied crested and Hawk-Cuckoos.

ಬೂದು ಹರಟೆಮಲ್ಲ ***(ಬೂದ್ ಗೆಜ್ಜಳಬಾಯ)*** 28 ಸೆಂಮೀ. ಬೂದುಗಂದು ಮೇಲ್ಮೈ; ಬೂದು ಹಣೆ; ಮಾಸಲು ಕೆಳಮೈ; ಬಿಳಿಯಂಚಿನ ಉದ್ದ ಪಟ್ಟೆಬಾಲ. ಗುಂಪಾಗಿ ಕುರುಚಲು ಕಾಡು, ಬಂಡೆ ಪ್ರದೇಶ ಮತ್ತು ಮುಳ್ಳುಗಂಟಿಗಳಲ್ಲಿ, ಎಲೆಗಳ ಸಂದಿನಲ್ಲಿ, ಕುಪ್ಪಳಿಸುತ್ತ ಬೇಟೆಯಾಡುತ್ತವೆ. ಬಾಲ ಮೀಟಿಕೊಂಡು ***ಕೇಕೇಕೇ.*** ಕೋರಸ್. ಬೇಟೆ ಪ್ರಾಣಿಗಳನ್ನು ಕಂಡರಂತೂ ಆಕ್ರಂದನ!

222. Jungle Babbler *(Turdoides striatus)* R Myna- Dull earthy brown, untidy looking bird, streaked on back; dark rufous tail, long, loose, faintly cross-rayed; ashy fulvous below. Social, 'seven-sisters' or *sat bhai*, rummaging the mulch; ruffled and agitated when disturbed; fly to nearby low branches. **Food**: also spiders, cockroaches, insects and larvae, figs, berries, grain, flower nectar. **Voice**: collective chatter and squeaking that develops into loud dissonant brawling, fading away into silence. Nesting and eggs, similar to 221. Along with parents, other birds in the group share the nest building and tend to the young.

ಅಡವಿ ಹರಟೆಮಲ್ಲ ***(ಕಾಡ್ ಗೆಜ್ಜಳಬಾಯ)*** 25 ಸೆಂಮೀ. ಸಪ್ತ ಕನ್ಯೆಯರಂತೆ, ಒಟ್ಟಾಗಿ ವಾಸಿಸುವ, ಮಾಸಲು ನೆಲಗಂದು ಬಣ್ಣದ ಅನಾಕರ್ಷಕ ಹಕ್ಕಿಗಳು. ಸಡಿಲವಾದ ಕೆಂಗಂದು ಬಾಲ; ಬೆನ್ನಲ್ಲಿ ಗೀರುಗಳು. ಸದಾಹಸಿರು, ಎಸ್ಟೇಟುಗಳಲ್ಲಿ ಪೊದೆಗಳ ಮಧ್ಯೆ, ನೆಲದ ಮೇಲೆ, ಕಸಕಡ್ಡಿಗಳ ನಡುವೆ, ಜೇಡ, ಜಿರಳೆ, ಮಿಡತೆ, ಮರಿಹುಳ, ಕೀಟ,

ಕೆಳಬಿದ್ದ ಹಣ್ಣುಗಳನ್ನು ಹೆಕ್ಕುತ್ತವೆ. ಒಟ್ಟಾಗಿ ಸೌಹಾರ್ದಯುತ *ಚಿಚಿಚಿಚಿ...* ಕೋರಸ್. ಹೆತ್ತವರೊಂದಿಗೆ ಉಳಿದ ಹಕ್ಕಿಗಳೂ ಮನೆಕೆಲಸಗಳಲ್ಲಿ ಭಾಗಿಗಳಾಗುತ್ತವೆ.

223. Indian Rufous Babbler *(Turdoides subrufus)* R Myna- Rufous-olive brown above with grey forehead; bright ferruginous underparts with a loose, cross-barred tail. Small party, seen in denser and moist forests, rummaging in mulch and humus; clamber up among bamboo thickets. **Voice**: continuous shrill, whistling *tree.tree.tree..* with intermittent squeaks. **Nesting**: February-May; nest, bulky cup of dry leaves and grass in bush. **Eggs**: 4, unmarked blue.

ಕೆಂಗಂದು ಹರಟೆಮಲ್ಲ ***(ಚೋಂದ ಗೆಜ್ಜಳಬಾಯ)*** 25 ಸೆಂಮೀ. ತಿಳಿಹಸಿರು-ಕಂದು ದೇಹಕ್ಕೆ, ಬೂದು ಹಣೆ; ಕೆಂಗಂದು ಕೆಳಮೈ; ಬಾಲದಲ್ಲಿ ಅಡ್ಡಾದಿಡ್ಡಿ ಗೀರುಗಳು. ಸಣ್ಣ ಗುಂಪಿನಲ್ಲಿ, ದಟ್ಟ ಅರಣ್ಯಗಳಲ್ಲಿ, ನೆಲವನ್ನು ಕೆದಕುತ್ತ, ಬಿದಿರು ಮೆಳೆಗಳಲ್ಲಿ, ಓಡಾಡುವುದನ್ನು ಕಾಣಬಹುದು. ತೀಕ್ಷ್ಣ *ಟ್ರೀ. ಟ್ರೀ. ಟ್ರೀ.* ಸಿಳ್ಳೆ.

224. Indian Scimitar-Babbler *(Pomatorhinus horsfieldii)* Slaty-headed Scimitar Babbler R Bulbul+ Dark brown upperparts and belly; conspicuous white eyebrows, throat, breast and belly centre; curved, pointed, yellow *scimitar* bill. Pairs or loose band, shy and skulky, seen hopping and rummaging dense undergrowth, digging earth with bill, for insects and grubs; ascend to dense moss-covered trees and bamboo thickets with mellow bubbling calls. **Voice**: males have musical fluty 4-note call *hu.hu.hu.hu.* acknowledged by the female's *trewn. ti!* almost as if it is a single call. **Nesting**: December-May; nest, a ball of roots and grass on ground under thick bush. **Eggs**: 3-5, white.

ಕುಡುಗೊಕ್ಕು ಹರಟೆಮಲ್ಲ ***(ಪಿಕಾಸಿ ಗೆಜ್ಜಳಬಾಯ)*** 22 ಸೆಂಮೀ. ಕಡುಗಂದು ಮೇಲ್ಮೈ; ಬಿಳಿ ಹುಬ್ಬು, ಗಲ್ಲ, ಎದೆ; ಎದ್ದು ಕಾಣುವ ಕುಡುಗೋಲಿನಂತೆ ಬಾಗಿದ, ಹಳದಿ ಕೊಕ್ಕು. ಬಹು ನಾಚಿಗೆ ಸ್ವಭಾವ. ಜೋಡಿಯಾಗಿ, ಒತ್ತಾದ ಪೊದೆಗಳಿರುವೆಡೆ, ನೆಲದ ಮೇಲೆ, ಕ್ರಿಮಿ-ಕೀಟಗಳನ್ನರಸುತ್ತ, ಬಿದಿರು ಮೆಳೆಗಳಲ್ಲಿ, ಒತ್ತಾದ ಹಾವಸೆಯಿಂದಾವೃತವಾದ ಮರಗಳಲ್ಲಿ, ಓಡಾಡುತ್ತವೆ. ಗಂಡುಹಕ್ಕಿಯ ೪-ಸ್ವರದ, ಕೊಳಲಿನ, *ಹು.ಹು.ಹು.ಹು.* ಕರೆಗೆ, ಹೆಣ್ಣಿನ *ಟ್ರೀನ್.ಟ್ರಿ!* ಮರುತ್ತರ.

225. Rufous-bellied Babbler *(Dumetia hyperythra)* R Sparrow- Olive brown above; whitish throat fulvous below. Small noisy parties, rummaging on ground, in light thorny scrub and grass jungle with cheeping *sweech..sweech..* calls to keep the flock together; sometimes more agitated calls. **Food**: insects, larvae and nectar. **Nesting**: May-September; nest, ball of grass and bamboo leaves lined with softies with side-entrance, placed in low branch. **Eggs**: 3-4, glossy white, speckled and blotched with reddish brown.

ಕೆಂಪು ಹರಟೆಮಲ್ಲ ***(ಚೋಂದಪೊಟ್ಟೆ ಗೆಜ್ಜಳಬಾಯ)*** 13 ಸೆಂಮೀ. ಹಸಿರು-ಕಂದು ಮೇಲ್ಮೈ; ಬಿಳಿ ಗಲ್ಲ; ತಿಳಿಗೆಂಪು ಕೆಳಮೈ. ಗುಂಪಿನಲ್ಲಿ *ಸ್ವೀಚ್.ಸ್ವೀಚ್.* ಕೂಗುತ್ತ, ಕುರುಚಲು, ಮುಳ್ಳು, ಪೊದೆಗಳಿರುವೆಡೆ ಹಾಗೂ ಹುಲ್ಲುಗಾವಲುಗಳಲ್ಲಿ, ನೆಲದ ಮೇಲೆ ಆಹಾರ ಹುಡುಕುತ್ತವೆ. ತಗ್ಗು ಕೊಂಬೆಯಲ್ಲಿ, ಹುಲ್ಲು-ನಾರು-ಬೇರುಗಳಿಂದ ತಯಾರಾದ, ಪಕ್ಕದಿಂದ ಬಾಗಿಲಿರುವ ಗೂಡು.

226. Yellow-eyed Babbler *(Chrysomma sinense)* R Bulbul- Rufous brown above; white lores and short supercilium; distinct yellow eyes and orange-yellow eye ring; cinnamon wings, long graduated tail; white underparts. Pairs or small flocks, seen in scrub and grass jungles; elusive; clinging to stem in all acrobatic positions, working its way along, hunting for insects; flight feeble and jerky. **Voice**: clear, plaintive, *chip.up.chip.cheep..*; breeding male has a sweet song delivered from bush tops. **Nesting**: June-September. **Eggs**: 4-5, pale white.

ಹಳದಿಕಣ್ಣಿನ ಹರಟೆಮಲ್ಲ ***(ಮಂಜಕಣ್ಣ್ ಗೆಜ್ಜಳಬಾಯ)*** 18 ಸೆಂಮೀ. ಅಚ್ಚ ಕೆಂಗಂದು ಮೇಲ್ಮೈ; ಬಿಳಿ ಕೆಳಮೈ; ಕಣ್ಣಿನ ಸುತ್ತ ಕಿತ್ತಳೆ-ಹಳದಿ ಉಂಗುರ. ಜೋಡಿಯಾಗಿ, ಕಣ್ಣಿಗೆ ಕಾಣದಂತೆ, ಗಿಡಗಳ ಮೇಲೆ, ಬೇಟೆ ಹುಡುಕುತ್ತ, ಬಿದಿರು, ಹುಲ್ಲು ಮತ್ತು ಕುರುಚಲು ಪೊದೆಗಳಲ್ಲಿ, ಅಡ್ಡಾಡುವುದನ್ನು ಕಾಣಬಹುದು. *ಚಿಪ್.ಚಿಪ್.ಪ್.ಚೀಪ್.* ಅಳಲಿನ ಕೂಗು ಮತ್ತು ಸಂತಾನಋತುವಿನಲ್ಲಿ ಗಂಡಿನ ಇಂಪಾದ ಹಾಡು.

227. White-headed Babbler *(Turdoides affinis)* R Bulbul+ Dull brown above with creamy white crown; dark ear coverts, throat, breast, appearing scaly; darker wings; yellowish buff below. Small noisy party, in dense scrub forests; short hopping flight when disturbed; working its way upto top and flies to adjoining tree. **Voice**: distinct, musical, chattering trill *trrrr.chch.trr.r..* **Nesting**: March-June; communal nest building; nest, open bowl of twigs and rootlets in low bushes. **Eggs**: 3-4, turquoise blue; parasitised by Pied-crested Cuckoo.

ಬಿಳಿತಲೆಯ ಹರಟೆಮಲ್ಲ ***(ಬೊಳ್ತಮಂಡೆ ಗೆಜ್ಜಳಬಾಯ)*** 23 ಸೆಂಮೀ. ಮಾಸಲುಗಂದು ಮೇಲ್ಮೈ; ಪೇಲವ ಬಿಳಿ ನೆತ್ತಿ, ಹಿಂಗತ್ತು; ಹುರಪೆಯಂತೆ ಕಾಣುವ ಗಲ್ಲ, ಎದೆ; ಮಾಸಲು ಹಳದಿ ಕೆಳಮೈ. ಗುಂಪಾಗಿ ಉದುರೆಲೆ, ಕುರುಚಲು ಕಾಡು ಮತ್ತು ಒತ್ತಾದ ಪೊದೆಗಾಡುಗಳಲ್ಲಿ ಕುಪ್ಪಳಿಸುತ್ತ ಹಾರುವ ಸ್ವಭಾವ. *ಟಿರ್ರ್‌ರ್‌ರ್.ಚ್.ರ್ರ್‌ರ್..* ಸಂಗೀತದ ಕಂಪನ ದನಿ. ಗುಂಪಾಗಿ, ಕಡ್ಡಿ-ಬೇರುಗಳಿಂದ ತಯಾರಾದ ಬಟ್ಟಲಿನಂತಹ ಗೂಡು.

228. Quaker Tit-Babbler *(Alcippe poioicephala)* Quaker Babbler R Sparrow+/- Olive brown above; distinct grey crown and nape; thin black stripe through eyes; rufous wings and tail; pale fulvous underbody. Flocks in undergrowth and among foliage of forests and scrubs; shy; cling to branches in all acrobatic positions in search of insects. **Voice**: clear, whistling song of 4 or 8 notes, interpreted as *daddy-give-me-chocolate*; harsh *churr..* **Nesting**: January-May; nest, flimsy cup of moss, lichens and rootlets in twig forks or hammock-like in between weed stems. **Eggs**: 2-3, pale salmon with purplish brown blotches.

ತರಗುಹಕ್ಕಿ ***(ಕೊಕ್ಕೆಲೆಬಾಯ)*** 15 ಸೆಂಮೀ. ಹಸಿರುಗಂದು ದೇಹಕ್ಕೆ ಬೂದು ನೆತ್ತಿ, ಹಿಂಗತ್ತು; ತೆಳುವಾದ ಕಣ್ಣುಪಟ್ಟಿ; ಕೆಂಗಂದು ರೆಕ್ಕೆ, ಬಾಲ; ಪೇಲವ ಕೆಳಮೈ. ಗುಂಪಾಗಿ, ಕುರುಚಲು ಪೊದೆಗಳಲ್ಲಿ, ರೆಂಬೆಗಳ ಮೇಲೆ, ಕೀಟಗಳಿಗಾಗಿ ಸರ್ಕಸ್ ಮಾಡುವುದನ್ನು ಕಾಣಬಹುದು. *ಚಿಚಿವಿ.ಚ್ಯು.ಚುವಿ..* ಸಿಳ್ಳೆ ಸ್ವರ.

229. Black-headed Babbler *(Rhopocichla atriceps)* R Sparrow- Black head, nape; rufous upperparts; fulvous white chin, throat, breast and underparts. Pairs in small party, flitting in foliage and on ground, in bamboo thickets near humid valley. Habits, voice, nesting and eggs similar to 225.

ಕಂತಲೆ ಹರಟೆಮಲ್ಲ (ಕರ್ತಮಂಡೆ ಗೆಜ್ಜಳಬಾಯ) 13 ಸೆಂಮೀ. ಕೆಂಗಂದು ಮೇಲ್ಮೈಗೆ, ಕಪ್ಪು ತಲೆ, ಹಿಂಗತ್ತು; ಮಾಸಲು ಬಿಳಿ ಗಲ್ಲ, ಎದೆ, ಕೆಳಮೈ. ಜೋಡಿಯಾಗಿ, ಬಿದಿರುಮೆಳೆಗಳಿರುವೆಡೆ ವಾಸ. ಉಳಿದೆಲ್ಲ ೨೨೫ರಂತೆ.

230. Nilgiri Laughingthrush *(Garrulax cachinnans)* R Myna- Olive brown above with a deep slaty crown; white supercilium; black eye-stripe, chin and throat; rufous below. Small parties seen hopping and feeding in undergrowth of trees in shola forests, often in mixed hunting parties; great skulker, but noisy. **Food**: also fruits like wild raspberry and hill guava. **Voice**: chattering 'laughter' *pee.ko.ko.,* repeated in chorus; also squeaks and squeals. **Nesting**: February-July. **Eggs**: 2-3, pale blue with reddish brown spots and blotches.

ನೀಲಗಿರಿ ನಗೆಮಲ್ಲ (ನೀಲಗಿರಿ ತೆಳಿಬಾಯ) 20 ಸೆಂಮೀ. ಗಾಢ ಹಸಿರುಗಂದು ಮೇಲ್ಮೈ; ಕಪ್ಪು ನೆತ್ತಿ, ಗಂಟಲು; ಬಿಳಿ ಹುಬ್ಬು; ಕೆಂಗಂದು ಕೆಳಮೈ. ಶೋಲಾ ಅರಣ್ಯ, ಕುರುಚಲು ಗಿಡಗಳ ಬುಡದಲ್ಲಿ, ಗುಂಪಾಗಿ ಕುಪ್ಪಳಿಸುತ್ತ, ಹಣ್ಣು–ಹಂಪಲು ಹುಡುಕುತ್ತವೆ. *ಪೀ.ಕೆ.ಕ್ಕೆ.ಕ್ಕೆ..* ನಗುವಿನ ಕೋರಸ್.

231. Grey-breasted Laughingthrush *(Garrulax jerdoni)* White-breasted Laughingthrush R Myna- Similar to 230, but with a whitish grey throat, breast and a black chin; rufous belly. Small flocks of about a dozen, seen feeding in low bushes and ground; wary and rarely emerge into open. **Voice**: extremely noisy, chorus chattering and squeals. Nesting and eggs similar to 230.

ಬೂದುಎದೆಯ ನಗೆಮಲ್ಲ (ಬೂದ್ ತೆಳಿಬಾಯ) 20 ಸೆಂಮೀ. ಎಲ್ಲವೂ ೨೩೦ರಂತೆ, ಆದರೆ, ಎದೆ ಮಾತ್ರ ತಿಳಿ ಬೂದು; ಕೆಂಗಂದು ಕಿಬ್ಬೊಟ್ಟೆ. ಯಾವಾಗಲೂ ಗುಂಪಾಗಿ, ದಟ್ಟ ಪೊದೆಯಿರುವೆಡೆ ವಾಸ. ಸರ್ವದಾ ಗಲಾಟೆ ಸ್ವಭಾವ. ತಿಳಿ ನಗುವಿನ ಕೋರಸ್.

232. Wynaad Laughingthrush *(Garrulax delesserti)* Rufous-vented Laughingthrush R Myna Similar to 231; black eye-stripes and cheeks; no supercilium; white throat; rufous below breast and rump. Noisy flocks rummaging among the mulch on humid rain forests floor. **Voice**: cackling squeaks, discordant 'laughter' in chorus. **Nesting**: April-September. **Eggs**: 3-4, white, unmarked.

ವೈನಾಡಿನ ನಗೆಮಲ್ಲ (ವೈನಾಡ್ ತೆಳಿಬಾಯ) 23 ಸೆಂಮೀ. ಕೆಂಗಂದು ಮೇಲ್ಮೈಗೆ, ಬೂದು ನೆತ್ತಿ, ಹಿಂಗತ್ತು; ಅಗಲವಾದ ಕಪ್ಪು ಕಣ್ಣುಪಟ್ಟಿ, ಕೆನ್ನೆ; ಬಿಳಿ ಗಲ್ಲ, ಎದೆ; ತಿಳಿ ಕೆಂಗಂದು ಪೃಷ್ಠ, ಕೆಳಮೈ; ಮಳೆಗಾಡುಗಳಲ್ಲಿ, ನೆಲದ ಮೇಲೆ, ಕೊಳೆತ ಎಲೆಗಳನ್ನು ಕೆದಕುತ್ತ, ಆಹಾರ ಹುಡುಕುತ್ತವೆ. ಕೋರಸ್‌ನಲ್ಲಿ ತಿಳಿನಗು.

Flycatchers (Muscicapidae: *Muscicapinae)*

ನೊಣಹಿಡುಕಗಳು *(ಒಲ್‌ಂಜಿಚುಂಡೆ)*

Small, rather delicately built arboreal birds; bill broad and flat at base; legs short; wings short-rounded or long-pointed; tail short, square or notched. Posture is more upright and feed almost entirely by aerial sorties, from perches. Food consists of insects, spiders often caught on the wing; feed in mid level height in and around trees; seen frequently flicking their wings and tail, while sitting at one place. Some are good songsters; songs are sweet but lack the prominence owing to the short phrases and weak delivery. Nest is a deep, neat cup of grass and fibres bound with cobweb placed on a tree or bush, sometimes holes. Both sexes share brooding duties, female doing the most.

ಹೆಚ್ಚಾಗಿ, ಕೀಟ, ಜೇಡಗಳನ್ನೇ ಹಿಡಿದು ತಿನ್ನುವ, ಮರಗಳಲ್ಲಿ ವಾಸಿಸುವ, ಚುರುಕಾದ ಪುಟ್ಟ ಹಕ್ಕಿಗಳು. ಸಣ್ಣ ಕೊಕ್ಕು; ಅಗಲವಾದ, ಸಣ್ಣ ಮತ್ತು ಉರುಟಾದ ರೆಕ್ಕೆಗಳು; ಸಣ್ಣ ಬಾಲ ಮತ್ತು ಕಾಲುಗಳು. ಸುಮ್ಮನೆ ಕುಳಿತಿರುವಾಗ ರೆಕ್ಕೆ-ಬಾಲವನ್ನು ಆಗಾಗ ಆಡಿಸುತ್ತವೆ; ಕುಳಿತಲ್ಲಿಂದ ಒಮ್ಮೆಲೇ ಹಾರಿ ಕೀಟಗಳನ್ನು ಹಿಡಿಯುತ್ತವೆ; ಹೀಗೆ ಹಿಡಿದ ಕೀಟ, ಜೇಡ ಮುಂತಾದುವೇ ಆಹಾರ. ಹೆಚ್ಚಿನವಕ್ಕೆ ಮೃದುವಾದ ಹ್ರಸ್ವಸ್ವರದ ಕೂಗು, ಕೆಲವು ಜಾತಿಯವು ಸಣ್ಣ ಕಂಠದಲ್ಲಿ ಹಾಡುತ್ತವೆ ಕೂಡ. ಮರ, ಪೊದೆ ಅಥವಾ ಸಣ್ಣ ರಂಧ್ರಗಳಲ್ಲಿ, ಬೇರು-ನಾರು, ಹುಲ್ಲಿನಿಂದ ತಯಾರಾದ, ಅಚ್ಚುಕಟ್ಟಾದ ಗೂಡು.

233. Asian Brown Flycatcher *(Muscicapa dauurica)* Brown Flycatcher R Sparrow+/- Light ashy brown above; white ring around eyes; yellow lower mandible; white throat; grey on breast and flanks; dirty white underparts; black legs. Singly or in pairs, seen perched on bare branches near streams, in open forests, plantations and gardens; aerial sallies to catch flies. **Voice**: short, thin but piercing *tze.te.te.te* and feeble *chik.chik..r.r.r.rr*. **Nesting**: April-June. **Eggs**: 4, incubated by female.

ಕಂದು ನೊಣಹಿಡುಕ (*ಚೋಂದ ಒಲ್‌ಂಜಿಚುಂಡೆ*) 14 ಸೆಂಮೀ. ಬೂದುಗಂದು ಬಣ್ಣದ ದೇಹಕ್ಕೆ ಬಿಳಿ ಗಲ್ಲ; ಮಾಸಲು ಕೆಳಮೈ; ಕಣ್ಣಿನ ಸುತ್ತ ಬಿಳಿ ಉಂಗುರ; ಕಪ್ಪು ಕಾಲುಗಳು; ಹಳದಿ ಕೆಳಕೊಕ್ಕು. ಎಸ್ಟೇಟುಗಳಲ್ಲಿ, ಹಳ್ಳಿಗಾಡುಗಳಲ್ಲಿ ಕಾಣಬಹುದು. ನೀರಿರುವೆಡೆ, ಒಣರೆಂಬೆಯಲ್ಲಿ ಕುಳಿತು ಬೇಟೆಗೆ ಹೊಂಚು; ಗಾಳಿಯಲ್ಲಿ ಹಾರಿ ಕೀಟಗಳನ್ನು ಹಿಡಿಯುತ್ತವೆ. *ಚಿಕ್.ಚಿಕ್.ರ್ರ್.ರ್ರ್..* ಮೆದು ಉಲಿತ.

234. Rusty-tailed Flycatcher *(Muscicapa ruficauda)* Rufous-tailed Flycatcher M Sparrow+/- Light brown upperparts with conspicuous rufous, dark-tipped tail; pale eye ring; greyish brown throat, breast; white belly. Singly, seen among foliage of large tree, in evergreen forests. **Food**: chiefly flies. **Voice**: 3-4 rapidly repeated loud clear notes. Winter visitor from Himalayas.

ಕಂದುಬಾಲದ ನೊಣಹಿಡುಕ (*ಚೋಂದಬಾಲ್‌ರ ಒಲ್‌ಂಜಿಚುಂಡೆ*) 14 ಸೆಂಮೀ. ತಿಳಿಗಂದು ಮೇಲ್ಮೈಗೆ, ಎದ್ದುಕಾಣುವ, ಕಪ್ಪು ತುದಿಯ ಕೆಂಗಂದು ಬಾಲ; ಬೂದುಗಂದು ಕತ್ತು, ಎದೆ; ಬಿಳಿ ಕೆಳಮೈ. ಒಂಟಿಯಾಗಿ

ದಟ್ಟಕಾಡುಗಳಲ್ಲಿ, ಮರಗಳ ಎಲೆಯ ಮಧ್ಯೆ ಕಾಣಬಹುದು. ೩-೪ ಸ್ವರಗಳ, ಗಟ್ಟಿಯಾದ ಕೂಗು. ಹಿಮಾಲಯದೆಡೆಯಿಂದ ಚಳಿಗಾಲದ ವಲಸೆಗಾರ.

235. Brown-breasted Flycatcher *(Muscicapa muttui)* M Sparrow+/- Similar to 233, but brownish rather than ashy brown; brown breast, white throat, white eye-ring; yellow legs. Habits, typical to flycatchers. Winter visitor, breeding in NE hills.

ಕಂದುಎದೆಯ ನೊಣಹಿಡುಕ 13 ಸೆಂಮೀ. ತಿಳಿ ಹಸಿರುಗಂದು ದೇಹ; ಬಿಳಿ ಕಣ್ಣುಂಗುರ; ಅಗಲವಾದ ಕಂದು ಎದೆಪಟ್ಟಿಯಿಂದಾಗಿ, ಬಿಳಿ ಗಲ್ಲ, ಕೆಳಹೊಟ್ಟೆ ಎದ್ದುಕಾಣುವುದು; ಹಳದಿ ಕಾಲುಗಳು. ನೊಣಹಿಡುಕಗಳದ್ದೇ ಸ್ವಭಾವ. ಈಶಾನ್ಯ ಹಿಮಾಲಯದಿಂದ ಚಳಿಗಾಲದ ವಲಸೆಗಾರ.

236. Red-throated Flycatcher *(Ficedula parva)* Red-breasted Flycatcher M Sparrow- Male light brown above, greyish brown cheek, white eye-ring; chestnut orange chin, throat; white below breast; black tail with white patch on basal half, diagnostic. Female and young males, rufous replaces ashy fulvous breast. Pairs, flitting among branches of trees; aerial sallies from perch to catch insects; sometimes short descent to ground; cocks the tail often, wings drooped. **Voice**: silent, except sharp *click.click..* with cocking tail. Winter visitor, breeding outside the country.

ನೆತ್ತರುಗಲ್ಲದ ನೊಣಹಿಡುಕ 13 ಸೆಂಮೀ. ತಿಳಿಗಂದು ಮೇಲ್ಮೈ; ಬಿಳಿ ಕಣ್ಣುಂಗುರ; ಕಿತ್ತಳೆಗೆಂಪು ಗಲ್ಲ, ಎದೆ; ಬಿಳಿ ಕೆಳಮೈ; ಕಪ್ಪು ಬಾಲದ ಬುಡದಲ್ಲಿ ಬಿಳಿ. ಹೆಣ್ಣು ಮತ್ತು ಅವಯಸ್ಕ ಹಕ್ಕಿಗಳು ಪೇಲವ. ದೊಡ್ಡ ಮರಗಳಿರುವ ಕಾಡು, ಎಸ್ಟೇಟುಗಳಲ್ಲಿ ವಾಸ. ಬಾಲ ನಿಮಿರಿಸಿಕೊಂಡು *ಕ್ಲಿಕ್.ಕ್ಲಿಕ್.* ಉಲಿತ. ದೇಶದ ಹೊರವಲಯಗಳಿಂದ ಚಳಿಗಾಲದ ವಲಸೆಗಾರ.

237. Black-and-Orange Flycatcher *(Ficedula nigrorufa)* R Sparrow- Rich orange-rufous plumage; black crown, nape, sides of face and wings. Female, paler with pale eye-ring. Solitary or pairs, seen hopping on ground, jerking expanded tail, half-cocked, in dense shaded undergrowth, beside plantations. **Voice**: soft, gloomy *weee..*; also *chee..ri.ri..*; *tui.tui.tui..*; breeding male has soft whistles. **Nesting**: April-June; nest made of sedge blades or bamboo leaves, loosely formed into an untidy ball in a low bush. **Eggs**: 2, pale grey with reddish freckles.

ಕಪ್ಪುಕಿತ್ತಳೆ ನೊಣಹಿಡುಕ 13 ಸೆಂಮೀ. ಕಿತ್ತಳೆ ಬಣ್ಣದ ಹಕ್ಕಿಗೆ, ಅಚ್ಚಗಪ್ಪು ನೆತ್ತಿ, ಹಿಂಗತ್ತು, ಕೆನ್ನೆ, ರೆಕ್ಕೆಗಳು. ಹೆಣ್ಣಿಗೆ, ತುಸು ಮಾಸಲು ಮೈಬಣ್ಣ. ಒಂಟಿಯಾಗಿ, ನೆಲದ ಮೇಲೆ, ಬಾಲವನ್ನು ಮೀಟಿಕೊಂಡು, ದಟ್ಟ ಕಾಡುಗಳಲ್ಲಿ, ಎಸ್ಟೇಟುಗಳಂಚಿನಲ್ಲಿ ಓಡಾಡುತ್ತವೆ. ಸಣ್ಣದನಿಯ ವೀ... ಕೂಗು.

238. White-bellied Blue-Flycatcher *(Cyornis pallipes)* R Sparrow+/- Male, indigo-blue head, neck, breast and upperparts; black on wings; white underparts. Female, olive-brown above; chestnut tail; rufous-orange throat and breast; white below. Singly, unobtrusive, seen hunting, often flicking tail, in cardamom estates and thick undergrowth; typical flycatcher habits. **Voice**: soft, low, 2-noted *tsk.tsk..* ; sweet squawky song. **Nesting**: February-September; nest in a hole or dead tree stump or earth bank. **Eggs**: 4, pale greenish yellow, blotched with dark brown.

ಬಿಳಿಹೊಟ್ಟೆಯ ನೊಣಹಿಡುಕ ***(ಬೊಳ್ತಪೊಟ್ಟೆರ ಒಲ್‌ಂಜಿಚುಂಡೆ)*** 15 ಸೆಂಮೀ. ಗಂಡಿಗೆ ಅಚ್ಚ ಕಡುನೀಲಿ ದೇಹ; ಬಿಳಿ ಹೊಟ್ಟೆ ಮತ್ತು ರೆಕ್ಕೆ–ಬಾಲದಲ್ಲಿ ಕಪ್ಪು. ಹೆಣ್ಣಿಗೆ, ತಿಳಿ ಹಸಿರುಗಂದು ಮೇಲ್ಮೈ; ಕೆಂಗಂದು ಗಲ್ಲ, ಎದೆ; ಬಿಳಿ ಕೆಳಮೈ. ಒಂಟಿಯಾಗಿ, ಒತ್ತಾದ ಕಾಡು, ಏಲಕ್ಕಿ ಎಸ್ಟೇಟುಗಳಲ್ಲಿ ಬಾಲವನ್ನು ಮೀಟುತ್ತ ಓಡಾಡುತ್ತವೆ. ೨ ಸ್ವರದ *ತ್ಸ್‌ಕ್.ತ್ಸ್‌ಕ್..* ಮೆಲುದನಿ.

239. Verditer Flycatcher *(Eumyias thalassina)* M Sparrow+/- Male, bluish green plumage, darker on wings and tail; black lore. Female, duller, greyer. Solitary, rarely in mixed parties, seen restlessly moving, often flicking tail, perched on exposed branches, making agile aerial sorties, capturing winged insects, in well wooded country. Silent. Winter visitor, breeding in Himalayas upto Arunachal Pradesh.

ನೀಲಿ ನೊಣಹಿಡುಕ ***(ನೀಲಿ ಒಲ್‌ಂಜಿಚುಂಡೆ)*** 15 ಸೆಂಮೀ. ಗಂಡಿಗೆ ತಿಳಿನೀಲಿ–ಹಸಿರು ದೇಹ; ರೆಕ್ಕೆಯ ಮೇಲೆ ತುಸು ಗಾಢ; ಕಣ್ಣಿನ ಮುಂದೆ ಕಪ್ಪು. ಹೆಣ್ಣಿಗೆ ಬೂದು ಛಾಯೆ. ಒಂಟಿಯಾಗಿ, ಸೊಂಪಾದ ಕಾಡಿನಲ್ಲಿ, ಅವಿರತವಾಗಿ ಓಡಾಡುತ್ತ, ಮರದ ತುದಿಯಲ್ಲಿ ಕುಳಿತು, ಗಾಳಿಯಲ್ಲಿ ಕೀಟಗಳನ್ನು ಹಿಡಿಯುವುದನ್ನು ಕಾಣಬಹುದು. ಹಿಮಾಲಯ–ಅರುಣಾಚಲ ಪ್ರದೇಶಗಳಿಂದ ಚಳಿಗಾಲದ ವಲಸೆಗಾರ.

240. Nilgiri Flycatcher *(Eumyias albicaudata)* Nilgiri Verditer Flycatcher R Sparrow+/- Similar to 239, but darker blue with a white patch at the base of the tail. Female, duller greenish grey and white tail patch. Typical flycatcher, seen singly in coffee and cardamom estates, forest glades and in trees of hill-stations. **Voice**: 4-5 *chip.chip*.. **Nesting**: March-April; nest similar to 238. **Eggs**: 2-3, pale orange-pink, freckled red.

ನೀಲಗಿರಿ ನೊಣಹಿಡುಕ ***(ನೀಲಗಿರಿ ಒಲ್‌ಂಜಿಚುಂಡೆ)*** 15 ಸೆಂಮೀ. ೨೩೯ರಂತಿದ್ದರೂ, ಗಂಡಿಗೆ ಕಡುನೀಲಿ ದೇಹ ಮತ್ತು ಬಾಲದ ಬುಡದಲ್ಲಿ ಬಿಳಿ. ಹೆಣ್ಣು ಬೂದು–ಹಸಿರು ಛಾಯೆ. ವಿರಳಕಾಡುಗಳಲ್ಲಿ ಮರಗಳ ಮೇಲೆ ಕಾಣಬಹುದು. *ಚಿಪ್.ಚಿಪ್.ಚಿಪ್...* ಕೂಗು.

241. Tickell's Blue-Flycatcher *(Cyornis tickelliae)* R Sparrow- Male, dark indigo-blue above; bright blue on forehead, supercilum; black on sides of face; rufous orange throat, breast; white below. Female, duller overall. Pairs, seen near shaded wood, streams, often with mixed hunting parties; makes aerial sorties; has favourite perch. **Voice**: pleasing metallic trill of 6-9 notes. **Nesting**: March-August. **Eggs**: 3-5, pale brown, with minute reddish brown speckles.

ಕೆಂಪುಕೊರಳಿನ ನೊಣಹಿಡುಕ ***(ಚೋಂದತೊಂಡೆರ ಒಲ್‌ಂಜಿಚುಂಡೆ)*** 14 ಸೆಂಮೀ. ಗಂಡಿಗೆ ಕಡು ನೀಲಿ ಮೇಲ್ಮೈ; ನೀಲಿ ಹಣೆ, ಹುಬ್ಬು; ಕೆಂಗಂದು ಗಲ್ಲ, ಎದೆ; ಬಿಳಿ ಕೆಳಮೈ. ಹೆಣ್ಣಿಗೆ ತುಸು ಮಾಸಲು ಬಣ್ಣ. ಜೋಡಿಯಾಗಿ, ಉದುರೆಲೆ, ಬಿದಿರುಕಾಡುಗಳಲ್ಲಿ ತೊರೆಗಳಿರುವೆಡೆ ವಾಸ. ಪ್ರಿಯವಾದ ತಾಣದಲ್ಲಿ, ಬಾಲವನ್ನು ಕುಣಿಸುತ್ತಾ ಕುಳಿತು ಕೀಟಗಳ ಬೇಟೆ. ಸುಮಧುರ ೬–೯ ಸ್ವರದ ಹಾಡು.

242. Blue-throated Flycatcher *(Cyornis rubeculoides)* M Sparrow- Male, overall blue, with bright forehead and supercilium; black lores; dark blue throat; rufous breast and white underparts. Female, olive brown with rufous rump; buff throat; rufous breast and white underparts. Solitary or pair, seen in forests with dense undergrowth and bushes; unobtrusive, seldom seen. **Food**: insects and grubs on ground. **Voice**: *clik.clik.* calls. Winter visitor from Pakistan, Kashmir to Arunachal Pradesh and Meghalaya.

ನೀಲಿಗಲ್ಲದ ನೊಣಹಿಡುಕ ***(ನೀಲಿತೊಂಡೆರ ಒಲ್‌ಂಜಿಚುಂಡೆ)*** 14 ಸೆಂಮೀ. ಗಂಡಿಗೆ, ನೀಲಿ ಬಣ್ಣದ ಮೇಲ್ಮೈ; ಕಡುನೀಲಿ ಹಣೆ, ಹುಬ್ಬು, ಗಂಟಲು; ಕೆಂಗಂದು ಎದೆ ಮತ್ತು ಬಿಳಿ ಕೆಳಮೈ. ಹೆಣ್ಣಿಗೆ ಹಸಿರುಗಂದು ಮೇಲ್ಮೈ, ಕೆಂಗಂದು ಪೃಷ್ಠ, ಎದೆ; ಬಿಳಿ ಕೆಳಮೈ. ದಟ್ಟ ಅರಣ್ಯಗಲ್ಲಿ, ಒತ್ತಾದ ಎಲೆ, ಪೊದೆಗಳಿರುವೆಡೆ, ನೆಲದ ಮೇಲೆ ಬೇಟೆ. *ಕ್ಲಿಕ್.ಕ್ಲಿಕ್.* ಕೂಗು. ಹಿಮಾಲಯದೆಡೆಯಿಂದ ಚಳಿಗಾಲದ ವಲಸೆಗಾರ.

243. Grey-headed Flycatcher *(Culicicapa ceylonensis)* R Sparrow- Ashy grey head, neck, breast; olive yellow back; yellow in brown wings, tail; bright yellow rump and underparts. Sexes alike. Solitary or pair, seen along with mixed party, restlessly flitting in well wooded forests; launches aerial sallies after insects. **Voice**: group chatting; also 5 note *chik.wichee..wichee?* **Nesting**: April-June; nest, half cup of fibres and moss, attached like a bucket against moss-covered tree trunk. **Eggs**: 3-4, grey or cream, with pale yellow blotches.

ಬೂದುತಲೆ ನೊಣಹಿಡುಕ ***(ಬೂದ್‌ಮಂಡೆರ ಒಲ್‌ಂಜಿಚುಂಡೆ)*** 9 ಸೆಂಮೀ. ಬೂದು ತಲೆ, ಕತ್ತು, ಎದೆ; ತಿಳಿ ಹಸಿರು ಹಳದಿ ಮೇಲ್ಮೈ; ಕಂದು ರೆಕ್ಕೆ, ಬಾಲದಲ್ಲಿ ಹಳದಿ; ಅಚ್ಚ ಹಳದಿ ಪೃಷ್ಠ, ಕೆಳಮೈ. ಒಂಟಿಯಾಗಿ, ಉಳಿದ ಕೀಟಭಕ್ಷಕಗಳೊಂದಿಗೆ, ಕಾಡುಗಳಲ್ಲಿ ಬೇಟೆಯರಸುತ್ತದೆ. ೫ ಸ್ವರಗಳ *ಚಿಕ್.ವಿಚೀ..ವಿಚೀ?* ಪ್ರಶ್ನಾರ್ಥಕ ಸಿಳ್ಳೆ. ಮರದ ಕಾಂಡಕ್ಕೆ ಅಂಟಿಸಿದ, ನಾರು–ಪಾಚಿಗಳಿಂದ ತಯಾರಾದ ಗೂಡು.

Fantail-Flycatchers (Muscicapidae: *Rhipidurinae*)

ಬೀಸಣಿಗೆನೊಣಹಿಡುಕಗಳು *(ಒಕ್ಕೆಚೆರ್‌ಪ)*

Delightful, small sized flycatchers with graduated, fan-shaped tail. Sexes similar. Love to devour flying insects, caught on the wing. Nest consists of a beautiful neat cup of grass and fibres, plastered outside with cobweb in the fork of branch. Both sexes share domestic duties.

ಮೋಹಕ, ಬೀಸಣಿಗೆಯಂತಹ ಬಾಲವಿರುವ, ಸಣ್ಣ ಗಾತ್ರದ ಹಕ್ಕಿಗಳು. ಗಂಡು–ಹೆಣ್ಣು ನೋಡಲು ಒಂದೇ ರೀತಿಯಿರುತ್ತವೆ. ಕೀಟಾಹಾರಿಗಳು; ಹಾರುತ್ತಿರುವ ಹುಳಗಳನ್ನು ಹಿಡಿಯಲು ಗಾಳಿಯಲ್ಲಿ ಸರ್ಕಸ್ ಮಾಡುತ್ತವೆ. ಆಗಾಗ ಬಾಲವನ್ನು ಬೀಸಣಿಗೆಯಂತೆ ಹರಡುತ್ತವೆ. ಪೊದೆಗಳೊಳಗೆ, ಕೊಂಬೆಗಳ ಕವಲಿನಲ್ಲಿ, ನಾರು–ಬೇರುಗಳನ್ನು ಜೇಡದ ಬಲೆಯಲ್ಲಿ ಅಂಟಿಸಿದ, ಅಚ್ಚುಕಟ್ಟಾದ ಗೂಡು.

244. White-spotted Fantail-Flycatcher *(Rhipidura albicollis albogularis)* R Bulbul- A distinct subspecies of White-throated Fantail-Flycatcher. Slaty brown plumage with a white supercilium; white throat; slaty band across breast and flanks, with distinct white spots; white abdomen and tip of all but central tail feathers; perky cocked, fanned out tail with drooping wings. Sexes alike. Pairs in light forests among shrubs and gardens; cheery and restless, seen flitting in foliage and on ground. **Food**: flies, gnats, winged insects. **Voice**: harsh *chk.chk.chk.* ; also pleasant whistles. **Nesting**: March-August. **Eggs**: 3, light pink with brown speckles.

ಬಿಳಿಚುಕ್ಕೆಯ ಬೀಸಣಿಗೆನೊಣಹಿಡುಕ *(ಬೊಟ್ಸ್ ಒಕ್ಕೆಚಿರ್‌ಪ)* 17 ಸೆಂಮೀ. ಕಪ್ಪುಗಂದು ಮೇಲ್ಮೈ; ಬಿಳಿ ಹುಬ್ಬು, ಗಲ್ಲ; ಮಾಸಲು ಕೆಳಮೈ; ಬೂದು ಎದೆಯ ಮೇಲೆ ಬಿಳಿ ಮಚ್ಚೆಗಳು; ಬಾಲದ ಗರಿಗಳ ತುದಿಯಲ್ಲಿ ಬಿಳಿ. ಅತ್ತಿತ್ತ ತಿರುಗುವಾಗ, ಆಗಾಗ ಬಾಲವನ್ನು ಬೀಸಣಿಗೆಯಂತೆ ಅಗಲಿಸುವುದು; ಹಾರುವ ಕೀಟಗಳ ಭಕ್ಷಕ. *ಚ್‌ಕ್.ಚ್‌ಕ್.* ಕೂಗು.

245. White-browed Fantail-Flycatcher *(Rhipidura aureola)* R Bulbul- Similar to 244, with a white forehead and broad supercilium, extending upto nape; white underparts below throat and white tipped tail; two white spotted wing-bars. **Voice:** *chk.chk.* calls and a mixture of short pleasant whistling notes. Habits, food, nesting habits, similar to 244.

ಬಿಳಿಹುಬ್ಬಿನ ಬೀಸಣಿಗೆನೊಣಹಿಡುಕ *(ಒಕ್ಕೆಚಿರ್‌ಪ)* 17 ಸೆಂಮೀ. ೨೪೪ರಂತೆ, ಆದರೂ, ಹಣೆಯ ಮೇಲೆ ಕೂಡಿದ ಬಿಳಿ ಹುಬ್ಬುಗಳು; ಕಪ್ಪು ಗಲ್ಲ; ಬಿಳಿ ಕೆಳಮೈ; ರೆಕ್ಕೆಯ ಮೇಲೆ ಎರಡು ಬಿಳಿ ಪಟ್ಟಿಗಳು. ಉದುರೆಲೆ, ಕುರುಚಲು ಕಾಡುಗಳಲ್ಲಿ ವಾಸ. *ಚ್‌ಕ್.ಚ್‌ಕ್.* ಕೂಗಲ್ಲದೆ *ಚೀ.ಚೀ.ಚಿವೀ.ಚಿವೀ..* ಹಾಡು. ಉಳಿದೆಲ್ಲ ೨೪೪ರಂತೆ.

Monarch-Flycatchers and Paradise-Flycatchers (Muscicapidae: *Monarchinae)*

ರಾಜಹಕ್ಕಿಗಳು *(ರಾಜನೂಕರೆ)*

Cheerful, small sized flycatchers. Sexes dimorphic. Food consists of flies, midges, dipterous insects and large cicadas. Nest is a compact cup of grass and fibres, plastered outside with cobweb, built on an elbow of a twig. Both sexes share the domestic duties.

ಪುಟ್ಟ, ಚಿತ್ತಾಕರ್ಷಕ, ಕೀಟಭಕ್ಷಕ ಹಕ್ಕಿಗಳು. ಗಂಡು-ಹೆಣ್ಣು ನೋಡಲು ವಿಭಿನ್ನ. ನೊಣ, ದ್ವಿಪತ್ರಕ ಕೀಟಗಳು, ಜೀರುಂಡೆ ಮುಂತಾದ ಚಿಕ್ಕ-ಪುಟ್ಟ ಜೀವಿಗಳೇ ಆಹಾರ. ರೆಂಬೆಗಳ ಕವಲುಗಳಲ್ಲಿ, ಹುಲ್ಲು-ನಾರುಗಳನ್ನು ಜೇಡರ ಬಲೆಯಲ್ಲಿ ಅಂಟಿಸಿ ತಯಾರಾದ ಅಚ್ಚುಕಟ್ಟಾದ ಸಣ್ಣ ಗೂಡು.

246. Asian Paradise-Flycatcher *(Terpsiphone paradisi)* Paradise Flycatcher LM Bulbul+/- Most beautiful Indian bird. Male, glossy blue-black head, crest, throat; silvery white body with black on wings; glistening 50 cms long white tail streamers. Young males have rufous tail streamers; females lack them; but both have shorter crest, rufous above; ashy grey throat; white below. Pairs, seen in shady forests, plantations, groves and gardens; agile, fairy movements of the male, as he twists and turns in air with his looping and trailing tail-ribbons, makes an exquisite spectacle. **Voice**: sharp, grating *ch.chew*; breeding male has a mixture of pleasant whistling notes. **Nesting**: January-June. **Eggs**: 3-5, pale creamy pink with reddish brown speckles. In one race, *Terpsiphone paradisi ceylonensis*, the adult male never acquires the white plumage.

ರಾಜಹಕ್ಕಿ *(ರಾಜನೂಕರೆ)* 20 ಸೆಂಮೀ. ಭಾರತದ ಅತಿ ಸುಂದರ ಹಕ್ಕಿ. ಗಂಡಿಗೆ, ಕಡು ನೀಲಿಗಪ್ಪು ತಲೆ, ಜುಟ್ಟು, ಗಲ್ಲ; ಹೊಳೆಯುವ ಅಚ್ಚಬಿಳಿ ದೇಹ; ರೆಕ್ಕೆಯಲ್ಲಿ, ಕಪ್ಪು; ಎಲ್ಲಕ್ಕಿಂತ ಮಿಗಿಲಾಗಿ, ೫೦ ಸೆಂಮೀ. ಉದ್ದನಾದ ಬಾಲದ ಎರಡು ಬಿಳಿ

ಗರಿಗಳು. ಹೆಣ್ಣಿಗೆ ಮತ್ತು ಎಳೆವಯಸ್ಸಿನ ಗಂಡು ಹಕ್ಕಿಗೆ, ಕೆಂಗಂದು ಮೇಲ್ಮೈ; ಕಪ್ಪು ತಲೆ; ಬಿಳಿ ಕೆಳಮೈ. ಎಳೆವಯಸ್ಸಿನ ಗಂಡು ಹಕ್ಕಿಗೆ ಕೆಂಗಂದು ಬಾಲವಿದ್ದರೆ, ಹೆಣ್ಣಿಗೆ ಬಾಲದ ಗರಿಗಳಿಲ್ಲ. ಒಂದು ಒಳಜಾತಿಯ ರಾಜಹಕ್ಕಿ ಬಿಳಿ ದೇಹವನ್ನು ಹೊಂದುವುದೇ ಇಲ್ಲ. ಜೋಡಿಯಾಗಿ, ಉದುರೆಲೆ, ಬಿದಿರುಕಾಡುಗಳಲ್ಲಿ, ತೋಟ, ಜನವಸತಿ ಪ್ರದೇಶಗಳಲ್ಲಿ ಮರ, ಪೊದೆ ಹಾಗೂ ಬಿದಿರುಮೆಳೆಗಳ ನಡುವೆ ಕಾಣಬಹುದು. ಚಾಕಚಕ್ಯತೆಯಿಂದ ಅತ್ತಿಂದಿತ್ತ ನಲಿಯುತ್ತ ಹಾರಾಡುವಾಗ, ಗಂಡುಹಕ್ಕಿಯ ರಿಬ್ಬನಿನಂತಹ ಬಾಲಗಳು ಮನಮೋಹಕ! *ಚ್.ಚ್ಯು..* ಕೂಗು.

247. Black-naped Monarch-Flycatcher *(Hypothymis azurea)* Black-naped Flycatcher R Sparrow+/- Male, blue head, throat, breast and upperparts; black patch on the nape and georgette across the breast; sooty on wings and tail; white below breast. Female, dull ashy blue head, breast; browner upperparts; no black nape, nor georgette. Solitary or pairs, actively flitting and fluttering in the middle and lower foliage; often with mixed hunting party; slight fanning of tail. **Voice**: distinct, interrogative *chwee.chwi*? **Nesting**: April-August. **Eggs**: similar to 246, but smaller.

ಕಪ್ಪುಕತ್ತಿನ ರಾಜಹಕ್ಕಿ ***(ಕರ್ತ ರಾಜನೂಕರ್)*** 16 ಸೆಂಮೀ. ಗಂಡಿಗೆ ನೀಲಿ ತಲೆ, ಗಂಟಲು, ಎದೆ, ಮೇಲ್ಮೈ, ಬಾಲ; ಹಿಂಗತ್ತಿನ ಮೇಲೆ ಕಪ್ಪು ಮಚ್ಚೆ; ಎದೆಯ ಮೇಲೆ ಕಪ್ಪು ಸರ; ಬಿಳಿ ಹೊಟ್ಟೆ. ಹೆಣ್ಣಿಗೆ ಪೇಲವ ನೀಲಿ ಮೈ; ತಿಳಿಗಂದು ಬೆನ್ನು, ರೆಕ್ಕೆಗಳು; ಕಪ್ಪು ಮಚ್ಚೆಯಾಗಲೀ, ಸರವಾಗಲೀ ಇಲ್ಲ. ಉಳಿದ ಹಕ್ಕಿಗಳೊಂದಿಗೆ, ನೆರಳಿರುವ ಒತ್ತಾದ ಕಾಡುಗಳಲ್ಲಿ, ಎಲೆಗಳ ನಡುವೆ ಬೇಟೆಯಾಡುತ್ತವೆ. ಚ್ವೀ.ಚ್ವಿ?.. ಪ್ರಶ್ನಾರ್ಥಕ ಕೂಗು.

Prinias and Warblers (Muscicapidae: *Sylviinae)*

ಉಲಿಯಕ್ಕಿಗಳು *(ಚಿಟ್ಟೆಪಕ್ಷಿ)*

Large family of small, dull coloured, active and arboreal birds, inhabiting reedbeds to scrub jungles to woodlands. They have a weak, slender and pointed bill; short legs; wings medium in length and rounded. Sexes alike. Food consists of insects, caterpillars, ants, small beetles, nectar, and berries; feed inside the cover of vegetation; some are very skulking. With confusingly similar plumage it is difficult to identify in the field, but diagnosed by their distinct, quavering voice. Nest is a cup shaped or domed structure, placed on ground in shade and vegetation or up in trees or bushes. Eggs, 3 to 5. Both sexes share domestic duties.

ಪೇಲವ ಬಣ್ಣ ಹೊಂದಿರುವ, ಸರ್ವದಾ ಚಟುವಟಿಕೆಯಿಂದ ಜೊಂಡು, ಕುರುಚಲು, ತೆಳುಗಾಡುಗಳಲ್ಲಿ, ಮರಗಿಡಪೊದೆಗಳಲ್ಲಿ ಅಡ್ಡಾಡುವ ಚಿಕ್ಕ ಹಕ್ಕಿಗಳು. ದುರ್ಬಲವಾದ, ತೆಳುವಾದ, ಚೂಪಾದ ಕೊಕ್ಕು; ಸಣ್ಣ ಕಾಲು; ಗುಂಡಾದ ರೆಕ್ಕೆ. ಸೋಮಾರಿಗಳಂತೆ ಸದಾ ಅವಿತು ಕೂತಂತೆ ಕಂಡರೂ, ಎಲೆಗಳ ನಡುವೆ ಹಿಡಿದ ಕೀಟ, ಕಂಬಳಿಹುಳ, ಇರುವೆ, ಹಣ್ಣು ಮತ್ತು ಮಕರಂದ ಇವೇ ಆಹಾರ. ನೋಡಲು ಎಲ್ಲವೂ ಒಂದೇ ರೀತಿ ಇರುವುದರಿಂದ, ಅವುಗಳ ವಿಶಿಷ್ಟ ಸ್ವರದಿಂದ, ಮೃದುವಾದ ಇಂಚರದಿಂದ ಪತ್ತೆ ಹಚ್ಚಬೇಕಾಗುವುದು. ನೆರಳಿರುವೆಡೆ, ನೆಲದ ಮೇಲೆಯೋ, ಗಿಡಗಂಟಿಗಳ ಪೊದೆಗಳಲ್ಲಿಯೋ, ಉಬ್ಬಿದ ಅಥವಾ ಬಟ್ಟಲಿನ ಆಕಾರದ ಗೂಡು.

248. Plain Prinia *(Prinia inornata)* Plain Wren Warbler R Sparrow- Pale brown above with white lores and supercilium; long, graduated tail, with buff tips and white outer feathers; buff-white underbody; light brown flanks and belly. Pairs, seen hopping about quietly among shrubs in drier scrub and grassy country. **Voice**: rapid, plaintive, insect-like wheezy *tee.tee.tee.*; or *chiup.chiup* calls and rapid *tlick.tlick.* repeated songs. **Nesting**: March-September; nest, long pear-shaped pouch of grass, slung between upright reed stumps. **Eggs**: 3-5, glossy greenish blue, speckled with reddish brown.

ಉಲಿಯಕ್ಕಿ *(ಚಿಟ್ಟೆಪಕ್ಷಿ)* 13 ಸೆಂಮೀ. ತಿಳಿಗಂದು ಮೇಲ್ಮೈ; ಬಿಳಿ ಹುಬ್ಬು; ಪೇಲವ ಕೆಳಮೈ; ಉದ್ದ ಪಟ್ಟೆ ಬಾಲದ ತುದಿಯಲ್ಲಿ ಕಪ್ಪು ಮತ್ತು ಬಿಳಿಯಂಚು. ಜೋಡಿಯಾಗಿ, ಒಣ ಕುರುಚಲು, ಹುಲ್ಲುಗಾಡುಗಳಲ್ಲಿ, ಕುಪ್ಪಳಿಸುತ್ತ ಬೇಟೆಯರಸುತ್ತವೆ. *ಟೀಟೀಟೀಟೀ* ಕೀಟದ ಕೂಗು.

249. Ashy Prinia *(Prinia socialis)* Ashy Wren Warbler R Sparrow- Rich ashy grey above with fulvous white underparts; rufous wings and long graduated, black and white tipped tail; winter plumage duller. Pairs, actively moving around in undergrowth, in more moist areas, flicking erect tail. **Voice**: electric spark-like *kit.kit.kit.*, when alarmed; breeding male has excited warbling, nasal *pee.pee.pee..* or *jeevi.jeevi.jeevi..* song. **Nesting**: March-September; nest, either formed of stitched leaves, like a Tailorbird or oblong purse of woven fibres in supporting leaves of low bush. **Eggs**: 3-4, glossy red with dark ring at base.

ಟುವ್ವಿಹಕ್ಕಿ *(ಬೂದ್ ಚಿಟ್ಟೆಪಕ್ಷಿ)* 13 ಸೆಂಮೀ. ಕಡುಬೂದು ಮೇಲ್ಮೈ; ಪೇಲವ ಬಿಳಿ ಕೆಳಮೈ; ರೆಕ್ಕೆಯಲ್ಲಿ ಕೆಂಗಂದು; ಉದ್ದ ಪಟ್ಟೆ ಬಾಲದ ತುದಿಯಲ್ಲಿ ಕಪ್ಪು-ಬಿಳಿ. ಶೀತವಿರುವೆಡೆ ಜೋಡಿಯಾಗಿ, ನಿಮಿರಿದ ಬಾಲವನ್ನು ಆಡಿಸುತ್ತಾ ನಿಶ್ಶಬ್ದವಾಗಿ ಬೇಟೆಯಾಡುತ್ತವೆ. ತೀಕ್ಷ್ಣ ಕಿಡಿಯಂತೆ *ಕಿಟ್.ಕಿಟ್.ಕಿಟ್..* ಗಾಬರಿಯ ಕೂಗು; ಪ್ರಜನನ ಕಾಲದಲ್ಲಿ ಗಂಡುಹಕ್ಕಿಯ *ಜೀವಿ.ಜೀವಿ.ಜೀವಿ.* ಹಾಡು. ಸಿಂಪಿಗ ಹಕ್ಕಿಯಂತೆ, ಎಲೆಗಳನ್ನು ಹೊಲೆದು ಅಥವಾ ಕೆಳಸ್ತರದ ಎಲೆಗಳ ನಡುವೆ ನಾರಿನಿಂದ ನೇಯ್ದ ಗೂಡು.

250. Franklin's Prinia *(Prinia hodgsonii)* Franklin's Wren Warbler R Sparrow- Greyish brown upperparts with white supercilium; long grey tail with black-white tips; white underbody; light grey breast band when breeding. Pairs or small parties, seen flitting among bushes and low undergrowth in thorny jungles and light forests, flicking their tail constantly. **Voice**: contact calls *zee.zee.zee..*; breeding male has warbling, squeaky, spirited song from exposed treetop or perch *yousee.yousee.yousee.* or *wich.wich.wich..* **Nesting**: January-October; pendent-like nest, made of rough cup of grass and fibres or inside two stitched leaves, like that of a Tailorbird. **Eggs**: 3-4, pale white with reddish brown streaks.

ಬೂದುಬಾಲದ ಉಲಿಯಕ್ಕಿ *(ಬೂದ್‌ಬಾಲ್‌ರ ಚಿಟ್ಟೆಪಕ್ಷಿ)* 11 ಸೆಂಮೀ. ಬೂದುಗಂದು ಮೇಲ್ಮೈ; ಬಿಳಿ ಹುಬ್ಬು; ಮಾಸಲು ಬಿಳಿ ಕೆಳಮೈ ಮೇಲೆ ಬೂದು ಎದೆಪಟ್ಟಿ; ಉದ್ದ ಬೂದು ಬಾಲದ ತುದಿಯಲ್ಲಿ ಕಪ್ಪು-ಬಿಳಿ. ಮುಳ್ಳುಗಾಡು, ತಿಳಿಗಾಡುಗಳಲ್ಲಿ, ಬಾಲವನ್ನು ಮೀಟಿಕೊಂಡು, ಪೊದೆಗಳಲ್ಲಿ ಅತ್ತಿತ್ತ ಅಡ್ಡಾಡುತ್ತವೆ. *ಚಿ.ಚೀ..* ಸಂಪರ್ಕ ಕರೆಯಲ್ಲದೆ, ಪ್ರಜನನ ಸಮಯದಲ್ಲಿ ಗಂಡು ಹಕ್ಕಿಯ ಉತ್ಸಾಹಭರಿತ *ಯುಸೀ.ಯುಸೀ.* ಅಥವಾ *ವಿಚ್.ವಿಚ್..* ಕೂಗು. ವೀವರಂತೆ ನಾರಿನಿಂದ ನೇಯ್ದ ಅಥವಾ ಸಿಂಪಿಗ ಹಕ್ಕಿಯಂತೆ ಎರಡು ಎಲೆಗಳನ್ನು ಹೊಲೆದು ಮಾಡಿದ ವಿಶಿಷ್ಟ ಗೂಡು.

251. Jungle Prinia *(Prinia sylvatica)* Jungle Wren Warbler R Sparrow+/- Earthy brown above with white supercilium; creamy underparts; long, graduated white-tipped tail, with white outermost feathers. Habits similar to 248. **Voice**: loud, repeated triple-note *pit.pretty..pit.pretty*. **Nesting**: March-October. **Eggs**: 4, of varied colouration.

ಅಡವಿ ಉಲಿಯಕ್ಕಿ 15 ಸೆಂಮೀ. ಮಣ್ಣುಗಂದು ಮೇಲ್ಮೈ; ಬಿಳಿ ಹುಬ್ಬು; ಮಾಸಲು ಬಿಳಿ ಕೆಳಮೈ; ಪಟ್ಟೆಬಾಲದ ತುದಿ ಮತ್ತು ಅಂಚು ಬಿಳಿ. ಉಳಿದೆಲ್ಲ ೨೪೮ರಂತೆ. ಮೂರು ಸ್ವರದ *ಪಿಟ್.ಪ್ರಿಟೀ..* ಕೂಗು.

252. Blyth's Reed-Warbler *(Acrocephalus dumetorum)* M Sparrow- Bright olive-brown above with white supercilium; buff underparts with white throat. Singly, seen hopping about and creeping in bushes, often away from water. **Voice**: harsh *chuk* uttered while foraging. Winter visitor, breeding in Pakistan.

ಬೂದು ಉಲಿಯಕ್ಕಿ 14 ಸೆಂಮೀ. ಅಚ್ಚ ಹಸಿರುಗಂದು ಮೇಲ್ಮೈ; ಬಿಳಿ ಹುಬ್ಬು, ಗಂಟಲು; ಮಾಸಲು ಬಿಳಿ ಕೆಳಮೈ. ಒಂಟಿಯಾಗಿ ಜೌಗು ಪ್ರದೇಶಗಳಲ್ಲಿ, ನೀರಿನಿಂದ ದೂರವಾಗಿ, ಪೊದೆಗಳಲ್ಲಿ ಕುಪ್ಪಳಿಸುತ್ತ, ಅಡ್ಡಾಡುತ್ತದೆ; ನೆಲದಲ್ಲಿ ಬೇಟೆ ಹುಡುಕುತ್ತಿರುವಾಗ ಯಾವಾಗಲಾದರೊಮ್ಮೆ *ಚಕ್.* ಕೂಗು. ಪಾಕಿಸ್ತಾನದಿಂದ ಚಳಿಗಾಲದ ವಲಸೆಗಾರ.

253. Booted Warbler (*Hippolais caligata)* M Sparrow- Similar to 252, but dull olive brown above, with small supercilium; pale buffy white below. Solitary or small flocks, actively hunting among foliage of upper branches. **Voice**: short, soft *tsik* and a fast nasal chattering warble. **Nesting**: winter visitor, breeding in Sind, Baluchistan and W Punjab.

ಬೂಟುಗಾಲಿನ ಉಲಿಯಕ್ಕಿ ೧೨ ಸೆಂಮೀ. ೨೫೨ರಂತಿದ್ದರೂ, ಅದಕ್ಕಿಂತ ಸಣ್ಣ ಗಾತ್ರ; ಸಣ್ಣ ಹುಬ್ಬು. ಕುರುಚಲು ಕಾಡು, ಒಣ-ಬಯಲು ಪ್ರದೇಶಗಳಲ್ಲಿ ಮರಗಳ ಎತ್ತರದ ಕೊಂಬೆಗಳಲ್ಲಿ, ಸಣ್ಣ ಗುಂಪಿನಲ್ಲಿ ಬೇಟೆ. ಕಿವಿಗಿಂಪಲ್ಲದ *ಚರ್. ಚರ್.* ಕೂಗು. ಪಾಕಿಸ್ತಾನದ ಕಡೆಯಿಂದ ಚಳಿಗಾಲದ ವಲಸೆಗಾರ.

254. Thick-billed Warbler *(Acrocephalus aedon)* M Sparrow+ Plain, fulvous, olive-brown above without a supercilium; buff white below; distinct short, thick bill. Solitary and secretive, seen in reeds and grassy bushes, in marshy light forests and in coffee estates. **Voice**: loud, harsh *tschuk.tschuk* and distinct *chok.chok.cherrek.chok.* alarm call. Winter visitor, breeding extralimital; arrival, September; departure, end of April.

ದಪ್ಪಕೊಕ್ಕಿನ ಉಲಿಯಕ್ಕಿ 20 ಸೆಂಮೀ. ಹಸಿರುಗಂದು ಮೇಲ್ಮೈ; ಹುಬ್ಬಿಲ್ಲ; ಪೇಲವ ಬಿಳಿ ಕೆಳಮೈ; ದಪ್ಪವಾದ, ಸಣ್ಣ ಕೊಕ್ಕು. ನಾಚಿಕೆ ಸ್ವಭಾವ. ಒಂಟಿಯಾಗಿ, ಜೌಗು ಪ್ರದೇಶದ, ಹುಲ್ಲು-ಜೊಂಡುಗಳ ಮಧ್ಯೆ, ಎಸ್ಟೇಟುಗಳಲ್ಲಿ ಕಾಣಬಹುದು. ಕರ್ಕಶ *ತ್ಸ್‌ಕ್.ತ್ಸ್‌ಕ್.* ಕೂಗು. ಭಾರತ ಗಡಿಯಾಚೆಯಿಂದ ಚಳಿಗಾಲದ ವಲಸೆಗಾರ.

255. Golden-headed Fantail-Warbler (*Cisticola exilis)* R Sparrow- Golden red head and nape with ashy brown upperparts streaked black; pale buff white underparts with pale orange tinge; deep ashy brown, white tipped tail darker below. Female lacks the golden red head and the dark tail. Pairs seen in open hillsides and grasslands skulking and lurking in low growth, diving into grasses. **Voice:** *swee.swee.swee..* ending in a *ping* note; excited calls perched on the rocks or on the wing. **Nesting:** June to

September; nest, a deep oblong pouch in grass, bound with cobweb. **Eggs:** 3-5, ashy white speckled with brown.

ಹೊಂಬಣ್ಣದ ಬೀಸಣಿಗೆ ಉಲಿಯಕ್ಕಿ *(ಪೊನ್ಸ್ ಚಿಟ್ಟೆಪಕ್ಷಿ)* ೧೦ ಸೆಂಮೀ. ಕೆಂಚು ಹೊಂಬಣ್ಣದ ತಲೆ, ಹಿಂಗತ್ತು; ಬೂದುಗಂದು ಮೇಲ್ಮೈ ಮೇಲೆ ಕಪ್ಪು ಗೀರುಗಳು; ಮಾಸಲು ಬಿಳಿ ಕೆಳಮೈ; ಕಡುಗಂದು ಬಾಲದ ತುದಿ ಬಿಳಿ. ಜೋಡಿಯಾಗಿ ತೇವವಿರುವ ತೆರೆದ ಪ್ರದೇಶ, ಹುಲ್ಲುಗಾಡುಗಳಲ್ಲಿ ಕಾಣಬಹುದು. ಬಾಲವನ್ನು ಆಗಾಗ ಬೀಸಣಿಗೆಯಂತೆ ಹರಡುತ್ತ ಹುಲ್ಲು–ಜೊಂಡುಗಳ ಮಧ್ಯೆ ಅಡ್ಡಾಡುತ್ತವೆ. *ಸ್ವಿ.ಸ್ವಿ.ಸ್ವೀ.. ಪಿಂಗ್* ಸ್ವರ.

256. Streaked Fantail-Warbler *(Cisticola juncidis)* R Sparrow- A fulvous-brown bird with prominent dark streaks; rufous-buff rump; white underparts with rufous flanks; short white-tipped and fan-shaped tail. Sexes alike. Pairs or small group seen in rich grassland, waterside herbage or crops in open expanse; lurking in low growth, have a short jerky flight only to dive into the grass again; male has a striking display especially during breeding when it soars irratically, with undulating, zigzag flight, fanning its tail and sharp *zit.zit.zit.* calls. **Nesting**: June-September; nest hardly a metre above the ground, consists of a deep oblong pouch of grass lined with soft fibres, secured with cobweb. **Eggs:** 3-5, pale bluish white, with red and purple speckles.

ಬೀಸಣಿಗೆ ಉಲಿಯಕ್ಕಿ ೧೦ ಸೆಂಮೀ. ಮಾಸಲುಗಂದು ಮೇಲ್ಮೈ ಮೇಲೆ ಎದ್ದು ಕಾಣುವ ಕರಿ ಗೀರುಗಳು; ಮಾಸಲು ಕೆಂಗಂದು ಪೃಷ್ಠ; ಬಿಳಿ ಕೆಳಮೈ; ಬಿಳಿ ತುದಿಯುಳ್ಳ ಬೀಸಣಿಗೆ ಬಾಲ. ಹುಲ್ಲುಗಾವಲುಗಳಲ್ಲಿ, ಬೆಳೆಗಳ ನಡುವೆ, ನೀರಿರುವೆಡೆ, ಕೆಳಸ್ತರದಲ್ಲಿ ಅಡ್ಡಾಡುವುದನ್ನು ಕಾಣಬಹುದು; ಸರಕ್ಕನೆ ಹುಲ್ಲಿನ ನಡುವೆಯಿಂದ ಎದ್ದು, ಅಷ್ಟೇ ವೇಗವಾಗಿ ಹುಲ್ಲಿನ ಒಳಗೆ ಸೇರಿಕೊಳ್ಳುವ ಸ್ವಭಾವ. ಪ್ರಜನನ ಕಾಲದಲ್ಲಿ ಗಂಡುಹಕ್ಕಿ ಆಕಾಶದಲ್ಲಿ ಅಡ್ಡಾದಿಡ್ಡಿ, ಮೇಲಕ್ಕೂ–ಕೆಳಕ್ಕೂ ಓಲಾಡುತ್ತಾ, ಬೀಸಣಿಗೆ ಬಾಲವನ್ನು ತೆರೆದುಕೊಂಡು ತೀಕ್ಷ್ಣ ಸ್ವರದಲ್ಲಿ *ಸಿಟ್.ಸಿಟ್.ಸಿಟ್.* ಎಂದು ಕೂಗುತ್ತಾ ಹೆಣ್ಣನ್ನು ಆಕರ್ಷಿಸುವುದನ್ನು ನೋಡಲು ಚೆಂದ. ಮಳೆಗಾಲದಲ್ಲಿ ಹುಲ್ಲು–ನಾರುಗಳಿಂದ ಕೆಳಸ್ತರದಲ್ಲಿ ಕಟ್ಟಿದ ಗೂಡಿನಲ್ಲಿ ಮರಿಗಳನ್ನು ಬೆಳೆಸುತ್ತವೆ.

257. Tickell's Warbler *(Phylloscopus affinis)* Tickell's Leaf Warbler M Sparrow- Similar to 254, with light olive brown upperparts, olive-yellow eyebrow and underparts. Winter visitor from Himalayas.

ಹಳದಿಹೊಟ್ಟೆಯ ಎಲೆ ಉಲಿಯಕ್ಕಿ 10 ಸೆಂಮೀ. ೨೫೪ರಂತೆ, ಆದರೆ, ತಿಳಿ ಹಸಿರುಗಂದು ಮೇಲ್ಮೈ; ತಿಳಿ ಹಸಿರು–ಹಳದಿ ಹುಬ್ಬು ಮತ್ತು ಕೆಳಮೈ. ಹಿಮಾಲಯದಿಂದ ಚಳಿಗಾಲದ ವಲಸೆಗಾರ.

258. Greenish Leaf-Warbler *(Phylloscopus trochiloides)* Dull-green Leaf Warbler M Sparrow- Dull olive-green above with yellow supercilium and dark eye streak; single pale white wing bar; pale yellowish white underparts. Singly, along with other insectivorous birds, foraging actively among leaves in forests. **Food**: also caterpillars. **Voice**: distinct *chivee* or *schivee* call. Winter visitor, breeding in Himalayas from Pakistan to Arunachal Pradesh and Assam.

ಹಸಿರು ಎಲೆ ಉಲಿಯಕ್ಕಿ *(ಪಚ್ಚೆ ಚಿಟ್ಟೆಪಕ್ಷಿ)* 10 ಸೆಂಮೀ. ತಿಳಿ ಹಸಿರು ಮೇಲ್ಮೈ; ಹಳದಿ ಹುಬ್ಬಿನ ಕೆಳಗೆ ಕಪ್ಪು ಕಣ್ಣಿನ ಗೆರೆ; ಮಾಸಲು ಬಿಳಿ ರೆಕ್ಕೆ ಪಟ್ಟಿ ಮತ್ತು ಕೆಳಮೈ; ಕಾಡಿನ ಎಲೆಗಳ ನಡುವೆ, ಉಳಿದ ಹಕ್ಕಿಗಳೊಂದಿಗೆ ಕೀಟಗಳ ಬೇಟೆ. ವಿಶಿಷ್ಟ *ಸ್ಚಿವೀ.ಸ್ಚಿವೀ..* ಕೂಗು. ಹಿಮಾಲಯದಲ್ಲಿ, ಪಾಕಿಸ್ತಾನದಿಂದ ಅರುಣಾಚಲ ಪ್ರದೇಶ–ಅಸ್ಸಾಂವರೆಗಿನ ವ್ಯಾಪ್ತಿಯಲ್ಲಿ ವಾಸ; ಇಲ್ಲಿಗೆ ಚಳಿಗಾಲದ ವಲಸೆಗಾರ.

259. Orphean Warbler *(Sylvia hortensis)* M Sparrow+ Dark, slaty grey upperparts with black cap, covering eyes and ear coverts; buffy white underparts; white tipped tail with white outer feathers. Female has dark grey cap. Solitary, insectivorous, shy bird, skulking and hopping among thorny bushes. **Voice**: warbling *chichi.viri.chichi.* whistles. Winter visitor, breeding in Baluchistan and NWFP.

ಕಂತಲೆಯ ಉಲಿಯಕ್ಕಿ ***(ಕರ್ತಮಂಡೆ ಚಿಟ್ಟೆಪಕ್ಷಿ)*** 15 ಸೆಂಮೀ. ಕಡು ಕಂದುಗಪ್ಪು ಮೇಲ್ಮೈಗೆ, ಕಪ್ಪು ಟೊಪ್ಪಿ; ಪೇಲವ ಬಿಳಿ ಕೆಳಮೈ; ಬಾಲದ ತುದಿ–ಅಂಚು ಬಿಳಿ. ಹೆಣ್ಣಿಗೆ ಕಡುಬೂದು ಟೊಪ್ಪಿ. ಒಂಟಿಯಾಗಿ, ಮುಳ್ಳುಗಂಟಿಗಳಲ್ಲಿ ಕುಪ್ಪಳಿಸುತ್ತ ಕೀಟವನ್ನರಸುತ್ತದೆ. *ಚಿಚಿ.ಚಿರಿ.ಚಿಚಿ...* ಕೂಗು. ಬಲೂಚಿಸ್ತಾನ, ಈಶಾನ್ಯ ಗಡಿಯಾಚೆಯಿಂದ ಚಳಿಗಾಲದ ವಲಸೆಗಾರ.

260. Yellow-browed Warbler *(Phylloscopus inornatus)* Yellow-browed Leaf Warbler M Sparrow- Dull olive-green upperparts with pale yellow supercilium and dark eye streak; two pale white wing bars on darker wings; buffy white underparts. Habits similar to 259. Winter visitor from W Himalayas.

ಹಳದಿಹುಬ್ಬಿನ ಉಲಿಯಕ್ಕಿ ***(ಮಂಜಪುಬ್ಬುರ ಚಿಟ್ಟೆಪಕ್ಷಿ)*** 11 ಸೆಂಮೀ. ೨೫೯ರಂತೆ, ಆದರೆ ಪೇಲವ ಹಸಿರು ಮೇಲ್ಮೈ; ತಿಳಿ ಹಳದಿ ಹುಬ್ಬು, ಕಪ್ಪು ಕಣ್ಣುಪಟ್ಟಿ; ರೆಕ್ಕೆಯ ಮೇಲೆ ಎರಡು ಮಾಸಲುಬಿಳಿ ಪಟ್ಟಿಗಳು; ಮಾಸಲು ಕೆಳಮೈ. ಉಳಿದದ್ದು ೨೫೯ರಂತೆ. ಪಶ್ಚಿಮ ಹಿಮಾಲಯದಿಂದ ಚಳಿಗಾಲದ ವಲಸೆಗಾರ.

261. Broad-tailed Grass-Warbler *(Schoenicola platyura)* R Sparrow+ Olive brown upperparts, conspicuous broad tail with reticulated appearance on the undersurface; pale white throat, breast; light rufous underparts. Solitary, seen in tall grass and shrub covered sholas and grass in marshy places. Rest, similar to 259.

ಜೊಂಡು ಉಲಿಯಕ್ಕಿ ***(ನೊಜೆ ಪಕ್ಷಿ)*** 18 ಸೆಂಮೀ. ಹಸಿರುಗಂದು ಮೇಲ್ಮೈ; ಎದ್ದು ಕಾಣುವ ಅಗಲವಾದ ಬಾಲದ ಕೆಳಗೆ ಅಡ್ಡಾದಿಡ್ಡಿ ಪಟ್ಟಿ; ಮಾಸಲು ಬಿಳಿ ಗಂಟಲು, ಎದೆ; ತಿಳಿ ಕೆಂಗಂದು ಕೆಳಮೈ. ಒಂಟಿಯಾಗಿ, ಕುರುಚಲು, ಶೋಲಾ ಅರಣ್ಯಗಳಲ್ಲಿ, ಜೌಗು ಹುಲ್ಲುಗಳ ನಡುವೆ ವಾಸ. ಉಳಿದದ್ದು ೨೫೯ರಂತೆ.

262. Paddyfield Warbler *(Acrocephalus agricola)* M Sparrow- Similar to 252, with brighter rufous rump; pale supercilium; white throat and orchaceous buff underparts. Singly, seen in thick cover of paddyfields, reedbeds, elephant grass or wet ground, searching for insects. **Voice**: harsh *chrr..chuck..* Winter visitor from across the West border.

ಗದ್ದೆ ಉಲಿಯಕ್ಕಿ ***(ಬೇಲ್ ಚಿಟ್ಟೆಪಕ್ಷಿ)*** 13 ಸೆಂಮೀ. ೨೫೨ರಂತೆ, ಆದರೆ, ತಿಳಿ ಕೆಂಗಂದು ಪೃಷ್ಠ; ಮಾಸಲು ಹುಬ್ಬು; ಬಿಳಿ ಗಂಟಲು ಮತ್ತು ಪೇಲವ ಕೆಳಮೈ. ಒಂಟಿಯಾಗಿ ಹುಲ್ಲು, ಜೌಗು, ಪೈರುಗಳ ನಡುವೆ, ಕೀಟಗಳ ಬೇಟೆ. *ಚರ್ರ್..ಚಕ್..* ಕೂಗು. ಪಶ್ಚಿಮದ ಗಡಿಯಾಚೆಯಿಂದ ಚಳಿಗಾಲದ ವಲಸೆಗಾರ.

263. Common Tailorbird *(Orthotomus sutorius)* Indian Tailorbird R Sparrow- Familiar resident bird around human habitations. Olive green above with rusty orange forecrown; dark spot on sides of throat, best seen in calling males; buffy white underparts; long, pointed tail with central tail feathers longer in breeding male. Singly or pairs, seen hopping or familiar, loud, cheerful *tuwwi.tuwwi.* or *chuvvi.chuvvi.*

Nesting: April-September; nest, rough cup of soft fibres and cotton, placed in a funnel made of two adjacent leaves, cleverly folded and stitched along the edges. **Eggs**: 3-4, ruddy white with brown spots; female alone incubates.

ಸಿಂಪಿಗ *(ಪೊಲ್ಲ್ ಕಾರಪಕ್ಷಿ)* 13 ಸೆಂಮೀ. ಮಾನವನ ನಿಕಟವರ್ತಿ. ತಿಳಿಹಸಿರು ಮೇಲ್ಮೈಗೆ, ಮಾಸಲು ಕಿತ್ತಳೆ ಹಣೆ; ಗಂಟಲಿನ ಬದಿಗಳಲ್ಲಿ ಕರಿ ಮಚ್ಚೆಗಳು; ಪೇಲವ ಬಿಳಿ ಕೆಳಮೈ; ಉದ್ದ, ಚೂಪಾದ ಬಾಲ. ಜೋಡಿಯಾಗಿ, ಕುರುಚಲು ಕಾಡು, ಜನವಸತಿಯಲ್ಲಿ ಹೂದೋಟಗಳಲ್ಲಿರುವ ಮರಗಳಲ್ಲಿ ಮತ್ತು ಪೊದೆಗಳ ನಡುವೆ ಬಾಲವನ್ನು ಮೀಟಿಕೊಂಡು ಅವಿರತವಾಗಿ, ಚಡಪಡಿಸಿಕೊಂಡು ಅಡ್ಡಾಡುತ್ತವೆ. ಟುವ್ವಿ.ಟುವ್ವಿ. ಕೂಗು. ಎರಡು ಅಕ್ಕಪಕ್ಕದ ಎಲೆಗಳನ್ನು ಒಂದಕ್ಕೊಂದು ಸೇರಿಸಿ, ಅಂಚುಗಳನ್ನು ಹೊಲಿದು; ಆ ಎರಡು ಎಲೆಗಳ ನಡುವೆ ಮೃದುವಾದ ನಾರು-ಹತ್ತಿಯನ್ನಿರಿಸಿ ಮಾಡಿದ ಅದ್ಭುತ ಗೂಡು.

Thrushes, Shortwings, Robins (Muscicapidae: *Turdinae)*

ಮಡಿವಾಳ, ಚಟಕ ಮತ್ತು ಸಿಳ್ಳಾರಗಳು *(ಮಡಿವಾಳ)*

Small to medium sized, plump, arboreal and terrestrial birds. They have soft plumage; bill slender; legs and feet stout; tarsi booted; wings short-rounded or long-pointed; tail square or rounded. Sexes dimorphic. Food consists of varieties of animal and plant matter including insects and berries. Some are very good songsters. Nest is an open cup of grass, rootlets, rubbish lined with feathers or soft fibres in trees, branches and holes or on ground.

ದುಂಡು ದೇಹದ, ತೆಳುವಾದ ಕೊಕ್ಕಿನ, ದಷ್ಟಪುಷ್ಟ ಕಾಲು-ಪಾದಗಳ; ಮರ ಮತ್ತು ನೆಲದ ಮೇಲೆ ಜೀವಿಸುವ ಹಕ್ಕಿಗಳು. ಗಂಡು-ಹೆಣ್ಣು ನೋಡಲು ವಿಭಿನ್ನ. ಮಿಶ್ರಾಹಾರಿಗಳು. ಕೆಲವು ಜಾತಿಯವು ಮಧುರ ಗಾಯಕರೂ ಕೂಡ. ಮರದ ಕೊಂಬೆ, ಕಾಂಡದ ಮೇಲೆ ಇರುವ ರಂಧ್ರ, ಅಥವಾ ಬರೇ ನೆಲದ ಮೇಲೆ ಹುಲ್ಲು, ನಾರು-ಬೇರುಗಳಿಂದ ಕೂಡಿದ ಮೃದುವಾದ, ಬಟ್ಟಲಿನಂತಹ ಗೂಡು.

264. Oriental Magpie-Robin *(Copsychus saularis)* Magpie Robin R Bulbul Familiar bird around human habitation. Male, slaty blue-black head, throat, breast, upperparts, wings and tail; white wing patch and outer tail feathers and underparts. Female, slaty grey replacing black of male. Solitary or pairs, seen hopping on ground, preferring shaded areas; cocks and flicks tail at every movement; active at dusk. **Food**: insects picked out of ground, nectar and berries. **Voice**: one of finest songster; breeding male has rich, incredibly sweet, fluty, musical notes during early morning and late afternoon; same song notes repeated endlessly; plaintive *swee.ee.churr..*; good mimic. **Nesting**: February-June; nest, a pad of grass, rootlets, hair, in a hole in tree trunk or old wall. **Eggs**: 3-5, pale bluish green with reddish brown blotches; female incubates, male shares other duties.

ಮಡಿವಾಳ (ಮಡಿವಾಳ) 20 ಸೆಂಮೀ. ಹೆಸರೇ ಹೇಳುವಂತೆ, ಅಗಸರು ಬಟ್ಟೆ ಒಗೆಯುವ ಕಟ್ಟೆಗಳ ಬಳಿ, ಮನುಷ್ಯರ ಸುತ್ತ-ಮುತ್ತಲ ಪರಿಸರದಲ್ಲಿ ವಾಸಿಸುವ ಅಚ್ಚ ಕಪ್ಪು-ಬಿಳಿ ಹಕ್ಕಿ. ಕಡು ನೀಲಿಗಪ್ಪು ದೇಹ; ರೆಕ್ಕೆಯ ಮೇಲೆ, ಬಾಲದ ಹೊರಗರಿಗಳಲ್ಲಿ ಮತ್ತು ಕೆಳಮೈ ಬಿಳಿ. ಹೆಣ್ಣಿಗೆ, ಕಪ್ಪಿರುವೆಡೆ ಬೂದು. ಒಂಟಿಯಾಗಿ, ಉದುರೆಲೆ, ಕುರುಚಲು ಕಾಡು, ಹೂದೋಟ ಮತ್ತು ಜನವಸತಿ ಪ್ರದೇಶಗಳಲ್ಲಿ ವಾಸ. ಅತ್ತಿಂದಿತ್ತ ಕುಪ್ಪಳಿಸಿಕೊಂಡು, ಒಂದೊಂದು ಬಾರಿಗೂ ಬಾಲವನ್ನು ಮೀಟುತ್ತಾ, ನೆರಳಿರುವೆಡೆ, ಕ್ರಿಮಿ-ಕೀಟ, ಹಣ್ಣು-ಮಕರಂದದ ಬೇಟೆ. ಉಳಿದ ವೇಳೆ ಹೆಚ್ಚು ಶಬ್ದ ಮಾಡದಿದ್ದರೂ, ಸಂತಾನಋತುವಿನಲ್ಲಿ ಗಂಡುಹಕ್ಕಿಗೆ ಎಲ್ಲಿಲ್ಲದ ಸಂಭ್ರಮ! ೮-೨೦ ಸ್ವರಗಳ ಇಂಪಾದ ಹಾಡು; ಕಿಸಬಾಯಿದಾಸನಂತೆ, ಬೆಳಗ್ಗಿನಿಂದ ಸಂಜೆಯವರೆಗೆ ಅದೇ ರಾಗ, ಅದೇ ಹಾಡು.

265. Indian Robin *(Saxicoloides fulicata)* R Sparrow+ Male overall black with a white wing patch, chestnut vent and undertail. Female, dull greyish brown, no wing patches. Solitary or pairs in open thin forests, seen hopping and running on ground; perched on stumps, mounds, often cocking tail and picking up insects. **Food**: eggs of insects, spiders. **Voice**: long *swee..* whistling call; breeding males have warbling song. **Nesting**: February-June; nest, a pad of grass, rootlets, rubbish lined with feathers or soft fibres placed in any hole or even man-made crevice. **Eggs**: 2-3, creamy white, blotched with reddish brown.

ಚಿಟ್ಟುಮಡಿವಾಳ (ಚೆರಿಯ ಮಡಿವಾಳ) 16 ಸೆಂಮೀ. ಅಚ್ಚ ಕಪ್ಪು ಹಕ್ಕಿಗೆ, ರೆಕ್ಕೆಯಲ್ಲಿ ಬಿಳಿ ಪಟ್ಟೆ; ಕಿಬ್ಬೊಟ್ಟೆ ಮತ್ತು ಬಾಲದ ಬುಡದಲ್ಲಿ ಅಚ್ಚ ಕೆಂಗಂದು. ಹೆಣ್ಣಿನದು ಬೂದುಗಂದು ದೇಹ, ರೆಕ್ಕೆಪಟ್ಟೆಯಿಲ್ಲ. ವಿರಳಗಾಡುಗಳಲ್ಲಿ, ಕಾಣುವೆಡೆ ಕುಳಿತು, ಕೀಟ, ಜೇಡ, ಅವುಗಳ ಮೊಟ್ಟೆ ಮುಂತಾದುವುಗಳನ್ನು ಹೊಂಚುಹಾಕುತ್ತದೆ. ಸಂತಾನಋತುವಿನಲ್ಲಿ ಗಂಡಿನ ಮಧುರ ಸಿಳ್ಳೆ ಹಾಡು.

266. White-rumped Shama *(Copsychus malabaricus)* Shama R Bulbul Most proficient songster. Male, glossy black head, neck, throat, breast; rufous orange below; distinct white rump and sides of the graduated tail. In female, dull greyish brown replaces black of male. Pairs, seen in light forests; keep to shade, foliage; launch short sallies after insects. **Food**: insects, rarely nectar. **Voice**: loud, rich, clear, melodious, whistling notes. **Nesting**: April-June; nest placed in natural tree hollows or bamboo clumps. **Eggs**: similar to 264.

ಶಾಮ 25 ಸೆಂಮೀ. ಹಾಡುಗಾರರಲ್ಲೆಲ್ಲ ಅತಿ ಸುಶ್ರಾವ್ಯ ಗಾಯಕ. ಗಂಡಿಗೆ ಹೊಳೆಯುವ ಕಪ್ಪು ಮೇಲ್ಮೈ, ತಲೆ, ಗಂಟಲು, ಎದೆ; ಕೆಂಗಂದು ಕೆಳಮೈ; ಅಚ್ಚಬಿಳಿ ಪೃಷ್ಠ ಮತ್ತು ಉದ್ದವಾದ ಬಾಲದ ಅಂಚು. ಹೆಣ್ಣಿಗೆ ಕಪ್ಪಿರುವಲ್ಲೆಲ್ಲಾ ಬೂದುಗಂದು. ಸದಾಹಸಿರು, ಉದುರೆಲೆ ಮತ್ತು ತಿಳಿಗಾಡುಗಳಲ್ಲಿ, ಎಸ್ಟೇಟುಗಳಲ್ಲಿ, ನೆರಳಿರುವೆಡೆ ಬೇಟೆ. ಅತ್ಯಂತ ಮಧುರವಾದ ಸ್ವರಗಳ ಸಿಳ್ಳೆ ಹಾಡಿನ ಗಾಯನ.

267. Eurasian Blackbird *(Turdus merula)* Blackbird R Myna Male, overall greyish-black bird with darker wings and tail; orange-yellow bill and legs and ring round the eyes; ashy-black below. Female duller; grey throat, chin with brown streaks. Solitary or pairs, seen rummaging forest floor; also on leafy branches in forests and sholas; flight swift and direct without pause in wing beats. **Food**: also drupes, wind fallen fruits and earthworms. **Voice**: breeding male has melodious, warbling, non-repetitive, flutelike notes mimicking other birds; *chuk..chuk..* alarm calls. **Nesting**: May-August; nest, deep cup of moss, rootlets, mixed with wet mud, lined with fern stems, root hairs, in tree. **Eggs**: 3-5, pale greenish white, blotched with ruddy brown.

ಕಪ್ಪುಹಕ್ಕಿ *(ಕರ್ತಪಕ್ಷಿ)* 25-27 ಸೆಂಮೀ. ಗಂಡಿನ ಕಡುಬೂದು ದೇಹಕ್ಕೆ ಕಪ್ಪು ತಲೆ; ಕಿತ್ತಳೆ-ಹಳದಿ ಕೊಕ್ಕು, ಕಾಲು ಮತ್ತು ಕಣ್ಣಿನ ಸುತ್ತ [illegible]ಗುರ; ತಿಳಿ ಬೂದುಗಂದು ಕೆಳಮೈ. ಹೆಣ್ಣಿಗೆ ತುಸು ಪೇಲವ; ಬೂದು ಗಂಟಲ ಮೇಲೆ ಕಂದು ಗೀರುಗಳು. ಒಂಟಿಯಾಗಿ, ಕಾಡಿನ ನೆಲದ ಮೇಲೆ ಅಥವಾ ಕೊಂಬೆಗಳ ಮೇಲೆ ಅಡ್ಡಾಡುತ್ತವೆ. ನೇರ-ವೇಗದ ಹಾರಾಟ. ಕೆಳಬಿದ್ದ ಹಣ್ಣುಗಳು, ಕ್ರಿಮಿ-ಕೀಟ, ಎರೆಹುಳಗಳೇ ಆಹಾರ. ಸಂತಾನಋತುವಿನಲ್ಲಿ ಗಂಡಿನ ಸುಶ್ರಾವ್ಯ ಅಣಕು ಹಾಡುಗಳು. ಬೇರುನಾರುಗಳನ್ನು ಮಣ್ಣಿನೊಂದಿಗೆ ಬೆರೆಸಿದ ಹೂರಣದಿಂದ ರೆಂಬೆಗಳ ಮೇಲೆ ಗೂಡು.

Eurasian Blackbird, Blackcapped Spp. *(Turdus merula nigropileus)* It has rufous-grey body, grey wings, black head and pale white belly. Rest same as 267.

ಕಪ್ಪುತಲೆಯ ಕಪ್ಪುಹಕ್ಕಿ 25 ಸೆಂಮೀ. ಕೆಂಬೂದು ಮೈ, ಬೂದು ರೆಕ್ಕೆಗಳು, ಕಪ್ಪು ತಲೆ ಮತ್ತು ಮಾಸಲು ಬಿಳಿ ಹೊಟ್ಟೆ. ಉಳಿದೆಲ್ಲ ೨೬೭ರಂತೆ.

268. Pied Bushchat *(Saxicola caprata)* R Sparrow Male has overall black plumage with conspicuous white wing patch, rump and belly. Female, earthy brown with pale yellowish brown underparts and rusty rump. Solitary or pairs, seen on bush tops, exposed perch; dart down to ground to pick an insect or spring to make short sallies after winged insects. **Voice**: mostly silent; otherwise harsh, two note *chek.chek.* call; breeding male has trilling whistling notes. **Nesting**: February-May; nest, cup shaped pad of grass lined with softies on ground, under a shelter. **Eggs**: 3-5, pale bluish white with reddish brown speckles; female incubates, male helps in rest of duties.

ಕಪ್ಪುಬಿಳಿ ಬೇಲಿಚಟಕ 13 ಸೆಂಮೀ. ಗಂಡಿನ ಕಪ್ಪು ದೇಹಕ್ಕೆ ಬಿಳಿ ಪೃಷ್ಠ, ಕಿಬ್ಬೊಟ್ಟೆ ಮತ್ತು ರೆಕ್ಕೆ ಪಟ್ಟಿ. ಹೆಣ್ಣಿಗೆ ಪೇಲವ ಕಂದು ದೇಹಕ್ಕೆ ಕೆಂಗಂದು ಪೃಷ್ಠ. ಜೋಡಿಯಾಗಿ, ಕುರುಚಲು ಕಾಡು, ಕೃಷಿಭೂಮಿ, ಜನವಸತಿ ಪ್ರದೇಶಗಳಲ್ಲಿ ವಾಸ. ಒಣರೆಂಬೆ, ಪೊದೆಯ ತುದಿಯ ಮೇಲೆ ಕುಳಿತು ಹೊಂಚುಹಾಕುತ್ತಾ ಹಾರಾಡುವ ಕೀಟವನ್ನೋ, ನೆಲದ ಮೇಲಿನ ಕೀಟವನ್ನೋ, ಸರ್ರನೆ ಹಾರಿ ಹಿಡಿಯುತ್ತವೆ. ಹೆಚ್ಚಿನ ಸಮಯ ಮೌನಿ; ಎರಡು ಸ್ವರದ *ಚೆಕ್.ಚೆಕ್.* ಕೂಗು ಮತ್ತು ಪ್ರಜನನ ಸಮಯದಲ್ಲಿ ಗಂಡಿನ ಸಿಳ್ಳೆ ಹಾಡು.

269. Indian Blue Robin *(Luscinia brunnea)* Bluechat M Sparrow+/- Male, slaty blue above with white supercilium; black lore and cheek; rich chestnut underparts with a white central belly and undertail. Female, olive brown above with pale underparts. Solitary, seen skulking in dense growth; hops on ground; jerks and flicks tail. **Voice**: harsh *tukk.tukk..* alarm notes. Winter visitor, breeding in rhododendron forests of Himalayas upto Arunachal Pradesh and Assam.

ನೀಲಿಚಟಕ 15 ಸೆಂಮೀ. ಗಂಡಿಗೆ ಕಡು ನೀಲಿಗಪ್ಪು ಮೇಲ್ಮೈ; ಬಿಳಿ ಹುಬ್ಬು; ಕಪ್ಪು ಕೆನ್ನೆ, ಕೆಂಗಂದು ಕೆಳಮೈಗೆ ಬಿಳಿ ಕಿಬ್ಬೊಟ್ಟೆ. ಹೆಣ್ಣಿನ ಹಸಿರುಗಂದು ಮೇಲ್ಮೈಗೆ ತಿಳಿ ಕೆಳಮೈ. ಒಂಟಿಯಾಗಿ, ಒತ್ತಾದ ಕಾಡಿರುವೆಡೆ, ನೆಲದ ಮೇಲೆ ಕುಪ್ಪಳಿಸುತ್ತ ಬೇಟೆಯರಸುತ್ತದೆ. *ಟಕ್ಕ್.ಟಕ್ಕ್.* ಕೂಗು. ಹಿಮಾಲಯದ ಗುಲ್ಮ ಕಾಡುಪ್ರದೇಶಗಳಿಂದ ಚಳಿಗಾಲದ ವಲಸೆಗಾರ.

270. Common Stonechat *(Saxicola torquata)* Stonechat M Sparrow+ Male, black head, throat, nape, upperparts and tail; white 'half collar' on sides of neck, shoulder patch and rump; rufous orange breast. Female, similar to that of 268, but with dark streaks on upperparts. Separated pairs, seen perched on fence posts, bush tops, flicking the open tail up and down; descend to ground to capture insects; soon returning to perch. **Voice**: double noted *wheet.chak..* Winter visitor, breeding in Himalayas.

ಕಲ್ಲುಚಟಕ 13 ಸೆಂಮೀ. ಗಂಡಿಗೆ ಕಪ್ಪು ತಲೆ, ಗಂಟಲು, ಹಿಂಗತ್ತು, ಮೇಲ್ಮೈ ಮತ್ತು ಬಾಲ; ಭುಜ, ಪೃಷ್ಠ, ಮತ್ತು ಕತ್ತಿನ ಇಬ್ಬದಿಗಳಲ್ಲಿ, ಬಿಳಿ; ಕೆಂಗಂದು ಎದೆ. ಹೆಣ್ಣಿಗೆ ಪೇಲವ ಕಂದು ದೇಹದ ಮೇಲೆ ಗಾಢ ಗೀರುಗಳು. ಜೋಡಿಯಾಗಿ, ಬೇಲಿಯ ತುದಿ, ಒಣರೆಂಬೆಯ ಮೇಲೆ, ಆಗಾಗ ಬಾಲವನ್ನು ಮೀಟಿಕೊಂಡು, ನೆಲದಮೇಲಿನ ಕ್ರಿಮಿ-ಕೀಟಗಳನ್ನು ಹೊಂಚುಹಾಕುತ್ತವೆ. ಎರಡು ಸ್ವರದ, *ವೀಟ್.ಚಾಟ್.* ಕೂಗು. ಹಿಮಾಲಯದೆಡೆಯಿಂದ ಚಳಿಗಾಲದ ವಲಸೆಗಾರ.

271. Black Redstart *(Phoenicurus ochruros)* M Sparrow Male, black above; dark grey crown, lowerback; black throat; rufous orange below, rump and sides of tail. Female, paler and brown. Singly seen perched on wires, poles, stumps, around villages and cultivations, typically shivering the tail and jerking the body; descends to ground to pick an insect; back to perch. **Voice**: sharp, squeaking *tik.tik.tik.tik*. Winter visitor, breeding in Himalayas and beyond in Iran to Mongolia.

ಅದುರುಬಾಲ 15 ಸೆಂಮೀ. ಗಂಡಿಗೆ ಕಪ್ಪು ಮೇಲ್ಮೈ, ಎದೆ, ತಲೆ ಮತ್ತು ರೆಕ್ಕೆಗಳು; ಮಸಿಗಪ್ಪು ನೆತ್ತಿ, ಕೆಳಬೆನ್ನು; ಕೆಂಗಂದು ಕೆಳಮೈ, ಪೃಷ್ಠ ಮತ್ತು ಬಾಲದಂಚು. ಹೆಣ್ಣು ಪೇಲವ ಮತ್ತು ಕಂದು ಛಾಯೆ. ಕುರುಚಲು ಕಾಡು, ಹಳ್ಳಿ, ಹೊಲ-ಗದ್ದೆಯ ಅಂಚಿನಲ್ಲಿ, ತಂತಿ, ಕಂಬ, ಬೊಡ್ಡೆಗಳ ಮೇಲೆ, ಒಂಟಿಯಾಗಿ ಬಾಲವನ್ನು ನಿರಂತರವಾಗಿ ನಡುಗಿಸುತ್ತ ಕೀಟಗಳ ಬೇಟೆ. ತೀಕ್ಷ್ಣ *ಟಿಕ್.ಟಿಕ್.ಟಿಕ್.* ಕೂಗು. ಹಿಮಾಲಯದಾಚೆಯಿಂದ ನಮ್ಮಲ್ಲಿಗೆ ಬರುವ ಚಳಿಗಾಲದ ವಲಸೆಗಾರ.

272. White-bellied Shortwing *(Brachypteryx major)* Rufous-bellied Shortwing R Sparrow Bird of sholas and evergreen forests. Dark slaty blue upperparts; lighter throat, breast; black lores; cobalt blue over eyes; rusty rufous underparts with a white belly centre. Sexes alike. Solitary or pairs, elusively hopping about in dense undergrowth; emerging at dusk on jungle paths, in search of insects. **Voice**: loud *chit.chitrrr.* calls; also rich whistling notes. **Nesting**: April-June.

ಬಿಳಿಹೊಟ್ಟೆಯ ಕಿರುರೆಕ್ಕೆ 15 ಸೆಂಮೀ. ಗಾಢ ನೀಲಿಗಪ್ಪು ಮೇಲ್ಮೈ; ಕಣ್ಣಿನ ಮೇಲೆ ಅಚ್ಚ ನೀಲಿ; ತಿಳಿನೀಲಿ ಗಂಟಲು, ಎದೆ; ಕೆಂಗಂದು ಕೆಳಮೈಯ ಮಧ್ಯೆ, ಬಿಳಿ ಪಟ್ಟೆ. ಜೋಡಿಯಾಗಿ ಶೋಲ ಮತ್ತು ಒತ್ತಾದ ಹಸಿರೆಲೆ ಕಾಡುಗಳಲ್ಲಿ ಕುಪ್ಪಳಿಸುತ್ತ, ಸಂಜೆಯ ಹೊತ್ತು ಕೀಟಗಳ ಬೇಟೆಯಾಡುತ್ತವೆ. ಸಿಳ್ಳೆಯಲ್ಲದೆ, *ಚೀವ್.ಚಿರ್ರ್.* ಕೂಗು.

273. Blue Rock-Thrush *(Monticola solitarius)* M Bulbul Bright blue plumage; dark wings and tail; pale fulvous and black scales on underparts. Female, duller greyish brown above with dark shaft streaks; yellowish brown vent; pale white below with brown bars. Solitary, seen at favourite sites around habitations, perched upright on rocks, stumps, rooftops; makes short aerial sallies; hunts on ground. **Food**: also berries. **Voice**: silent; departing male has pleasant whistling. Winter visitor, breeding in Kashmir, Gharwal.

ಬಂಡೆಸಿಳ್ಳಾರ 23 ಸೆಂಮೀ. ಗಂಡಿಗೆ ಅಚ್ಚ ನೀಲಿ ದೇಹ, ತುಸು ಗಾಢ ನೀಲಿ ರೆಕ್ಕೆ ಮತ್ತು ಬಾಲ; ಬಿಳಿ ಕೆಳಮೈ. ಹೆಣ್ಣಿಗೆ, ಮಾಸಲು ಬೂದು ಮೇಲ್ಮೈ ಮತ್ತು ಪೇಲವ ಬಿಳಿ ಕೆಳಮೈ ಮೇಲೆ ಕಂದು ಗೀರುಗಳು. ಒಂಟಿಯಾಗಿ, ಬಂಡೆ ಪ್ರದೇಶ, ಪಾಳು ಬಿದ್ದ ಕಟ್ಟಡ ಮತ್ತು ಅವುಗಳ ಸುತ್ತ ಒಣಕೊಂಬೆಯ ತುದಿಗಳಲ್ಲಿ ಕುಳಿತಿರುತ್ತವೆ. ನೆಲದ ಮೇಲೆ ಹಣ್ಣು, ಕೀಟಗಳ ಬೇಟೆ. ಕಾಶ್ಮೀರ, ಘರವಾಲ್‌ನಿಂದ ಚಳಿಗಾಲದ ವಲಸೆಗಾರ.

274. Blue-headed Rock-Thrush *(Monticola cinclorhynchus)* Blue-capped Rockthrush M Bulbul Bright blue crown, nape, throat and shoulder patch; black back feathers with fulvous edges; dark stripe through eyes to ear coverts; white wing patch; chestnut below and rump. Female, pale olive-brown above; buffy white below, thickly speckled brown. Solitary or loose party, seen among foliage or rummaging on ground, in light forests and estates; very elusive, flies up silently and sits motionless on a branch. **Voice**: silent; rare single or double note call. Winter visitor, breeding in Himalayas from NWFP, Gilgit, Nepal to Assam.

ನೀಲಿತಲೆಯ ಬಂಡೆಸಿಳ್ಳಾರ 17 ಸೆಂಮೀ. ಗಂಡಿಗೆ ಅಚ್ಚ ನೀಲಿ ತಲೆ, ಹಿಂಗತ್ತು, ಗಂಟಲು ಮತ್ತು ಭುಜದಲ್ಲಿ ಮಚ್ಚೆ; ರೆಕ್ಕೆಗಳಲ್ಲಿ ಕಪ್ಪು ಹಸೆ; ಕಣ್ಣಿಗೆ ಅಗಲ ಕಪ್ಪುಪಟ್ಟಿ; ರೆಕ್ಕೆಯಲ್ಲಿ ಬಿಳಿ ಮಚ್ಚೆ; ಕೆಂಗಂದು ಕೆಳಮೈ ಮತ್ತು ಪೃಷ್ಠ. ಹೆಣ್ಣಿಗೆ ತಿಳಿ ಹಸಿರುಗಂದು ದೇಹ; ಮಾಸಲುಬಿಳಿ ಕೆಳಮೈ ಮೇಲೆ ಕಂದು ಗೀರುಗಳು. ಸಣ್ಣ ಗುಂಪಿನಲ್ಲಿ ತಿಳಿಗಾಡು, ಎಸ್ಟೇಟುಗಳಲ್ಲಿ, ನೆಲದ ಮೇಲೆ ಬೇಟೆ. ಬಹು ಸಂಕೋಚ ಸ್ವಭಾವ; ವಿಚಲಿತಗೊಂಡಾಗ, ನಿಶ್ಯಬ್ದವಾಗಿ ಹಾರಿ, ಗಪ್ಪನೆ ಕುಳಿತುಬಿಡುತ್ತದೆ. ಪೂರ್ವ, ಈಶಾನ್ಯ ಹಿಮಾಲಯದಿಂದ ಚಳಿಗಾಲದ ವಲಸೆಗಾರ.

275. White-throated Ground-Thrush *(Zoothera citrina cyanotus)* R Myna A distinct subspecies of Orange-headed Thrush. Greyish blue above; yellowish brown head, neck and underparts; white cheek and throat with oblique black bands; large white wing patch. Female, greyish blue of male replaced by olive green. Solitary, seen on ground in light forests, digging the mulch for insects and fallen fruits; flies silently on to branch, when disturbed. **Voice**: breeding male has romping, whistling song, with rich notes, often repeated, into which imitations of other birds' calls are cleverly interwoven; otherwise silent. **Nesting**: June-July; nest, shallow cup of moss, roots and grass with wet mud, in tree. **Eggs**: 3-4, pale bluish white, blotched with red.

ಬಿಳಿಗಲ್ಲದ ನೆಲಸಿಳ್ಳಾರ *(ಕೊಕ್ಕೆಲೆಪಕ್ಷಿ)* 21 ಸೆಂಮೀ. ಗಂಡಿಗೆ ಹಳದಿಗಂದು ತಲೆ, ಕತ್ತು ಮತ್ತು ಕೆಳಮೈ; ಬೂದು ನೀಲಿ ಮೇಲ್ಮೈ; ಬಿಳಿ ಕೆನ್ನೆ ಮತ್ತು ಗಂಟಲಿನ ಮೇಲೆ ಕಪ್ಪು ಪಟ್ಟಿಗಳು; ರೆಕ್ಕೆಗಳಲ್ಲಿ ದೊಡ್ಡ ಬಿಳಿ ಮಚ್ಚೆ. ಹೆಣ್ಣಿಗೆ ಬೂದು ನೀಲಿಯಿರುವೆಡೆ ತಿಳಿಹಸಿರು. ಒರ್ಟರಂತೆ ಸ್ವಭಾವ. ಸಂತಾನಋತುವಿನಲ್ಲಿ ಗಂಡಿನ ಸುಶ್ರಾವ್ಯ ಸ್ವರಗಳ ಹಾಡಿನ ಮಧ್ಯೆ ಇತರ ಹಕ್ಕಿಗಳ ಅಣಕುಸ್ವರಗಳು. ಮರದ ಮೇಲೆ, ಮಣ್ಣಿನಿಂದ ತಯಾರಾದ, ಹುಲ್ಲು, ನಾರು–ಬೇರುಗಳಿಂದ ಕಟ್ಟಿದ ಗೂಡು.

276. Malabar Whistling-Thrush *(Myiophonus horsfieldii)* R Myna+ Deep bluish black plumage; glistening cobalt blue forehead, shoulder patch. Sexes alike. Solitary or pairs, lively but illusive bird of forest streams; peculiar habit of stretching legs and raising the tail. **Food**: also crustaceans, snails and frogs. **Voice**: silent in winter; breeding male, renowned vocalist, having rich, remarkably long human whistling, up and down the scale, thus nick-named 'idle schoolboy'. **Nesting**: February-August; nest, compact pad of roots and grasses mixed with mud, placed on a rock shelf. **Eggs**: 3-4, buff, blotched and speckled with greyish brown.

ಸರಳೆಸಿಳ್ಳಾರ *(ಕಾಕೆಪಕ್ಷಿ)* 25 ಸೆಂಮೀ. ಕಡುನೀಲಿಗಪ್ಪು ದೇಹ; ಹೊಳೆಯುವ ನೀಲಿ ಹಣೆ, ಭುಜಮಚ್ಚೆ; ಜೋಡಿಯಾಗಿ ಸದಾಹಸಿರು ವನಗಳ ಝರಿ–ತೊರೆ–ಜಲಪಾತಗಳ ಸುತ್ತಮುತ್ತ ವಾಸ. ಮುಂಜಾನೆ ಮಂಜು ಮುಸುಕಿದ ವಾತಾವರಣದಲ್ಲಿ, ಕಾಣುವುದಕ್ಕಿಂತ ಕೇಳುವುದೇ ಹೆಚ್ಚು. ಮೃದ್ವಂಗಿ, ಕಶೇರುಕ, ಕಪ್ಪೆಗಳೂ ಆಹಾರ. ಉಳಿದವೇಳೆ ನಿಶ್ಶಬ್ದವಾಗಿದ್ದು ಪ್ರಜನನ ಕಾಲದಲ್ಲಿ ಶಾಲೆಗೆ ಚಕ್ಕರ್ ಹೊಡೆದು ಅಡ್ಡಾಡುವ ಪೋಲಿಕಿಟ್ಟಿಯಂತೆ, ಬಲು ನೀಳವಾದ, ಏರಿಳಿತಗಳಿರುವ ಸ್ವರಗಳ, ಅದ್ಭುತ ಸಿಳ್ಳೆ. ಬಂಡೆಯ ಅಡಿಗಳಲ್ಲಿ, ನಾರು–ಬೇರುಗಳನ್ನು ಮಣ್ಣಿನಲ್ಲಿ ಕಲಸಿ ಕಟ್ಟಿದ ಬಟ್ಟಲಿನಾಕಾರದ ಗೂಡು.

277. Scaly Thrush *(Zoothera dauma)* Small-billed Mountain Thrush M Myna Plain olive brown and buff bird with distinct spots of dark brown all over. Ground feeding, elusive, silent. Winter visitor, breeding in Himalayas.

ಹುರುಪೆ ಸಿಳ್ಳಾರ 23 ಸೆಂಮೀ. ಹಸಿರುಗಂದು ಮತ್ತು ಮಾಸಲು ಬಿಳಿ ದೇಹದ ಮೇಲೆ, ಕಡುಗಂದು ಚುಕ್ಕೆಗಳು. ಸುಲಭವಾಗಿ ಕಣ್ಣಿಗೆ ಕಾಣಿಸಿಕೊಳ್ಳದೆ, ನೆಲದ ಮೇಲೆ ಅಡ್ಡಾಡುತ್ತವೆ. ಹಿಮಾಲಯದಿಂದ ಚಳಿಗಾಲದ ವಲಸೆಗಾರ.

Tits *(Paridae)*

ಚೇಕಡಿ ಹಕ್ಕಿಗಳು *(ಕ್ರ್ ಕೊಟ್ಟ್ಂಬುಡ್ಚ)*

Small, active, restless, arboreal birds with chiefly grey and white plumage; bill small, stout and pointed; legs short and strong; wings rather short and rounded. Sexes alike. Cling upside down, indulging in all sorts of acrobatic displays, as they hunt among leaves and branches. Flight weak and jerkily undulating. They are bold and even mob the predators including the birds of prey and owls. Food consists of insects, larvae, berries, flower buds and seeds. Nest in tree holes; eggs incubated by female; both share parental duties.

ಎಡೆಬಿಡದೆ, ಉಲ್ಲಾಸದಿಂದ, ಮರದ ಮೇಲೆ ಅಡ್ಡಾಡುವ, ಬೂದು-ಕಪ್ಪು-ಬಿಳಿ ಬಣ್ಣದ ಸಣ್ಣ ಹಕ್ಕಿಗಳು. ಸಣ್ಣ, ಗಟ್ಟಿಮುಟ್ಟಾದ, ಚೂಪಾದ ಕೊಕ್ಕು; ಸಣ್ಣ, ಶಕ್ತಿಯುತ ಕಾಲುಗಳು; ಗುಂಡಾದ ಪುಟ್ಟ ರೆಕ್ಕೆಗಳು. ಕೀಟ, ಮರಿಹುಳ, ಮಕರಂದ, ಹಣ್ಣು, ಮೊಗ್ಗು, ಬೀಜಗಳನ್ನರಸುತ್ತ ಮರಗಳ ಮೇಲೆ, ಕೊಂಬೆ-ಎಲೆಗಳ ನಡುವೆ ಸೂಕ್ಷ್ಮವಾಗಿ ಹುಡುಕುತ್ತಾ ಸರ್ಕಸ್ ಮಾಡುತ್ತವೆ. ನೋಡಲು ಚಿಕ್ಕವಾದರೂ, ಹಿಂಸ್ರ ಪಕ್ಷಿಗಳು ಗೂಡಿನ ಬಳಿ ಬಂದರೆ ಧೈರ್ಯದಿಂದ ಎದುರಾಡಿ ಓಡಿಸುತ್ತವೆ! ಮರದ ಪೊಟರೆ, ಕಟ್ಟಡಗಳ ರಂಧ್ರಗಳಲ್ಲಿ ಗೂಡು.

278. Great Tit *(Parus major)* Grey Tit R Sparrow- Glossy black head, throat, breast; conspicuous white cheek, nape; grey back; white underparts with a broad black abdominal band; white wing-bar and outer feathers of black tail. Pairs or small flock, seen in well-wooded forest edges, gardens; holds seeds between feet and picks at them noisily. **Voice**: joyous screech notes while moving about; breeding male has whistling *chi.chi.whee.* song along with mimicry that adds further variation to a wide repertoire. **Nesting**: April-September; often two broods successively raised. **Eggs**: 4-6, pinkish white, with reddish brown spots and speckles.

ಬೂದು ಚೇಕಡಿ ***(ಕ್ರ್ ಕೊಟ್ಟ್ಂಬುಡ್ಚ)*** 13 ಸೆಂಮೀ. ಗುಂಡಾದ, ಅಚ್ಚಗಪ್ಪು ತಲೆ, ಗಲ್ಲ, ಎದೆ; ಬಿಳಿ ಕೆನ್ನೆ, ಹಿಂಗತ್ತು; ಬೂದು ಬೆನ್ನು; ಬಿಳಿ ಕೆಳಮೈ ಮಧ್ಯೆ ಕಪ್ಪು ಪಟ್ಟಿ; ಬೂದು ರೆಕ್ಕೆಯಲ್ಲಿ ಬಿಳಿ ಪಟ್ಟಿ; ಕಪ್ಪು ಬಾಲಕ್ಕೆ ಬಿಳಿ ಅಂಚು. ಜೋಡಿಯಾಗಿ, ಉದುರೆಲೆ, ಕುರುಚಲು ಕಾಡಂಚುಗಳಲ್ಲಿ, ತೋಟಗಳಲ್ಲಿ ಕಾಣಬಹುದು. ಕಾಳುಗಳನ್ನು ಕಾಲಿನಲ್ಲಿ ಹಿಡಿದು, ಕೊಕ್ಕಿನಿಂದ ಕುಕ್ಕಿ ತಿನ್ನುತ್ತವೆ. ಹಾರಾಡುವಾಗ ಸಂತೋಷದ ಕಿರುಚಾಟ.

279. Black-lored Yellow Tit *(Parus xanthogenys)* Yellow-cheeked Tit R Sparrow- Olive green back; black with a black crest; yellow cheeks with a black eye stripe;

yellow supercilium, nape patch, underparts with a broad black central band from chin to vent; black wings and tail with white edges. Female has olive green crown and central band. Habits similar to 278. **Voice**: lively *chi.chi..*; breeding male clear whistling *cheewit.pretty.cheewit..* song with erect crest and drooped wings. Nesting and eggs similar to 278.

ಹಳದಿಕೆನ್ನೆಯ ಚೇಕಡಿ *(ಕುರಿ ಕೊಟ್ಟ್ಂಬುಡ್ಚ)* 14 ಸೆಂಮೀ. ತಿಳಿಹಸಿರು ಬೆನ್ನು; ಕಪ್ಪು ತಲೆಗೆ ಜುಟ್ಟು; ಹಳದಿ ಕೆನ್ನೆ, ಹುಬ್ಬು; ಕಪ್ಪು ಕಣ್ಣುಪಟ್ಟಿ; ಹಳದಿ ಕೆಳಮೈ ಮೇಲೆ, ಗಲ್ಲದಿಂದ ಹಿಡಿದು ಕಿಬ್ಬೊಟ್ಟೆಯವರೆಗೆ, ಅಗಲವಾದ ಕಪ್ಪು ಪಟ್ಟಿ; ಕಪ್ಪು ರೆಕ್ಕೆ-ಬಾಲಕ್ಕೆ ಬಿಳಿಯಂಚು. ಹೆಚ್ಚು ತೇವವಿರುವಲ್ಲಿ ವಾಸ. ಉಳಿದೆಲ್ಲ ೨೭೮ರಂತೆ. ಸಂತಾನಋತುವಿನಲ್ಲಿ ಗಂಡಿನ *ಚೀವಿಟ್.ಪ್ರಿಟಿ.ಚೀವಿಟ್.* ಸಿಳ್ಳೆ.

Nuthatches *(Sittidae)*

ಮರಗುಬ್ಬಿಗಳು *(ಮರಚುಂಡೆ)*

Small arboreal, restless, tree-climbing birds with compact body; bill slender, straight and notched; tarsi short; toes long; claws laterally compressed and curved to grasp the bark; wings long and pointed; tail short and truncated. Sexes alike. Flight undulating; adept climber; moves with jerky hops up, as well as down a trunk headfirst, without using tail as support, tapping the wood for grubs. Food includes insects, spiders, nuts, and seeds. Nest in tree holes or crevices, lined with leaves, moss, cotton etc., adjusting the size by plastering mud around entrance. Both sexes share parental duties.

ಹೆಚ್ಚಾಗಿ ಮರಗಳ ಮೇಲೆ, ವಿರಾಮರಹಿತವಾಗಿ ಓಡಾಡುವ ಸಣ್ಣ ಗಾತ್ರದ ಹಕ್ಕಿಗಳು. ಸಪೂರವಾದ, ಸಣ್ಣ ಕೊಕ್ಕು; ಸಣ್ಣ ಕಾಲುಗಳಾದರೂ, ಮರವನ್ನು ಅವಚಿಕೊಳ್ಳಲು ಅಗಲವಾದ ಪಾದ; ಉದ್ದನಾದ, ಚೂಪಾದ ರೆಕ್ಕೆಗಳು; ಮೊಂಡು ಬಾಲ. ಅಲೆಯಂತಹ ಹಾರಾಟ; ಮರಗಳ ಮೇಲೆ ಕುಪ್ಪಳಿಸುತ್ತ ಹತ್ತುವ ಸ್ವಭಾವ, ಹಾಗೆಯೇ ತಲೆಕೆಳಕಾಗಿ ಇಳಿಯುತ್ತಾ, ಜೇಡ, ಕ್ರಿಮಿ-ಕೀಟ, ಕಾಳು-ಬೀಜಗಳನ್ನು ಹೆಕ್ಕಿ ತಿನ್ನುತ್ತವೆ. ಮರದ ರಂಧ್ರಗಳಿಗೆ ಮಣ್ಣು ಮೆತ್ತಿ, ಒಳಗೆ ಎಲೆ, ಹಾವಸೆ, ಹತ್ತಿಯಿಂದ ತಯಾರಾದ ಗೂಡು.

280. Chestnut-bellied Nuthatch *(Sitta castanea)* R Sparrow- Bluish grey upperparts; black stripe through eyes; white cheeks and upper throat; deep chestnut underparts; short black tail with white central tail feathers. Female, dull chestnut below. Pairs or small flocks, on the tree bark, actively moving up and down, also descending to ground, in well wooded forests, trees of estates and outskirts of villages. **Voice**: faint *chilp.chilp..*; loud whistle during breeding. **Nesting**: February-May. **Eggs**: 2-6, white speckled with red.

ಕೆಂಪು ಮರಗುಬ್ಬಿ *(ಚೋಂದ ಮರಚುಂಡೆ)* 12 ಸೆಂಮೀ. ಮಾಸಲು ನೀಲಿ ಮೇಲ್ಮೈ; ಕಣ್ಣಿಗೆ ಕಪ್ಪುಪಟ್ಟಿ; ಬಿಳಿ ಕೆನ್ನೆ, ಗಂಟಲು; ಕಡು ಕೆಂಗಂದು ಕೆಳಮೈ; ಚಿಕ್ಕ ಕಪ್ಪು ಬಾಲದ ಮಧ್ಯೆ ಬಿಳಿ. ಹೆಣ್ಣಿಗೆ ತಿಳಿ ಕೆಂಗಂದು ಕೆಳಮೈ. ಜೋಡಿಯಾಗಿ, ಕಾಡು, ಎಸ್ಟೇಟುಗಳಲ್ಲಿ, ಮರದ ಕಾಂಡದ ಮೇಲೆ-ಕೆಳಗೆ ಓಡಾಡಿಕೊಂಡು ಬೇಟೆಯಾಡುತ್ತದೆ. *ಚಿಲ್ಪ್.ಚಿಲ್ಪ್..* ಮೆದುಕೂಗು.

281. Velvet-fronted Nuthatch *(Sitta frontalis)* R Sparrow- Violet-blue upperparts, velvety black forehead, eye stripe, red beak, white chin, throat, merging into grey-lilac below. Female lacks the eye stripe. Pairs or many with mixed hunting band, seen creeping up and down tree bark. Habits similar to 280, but prefers more moist, thicker forests. **Voice**: rapid, sharp, *chiwit.chiwit.chiwit.* trilling, whistles. Nesting similar to 280. **Eggs**: 3-6, with dark red speckles and blotches.

ಮಕ್ಮಲ್‌ನೆತ್ತಿಯ ಮರಗುಬ್ಬಿ *(ಮರಚುಂಡ)* 10 ಸೆಂಮೀ. ಕೆನ್ನೀಲಿ ಮೇಲ್ಮೈ; ಅಚ್ಚಗಪ್ಪು ಹಣೆ, ಕಪ್ಪು ಕಣ್ಣುಪಟ್ಟಿ; ಕೆಂಪು ಕೊಕ್ಕು; ಬಿಳಿ ಗಲ್ಲ; ತಿಳಿಬೂದುಗೆಂಪು ಕೆಳಮೈ. ಹೆಣ್ಣಿಗೆ ಕಣ್ಣು ಪಟ್ಟಿಯಿಲ್ಲ. ಇತರ ಹಕ್ಕಿಗಳೊಂದಿಗೆ, ಹೆಚ್ಚು ಒತ್ತಾದ ಕಾಡು-ಎಸ್ಟೇಟುಗಳಲ್ಲಿ, ಮರಗಳ ಮೇಲೆ-ಕೆಳಗೆ ಅಡ್ಡಾಡುತ್ತಿರುತ್ತವೆ. *ಚಿವಿಟ್.ಚಿವಿಟ್.ಚಿವಿಟ್..* ಕೂಗು.

Wagtails and Pipits *(Motacillidae)*

ಸಿಪಿಲೆ *(ಬಾಲಾಟಿವೊಣ್ಣೆ)* ಮತ್ತು ಪಿಪಿಳೀಕಗಳು *(ಪಿಪ್ಪಿಲಿ)*

Wagtails are small, slender bodied terrestrial waterside birds. Their bill is slender and pointed; legs long and slender; toes long, hind toe generally elongated; wings pointed; tail very long, constantly wagged vertically. They perch on buildings and wires, but are basically ground-feeding birds. Food mainly consists of insects and other invertebrates, near water or in the grass. Flight bounding, not high up and undulating; invariably calling in flight. Sociable while roosting. Most of them are winter visitors, breeding in Himalayan and sub Himalayan regions. Arrive about September- October and depart in March-April.

Pipits are small, ground-dwelling birds of open country, in sholas and around paddyfields that appear as female sparrows, with pale rufous and streaky plumage and a supercilium; slim bill; long and slender legs; slim tails wagged as they walk around; pale or white outer tail feathers, characteristic. Sexes similar. Their songs are rich, varied and musical during breeding and have *pipit.pipit.* calls. Nests are hidden on the ground.

ಹೆಚ್ಚಾಗಿ ನೆಲದ ಮೇಲೆ ಓಡಾಡುವ, ನೀರಿನ ಬಳಿ ವಾಸಿಸುವ ಈ ಬುಲ್‌ಬುಲ್ ಗಾತ್ರದ ಹಕ್ಕಿಗಳಿಗೆ, ಸಪೂರವಾದ ಮೈ; ಚೂಪಾದ ರೆಕ್ಕೆಗಳು; ಉದ್ದವಾದ ಕಾಲುಗಳು ಮತ್ತು ಉದ್ದ ಬಾಲ. ಆ ಬಾಲವನ್ನು ಓಡಾಡುವಾಗೆಲ್ಲ ಮೇಲೆ-ಕೆಳಗೆ ಆಡಿಸಿಕೊಂಡು ತಿರುಗುವ ಹವ್ಯಾಸ. ನೀರಿನ ಬಳಿ, ಹುಲ್ಲಿನ ಮಧ್ಯೆ ಅಡಗಿರುವ ಕೀಟಗಳೇ ಆಹಾರ. *ಸ್ವೀ.. ಸಿ.ಸಿ.ಸಿ.* ಎಂದು ಉಲ್ಲಾಸಭರಿತ ಸಿಳ್ಳೆಹಾಡು. ಒಂದು ಪ್ರಭೇದವನ್ನು ಬಿಟ್ಟರೆ, ಉಳಿದೆಲ್ಲವೂ ಹಿಮಾಲಯದಿಂದ ನಮ್ಮಲ್ಲಿಗೆ ವಲಸೆ ಬರುವ ಚಳಿಗಾಲದ ಅತಿಥಿಗಳು. ಸೆಪ್ಟೆಂಬರ್‌ನಲ್ಲಿ ಬಂದರೆ, ಮಾರ್ಚ್-ಏಪ್ರಿಲ್‌ಗೆ ನಿರ್ಗಮನ.

ಇನ್ನು ಪಿಪಿಳಕಗಳು ತೆಳ್ಳನೆಯ ಮೈಯ್ಯುಳ್ಳ, ಹೆಣ್ಣುಗುಬ್ಬಚ್ಚಿಯಂತೆ ಕಾಣುವ, ನೆಲದ ಮೇಲೆ ಆಹಾರವನ್ನರಸುವ, ಬೂದುಗಂದು ಬಣ್ಣದ ಚಿಕ್ಕ ಪಕ್ಷಿಗಳು. ಬಿಳಿ ಕಣ್ಣಿನ ಹುಬ್ಬು ಗುರುತು ಹಿಡಿಯಲು ಸಹಕಾರಿ. ಶೋಲ ಹುಲ್ಲುಗಾಡುಗಳಲ್ಲಿ, ಭತ್ತದ ಗದ್ದೆಗಳ ಬಳಿ ಸಾಮಾನ್ಯವಾಗಿ ಕಾಣಬಹುದು. *ಪಿಪಿಟ್.ಪಿಪಿಟ್.* ಎಂಬ ಕೂಗು.

282. Large Pied Wagtail *(Motacilla maderaspatensis)* R Bulbul Only resident wagtail. Males have black and white plumage; prominent white eyebrow; large wing bands and outer tail feathers; black throat and breast; white below. Female, usually dull brown where male has black. Mostly in pairs or small party, seen mostly along the water edge, rather than marshy and swampy areas, wagging their tail. **Voice**: sharp *tzizit*... or *chezit*... call. Breeding male sings with pleasant whistling *sweee..sz.sz.sz.* calls. **Nesting**: May-October. Nest, cup shaped pad of rootlets, cotton, fibres and moss under secluded shelter, among rafters of houses, almost always near water. **Eggs**: 3-4, pale white, streaked brown. Both sexes share domestic duties.

ಕಪ್ಪುಬಿಳಿ ಸಿಪಿಲೆ *(ಕರ್ತ ಬಾಲಾಟವೊಣ್ಣೆ)* 21 ಸೆಂಮೀ. ನೀರಿರುವೆಡೆ ವಾಸವಿರುವ ಅಚ್ಚ ಕಪ್ಪು-ಬಿಳಿ ಹಕ್ಕಿಗೆ ಕಪ್ಪು ತಲೆ; ಬಿಳಿ ಹುಬ್ಬು; ಕಪ್ಪು ಗಂಟಲು, ಎದೆ; ಬಿಳಿ ಕೆಳಮೈ; ರೆಕ್ಕೆಯಲ್ಲಿ ಮತ್ತು ಬಾಲದಂಚು ಬಿಳಿ. ಹೆಣ್ಣಿಗೆ ಕಪ್ಪಿರುವಲ್ಲಿ ತಿಳಿಗಂದು. ನದಿ, ಕೆರೆ, ಕೊಳ, ಕಾಲುವೆಗಳ ಬದಿ, ಜನವಸತಿಯ ಸುತ್ತಮುತ್ತ ನೀರಿರುವೆಡೆ ಉತ್ಸಾಹದಿಂದ, ವೇಗವಾಗಿ, ಅತ್ತಿತ್ತ ಓಡಾಡುತ್ತಾ, ಬಿನ್ನಾಣದಿಂದ ಬಾಲವಾಡಿಸುತ್ತಾ ಕೀಟಗಳನ್ನು ಹೆಕ್ಕುತ್ತದೆ. ಗಂಡಿನ *ಸ್ವೀ.. ಸಿ.ಸಿ.ಸಿ.* ಮಧುರ ಸಿಳ್ಳು; ನೀರಿರುವೆಡೆ, ಮನೆಗಳ ಸೂರು-ಸಂದುಗಳಲ್ಲಿ, ಮೃದುವಾದ ಕಪ್‌ನಂತಹ ಗೂಡು.

283. White Wagtail *(Motacilla alba)* Pied Wagtail M Bulbul Ashy back, rump; white forehead, chin and cheeks; black nape, wide throat band; large white wing patch and outer tail feathers; white underparts. Sexes alike. In pairs or small flocks, often mixed with other species near water bodies, wagging tail. **Voice**: loose *tslee.wee..* and sharp w*hizit*... uttered on the wings. Winter visitor, breeding in NW and W Himalayas.

ಬಿಳಿ ಸಿಪಿಲೆ *(ಬೊಳ್ದ ಬಾಲಾಟವೊಣ್ಣೆ)* 18 ಸೆಂಮೀ. ಬಿಳಿ ಹಣೆ, ಗಲ್ಲ, ರೆಕ್ಕೆಯಲ್ಲಿ ಪಟ್ಟಿಗಳು; ಬೂದು ಬೆನ್ನು, ಪೃಷ್ಠ; ಬಿಳಿ ಮುಖ; ಅಚ್ಚಕಪ್ಪು ಹಿಂಗತ್ತು, ಗಂಟಲು ಪಟ್ಟಿ; ಕಪ್ಪುಬಾಲಕ್ಕೆ ಬಿಳಿಯಂಚು. ಉಳಿದ ಜಾತಿಯ ಬಾಲಾಡಿಗಳೊಂದಿಗೆ ಹುಲ್ಲುಗವಲು, ಕೃಷಿಭೂಮಿ, ಜನವಸತಿ ಪ್ರದೇಶದಲ್ಲಿ ನೀರಿರುವೆಡೆ ವಾಸ. ಪಶ್ಚಿಮ ಮತ್ತು ಈಶಾನ್ಯ ಹಿಮಾಲಯದಿಂದ ಚಳಿಗಾಲದಲ್ಲಿ ವಲಸೆಗಾರ.

284. Grey Wagtail *(Motacilla cinerea)* M Sparrow+ Chiefly grey and yellow plumage; dark grey above; white supercilium; greyish brown wings with yellow white bands; black tail with white outer feathers; yellow below; chin, throat and upper breast of male, black in summer; otherwise sexes alike. **Voice**: tinkling, trilling *chicheep...chicheep*... uttered on the wings and pretty whistling notes interspead with shivering call. Winter visitor, breeds from N Baluchistan, Gilgit, Ladakh, Kashmir to Nepal.

ಬೂದು ಸಿಪಿಲೆ *(ಬೂದ್ ಬಾಲಾಟವೊಣ್ಣೆ)* 17 ಸೆಂಮೀ. ಬೂದುಗಂದು ಮೇಲ್ಮೈ; ಬಿಳಿ ಹುಬ್ಬು; ಹಳದಿಗಂದು ರೆಕ್ಕೆಗಳಲ್ಲಿ ಹಳದಿ-ಬಿಳಿ ಪಟ್ಟಿಗಳು; ಕಪ್ಪು ಬಾಲಕ್ಕೆ ಬಿಳಿಯಂಚು; ಹಳದಿ ಗಲ್ಲ, ಎದೆ, ಕೆಳಮೈ. ಪ್ರಜನನ್ ಸಮಯದಲ್ಲಿ ಗಂಡಿಗೆ ಕಪ್ಪು ಗಂಟಲು, ಎದೆ. ನೀರಿರುವೆಡೆ, ಹೆಚ್ಚು ಕಾಡಿರುವಲ್ಲಿ ವಾಸ. ಬಲೂಚಿಸ್ತಾನ, ನೇಪಾಳ, ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

285. Yellow Wagtail *(Motacilla flava)* M Sparrow+ Light olive back, tail; dull grey head; thin white supercilium; bright yellow below; olive yellow-black wings. **Voice**: *weesp…ip.ip.* on the wing. Rest same as 284. Winter visitor, breeds in Ladakh and N Kashmir.

ಹಳದಿ ಸಿಪಿಲೆ *(ಮಂಜ ಬಾಲಾಟಿವೊಣ್ಣೆ)* 17 ಸೆಂಮೀ. ತಿಳಿಬೂದು ತಲೆಗೆ ಬಿಳಿ ಹುಬ್ಬು; ತಿಳಿ ಹಸಿರುಗಂದು ಮೇಲ್ಮೈ, ಬಾಲ; ರೆಕ್ಕೆಗಳಲ್ಲಿ ಹಸಿರು-ಹಳದಿ-ಕಪ್ಪು; ಹಳದಿ ಕೆಳಮೈ. ಕೃಷಿಭೂಮಿ, ಜೌಗು ಪ್ರದೇಶಗಳಲ್ಲಿ ವಾಸ. ಉಳಿದೆಲ್ಲ ೨೮೪ರಂತೆ. ಹಾರುವಾಗ *ವೀಸ್ಪ್..ಪಿಪ್.ಪ್.* ಕೂಗು. ಲಡಾಕ್ ಹಾಗೂ ಉ. ಕಾಶ್ಮೀರದಿಂದ ಚಳಿಗಾಲದ ವಲಸೆಗಾರ.

286. Citrine Wagtail *(Motacilla citreola)* Yellow-headed Wagtail M Sparrow- Grey crown and back; yellow head, sides of face and underbody; white in black wings. Rest similar to 284. Winter visitor from Ladakh and Kashmir.

ಹಳದಿತಲೆ ಸಿಪಿಲೆ *(ಮಂಜಮಂಡೆ ಬಾಲಾಟಿವೊಣ್ಣೆ)* 17 ಸೆಂಮೀ. ೨೮೪ರಂತೆ, ಆದರೆ ಬೂದು ನೆತ್ತಿ, ಬೆನ್ನು; ಅಚ್ಚ ಹಳದಿ ತಲೆ, ಕೆನ್ನೆಗಳು ಮತ್ತು ಕೆಳಮೈ; ಕಪ್ಪು ರೆಕ್ಕೆಗಳಲ್ಲಿ ಬಿಳಿ ಪಟ್ಟಿಗಳು. ಲಡಾಕ್, ಕಾಶ್ಮೀರದಿಂದ ಚಳಿಗಾಲದಲ್ಲಿ ವಲಸೆಗಾರ.

287. Forest Wagtail *(Dendronanthus indicus)* M Sparrow- Light olive brown above; dark brown wings with yellow bands and spots; dark tail with white outer feathers; dull white below; two black bands across throat and breast. Solitary or pairs, seen in forest path and below trees; characteristic *sideways* movement of tail and rear part of body, as it runs on ground. **Food**: also small snails and worms. **Voice**: *tsiz…* or *pink…* call. Winter visitor, breeds in N Cachar district in Assam.

ಅಡವಿ ಸಿಪಿಲೆ *(ಕಾಡ್ ಬಾಲಾಟಿವೊಣ್ಣೆ)* 17 ಸೆಂಮೀ. ನೋಡಲು ೨೮೩ರಂತಿದ್ದರೂ, ತಿಳಿ ಹಸಿರುಗಂದು ಮೇಲ್ಮೈ; ಬಿಳಿ ಹುಬ್ಬು; ಗಂಟಲು-ಎದೆಯ ಮೇಲೆ ಎರಡು ಕಪ್ಪು ಪಟ್ಟಿಗಳು; ಕಡುಗಂದು ರೆಕ್ಕೆಗಳಲ್ಲಿ ಹಳದಿ ಪಟ್ಟಿಗಳು; ಬಾಲಕ್ಕೆ ಬಿಳಿಯಂಚು; ಮಾಸಲು ಕೆಳಮೈ. ಬಾಲವನ್ನು *ಅಡ್ಡಡ್ಡಲಾಗಿ* ಆಡಿಸುವ ಹವ್ಯಾಸ. ಮೃದ್ವಂಗಿ, ಕ್ರಿಮಿ-ಕೀಟಗಳೂ ಆಹಾರ. *ತ್ಸಿಸ್..* ಕರೆ. ಪೂರ್ವ ಹಿಮಾಲಯ, ಅಸ್ಸಾಂನಿಂದ ಚಳಿಗಾಲದ ವಲಸೆ.

288. Paddyfield Pipit *(Anthus rufulus)* R Sparrow+ Slim bird with slender bill and long tail. Fulvous brown above with dark brown centre of feathers; dark brown tail with white outer feathers, seen in flight; duller below with dark brown streaks on neck and breast. Pairs or loose parties, seen in short grass and cultivated or fallowland and marshes; mainly terrestrial, running around briskly, with slow tail wagging. **Food**: weevils and other small insects. **Voice**: distinct *pipit..pipit* or *tseep..tseep*; male also has a lark-like feeble songs in air. **Nesting**: March-June. **Eggs**: 3-4, yellowish or greyish white, blotched and spotted with brown.

ಗದ್ದೆ ಪಿಪಿಳೀಕ *(ಬೇಲ್ ಪಿಪ್ಪಿಲಿ)* 15 ಸೆಂಮೀ. ನೀಳ ದೇಹ ಮತ್ತು ಕೊಕ್ಕು; ಬೂದುಗಂದು ಮೇಲ್ಮೈ; ಬಿಳಿ ಹುಬ್ಬು; ಪೇಲವ ಕೆಳಮೈ; ಕುತ್ತಿಗೆ-ಎದೆಯ ಮೇಲೆ ಕಂದು ಗೀರುಗಳು; ಕಡುಗಂದು ಬಾಲದಲ್ಲಿ ಹಾರುವಾಗ ಎದ್ದು ಕಾಣುವ ಬಿಳಿಯಂಚು. ಬಂಡೆ, ಮೈದಾನ ಪ್ರದೇಶ, ಗೋಮಾಳ, ಕೃಷಿಭೂಮಿಯ ನೆಲದ ಮೇಲೆ ವೇಗವಾಗಿ ಅತ್ತಿಂದಿತ್ತ ಚಲಿಸುತ್ತ, ಕೀಟಗಳನ್ನು ಹೆಕ್ಕುವುದನ್ನು ಕಾಣಬಹುದು. ನಿಧಾನವಾಗಿ ಬಾಲವಾಡಿಸುವುದೂ ಉಂಟು. *ಪಿಪಿಟ್.ಪಿಪಿಟ್..* ಕೂಗು; ಗಂಡಿನ ಹಾರುಸಿಳ್ಳೆ.

289. Oriental Tree Pipit *(Anthus hodgsoni)* Indian Tree Pipit M Sparrow+ Olive brown above, with dark brown streaks; white supercilium; white double wing bars and outer retrices; buff-white below with dark brown longitudinal streaks on flanks and breast. Singly or in pairs, seen in open country and evergreen woodlands, running about in search of food. **Voice**: lark-like musical song *swee.ur...swee.ur*...uttered in air; single *tseep* call, when disturbed. Winter visitor, breeding in Himalayas.

ಪಾಚಿಬೆನ್ನಿನ ಪಿಪಿಳೀಕ *(ಪಾಚಿಬೆನ್ನಿರ ಪಿಪ್ಪಿಲಿ)* 15 ಸೆಂಮೀ. ತಿಳಿ ಹಸಿರುಗಂದು ಬಣ್ಣ; ಗಾಢಕಂದು ಗೀರುಗಳು; ಬಿಳಿ ಹುಬ್ಬು; ರೆಕ್ಕೆಯ ಮೇಲೆ ಎರಡು ಬಿಳಿ ಪಟ್ಟಿಗಳು; ಪೇಲವ ಕೆಳಮೈ; ಎದೆ-ಪಕ್ಕೆಗಳ ಮೇಲೆ ಕಂದು ಗೀರುಗಳು. ಬಯಲು ಪ್ರದೇಶ, ಹಸಿರೆಲೆ ಕಾಡಿರುವಲ್ಲಿ, ಕೀಟಗಳನ್ನು ಹುಡುಕುತ್ತಾ ಅಡ್ಡಾಡುವುದನ್ನು ಕಾಣಬಹುದು. ಹಿಮಾಲಯದಿಂದ ಚಳಿಗಾಲದ ವಲಸೆಗಾರ.

290. Eurasian Tree Pipit *(Anthus trivialis)* Tree Pipit M Sparrow+/- Similar to 289, but brown above; overall paler. Seen gregariously, in slopes of sholas and light forests. Rest similar to 289.

ಮರ ಪಿಪಿಳೀಕ *(ಮರ ಪಿಪ್ಪಿಲಿ)* 15 ಸೆಂಮೀ. ೨೮೯ರಂತೆ, ಆದರೆ ಕಂದು ಮೇಲ್ಮೈ ಮತ್ತು ಪೇಲವ ದೇಹ. ಗುಂಪಾಗಿ ಶೋಲಾ ಮತ್ತು ತಿಳಿಗಾಡುಗಳಲ್ಲಿ ವಾಸ. ಉಳಿದದ್ದು ೨೮೯ರಂತೆ.

291. Nilgiri Pipit *(Anthus nilghiriensis)* R Sparrow Similar to 288, with greyish brown upperparts and fulvous abdomen. Seen in shola forests, woodlands and coffee estates. Rest similar to 288.

ನೀಲಗಿರಿ ಪಿಪಿಳೀಕ *(ನೀಲಗಿರಿ ಪಿಪ್ಪಿಲಿ)* 17 ಸೆಂಮೀ. ೨೮೮ಕ್ಕಿಂತ ಬೂದುಗಂದು ಮೈಬಣ್ಣ; ಬಿಳಿ ಹುಬ್ಬು; ಪೇಲವ ಕೆಳಮೈ. ಶೋಲಾ ಕಾಡು, ಎಸ್ಟೇಟುಗಳಲ್ಲಿ ವಾಸ. ಉಳಿದೆಲ್ಲ ೨೮೮ರಂತೆ.

Flowerpeckers *(Dicaeidae)*

ಬದನಿಕೆಗಳು *(ಚುಂಡೆಪಕ್ಷಿ)*

Smallest of Indian birds. Dull coloured, restless, arboreal birds with short, stout, strong bill; short legs; rather long wings; short tail. Sexes alike. Constantly flit on treetops, uttering sharp calls. Food consists of insects, nectar, figs and berries of ficus, *Lantana, Dendrophthoe* and *Viscum*, thus pollinating the flowers and dispersing the seeds. Nest, a purse-shaped structure, made of soft fibres, well camouflaged, hung like a pendent from a branch. Both sexes share the family duties.

ಭಾರತದ ಅತಿಚಿಕ್ಕ ಗಾತ್ರದ ಹಕ್ಕಿಗಳ ಕುಟುಂಬ. ಪೇಲವ ಬಣ್ಣ. ಮರದ ಮೇಲೇ ವಾಸ. ತೆಳುವಾದ, ಗಟ್ಟಿಮುಟ್ಟಾದ, ಚಿಕ್ಕ ಕೊಕ್ಕು; ಉದ್ದ ರೆಕ್ಕೆಗಳು; ಚಿಕ್ಕ ಕಾಲುಗಳು; ಪುಟ್ಟ ಬಾಲ. ಕೀಟ, ಹಣ್ಣುಗಳು, ಮಕರಂದವೇ ಆಹಾರ, ಅದರಲ್ಲೂ ಪರಾವಲಂಬಿ ಬಂದಳಿಕೆ ಗಿಡದ ಪರಾಗಸ್ಪರ್ಶ, ಬೀಜಪ್ರಸರಣವಾಗುವುದು ಇವುಗಳಿಂದಲೆ. ಎಡೆಬಿಡದೆ, ಚಡಪಡಿಸುತ್ತಾ, ಅಲ್ಲಿಂದಿಲ್ಲಿಗೆ ಹಾರಾಡುತ್ತವೆ. ಎಲೆಗಳ ಮರೆಯಲ್ಲಿ, ನೇತಾಡುವ ಪರ್ಸ್ ಆಕಾರದ ಗೂಡು.

292. Thick-billed Flowerpecker *(Dicaeum agile)* R Sparrow- Ashy olive-brown upperparts; orange-red eyes; thick bluish grey finch-like beak; dull greyish white underparts, streaked with brown on breast; white tipped tail. Solitary or pairs, restlessly moving in foliage, flitting from tree to tree, especially the parasitic clusters of *Dendrophthoe* and *Viscum* belonging to mistletoe family. **Voice**: sharp, metallic *chik.chik.chik*. **Nesting**: January-June. **Eggs**: pinkish white with brick red blotches.

ದಪ್ಪಕೊಕ್ಕಿನ ಬದನಿಕೆ 9 ಸೆಂಮೀ. ಮೇಲ್ಭಾಗವೆಲ್ಲ ಬೂದುಗಂದು; ಗಾಢ ಬೂದು–ನೀಲಿ ಕೊಕ್ಕು; ಮಾಸಲು ಬಿಳಿ ಕೆಳಭಾಗದಲ್ಲಿ ಗೀರುಗಳು; ಕಿತ್ತಳೆ ಬಣ್ಣದ ಕಣ್ಣುಗಳು; ಬಾಲದ ತುದಿ ಬಿಳಿ. ಪರಾವಲಂಬಿ ಬಂದಳಿಕೆ ಹೂವು, ಕಾಯಿಯೆಂದರೆ ಪ್ರಾಣ. ಹಣ್ಣನ್ನು ತಿಂದು ಅಲ್ಲಿಯೇ ಉಗಿಯುವ ರೂಢಿ. ತೀಕ್ಷ್ಣ *ಚಿಕ್.ಚಿಕ್.* ಕೂಗು.

293. Tickell's Fowerpecker *(Dicaeum erythrorhynchos)* R Sparrow- Similar to 292, but has flesh coloured bill and unmarked greyish white underparts. Singly, invariably flitting around parasitic *Dendrophthoe* clumps, in orchards, groves and light forests; seeds of the berries swallowed entire and sticky seeds excreted on a different branch or tree, thus spreading infestation. **Voice**: incessant, loud, sharp *chp.chp.chp.*, on the wing and while flitting. **Nesting**: February-June; nest, neat hanging oval pouch, with lateral entrance, suspended on twig. **Eggs**: 2, white.

ಬದನಿಕೆ *(ಚುಂಡೆಪಕ್ಷಿ)* 8 ಸೆಂಮೀ. ಎಲ್ಲಕಿಂತ ಚಿಕ್ಕಗಾತ್ರ. *೨೯೨*ರಂತೆ ಕಂಡರೂ, ತಿಳಿಗೆಂಪು ಕೊಕ್ಕು, ಗೀರುಗಳಿಲ್ಲದ ಮಾಸಲು ಬಿಳಿ ಕೆಳಭಾಗ. ಕುರುಚಲು ಕಾಡು, ತೋಟ, ಜನವಸತಿ ಪ್ರದೇಶಗಳಲ್ಲಿ ಮರ, ಪೊದೆಗಳ ಮೇಲೆ ವಾಸ. ಪರಾವಲಂಬಿ ಬಂದಳಿಕೆ ಹಣ್ಣುಗಳನ್ನು ಇಡಿಯಾಗಿ ನುಂಗಿ ಬೇರೆ ಮರಗಳ ಕವಲುಗಳಲ್ಲಿ ಹಿಕ್ಕೆ ಹಾಕುವ ಸ್ವಭಾವ. ಹಾರುವಾಗ ಗಟ್ಟಿಯಾಗಿ *ಚ್‌ಪ್.ಚ್‌ಪ್.* ಕೂಗು.

294. Plain Flowerpecker *(Dicaeum concolor)* Plaincoloured Flowerpecker R Sparrow- Similar to 293, but black bill; pale white shoulder patch and yellowish white underparts. Opts out more wooded forests and plantations. Rest similar to 293.

ಪೇಲವ ಬದನಿಕೆ 8 ಸೆಂಮೀ. ಎಲ್ಲವೂ ೨೮೮ರಂತೆ, ಆದರೆ ಕಪ್ಪು ಕೊಕ್ಕು; ಬಿಳಿ ಹುಬ್ಬು; ಭುಜದಲ್ಲಿ ಬಿಳಿ ಮಚ್ಚೆ; ಬಿಳಿ ಕೆಳಮೈ. ಒತ್ತಾದ ಕಾಡುಗಳು, ಎಸ್ಟೇಟ್‌ಗಳಲ್ಲಿ ವಾಸ. ಉಳಿದದ್ದು ೨೯೩ರಂತೆ.

Sunbirds *(Nectariniidae)*

ಸೂರಕ್ಕಿಗಳು *(ತೇನ್‌ಗೀಜಿ)*

